ಬೆಳ್ಳಿ ಮಾಲಿಕೆ



ತುಮಕೂರು ಜಿಲ್ಲೆಯ

# ಜನಪದ ಕಲಾವಿದರು

ಡಾ. ಚಿಕ್ಕಣ್ಣ ಯಣ್ಣೆಕಟ್ಟೆ



# ತುಮಕೂರು ಜಿಲ್ಲೆಯ

# ಜನಪದ ಕಲಾವಿದರು

ಡಾ. ಚಿಕ್ಕಣ್ಣ ಯಣ್ಣೆಕಟ್ಟೆ

ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ,
ಬೆಂಗಳೂರು-೦೨

"TUMUKUR JILLEYA JANAPADA KALAVIDARU"

Written by Dr. Chikkanna Yennekatte,
Professor of Kannada, Govt. Digree College, Sira,
Tumakur Dist.

Published by : B. N. Paraddi,
Registrar,
Karnataka Janapada and
Yakshagana Academy;
Kannada Bhavan, J. C. Road,
Bangalore -02

Pages : 14 + 180 = 194

Price : Rs. 60-00

Rights : Author

ಪ್ರಕಾಶಕರು : ಬಿ. ಎನ್. ಪರಡ್ಡಿ
ರಿಜಿಸ್ಟ್ರಾರ್
ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ,
ಕನ್ನಡ ಭವನ, ಜೆ. ಸಿ. ರಸ್ತೆ, ಬೆಂಗಳೂರು – ೫೬೦೦೦೨
ದೂರವಾಣಿ : ೦೮೦–೨೨೨೧೫೫೦೯

ಪರಿಶೀಲನಾ ಸಮಿತಿ :

ಶ್ರೀ ಕೆರೆಮನೆ ಶಂಭು ಹೆಗಡೆ

| | |
|---|---|
| ಶ್ರೀ ಗವೀಶ ಹಿರೇಮಠ | ಡಾ. ಹಂಪನಹಳ್ಳಿ ತಿಮ್ಮೇಗೌಡ |
| ಡಾ. ಚಿಕ್ಕಣ್ಣ ಯಣ್ಣೆಕಟ್ಟೆ | ಡಾ. ಕೆ. ಚೆನ್ನಪ್ಪಗೌಡ |
| ಶ್ರೀ ಅರಾಟೆ ಮಂಜುನಾಥ | ಡಾ. ಬಿ. ಎಸ್. ತಲ್ವಾಡಿ |

ಮುಖಪುಟ ವಿನ್ಯಾಸ, ಮುದ್ರಣ :
ಪ್ರಭು ಗ್ರಾಫಿಕ್ಸ್,
ತೋಂಟದಾರ್ಯ ಮಠದ ಎದುರು, ಸ್ಟೇಶನ್ ರೋಡ, ಗದಗ.
ಫೋ : [೦೮೩೭೨] ೨೩೮೧೮೧ ಮೊ : ೯೪೪೮೧೮೭೦೭೩, ೯೮೮೦೯೦೪೭೦೭

# ಅಧ್ಯಕ್ಷರ ನುಡಿ

ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಪ್ರಕಟಿಸುತ್ತಿರುವ ಕಲಾವಿದರ ಪರಿಚಯ ಪುಸ್ತಕಕ್ಕೆ ಮುನ್ನುಡಿ ರೂಪದಲ್ಲಿ ಕೆಲವು ಮಾತುಗಳನ್ನು ಇಲ್ಲಿ ದಾಖಲಿಸಲು ಅಣಿಯಾಗುತ್ತಿದ್ದೇನೆ.

ಅಕಾಡೆಮಿ ತನ್ನ ಇಪ್ಪತ್ತೈದು ವರ್ಷಗಳನ್ನು ಯಶಸ್ವಿಯಾಗಿ ದಾಟಿಬಂದು, ಬೆಳ್ಳಿಹಬ್ಬವನ್ನು ಆಚರಿಸುವ ಸಂಭ್ರಮದಲ್ಲಿದೆ. ಇಲ್ಲಿಯವರೆಗೆ ಜಾನಪದ ಕ್ಷೇತ್ರದ ಸಿದ್ಧಿ-ಸಾಧನೆಗಳನ್ನು, ಅಧ್ಯಯನದ ಮೂಲಕ ದುಡಿದು ತಾತ್ವಿಕ ಚೌಕಟ್ಟನ್ನು ರೂಪಿಸಿಕೊಟ್ಟ ವಿದ್ವಾಂಸರನ್ನು ಪರಿಚಯಿಸುವ "ಜಾನಪದ ತಲೆಮಾರು" ಹೊತ್ತಿಗೆಯ ನಾಲ್ಕು ಸಂಪುಟಗಳು ಬಂದಿರುವುದು ಸ್ತುತ್ಯ ಕಾರ್ಯವೇ ಸರಿ.

ಅದೇ ಪ್ರಕಾರ ಕರ್ನಾಟಕದ ಎಲ್ಲಾ ಜಿಲ್ಲೆಗಳಲ್ಲಿರುವ ಜಾನಪದದ ವಿವಿಧ ಕಲಾವಿದರ ಪರಿಚಯವನ್ನು ದಾಖಲಿಸಬೇಕೆಂಬುದು ನನ್ನ ಹಂಬಲ. ಜಾನಪದ ಕಲಾಪ್ರಕಾರಗಳ ವೈವಿಧ್ಯಗಳನ್ನು ಸಹೃದಯರ ಕಣ್ಣು, ಕಿವಿ, ಮನಸ್ಸುಗಳಿಗೆ ಪ್ರತ್ಯಕ್ಷ ಬಣ್ಣಿಸುವ ಕಲಾವಿದರೂ ಅಷ್ಟೇ ಮುಖ್ಯರಾಗುತ್ತಾರೆ. ವಿದ್ವಾಂಸರ ಅಧ್ಯಯನ, ಅವಲೋಕನ, ಆಲೋಚನೆಗಳಿಗೆ ಮೂಲ ಸೆಲೆಯಾಗುವ ಇಂಥ ಕಲಾವಿದರು ಅನೇಕ ಸಲ ಪ್ರಶಸ್ತಿ, ಪುರಸ್ಕಾರ, ಗೌರವ, ಅವಕಾಶಗಳಿಂದ ವಂಚಿತರಾಗುತ್ತಾರೆ. ಇಂಥ ಕಲಾವಿದರ ಪರಿಚಯ, ವಿವರಗಳ ಸಂಗ್ರಹವಾದರೂ ಅಕಾಡೆಮಿಯಲ್ಲಿ ಲಭ್ಯವಾಗುವಂತಿದ್ದರೆ, ಅಷ್ಟರ ಮಟ್ಟಿಗೆ ಅನುಕೂಲವಾಗುತ್ತದೆ ಎಂಬುದು ನನ್ನ ಉದ್ದೇಶ. ಕಲಾವಿದರ ಪರ ಈ ಧೋರಣೆಯನ್ನು ಅಕಾಡೆಮಿಯ ಸರ್ವ ಸದಸ್ಯರ ಸಮ್ಮುಖದಲ್ಲಿ ಇಟ್ಟಾಗ ಎಲ್ಲರೂ ಉತ್ಸಾಹದಿಂದಲೇ ಬೆಂಬಲಿಸಿದರು. ಅದರ ಫಲವೇ ಈ "ಬೆಳ್ಳಿ ಮಾಲಿಕೆ."

ಯೋಜನೆಯ ಕಾರ್ಯಸ್ವರೂಪವನ್ನು ವ್ಯವಸ್ಥಿತವಾಗಿ ಯೋಜಿಸಿದಾಗ ಜಿಲ್ಲೆಗೊಬ್ಬೊಬ್ಬ ಲೇಖಕರನ್ನು ನಿಯೋಜಿಸಿ, ಅಕಾಡೆಮಿ ಕಾರ್ಯಪ್ರವೃತ್ತವಾಯಿತು. ಆದರೆ ಕೆಲವು ಜಿಲ್ಲೆಗಳ ಕಲಾವಿದರ ಪರಿಚಯ ಕೃತಿಗಳು ಮಾತ್ರ ಬಂದಿದ್ದು, ಅವುಗಳನ್ನು ಪ್ರಕಟಿಸುತ್ತಿದ್ದೇವೆ. ಕಲಾವಿದರ ಪರಿಚಯ ಪುಸ್ತಕಗಳನ್ನು ಹೊರತರುತ್ತಿರುವ ಸಂದರ್ಭದಲ್ಲಿ, ಈ ಮಾಲಿಕೆಗೆ ಅಕಾಡೆಮಿಯು ಪುಟಗಳ ಮಿತಿ ಹಾಕಿಕೊಳ್ಳುವುದರೊಂದಿಗೆ ಹಿರಿಯ ವಯಸ್ಸಿನ ಕಲಾವಿದರನ್ನು ಮಾತ್ರ ದಾಖಲಿಸುವ ಉದ್ದೇಶದಿಂದ ವಯಸ್ಸಿನ ಮಿತಿಯನ್ನೂ ಹಾಕಿಕೊಂಡಿತು. ಜೊತೆಗೆ ಈ ಮಿತಿಯೊಳಗಿನ ಎಲ್ಲಾ ಕಲಾವಿದರನ್ನೂ ಪರಿಚಯಿಸಲು ಸಾಧ್ಯವಾಗಿಲ್ಲ. ಇದರ ಬಗ್ಗೆ ಕ್ಷಮೆ ಇರಲಿ. ಉಳಿದ ಕಲಾವಿದರ ಪರಿಚಯ ಮುಂದೆ ಅಕಾಡೆಮಿಯಿಂದ ಆಗಲಿ ಎಂಬ ನಿರೀಕ್ಷೆ ನನ್ನದು.

ಈ ಯೋಜನೆಯನ್ನು ಕಾರ್ಯರೂಪಕ್ಕಿಳಿಸುವಲ್ಲಿ ನೆರವಾದ ಎಲ್ಲರನ್ನೂ ಇಲ್ಲಿ ಕೃತಜ್ಞತೆಯಿಂದ ನೆನೆಯುತ್ತಿದ್ದೇನೆ. ಅಕಾಡೆಮಿಯ ಎಲ್ಲ ಸದಸ್ಯರೂ ಉತ್ಸಾಹದಿಂದ ಪ್ರೋತ್ಸಾಹಿಸಿದ್ದಾರೆ. ಕೆಲವು ಜಿಲ್ಲೆಯ ಕಲಾವಿದರ ಮಾಹಿತಿಯನ್ನು ಲೇಖಕರು ಬರೆದುಕೊಟ್ಟಿರುತ್ತಾರೆ. ಮುದ್ರಣದ ಹೊಣೆಗಾರಿಕೆಯನ್ನು ಶ್ರೀ ಗವೀಶ ಹಿರೇಮಠ ಎಚ್ಚರದಿಂದ ನಿರ್ವಹಿಸಿದ್ದಾರೆ. ಯೋಜನೆ ಪ್ರಸ್ತಾಪದ ಹಂತದಲ್ಲಿದ್ದಾಗ ರಿಜಿಸ್ಟ್ರಾರ್ ಆಗಿದ್ದ ಶ್ರೀ ಎಂ. ಮುನಿರಾಜು ಅವರು, ಕಾರ್ಯರೂಪಕ್ಕೆ ಬರುವಾಗ ರಿಜಿಸ್ಟ್ರಾರ್ ಆಗಿರುವ ಶ್ರೀ ಬಿ. ಎನ್. ಪರಡ್ಡಿ ಅವರೂ, ಕಛೇರಿಯ ಸಿಬ್ಬಂದಿ ವರ್ಗದವರಾದ ಶ್ರೀ ಹೆಚ್. ಪ್ರಕಾಶ್, ಶ್ರೀಮತಿ ಎಂ. ನಾಗರತ್ನ, ಶ್ರೀ ಶಿವಲಿಂಗಯ್ಯ ಇವರುಗಳು ಎಲ್ಲಾ ಹಂತಗಳಲ್ಲಿಯೂ ನೆರವಾಗಿದ್ದಾರೆ. ಇವರೆಲ್ಲರಿಗೂ ಈ ಸಂದರ್ಭದಲ್ಲಿ ನನ್ನ ಕೃತಜ್ಞತೆಗಳು.

ಅಕಾಡೆಮಿಯ ಎಲ್ಲ ಪ್ರಕಟಣೆಗಳನ್ನು ಆದರದಿಂದ ಬರಮಾಡಿಕೊಂಡಂತೆ ಕಲಾವಿದರ ಪರಿಚಯ ಪುಸ್ತಕಗಳನ್ನು ಓದುಗರು ಬರಮಾಡಿಕೊಳ್ಳುತ್ತಾರೆಂಬ ಭರವಸೆ ನನ್ನದು.

ದಿನಾಂಕ : ೧೬-೧-೨೦೦೮ ಕೆರೆಮನೆ ಶಂಭು ಹೆಗಡೆ
ಬೆಂಗಳೂರು ಅಧ್ಯಕ್ಷರು
ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ

# ಬೆಳ್ಳಿಮಾಲಿಕೆಗೆ ಬಂಗಾರದ ತೋರಣ

ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಗೆ 25 ವರ್ಷ ತುಂಬಿದ್ದರಿಂದ ಬೆಳ್ಳಿಹಬ್ಬ ಆಚರಿಸುತ್ತಿರುವುದು ಸಂತೋಷದ ಸಂಗತಿಯಾಗಿದೆ. ಅಧ್ಯಕ್ಷರ ಸಂಕಲ್ಪ, ಸದಸ್ಯರ ಹುಮ್ಮಸ್ಸಿನ ಕಾರ್ಯತತ್ಪರತೆ ಬೆಳ್ಳಿಹಬ್ಬಕ್ಕೆ ಹೊಸ ಮೆರುಗು ತಂದಿದೆ. ಹೊರಗಡೆ ಅಕಾಡೆಮಿಯ ಕಾರ್ಯಕಲಾಪಗಳ ಸಾಧನೆ ಬಗ್ಗೆ ಮಾತನಾಡಿದ್ದು ಕೇಳಿದಾಗ ಹೆಮ್ಮೆ ಎನಿಸುತ್ತದೆ.

25 ವರ್ಷಗಳ ಹಿಂದಿನ ಪುಟಗಳನ್ನು ತಿರುಗಿಸಿದಾಗ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯ ಪ್ರಪ್ರಥಮ ಅಧ್ಯಕ್ಷರಾಗಿ ಅನೇಕ ಸಮಸ್ಯೆಗಳ ನಡುವೆಯೂ ಸಾಧಿಸಿ, ಅಕಾಡೆಮಿಗೊಂದು ರೂಪ ಕೊಟ್ಟು ಮಹತ್ವದ ಸ್ಥಾನ ಕಲ್ಪಿಸಿಕೊಟ್ಟ ದಿ : ಶ್ರೀ ಹೆಚ್. ಎಲ್. ನಾಗೇಗೌಡ ಅವರ ಸ್ಮರಣೆ ಅಗತ್ಯವಾದುದು. ಮುಂದೆ ದಿ. ಡಾ. ಎಸ್. ಕೆ. ಕರೀಂಖಾನ್, ದಿ : ಡಾ. ಜೀ ಶಂ. ಪರಮಶಿವಯ್ಯ, ಡಾ. ಕಾಳೇಗೌಡ ನಾಗವಾರ, ಡಾ. ಎಚ್. ಜೆ. ಲಕ್ಕಪ್ಪಗೌಡ, ಡಾ. ಹಿ. ಶಿ. ರಾಮಚಂದ್ರೇಗೌಡ ಈ ವಿದ್ವಾಂಸರುಗಳ ಸಾಂದರ್ಭಿಕ ಸಾಧನೆಗಳು, ಪ್ರಕಟಣೆಗಳು, ಅಕಾಡೆಮಿಯನ್ನು ಹೊಸದಿಕ್ಕಿನತ್ತ ಬೆಳೆಸುವಲ್ಲಿ ಪ್ರೇರಕವಾಗಿವೆ. ಇವರೆಲ್ಲರ ಸಹಾಯದಿಂದ ಅಕಾಡೆಮಿ ಇಂದು ಸಶಕ್ತವಾಗಿ ಬೆಳೆದಿದೆಯೆಂದು ಭಾವಿಸುತ್ತೇನೆ ಮತ್ತು ಈ ಎಲ್ಲ ಮಹನೀಯರನ್ನು ಬೆಳ್ಳಿಹಬ್ಬದ ಆಚರಣೆಯ ಈ ಸಂದರ್ಭದಲ್ಲಿ ಕೃತಜ್ಞತೆಯಿಂದ ಸ್ಮರಿಸುತ್ತೇನೆ.

25 ವರ್ಷಗಳ ಅಕಾಡೆಮಿಯ ಸಾಧನೆಗಳ ಬಗ್ಗೆ ನಮಗೆ ತೃಪ್ತಿ ಇದೆ. ಇದುವರೆವಿಗೆ ನಾಡಿನಲ್ಲಿ, ಹೊರನಾಡಿನಲ್ಲಿ ಜನಪದ ಸಾಹಿತ್ಯ, ಕಲೆ, ಕಲಾವಿದರನ್ನು ಕುರಿತು ನಡೆಸಿದ ವಿಚಾರ ಸಂಕಿರಣಗಳು, ಚರ್ಚೆಗಳು, ಶಿಬಿರಗಳು, ಪ್ರದರ್ಶಿಸಿದ ಕಲೆಗಳು ಜಾನಪದದ ಬೆಳವಣಿಗೆಗೆ ಕಾರಣವಾಗಿವೆ. ನಾಡಿನ, ಹೊರನಾಡಿನ ವಿದ್ವಾಂಸರನ್ನು, ಕಲಾವಿದರನ್ನು

ಗುರುತಿಸಿ, ಅವರ ಸೇವೆಯನ್ನು ಪರಿಗಣಿಸಿ, ಪ್ರಶಸ್ತಿ ಪಾರಿತೋಷಕ ನೀಡಿ ಗೌರವಿಸುತ್ತಾ ಬಂದಿದೆ.

ಅಕಾಡೆಮಿಯ ಇಡೀ ಸಾಧನೆಗೆ ಹಿಂದಿನ ಅಧ್ಯಕ್ಷರು, ಸದಸ್ಯರು, ರಿಜಿಸ್ಟ್ರಾರ್ ಹಾಗೂ ಅಕಾಡೆಮಿಯ ಸಿಬ್ಬಂದಿಗಳ ಪರಿಶ್ರಮವಿದೆ. ಸರಕಾರ, ಸಂಘ-ಸಂಸ್ಥೆಗಳ ಸಹಕಾರಗಳನ್ನು ನಾವು ಮರೆಯುವಂತಿಲ್ಲ.

"ಜಾನಪದ ತಲೆಮಾರು" ಮಾಲಿಕೆಯಲ್ಲಿ ನಾಡಿನ ವಿದ್ವಾಂಸರ, ತಜ್ಞರ ಬದುಕು, ಸಾಧನೆ, ಕೊಡುಗೆಗಳನ್ನೊಳಗೊಂಡಂತೆ ಅವರ ಪರಿಚಯದ ಲೇಖನಗಳನ್ನು ಪ್ರಕಟಿಸಿ ನೂರಾರು ಜನರನ್ನು ದಾಖಲಿಸಿದೆ.

ಜೊತೆಗೆ ಜಾನಪದ ಕಲೆ ಸಾಹಿತ್ಯ ಕುರಿತು ಮೌಲಿಕ ಗ್ರಂಥಗಳನ್ನು ಹೊರತರುತ್ತಾ ಪ್ರಕಟಣೆಯ ಕಾರ್ಯದಲ್ಲಿಯೂ ಸಾಕಷ್ಟು ಕೆಲಸ ಮಾಡುತ್ತಲೇ ಬಂದಿರುವುದು ಸಮಾಧಾನದ ಸಂಗತಿಯಾಗಿದೆ.

ನಮ್ಮ ಜನಪದ ಕಲೆ ಸಂಸ್ಕೃತಿ ಪರಂಪರೆಯನ್ನು ಉಳಿಸಿ, ಬೆಳೆಸಿಕೊಂಡು ಬರುತ್ತಿರುವ ಪ್ರತಿಭಾನ್ವಿತ ಕಲಾವಿದರ ಪರಿಚಯ ಪುಸ್ತಕ ಬರಬೇಕೆನ್ನುವ ಆಲೋಚನೆ ಈ ಬೆಳ್ಳಿಹಬ್ಬದ ಸಂದರ್ಭದಲ್ಲಿ ಶ್ರೇಷ್ಠ ಪ್ರತಿಭಾನ್ವಿತ ಯಕ್ಷಗಾನ ಕಲಾವಿದರು, ನಮ್ಮ ಅಕಾಡೆಮಿಯ ಅಧ್ಯಕ್ಷರೂ ಆದ ಶ್ರೀ ಕೆರೆಮನೆ ಶಂಭು ಹೆಗಡೆಯವರ ಅಧ್ಯಕ್ಷರ ಅವಧಿಯಲ್ಲಿ ಬಂದದ್ದು ಸಮಂಜಸವಾದದ್ದು. ಅಧ್ಯಕ್ಷರು ಸ್ವತಃ ಕಲಾವಿದರಾಗಿದ್ದರಿಂದಲೇ ಕಲಾವಿದರ ನೋವು ನಲಿವುಗಳಿಗೆ ಸ್ಪಂದಿಸುತ್ತಾ ಅವರಿಗಾಗಿ ಹತ್ತಾರು ಯೋಜನೆಗಳನ್ನು ರೂಪಿಸಿ, ಕಾರ್ಯಗತಗೊಳಿಸುವತ್ತ ಈಗ ಸಮಗ್ರ ನಾಡಿನ ಕಲಾವಿದರ ಪರಿಚಯ ಪುಸ್ತಕ ತರುತ್ತಿರುವುದು ಅಭಿಮಾನದ ಸಂಗತಿಯಾಗಿದೆ.

ನಾಡಿನ ಎಲ್ಲಾ ಜಿಲ್ಲೆಗಳಿಂದ ಆಸಕ್ತಿಯುಳ್ಳ ಲೇಖಕರನ್ನು ಕರೆಯಿಸಿ ಗ್ರಂಥದ ರೂಪು-ರೇಷೆಯ ಬಗ್ಗೆ, ಪುಟಗಳ ಸಂಖ್ಯೆ ಬಗ್ಗೆ ಸಭೆಯಲ್ಲಿ ತಿಳಿಸಿ, ಹಸ್ತಪ್ರತಿ ಕಳುಹಿಸಲು ಸಾಕಷ್ಟು ಸಮಯ ನೀಡಲಾಯಿತು. ಆದರೂ ಕೆಲವು ಜಿಲ್ಲೆಗಳ ಲೇಖಕರು ಕೊನೆಯವರೆಗೂ ಹಸ್ತಪ್ರತಿ ಕಳಿಸದಿದ್ದದು ನಿರಾಶೆಯನ್ನುಂಟುಮಾಡಿದೆ. ಬಂದ ಹಸ್ತಪ್ರತಿಗಳನ್ನೆಲ್ಲಾ ಪರಿಶೀಲಾ ಸಮಿತಿ ಪರಿಶೀಲಿಸಿ, ತಕ್ಷಣ ಅಕಾಡೆಮಿಯು ಮುದ್ರಣಕಾರ್ಯ ಕೈಗೆತ್ತಿಕೊಂಡು 10 ಜಿಲ್ಲಾ ಕಲಾವಿದರ ಪರಿಚಯ ಪುಸ್ತಕ ಹಾಗೂ 3 ವಿಶೇಷ ಗ್ರಂಥಗಳು ಸೇರಿದಂತೆ ಒಟ್ಟು 13 ಪುಸ್ತಕಗಳನ್ನು ಈ ಬೆಳ್ಳಿಹಬ್ಬದ ಸಂದರ್ಭದಲ್ಲಿ ಹೊರತರುತ್ತಿರುವುದು ಸಂತೋಷದ ಸಂಗತಿಯಾಗಿದೆ.

ಕೊನೆಯದಾಗಿ ಕೃತಜ್ಞತೆಯ ಒಂದೆರೆಡು ಮಾತು. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಕಾರ್ಯದರ್ಶಿಗಳಾದ ಮಾನ್ಯ ಶ್ರೀ ಐ. ಎಂ. ವಿಠ್ಠಲಮೂರ್ತಿಯವರನ್ನು ಎಷ್ಟು ಸ್ಮರಿಸಿದರೂ ಕಡಿಮೆ. ಅವರು ಈ ಬೆಳ್ಳಿಹಬ್ಬದ ಕಾರ್ಯಕ್ರಮಕ್ಕೆ ಆಸಕ್ತಿ ತೋರಿಸಿ,

ಹೆಚ್ಚಿನ ಧನ ಸಹಾಯ ಮಾಡಿದ್ದರಿಂದಲೇ ಪ್ರಕಟಣೆಗಳು, ವಿಶೇಷ ಕಾರ್ಯಕ್ರಮಗಳು ಜರುಗುತ್ತಿವೆ. ಅವರಿಗೆ ಅಕಾಡೆಮಿಯ ಪರವಾಗಿ ಹೃತ್ಪೂರ್ವಕ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ. ಹಾಗೂ ಸಮಯಕ್ಕೆ ಸರಿಯಾಗಿ ಸಹಾಯ, ಸಹಕಾರ ನೀಡಿದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕರಾದ ಮಾನ್ಯ ಶ್ರೀ ಮನು ಬಳಿಗಾರ ಅವರಿಗೂ ಅಕಾಡೆಮಿ ಪರವಾಗಿ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ.

ಗೊತ್ತುಪಡಿಸಿದ ಅವಧಿಯಲ್ಲಿ ತಮ್ಮ ತಮ್ಮ ಜಿಲ್ಲೆಯ ಹಿರಿಯ ಹಾಗೂ ಪ್ರತಿಭಾನ್ವಿತ ಕಲಾವಿದರ ಮಾಹಿತಿ ಸಂಗ್ರಹಿಸಿ, ಹಸ್ತಪ್ರತಿ ಸಿದ್ಧಪಡಿಸಿಕೊಟ್ಟ ಲೇಖಕರಿಗೆ, ಆಗಾಗ ಸಭೆ ಸೇರಿ ಈ ಪ್ರಕಟಣಾ ಕಾರ್ಯಕ್ಕೆ ಚಾಲನೆ ನೀಡಿ ಸಹಕರಿಸಿದ ಪ್ರಕಟಣಾ ಸಮಿತಿ ಅಧ್ಯಕ್ಷರು, ಸದಸ್ಯರಿಗೆ, ಪ್ರಕಟಣೆಯ ಜವಾಬ್ದಾರಿ ಹೊತ್ತು ಎಲ್ಲ ಪುಸ್ತಕಗಳ ವಿನ್ಯಾಸ, ಕರಡು ತಿದ್ದುವಿಕೆ, ಮುದ್ರಣ ಸಮೀಕ್ಷೆಯ ಕಾರ್ಯ ನಿರ್ವಹಿಸಿದ ಅಕಾಡೆಮಿ ಸದಸ್ಯರಾದ ಶ್ರೀ ಗವೀಶ್ ಹಿರೇಮಠ ಅವರಿಗೆ, ಕಡಿಮೆ ಅವಧಿಯಲ್ಲಿ ಸುಂದರವಾಗಿ ಮುದ್ರಿಸಿಕೊಟ್ಟ ಪ್ರಭು ಗ್ರಾಫಿಕ್ಸ್ ಮಾಲೀಕರಾದ ಶ್ರೀ ಶಾಂತವೀರ ಜಂಗಮನಿಯವರಿಗೆ ಹಾಗೂ ಅಕಾಡೆಮಿಯ ಪ್ರಕಟಣೆಗಳನ್ನು ಆಸಕ್ತಿಯಿಂದ ಬರಮಾಡಿಕೊಳ್ಳುವ ಸಹೃದಯಿಗಳಿಗೆ ಅನಂತ ಕೃತಜ್ಞತೆಗಳು.

– ಬಿ. ಎನ್. ಪರಡ್ಡಿ

ರಿಜಿಸ್ಟ್ರಾರ್,
ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ,
ಬೆಂಗಳೂರು.

# ಪ್ರಸ್ತಾವನೆ

ಅಪೂರ್ವ ಜಾನಪದ ವಾಙ್ಮಯ, ಮೈನವಿರೇಳಿಸುವ ಗುಡಿ ಗೋಪುರ, ಸರ್ವಧರ್ಮ ಸಹಿಷ್ಣುತೆಯ ತುಮಕೂರು ಜಿಲ್ಲೆ, ಕರ್ನಾಟಕ ಸಂಸ್ಕೃತಿಯಲ್ಲಿ ಅನನ್ಯತೆಯಲ್ಲಿ ಗಳಿಸಿಕೊಂಡಿದೆ. ಗ್ರಾಮ ಸೌಹಾರ್ದ ಸಂಸ್ಕೃತಿಗೆ ತೋರುಗಂಭವಾಗಿರುವ, ಹಾಡು, ಕುಣಿತ, ಕತೆ, ಗಾದೆ, ಒಗಟು, ಉಡುಗೆ-ತೊಡುಗೆಗಳ ಜಾನಪದ ವೈವಿಧ್ಯತೆಯಿಂದ ಕೂಡಿದೆ.

ಕರ್ನಾಟಕ ರಾಜಧಾನಿ ಬೆಂಗಳೂರಿನಿಂದ ಐವತ್ತೈದು ಮೈಲಿಗಳ ದೂರದಲ್ಲಿದ್ದರೂ, ಬೆಳೆಯುತ್ತಿರುವ ಬೆಂಗಳೂರಿಗೆ ಸರಿಸಮನಾಗಿ ಹೆಜ್ಜೆ ಹಾಕುತ್ತಾ, ಜೊತೆಗೂಡಲು ದಾಪುಗಾಲಿಡುತ್ತಿರುವ ತುಮಕೂರು ರಾಜಧಾನಿಗೆ ಹೆಬ್ಬಾಗಿಲಿನಂತಿದೆ. ಹಚ್ಚಹಸಿರಿನ ಹೊದಿಕೆಯೊಂದಿಗೆ, ಸದಾ ತಂಪು ನೀಡುವ, ಬೆಟ್ಟ ಬನಗಳಿಂದ ಕೂಡಿದೆ. ಸಿದ್ಧಗಂಗಾ ಬೆಟ್ಟ, ಸಿದ್ಧರ ಬೆಟ್ಟ, ಹುತ್ತರಿದುರ್ಗ, ಹುಲಿಯೂರು ದುರ್ಗ, ನಿಡುಗಲ್ಲುದುರ್ಗ, ದೇವರಾಯನ ದುರ್ಗ, ರಾಮದೇವರ ಬೆಟ್ಟ, ಮಧುಗಿರಿ ಬೆಟ್ಟ ತುಮಕೂರು ಜಿಲ್ಲೆಯ ಭೌಗೋಳಿಕ ವಿನ್ಯಾಸವನ್ನು ಸಾರ್ಥಕವಾಗಿ ಪ್ರತಿನಿಧಿಸುತ್ತವೆ. ಪೂರ್ವಕ್ಕೆ ಹಾಸನ, ಚಿಕ್ಕಮಗಳೂರು, ಉತ್ತರಕ್ಕೆ ಆಂಧ್ರದ ಅನಂತಪುರ, ದಕ್ಷಿಣಕ್ಕೆ ಮಂಡ್ಯ ಹೀಗೆ ಗಡಿಭಾಗಗಳೊಂದಿಗೆ ಚಾಚಿ ಕೊಂಡಿರುವ ತುಮಕೂರು, ಗುಬ್ಬಿ, ಕುಣಿಗಲ್, ತುರುವೇಕೆರೆ, ತಿಪಟೂರು, ಚಿಕ್ಕನಾಯಕನಹಳ್ಳಿ, ಮಧುಗಿರಿ, ಸಿರಾ, ಕೊರಟಗೆರೆ, ಪಾವಗಡ ಈ ಹತ್ತು ತಾಲೂಕುಗಳನ್ನು ಒಳಗೊಂಡಿದೆ. ಈ ಹತ್ತು ತಾಲೂಕುಗಳೂ ಜಿಲ್ಲೆಯ ಒಟ್ಟು ಸಂಸ್ಕೃತಿಗೆ ಹೊಂದಿಕೊಂಡಂತ್ತಿದ್ದರೂ, ವೈವಿಧ್ಯತೆಗಳಿಂದ ಅನನ್ಯತೆಯನ್ನು ಕಾಯ್ದುಕೊಂಡಿದೆ.

ಸಿದ್ಧಗಂಗೆ, ಶೀಬಿ, ಸಿದ್ಧರಬೆಟ್ಟ, ಮಾಗೋಡು, ಮರಡಿಗುಡ್ಡ, ಯಡೆಯೂರು, ಕೆರೆಗೋಡು, ರಂಗಾಪುರ, ಗುಬ್ಬಿ, ಮಧುಗಿರಿ, ಚೇಳೂರು, ಹಾಗಲವಾಡಿ, ಗುಬ್ಬಿ ಹೊಸಹಳ್ಳಿ, ಬಿಜ್ಜಾವರ, ಚಿಕ್ಕನಾಯಕನಹಳ್ಳಿ, ಹೊಳವನಹಳ್ಳಿ ಇವು ಪಾಳೆಯಗಾರಿಕೆಯ ಹೆಗ್ಗಳಿಕೆಯ ನೆಲೆಗಳು. ಶ್ರೀಕ್ಷೇತ್ರ ಸಿದ್ಧಗಂಗೆ, ಯಡೆಯೂರು, ಕೆರೆಗೋಡು–ರಂಗಾಪುರ, ಗೋಡೆಕೆರೆ, ಕುಪ್ಪೂರು ಗದಿಗೆ, ಪಟ್ಟನಾಯಕನಹಳ್ಳಿ, ಗೊರವನಹಳ್ಳಿ ನಿತ್ಯ ದಾಸೋಹದ ಆಶ್ರಮ ಶಾಲೆಗಳು, ಋಷಿ ಸಂಸ್ಕೃತಿಯ ಪರಂಪರೆಯ ಮುಂದುವರಿದ ರೂಪ. ಈ ಎಲ್ಲ ಪುಣ್ಯಕ್ಷೇತ್ರಗಳ ಬಗೆಗೆ ಅಪಾರ ಜಾನಪದ ವಾಙ್ಮಯವಿದೆ.

ಯತಿಯೊಬ್ಬರು ಸರಿರಾತ್ರಿಯ ದಣಿವನ್ನು ಇಂಗಿಸುವುದಕ್ಕಾಗಿ ಸಿದ್ಧವಾದ ಗಂಗೆಯೇ ಇಂದಿನ ಸುಪ್ರಸಿದ್ಧ ಸಿದ್ಧಗಂಗೆ. ಶರಣನಿಗೆ ಆತಿಥ್ಯ ನೀಡುವ ಶರಣೆಯೊಬ್ಬಳ ಅಚಲ ನಿಷ್ಠೆ ನೇಮವನ್ನು ಸಂಕೇತಿಸುವ ಯಡೆಯೂರು, ಶೀಲ ಶೌಚಗಳಿಂದ ಸಾಹಸಗಾಥೆಯಾಗಿರುವ ಜುಂಜಪ್ಪನ ಕಳುವರಹಳ್ಳಿ, ಪರಸಪ್ಪನಕೆರೆ, ಚದುರಂಗದ ಚಂಗಾವರ, ಮುರಲೇಹಳ್ಳಿ ಭೂತಪ್ಪ, ಗಂಡಿಹಳ್ಳಿ ದತ್ತಾತ್ರೇಯ ಬುಡನ್‌ಮಠ, ಶ್ರೀರಾಮನಿಗೆ ಆಶ್ರಯ ನೀಡಿದ ದೇವರಾಯನ ದುರ್ಗದ ಕಾಡು, ನಾಮದಚಿಲುಮೆ, ಸುಧನ್ವನು ಭಕ್ತಿ ಪರೀಕ್ಷೆಯಲ್ಲಿ ಗೆದ್ದ ಚಂಪಕಾಪುರ (ಸಂಪಿಗೆ), ಕದಂಬ ಮುನಿಯ ಕಡಬ, ಭೃಗ ಮಹಾರಾಜನ ಕುಣಿಗಲ್ ಈ ಎಲ್ಲವುಗಳ ಬಗೆಗೆ ಆರೇಳು ರಾತ್ರಿ ಹಾಡಬಲ್ಲ ಅಪೂರ್ವ ಕಲಾವಿದರು, ಈ ಬಗೆಗೆ ರೂಪುಗೊಂಡಿರುವ ಜನಪದ ವಾಙ್ಮಯ ಈ ಜಿಲ್ಲೆಯ ಜನಪದ ಸಾಹಿತ್ಯ–ಸಂಗೀತ ಪ್ರಕಾರಕ್ಕೆ ನೀಡಿದ ಬೆಲೆ ಕಟ್ಟಲಾರದ ಕೊಡುಗೆ.

ಎಸ್. ಕೆ. ಕರೀಂಖಾನ್, ಜೀಶಂಪ, ಕಂಬಾಳು ಸಿದ್ಧಗಂಗಯ್ಯ ಡಾ ॥ ಚಿಕ್ಕಣ್ಣ ಯಣ್ಣೆಕಟ್ಟೆ, ಚಲುವರಾಜ್ ಜನಪದ ಕಾವ್ಯ ಸಂಗ್ರಹದ ಪ್ರಮುಖರು, ಸಂಶೋಧನೆಗೆ ಹಾದಿ ತೋರಿದ ಸಂಸ್ಕೃತಿ ಚಿಂತಕರು.

ಮೂಡಲಪಾಯ ಯಕ್ಷಗಾನ, ಕರಪಾಲ, ಸೋಮನಕುಣಿತ, ನಂದಿಧ್ವಜ, ಮುಖವೀಣೆ, ಗಣೆ, ಗೊರವರ ಕುಣಿತ, ತಮಟೆ, ಊರುವೆ, ಚೌಡಿಕೆ, ತೊಗಲುಗೊಂಬೆ, ಈರಮಕ್ಕಳ ಕುಣಿತ, ಕೋಲಾಟ ತುಮಕೂರು ಜಿಲ್ಲೆಯ ಪ್ರಾತಿನಿಧಿಕ ಕಲೆಗಳು. ದೈವಸಂಬಂಧಿ ಆರಾಧನಾ ಕಲೆಯೂ ಹೌದು, ಕಲಾವಿದರೂ ಸಾವಿರಾರು. ಈ ಬಗೆಯ ಜಿಲ್ಲಾ ಕಲಾವಿದರ ಪರಿಚಯವೇ 'ತುಮಕೂರು ಜಿಲ್ಲಾ ಜನಪದ ಕಲಾವಿದರು' ಪುಸ್ತಕ.

ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಈ ಬಗೆಗೆ ವಿದ್ವಾಂಸರ ಚಿಂತನಾಗೋಷ್ಠಿಯನ್ನು ಏರ್ಪಡಿಸಿ, ಅಲ್ಲಿ ರೂಪುಗೊಂಡ ಅಭಿಪ್ರಾಯದಂತೆ ಕಲಾಪ್ರಕಾರವೊಂದರಲ್ಲಿ ಗಣನೀಯ ಸಾಧನೆ ಮಾಡಿದ, ಅರವತ್ತು ವರ್ಷದ ಆಚೆಗಿನ ಕಲಾವಿದರ ಸಾಧನೆ ಕಿರಿಯರಿಗೆ ಮಾರ್ಗಸೂಚಿಯಾಗುವುದರ ಜೊತೆಗೆ ಆಸಕ್ತ ಸಂಶೋಧಕರಿಗೂ ಆಕರ ಒದಗಿಸುವ ಉದ್ದೇಶವೂ ಇದರಲ್ಲಿದೆ. ಹಾಗಾಗಿ ತುಮಕೂರು

ಜಿಲ್ಲೆಯ ಅರವತ್ತು ವಯಸ್ಸು ತುಂಬಿರುವ ಕಲಾವಿದರನ್ನು ಇಲ್ಲಿ ಪರಿಚಯ ಮಾಡಿಕೊಡಲಾಗಿದೆ. ಈ ಮಹತ್ವದ ಮಾಹಿತಿ ಸಂಗ್ರಹಣೆಯಲ್ಲಿ ಜಿಲ್ಲೆಯ ಪತ್ರಿಕಾ ಮಾಧ್ಯಮದವರೂ ಸೇರಿದಂತೆ ಹಲವು ವಿದ್ವಾಂಸರು, ಕಲಾವಿದರು ನೆರವಾಗಿದ್ದಾರೆ. ಅಂಥವರನ್ನು ಮಾಹಿತಿ ನೀಡಿದವರ ಪಟ್ಟಿಯಲ್ಲಿ ನೆನೆಯಲಾಗಿದೆ. ಈ ಯೋಜನೆಯನ್ನು ನನಗೊಪ್ಪಿಸಿ, ಕಲಾವಿದರ ಹತ್ತಿರದ ಸಂಪರ್ಕಕ್ಕೆ ಆಸ್ಪದ ನೀಡಿದ, ಕರ್ನಾಟಕ ಜಾನಪದ ಅಕಾಡೆಮಿಯ ಅಧ್ಯಕ್ಷರಾದ ಶ್ರೀ ಕೆರೆಮನೆ ಶಂಭು ಹೆಗಡೆ ಹಾಗೂ ಅಕಾಡೆಮಿ ಸದಸ್ಯ ಬಳಗವನ್ನು ನೆನೆಯುತ್ತೇನೆ. ಸಿರಾ ಸ.ಪ್ರ.ದ. ಕಾಲೇಜಿನ ಪ್ರಾಚಾರ್ಯ ಪ್ರೊ. ಡಿ. ಚಿಕ್ಕತಿಮ್ಮಯ್ಯ, ಮಡದಿ ಶಾಂತಶ್ರೀ, ಮಕ್ಕಳಾದ ಅಕ್ಷತ ಯಣ್ಣೆಕಟ್ಟೆ, ಯಶಸ್ವಿ ಯಣ್ಣೆಕಟ್ಟೆ ಇವರ ಸಹಕಾರದ ಹಿನ್ನೆಲೆಯಲ್ಲಿ ನೆನೆಯಲೇಬೇಕಿದೆ.

ನವೆಂಬರ್, ೨೦೦೭

**ಡಾ|| ಚಿಕ್ಕಣ್ಣ ಯಣ್ಣೆಕಟ್ಟೆ,**
ಪ್ರಾಧ್ಯಾಪಕ ಮತ್ತು ಪಿಎಚ್.ಡಿ. ಮಾರ್ಗದರ್ಶಕ,
ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಸಿರಾ.

# ಪರಿವಿಡಿ

●


| | | |
|---|---|---|
| ೧. | ಲಕ್ಕವ್ವನಹಳ್ಳಿ ಗೊಲ್ಲರಹಟ್ಟಿ ನಿಂಗಜ್ಜ | ೧ |
| ೨. | ಹಂದನಕೆರೆ ಸೋಬಾನೆ ಲಕ್ಷ್ಮಜ್ಜಿ | ೪ |
| ೩. | ಉಜ್ಜನಿಯ ಹಾಲಮ್ಮ | ೭ |
| ೪. | ಗುಡ್ಡರ ಮೇಳದ ಅಂದಾನಿಗೌಡ | ೯ |
| ೫. | ತಂಬೂರಿ ಬಸಪ್ಪ | ೧೧ |
| ೬. | ಕೆ. ಮುದಿಗೆರೆ ಸೋಬಾನೆ ಗಿರಿಯಮ್ಮ | ೧೩ |
| ೭. | ಮಾಡ್ಗಾನಹಟ್ಟಿ ದಾಸಪ್ಪ | ೧೫ |
| ೮. | ಅರಳುಗುಪ್ಪೆ ಚೌಡಿಕೆ ಎಲ್ಲಪ್ಪ | ೧೭ |
| ೯. | ಬಜಗೂರು ಎಲ್ಲಯ್ಯ | ೧೯ |
| ೧೦. | ನಿಡುಗಟ್ಟೆ ಚೌಡಿಕೆ ರಾಮಣ್ಣ | ೨೧ |
| ೧೧. | ಮಾಗೋಡು ಜೋಗೀರಣ್ಣ | ೨೩ |
| ೧೨. | ಅರಳಗುಪ್ಪೆ ಚೌಡಿಕೆ ಬೋರಶೆಟ್ಟಿ | ೨೫ |
| ೧೩. | ವಡೇರಪುರದ ಸಿದ್ಧಯ್ಯ | ೨೭ |
| ೧೪. | ಕರಪಾಲ ಬಸವರಾಜು | ೨೯ |
| ೧೫. | ಕದಿರೆಹಳ್ಳಿ ಶ್ರೀ ಸಿರಿಯಪ್ಪ | ೩೨ |
| ೧೬. | ದ್ವಾರನಕುಂಟೆ ಪಾತಲಿಂಗಪ್ಪ | ೩೪ |
| ೧೭. | ಚೌಡಿಕೆ ಎಲ್ಲಯ್ಯ | ೩೬ |
| ೧೮. | ಸೂತ್ರದ ಗೊಂಬೆ ಸಿದ್ಧೇಗೌಡ | ೩೮ |
| ೧೯. | ಲಾವಣಿಕಾರ ಹೆಬ್ಬಾಕ ಕೆಂಪಯ್ಯ | ೪೦ |

| | | |
|---|---|---|
| ೨೦. | ಸೋಬಾನೆ ಹನುಮಕ್ಕ | ೪೨ |
| ೨೧. | ಮಾರನಹಳ್ಳಿ ಸಿದ್ದೇಗೌಡ | ೪೪ |
| ೨೨. | ಹಾಡುಗಾರ್ತಿ ಚಿಕ್ಕಮ್ಮ | ೪೬ |
| ೨೩. | ಬರಗೂರು ಲಕ್ಷ್ಮಮ್ಮ | ೪೮ |
| ೨೪. | ರಂಗಾಪುರ ಸಣ್ಣಮ್ಮ ಮುತ್ತಣ್ಣ | ೫೦ |
| ೨೫. | ಶ್ರೀಮತಿ ಹನುಮಕ್ಕ | ೫೨ |
| ೨೬. | ತತ್ವಪದದ ನರಸಮ್ಮ | ೫೪ |
| ೨೭. | ಹೆಚ್.ಎಸ್. ನೀಲಕಂಠಯ್ಯ | ೫೬ |
| ೨೮. | ಭಾಗವತ ಪಟೇಲ್ ಎನ್. ನಾರಸಪ್ಪ | ೫೮ |
| ೨೯. | ಭಾಗವತ ಸಿದ್ಧಲಿಂಗಪ್ಪ | ೬೦ |
| ೩೦. | ಮೇಳದ ಶಂಭಣ್ಣ | ೬೨ |
| ೩೧. | ಭಾಗವತ ಎ. ಎನ್. ಚನ್ನಬಸವಯ್ಯ | ೬೪ |
| ೩೨. | ಕಲ್ಮನೆ ನಂಜಪ್ಪ | ೬೭ |
| ೩೩. | ಹಂದನಕೆರೆ ಕರಿಯಣ್ಣಶೆಟ್ಟಿ | ೭೦ |
| ೩೪. | ಶಾಗದಡು ಭಾಗವತ ಲಕ್ಷ್ಮೀರಾಮೇಗೌಡ | ೭೨ |
| ೩೫. | ಭಾಗವತ ನಲ್ಲೂರು ಬೆಟ್ಟಪ್ಪ | ೭೪ |
| ೩೬. | ಭಾಗವತ ಬಂದಕುಂಟೆ ಗೋಪಾಲಯ್ಯ | ೭೭ |
| ೩೭. | ಭಾಗವತ ರಾಮಾಂಜಿನಯ್ಯ | ೭೯ |
| ೩೮. | ಭಾಗವತ ಜಿ. ಆರ್. ಚಿಕ್ಕಮುದ್ದಯ್ಯ | ೮೧ |
| ೩೯. | ಭಾಗವತ ಕೊಕ್ಕಟ್ಟೆ ಮರುಳಸಿದ್ದಪ್ಪ | ೮೩ |
| ೪೦. | ಭಾಗವತ ಬೋರಪ್ಪ | ೮೫ |
| ೪೧. | ಸಿ. ಎಸ್. ಮೇಲೇಗೌಡ | ೮೭ |
| ೪೨. | ಭಾಗವತ ತಿಪ್ಪೇಸ್ವಾಮಿ | ೮೯ |
| ೪೩. | ಭಾಗವತ ಧೂಳೇಗೌಡ | ೯೧ |
| ೪೪. | ಬಯಲಾಟದ ಭೀಮಣ್ಣ | ೯೩ |
| ೪೫. | ಭಾಗವತ ದೊಡ್ಡಯ್ಯ | ೯೫ |
| ೪೬. | ಭಾಗವತ ಎಣ್ಣೆಕಟ್ಟೆ ನಿಂಗಯ್ಯ | ೯೭ |
| ೪೭. | ಭಾಗವತ ಕೆ. ಗುಡ್ಡಯ್ಯ | ೯೯ |
| ೪೮. | ಭಾಗವತ ಶ್ರೀರಂಗಯ್ಯ | ೧೦೧ |
| ೪೯. | ಭಾಗವತ ಸಣ್ಣೀರಯ್ಯ | ೧೦೩ |
| ೫೦. | ಭಾಗವತ ಬಸವಯ್ಯ | ೧೦೫ |

೫೧. ಭಾಗವತ ಕಡವಿಗೆರೆ ಪಿ. ತಿಮ್ಮಯ್ಯ . . ೧೦೭
೫೨. ಭಾಗವತ ಮುಷ್ಟಿಗರಹಳ್ಳಿ ರಂಗಪ್ಪ . . ೧೦೯
೫೩. ಟಿ. ವೆಂಕಟಾಚಲಪತಿ . . ೧೧೧
೫೪. ಯಕ್ಷಗಾನದ ಲಕ್ಷ್ಮಣಯ್ಯ . . ೧೧೩
೫೫. ಎಮ್ಮೆತಿಮ್ಮನಹಳ್ಳಿ ದೊಡ್ಡಪಾಲಯ್ಯ . . ೧೧೫
೫೬. ದಾಸಲುಕುಂಟೆ ಶಿವರುದ್ರಯ್ಯ . . ೧೧೭
೫೭. ಬೆನಕನಹಳ್ಳಿ ಲಕ್ಷ್ಮೀನರಸಿಂಹಯ್ಯ . . ೧೧೯
೫೮. ಭಾಗವತ ಹಾಲ್ಕುರಿಕೆ ರಾಘವೇಂದ್ರರಾವ್ . . ೧೨೧
೫೯. ಕನ್ನಮೇಡಿ ನಂಜುಂಡಪ್ಪ . . ೧೨೩
೬೦. ಕರಿರಾಮನಹಳ್ಳಿ ಭಾಗವತ ಕಣುಮಣ್ಣ . . ೧೨೫
೬೧. ಭಾಗವತ ಚಂದಪ್ಪ . . ೧೨೭
೬೨. ಪಟೇಲ್ ಕೆಂಪೇಗೌಡ . . ೧೨೯
೬೩. ಸೋಮನಕುಣಿತದ ಲಕ್ಕಣ್ಣ . . ೧೩೧
೬೪. ಡಿ. ಎಸ್. ಗಂಗಾಧರಗೌಡ . . ೧೩೩
೬೫. ಸೋಮನ ಕುಣಿತದ ಚಿಕ್ಕಣ್ಣ . . ೧೩೫
೬೬. ಮುಖವೀಣೆ ಶ್ರೀರಂಗಯ್ಯ . . ೧೩೭
೬೭. ಭೈರಪ್ಪ ಲಕ್ಷ್ಮೀಪುರ . . ೧೩೯
೬೮. ಕಡವಿಗೆರೆ ಮೂಡಲಗಿರಿಯಪ್ಪ . . ೧೪೧
೬೯. ನಾದೂರು ದಾಸಪ್ಪ . . ೧೪೩
೭೦. ಮುಖವೀಣೆ ಕೃಷ್ಣಪ್ಪ . . ೧೪೫
೭೧. ಗಣೆವಾದಕ ಈರದೊಡ್ಡಯ್ಯ . . ೧೪೭
೭೨. ಚಿಟ್‌ಮೇಳದ ಮಹಾಲಿಂಗಪ್ಪ . . ೧೪೯
೭೩. ತಮಟೆ ಲಕ್ಷ್ಮಯ್ಯ . . ೧೫೧
೭೪. ಲಿಂಗದವೀರ ಕೆ. ಆರ್. ಹೊಸಳ್ಳಯ್ಯ . . ೧೫೩
೭೫. ಚಿಕ್ಕನಹಳ್ಳಿ ಲಿಂಗದ ಬೀರರ ವೀರಣ್ಣ . . ೧೫೫
೭೬. ಹೇರೂರು ರುದ್ರಮ್ಮ . . ೧೫೭
೭೭. ಬೇಡನಕಟ್ಟೆ ಬುಕ್ಕಯ್ಯ . . ೧೫೯
೭೮. ನಗಾರಿ ಕಲೆಯ ಸಿ.ಎಸ್. ಬಸವರಾಜು . . ೧೬೧
೭೯. ಸೋಮನಕುಣಿತದ ಲಿಂಗೇಗೌಡ . . ೧೬೩
೮೦. ಪಟೇಲ್ ನಂಜಾಮರಿಗೌಡ . . ೧೬೫
೮೧. ಭಾಗವತ ಟಿ. ವೆಂಕಟರಮಣಯ್ಯ . . ೧೬೬

೮೨. ಗೊರವರ ಬೆಟ್ಟಲಿಂಗಯ್ಯ . . ೧೬೮
೮೩. ಗೊರವರ ಚಿಕ್ಕಮಲ್ಲಯ್ಯ . . ೧೭೦
೮೪. ಕೋಲಾಟದ ದೊಡ್ಡಮಲ್ಲಯ್ಯ . . ೧೭೨
೮೫. ವೀರಮಕ್ಕಳ ಕುಣಿತದ ಲಕ್ಕಣ್ಣ . . ೧೭೪
೮೬. ಲಿಂಗದ ಬೀರರ ಚಂದ್ರಣ್ಣ . . ೧೭೬
೮೭. ಪಾಂಡುರಂಗಪ್ಪ . . ೧೭೮
೮೮. ಮಾಹಿತಿ ನೀಡಿದವರು . . ೧೮೦

## ಲಕ್ಕವ್ವನಹಳ್ಳಿ ಗೊಲ್ಲರಹಟ್ಟಿ ನಿಂಗಜ್ಜ

ಆಂಧ್ರ-ಕರ್ನಾಟಕ ಗಡಿಗೆ ಗೆರೆ ಕೊಯ್ದಂತಿರುವ ತುಮಕೂರು ಜಿಲ್ಲೆಯ ಸಿರಾ ತಾಲೂಕಿನ ಲಕ್ಕವ್ವನಹಳ್ಳಿ ಗೊಲ್ಲರಹಟ್ಟಿ ನಿಂಗಜ್ಜನ ಕಾಯಕನೆಲೆ. ಇದು ಕರ್ನಾಟಕ ಕಾಡುಗೊಲ್ಲರ ಸಂಸ್ಕೃತಿಯ ಮಾದರಿಯ ರೂಪ ಕಳೆದ ೭೦ ವರ್ಷಗಳಿಂದಲೂ ಕುರಿ, ಮೇಕೆ ಮೇಯಿಸುತ್ತಲೇ ಕುರುಚಲು ಕಾಡಿನ ಮೃಗಗಳಿಗೆ ದನಿಯಾಗುತ್ತ, ಕುರಿ ಪೋಷಣೆ, ರಕ್ಷಣೆಯ ಧ್ವನಿರೂಪವಾಗಿ ಕಲಿತ ಜನಪದ ಕಾವ್ಯ ಹಾಡುಗಾರಿಕೆ, ನಿಂಗಣ್ಣನ ಭವ್ಯ ಬದುಕಿನಲ್ಲಿ ಮಹಾ ಕಾವ್ಯವಾಗಿ ರೂಪುಗೊಂಡದ್ದು ವಿಶೇಷ. ಕಾಡುಗೊಲ್ಲರ ಪುರಾಣಪುರುಷ, ಆರಾಧ್ಯ ದೈವ ಚಿತ್ರದೇವರು. ಈ ಪುರಾಣ ದೈವವನ್ನು ಕುರಿತು ಮಹಾಕಾವ್ಯ ಹಾಡಬಲ್ಲ ಏಕೈಕ ಕಲಾವಿದ ಶ್ರೀ ನಿಂಗಣ್ಣ. ಒಣ ನೆಲದ ಬದುವಿನ ಮೇಲೆ, ಹೆಗಲ ಮೇಲಣ ಕಂಬಳಿ ಹಾಸಿ, ಬಲ ಕೆನ್ನೆಯ ಮೇಲೆ ಬಲಗೈ ಅನಿಸಿಕೊಂಡು ಹಾಡು ಸುರು ಮಾಡಿದರೆ ಬಯಲು ಗಾನ ಆಲಯವಾಗುತ್ತದೆ. ಕುರಿ ರೊಪ್ಪ ಸಂಗೀತ ಶಾಲೆಯಾಗುತ್ತದೆ. ಅಷ್ಟೊಂದು ಪದಗಳು ಈ ಕಾಡುಗೊಲ್ಲರ ಅಜ್ಜನ ಎದೆಯ ಗೂಡೊಳಗೆ ಗೂಡು ಕಟ್ಟಿವೆ.

ಚಿತ್ರದೇವರನ್ನು ಕುರಿತು ಕಾವ್ಯ ಹಾಡುವವರು ನಿಂಗಜ್ಜನ ಸಮಕಾಲೀನರು ಹಲವರು ಸಿರಾ, ಪಾವಗಡ, ಮಧುಗಿರಿ, ಹಿರಿಯೂರು ಈ ಭಾಗಗಳಲ್ಲಿ ಕಂಡು ಬರುತ್ತಾರೆ. ಹಿರಿಯೂರು ತಾಲೂಕಿನ ಇಕ್ಕನೂರಿನ ಪೂಜಾರಿ ನಿಂಗಣ್ಣ ಅಂಥವರಲ್ಲಿ ಒಬ್ಬರು. ಆದರೆ ಇವರ್‍ಯಾರಿಗೂ ಸಮಗ್ರ ಕಾವ್ಯವನ್ನು ಒಂದಿಷ್ಟೂ ಬಿಡದೆ ಹಾಡುವ, ಎಷ್ಟು ಬಾರಿ ಹಾಡಿದರೂ ಒಂದಿಷ್ಟೂ ಬದಲಾವಣೆ ತೋರದೆ, ಯಥಾವತ್ತಾಗಿ ಕಥೆ ಮಾಡುವ ವಸ್ತುನಿಷ್ಠತೆ ಲಭ್ಯವಾಗಿಲ್ಲದಿರುವುದು ನಿಂಗಜ್ಜನ ವಿಶೇಷತೆ.

ನೆರೆಯ ಬೇವಿನಹಳ್ಳಿಯ ಕಾಡುಗೊಲ್ಲರ ನಾಗಣ್ಣನ ಬಾಲ್ಯದ ಸಹವಾಸ, ಕುರಿ ಹುಲ್ಲು ನೀರಿಗಾಗಿ ಪರಸ್ಥಳಕ್ಕೆ ಹೋಗಲೇಬೇಕಾದಾಗ ರಾತ್ರಿ ಕಳ್ಳರು ಕಾಕರಿಂಥ ಕುರಿಯನ್ನು ಕಾಯಲು ರಾತ್ರಿಯೆಲ್ಲಾ ಎಚ್ಚರವಾಗಿರಬೇಕಾಗುತ್ತದೆ. ಕನಿಷ್ಠ ಸರದಿಯ ಪ್ರಕಾರವಾದರೂ ಎದ್ದು ಕುರಿ ಮಂದೆ ಕಾಯಲೇಬೇಕಾಗುತ್ತದೆ. ಇದು ಕುರಿಗಾಹಿಗಳ ನಿತ್ಯನೇಮವಾಗಿದೆ. ನಿಂಗಜ್ಜನಿಗೆ ಕಾವ್ಯ ಒಲಿದ ಬಗೆಯೂ ಇದೇ ಪ್ರಕಾರವಾಗಿಯೇ. ತನ್ನ ಜೀತದ ದಿನಗಳಲ್ಲಿ ಅಂದರೆ ಆರೇಳು ವರ್ಷದ ಬಾಲಕತನದಿಂದಲೇ ಪರಸ್ಥಳಗಳಲ್ಲಿ ವಾಸಿಸುತ್ತಾ ಹಗಲು ಕುರಿ ಕಾಯ್ದು, ರಾತ್ರಿ ಮುಂದೆ ಕಾಯುವುದು ಇವರ ನಿತ್ಯ ನೇಮವಾಗಿತ್ತು. ಅಂಥ ಕಾಯಕದೊಳಗೆ ನಿಂಗಜ್ಜ ಗಣೆ ಊದುವುದನ್ನು ಮೊದಲು ಕಲಿತರು. ಕಾವ್ಯ ಹಾಡುವುದಕ್ಕೆ ಗಣೆಯ ಶೃತಿ ಅಗತ್ಯ. ಗಣೆ ಶೃತಿಯ ಮೂಲಕ ಚಿತ್ರದೇವರು ಕಾವ್ಯದ ಪೂರ್ಣಪಾಠವನ್ನು ಸಮಗ್ರವಾಗಿ ಕಲಿತರು. ಬೇವಿನಹಳ್ಳಿಯ ನಾಗಣ್ಣನವರ ಹಾಡುಗಾರಿಕೆಯನ್ನು ಪರಂಪರಾಗತವಾಗಿ ಮುಂದುವರಿಸಿ ಇಂದಿಗೂ ಕಂಠಸ್ಥ ಪರಂಪರೆಯಲ್ಲಿ ಉಳಿಸಿ ಬೆಳೆಸಿಕೊಂಡು ಬಂದಿರುವ, ಏಕೈಕ ಕಲಾವಿದ ಎಂಬುದು ಶ್ರೀ ನಿಂಗಜ್ಜ ಅವರ ಹಿರಿಮೆ.

ನಿಂಗಜ್ಜ ಚಿತ್ರದೇವರ ಭಕ್ತ. ಪೂಜಾರಿಕೆಯ ಮನೆಯವರು ಸಾಮಾನ್ಯವಾಗಿ ಯಾರಾದರೂ ಚಿತ್ರದೇವರ ಕತೆ ಹೇಳುವುದು ವಾಡಿಕೆ. ಆದರೆ ನಿಂಗಜ್ಜ ಪೂಜಾರಿಕೆಗೆ ಹೊರತಾದ ಕಾಯಕ. ಮೇಕೆ, ಕುರಿ ಮೇಯಿಸುವುದು ಇವರ ಪ್ರಧಾನ ಕೆಲಸ. ಆದರೂ ಸಿರಾ, ಹಿರಿಯೂರು, ಪಾವಗಡ, ಮಧುಗಿರಿ ತಾಲೂಕುಗಳ ಕಾಡುಗೊಲ್ಲರ ಮನೆಗಳ ಧಾರ್ಮಿಕ ವಿಧಿಗಳಲ್ಲಿ ಗುರುಸ್ಥಾನ ವಹಿಸುತ್ತಾರೆ. ದೇವರ ಪೂಜೆಯ ವಿಧಾನಗಳಿಗೆ ಇವರು ನೆರವಾಗುತ್ತಾರೆ. ಪೂಜೆಯ ನಂತರ ಕಂಬಳಿ ಹಾಸಿಕೊಂಡು, ಅದರ ಮೇಲೆ ಕುಳಿತು, ಚಿತ್ರದೇವರ ಕಾವ್ಯವನ್ನು ಶಾಸ್ತ್ರೀಯವಾಗಿ ಹಾಡುತ್ತಾರೆ. ಸಂದುಸಂಧಿಗೆ ಪೂಜೆ, ಚಿತ್ರದೇವರ ಪ್ರತ್ಯಕ್ಷವಾದ ಸಂದರ್ಭಕ್ಕೆ ವಿಶೇಷ ಪೂಜೆ ಮಾಡಲೇಬೇಕು ಇದು ನಿಯಮ. ಇವರು ರಾತ್ರಿಯಿಂದ ಬೆಳಗಿನ ತನಕ ಕಾವ್ಯ ಹಾಡಿದರೆ, ಆ ಮನೆಗೆ ಒಳ್ಳೆಯದಾಗುತ್ತದೆಂಬ ಬಲವಾದ ನಂಬಿಕೆ ಕಾಡುಗೊಲ್ಲರಲ್ಲಿ ಇಂದಿಗೂ ಇದೆ. ಜೊತೆಗೆ ಸಿರಾ ಸೀಮೆಯ ಕುರುಬರು, ಕುಂಚಿಟಿಗರು ಶುಭ ಸಂದರ್ಭಗಳಲ್ಲಿ ಚಿತ್ರದೇವರ ಕತೆ ಮಾಡಿಸುವುದು ವಾಡಿಕೆಯಾಗಿದೆ. ಈ ಪರಂಪರೆಯ ಗಾಯಕ ಲಿಂಗಣ್ಣ ಒಬ್ಬರೆ ಎಂಬುದು ವಿಶೇಷವಾಗಿದೆ.

೮೦ರ ಪ್ರಾಯದ ಈ ಹಿರಿಯ ಕಲಾವಿದರ ಚಿತ್ರದೇವರು ಕಾವ್ಯದ ಸಮಗ್ರ ಭಾಗವನ್ನು ೧೯೮೮ರಲ್ಲಿ ಡಾ. ಚಿಕ್ಕಣ್ಣ ಯಣ್ಣಕಟ್ಟೆ ಸಂಗ್ರಹಿಸಿ 'ನಿಂಗಜ್ಜ ಹಾಡಿದ ಚಿತ್ರದೇವರ ಕಾವ್ಯ' ಎಂಬ ಹೆಸರಲ್ಲಿ ಪ್ರಕಟಿಸಲಾಗಿದೆ. ಜವಗೊಂಡನಹಳ್ಳಿ ಮಹಾಲಿಂಗಯ್ಯ ಎಂಬುವವರು ಈ ಕಾವ್ಯವನ್ನು ಕುರಿತು ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಎಂ.ಫಿಲ್ ಪದವಿ ಪಡೆದು ಪಿಎಚ್‌ಡಿಗಾಗಿ ಸಂಶೋಧನೆಗೆ ತೊಡಗಿದ್ದಾರೆ.

ಅಪಾರ ವಾಙ್ಮಯಿ, ಸಂಯಮ ಚಿತ್ತದ ನಿಂಗಜ್ಜನಿಗೆ ಮಕ್ಕಳು ಇಲ್ಲ, ಸಮಾನ ವಯಸ್ಸಿನ ಹೆಂಡತಿ, ಅಜ್ಜನು ಕಾವ್ಯ ಹಾಡುವುದಕ್ಕೆ ಹೊರಗೆ ಹೋದಾಗ ಮೇಕೆ ಮೇಯಿಸುತ್ತಾರೆ. ಕೇವಲ ಎರಡು ಎಕರೆ ಒಣನೆಲ ಪರಂಪರಾಗತವಾಗಿ ಬಂದದ್ದು. ತನ್ನ ಹಟ್ಟಿಯ ಮಧ್ಯೆ ಹುಲ್ಲು ಜೋಪಡಿಯನ್ನು ಬಿಟ್ಟರೆ ಬೇರೆ ಏನನ್ನೂ ಮಾಡಿಕೊಂಡಿಲ್ಲ, ಮಾಡಿಕೊಳ್ಳುವ ಆಸೆ, ಹಂಬಲವೂ ಇಲ್ಲ. ಹುಲ್ಲು ಎಲೆಗಳಿಂದ ಕಟ್ಟಿದ ಈ ಪುಟ್ಟಗೂಡು ಜನಪದ ಸಂಗೀತದ ಮುತ್ತು ರತ್ನದ ಕಣಜ. ಇದೇ ನಿಂಗಜ್ಜನ ನಿಜವಾದ ಆಸ್ತಿ. ಇದೇ ಕಾಡುಗೊಲ್ಲರ ಸಂಸ್ಕೃತಿಯ ವಿಶೇಷ.

ಬುಡಕಟ್ಟು ಸಂಸ್ಕೃತಿಗೆ ಅರ್ಥವಂತಿಕೆ ತಂದಿರುವ ಈ ಅಪೂರ್ವ ಕಲಾವಿದನಿಗೆ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ೨೦೦೪ನೇ ಸಾಲಿನಲ್ಲಿ 'ಸಾಧನಾ' ಗೌರವ ಪ್ರಶಸ್ತಿ ನೀಡಿ ಗೌರವಿಸಿದೆ. ಇದೇ ಇವರ ಬದುಕಿನ ಪ್ರಥಮ ಪ್ರಶಸ್ತಿ, ಗೌರವ ಎಂಬುದು ವಿಶೇಷ.

**ನಿಂಗಜ್ಜ,**
**ಲಕ್ಕವ್ವನಹಳ್ಳಿ ಗೊಲ್ಲರಹಟ್ಟಿ,**
**ದ್ವಾರನಕುಂಟೆ ಅಂಚೆ, ಸಿರಾ ತಾಲೂಕು.**

# ಹಂದನಕೆರೆ ಸೋಬಾನ ಲಕ್ಷ್ಮಜ್ಜಿ

ಐದಾರು ರಾತ್ರಿಗಳ ಕಾಲ ನಿರಂತರವಾಗಿ ಹಾಡುಗಳನ್ನು ಹಾಡುತ್ತಾ ವ್ಯಾಖ್ಯಾನ ಮಾಡುತ್ತಾ ಸಂಗೀತಮಯ ವಾತಾವರಣವನ್ನು ಕ್ಷಣಾರ್ಧದಲ್ಲಿ ನಿರ್ಮಿಸುವ ಅಪರೂಪದ ಅಜ್ಜಿ ಲಕ್ಷ್ಮಜ್ಜಿ. ಈಗ ವಯಸ್ಸು ತೊಂಬತ್ತಾರು. ಈಗಲೂ ಲಕ್ಷ್ಮಜ್ಜಿಯ ಕಂಠಸಿರಿ ಸೊರಗಿಲ್ಲ. ಹಾಡುವ ಗೀಳು ಮಾಸಿಲ್ಲ. ೧೯೨೨ರಲ್ಲಿ ಜನಿಸಿದ ಲಕ್ಷ್ಮಜ್ಜಿ ತಮ್ಮ ಹತ್ತನೇ ವಯಸ್ಸಿನಲ್ಲಿಯೇ ಹಂದನಕೆರೆಯ ಮಲಿಯಪ್ಪ ಅವರನ್ನು ವಿವಾಹವಾದರು. ಬಾಲ್ಯವಿವಾಹವಾದರೂ ತುಂಬು ಕುಟುಂಬವಾದುದರಿಂದ ಮದುವೆ ಆಗಿದೆ ಅನ್ನಿಸಲೇ ಇಲ್ಲ. ಅದೊಂದು ಮಠದ ಮನೆಯಂತಿತ್ತು, ಮನೆಯ ವಾತಾವರಣ ಎಂದು ಸ್ಮರಿಸುವ ಲಕ್ಷ್ಮಜ್ಜಿ ತನ್ನ ಹಾಡುಗಾರಿಕೆಯ ಮೂರು ಪರಂಪರೆಯ ತಲೆಮಾರುಗಳನ್ನು ಹೆಸರಿಸುತ್ತಾರೆ. ತನ್ನ ಅಜ್ಜಿ, ತಾಯಿ, ಅತ್ತೆಯೂ ಹಾಡುಗಾರ್ತಿಯಾಗಿದ್ದರಂತೆ. ಇವರೆಲ್ಲರೂ ಯಾವುದೇ ಶುಭಸಂದರ್ಭದಲ್ಲಿ ಕಲೆತು ಹಾಡುವುದು, ಸೋಬಾನೆ, ಬೀಗರು ಕರೆಯುವ, ಒಳಲಕ್ಕಿ ಕುಟ್ಟುವ, ಹಾಡುಗಳನ್ನು ಆ ಕಾಲದಿಂದಲೇ ಕಲಿತೆ ಎಂಬ ತನ್ನ ಪೂರ್ವಕಾಲದ ಕಲಾಲೋಕವನ್ನು ತನ್ನ ಸ್ಮೃತಿಪಟಲದಲ್ಲಿ ಮಾಸದಂತೆ ಎಚ್ಚರಿಕೆ ವಹಿಸಿಕೊಂಡು ಬಂದಿರುವುದು ವಿಶೇಷ. ಮಹಾತ್ಮ ಗಾಂಧೀಜಿ ತಿಪಟೂರಿಗೆ ಬಂದಿದ್ದು, ಈಚಲಮರ ಕಡಿಯುವುದಕ್ಕೆ ಊರ ಗಂಡಸರೆಲ್ಲಾ ಹೋದದ್ದು, ಆ ಕಾಲದ ಕ್ರಾಂತಿಗೀತೆಗಳನ್ನು ಆಗಾಗ ಅಸ್ಪಷ್ಟವಾಗಿ ಗುನುಗುತ್ತಾರೆ.

ಸೋಬಾನೆ ಲಕ್ಷ್ಮಜ್ಜಿ ಎಂದೇ ಚಿಕ್ಕನಾಯಕನಹಳ್ಳಿ ಪರಿಸರದಲ್ಲಿ ಹೆಸರು ವಾಸಿಯಾಗಿರುವ ಹಂದನಕೆರೆಯ ಈ ಸಿರಿಕಂಠದ ಗಾನಗಾರ್ತಿ, ಹುಲಿಯೂರು ಕೆಂಚಮ್ಮ, ಉತ್ತರದೇವಿ, ಬಾಲನಾಗಮ್ಮ, ಕಾಡುಸಿದ್ಧಮ್ಮ ಈ ಮುಂತಾದ ಕಥನಗೀತೆಗಳನ್ನು ವ್ರತ ಎಂಬಂತೆ ಹಾಡುತ್ತಾರೆ. ಇವರು ಹಾಡಿರುವ ಹುಳಿಯಾರು ಕೆಂಚಮ್ಮ, ಉತ್ತರದೇವಿ, ಬಾಲನಾಗಮ್ಮ, ಗುಣಸಾಗರಿ, ಕಾಡುಸಿದ್ಧಮ್ಮನ ಕಥನಗಳನ್ನು ಡಾ. ಜೀಶಂಪ

ಸಂಗ್ರಹಿಸಿದ್ದಾರೆ. ಜೊತೆಗೆ ರೇವಣಸಿದ್ಧೇಶ್ವರ, ಮೈಲಾರಲಿಂಗ, ಬೀರೇದೇವರ ಕಾವ್ಯಗಳನ್ನೂ ಸುಶ್ರಾವ್ಯವಾಗಿ ಹಾಡುವುದು ಈಕೆಯ ವಿಶೇಷ. ಹಾಡುತ್ತಾ ಹಾಡುತ್ತಾ ಒಂದು ಕಾವ್ಯಾತ್ಮಕ ವಾತಾವರಣವನ್ನು ಸೃಷ್ಟಿಸುವ ಲಕ್ಷ್ಮಜ್ಜಿ ಮೇಲುನೋಟಕ್ಕೆ ಮೂಕರಂತೆಯೇ ಕಾಣುತ್ತಾರೆ. ಇವರ ರೇವಣಸಿದ್ದೇಶ್ವರನ ಕಾವ್ಯವನ್ನು ಪ್ರೊ|| ಎಸ್. ಜಿ. ಸಿದ್ದರಾಮಯ್ಯ, ಮೈಲಾರಲಿಂಗನ ಕಾವ್ಯ, ಬೀರೇದೇವರ ಕಾವ್ಯಗಳನ್ನು ಡಾ. ಚಿಕ್ಕಣ್ಣ ಯಣ್ಣೆಕಟ್ಟೆ ಸಂಗ್ರಹಿಸಿದ್ದಾರೆ.

ರೇವಣಸಿದ್ದೇಶ್ವರನ ಕಾವ್ಯ ಹಾಡುವುದು ಕುರುಬರ ಒಂದು ಸಂಪ್ರದಾಯವಾದರೂ ಆ ನಾಯಕನನ್ನು ಕುರಿತು ಚಿಕ್ಕ ಚಿಕ್ಕ ಪದಗಳು, ಗೀತೆಗಳನ್ನು ಹಾಡುವ ಸಂಪ್ರದಾಯ ಕರ್ನಾಟಕದಲ್ಲಿ ಕಾಣಬಹುದು. ಆದರೆ ಒಂದು ಪರಂಪರೆಯನ್ನು ಬಿಂಬಿಸುವ ಸಮರ್ಥವಾದ ವಸ್ತು, ಕಥನ ಶಿಲ್ಪವನ್ನು ಕೇಂದ್ರವಾಗಿಟ್ಟು ಸಮಗ್ರ ಕಾವ್ಯ ಹಾಡುವ ಪರಂಪರೆ ತೀರಾ ವಿರಳವಾದುದು. ತುಮಕೂರು, ಚಿತ್ರದುರ್ಗ, ಕೋಲಾರ, ಬೆಂಗಳೂರು, ಶಿವಮೊಗ್ಗ, ಮಂಡ್ಯ, ಮೈಸೂರು, ಹಾಸನ ಈ ಭಾಗದಲ್ಲಿ ಗುರು ರೇವಣರ ಮಠಗಳು, ಕುರುಬರ ಕಟ್ಟೆಮನೆ, ಗುರುಮಠವಾಗಿದ್ದರೂ ಆ ಭಾಗದಲ್ಲಿ ರೇವಣರ ಕತೆ ಹಾಡುವ ಪರಂಪರೆ ಇದೆ. ಇಲ್ಲಿ ಗುರು ರೇವಣರ ಸಾಂಗತ್ಯ, ಟಗರ ಪವಾಡ ಈ ಮುಂತಾದ ಕಾವ್ಯಗಳನ್ನು ಓದಿಸುವ ಪರಿಪಾಠವಿದೆ. ಆದರೆ ಉತ್ತರ ಕರ್ನಾಟಕದಲ್ಲಿ ಕುರುಬರ ಬಹುತೇಕ ಕೇರಿ, ಗ್ರಾಮಗಳಲ್ಲಿ ಬೀರೇದೇವರ ಕತೆ, ಮೈಲಾರಲಿಂಗನ ಕತೆ ಹಾಡಿಸುವ ಪರಂಪರೆ ಇಂದಿಗೂ ಇದೆ. ಅಲ್ಲೆಲ್ಲಾ ಕಾವ್ಯ ಹಾಡುಗಾರರು ಲಭ್ಯವಾಗುತ್ತಾರೆ. ಆದರೆ ಗುರು ರೇವಣರ ಸಮಗ್ರ ಕಾವ್ಯಹಾಡುವ, ದಕ್ಷಿಣ ಕರ್ನಾಟಕದ ಏಕೈಕ ಹಾಡುಗಾರ್ತಿ ಹಂದನಕೆರೆ ಲಕ್ಷ್ಮಕ್ಕ ಎಂಬುದೇ ಈಕೆಯ ವಿಶೇಷ.

'ಸಿರಿಗಂಧ' ದೂರದರ್ಶನದಲ್ಲಿ ಇವರ ಹಾಡುತಗಳು ಹಾಗೂ ವ್ಯಕ್ತಿಚಿತ್ರ ಪ್ರಸಾರವಾಗಿವೆ. ಅತ್ಯುತ್ತಮ ಹೆರಿಗೆ ತಜ್ಞೆಯೂ ಆಗಿರುವ ಲಕ್ಷ್ಮಜ್ಜಿ ತನ್ನ ವಿಶೇಷ ಕೈಚಳಕದಿಂದಾಗಿ ಮೂರು ಸಾವಿರಕ್ಕೂ ಹೆಚ್ಚು ತ್ರಾಸದಾಯಕ, ದುಸ್ತರದ ಹೆರಿಗೆಗಳನ್ನು ಮಾಡಿಸಿರುವ ಹಿರಿಮೆಗೂ ಪಾತ್ರರಾಗಿದ್ದಾರೆ. ಮನೆಮದ್ದುಗಳಿಂದ ನೂರಾರು ಬಗೆಯ ವ್ಯಾಧಿಗೆ ಚಿಕಿತ್ಸೆಯನ್ನು ಮಾಡುತ್ತಿರುವುದು ಇವರ ಮತ್ತೊಂದು ಹಿರಿಮೆ.

ತನ್ನ ತಂದೆ ಸವಣ್ಣ, ತಾಯಿ ಕರಿಯಮ್ಮ ಇವರ ಇಡೀ ವಂಶಕ್ಕೆ ಏಕೈಕ ಬಳ್ಳಿಯಾಗಿ ಇಂದು ಕ್ರಿಯಾಶೀಲರಾಗಿರುವ ಲಕ್ಷ್ಮಜ್ಜಿಯ ಕುಟುಂಬ ದೊಡ್ಡದು. ಮೂವರು ಗಂಡುಮಕ್ಕಳು, ಇಬ್ಬರು ಹೆಣ್ಣುಮಕ್ಕಳು ಸೇರಿ ಒಟ್ಟು ನಲವತ್ತಾರು ಮಂದಿ ಕುಟುಂಬದ ಸದಸ್ಯರನ್ನು ಹೊಂದಿ, ಮನೆಯೇ ಒಂದು ಊರಿನ ಲಕ್ಷಣದೊಂದಿಗೆ ಇಂದಿಗೂ ಲಗುಬಗೆಯಿಂದ ದೇವರ ಉತ್ಸವಗಳಲ್ಲಿ ಹಾಡುವ ಲಕ್ಷ್ಮಜ್ಜಿ ತಮ್ಮ ತೊಂಬತ್ತರ ಇಳಿವಯಸ್ಸಿನಲ್ಲೂ ಹಂದನಕೆರೆಯ ಶ್ರೀ ದುರ್ಗಮ್ಮ ಜಾತ್ರೆಯಲ್ಲಿ ಆರತಿ ಹೊತ್ತ, ಬೇವಿನ

ಸೀರೆಯುಟ್ಟ ಹೆಂಗಳೆಯರ ಬದಿಯಲ್ಲಿ ನಿಂತು ರಾತ್ರಿಯಿಡೀ ದುರ್ಗಮ್ಮನ ಮೇಲೆ ಪದಕಟ್ಟಿ ಹಾಡುವುದು ಈಕೆಯ ಧೀಶಕ್ತಿಯ ರೂಪವಾಗಿದೆ.

ಈ ಅಪರೂಪದ ಹಾಡುಗಾರ್ತಿಯ ಅದ್ಭುತ ಸಾಧನೆಗಾಗಿ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ೨೦೦೫ನೇ ಸಾಲಿನ ಶ್ರೇಷ್ಠ ಹಾಡುಗಾರ್ತಿ 'ಸಾಧನಾ' ಪ್ರಶಸ್ತಿ ನೀಡಿ ಗೌರವಿಸಿದೆ.

**ಸೋಬಾನೆ ಲಕ್ಷ್ಮಜ್ಜಿ,**
**ಹಂದನಕೆರೆ, ಚಿಕ್ಕನಾಯಕನಹಳ್ಳಿ ತಾಲೂಕು.**

## ಉಜ್ಜನಿಯ ಹಾಲಮ್ಮ

ಉಜ್ಜನಿಯ ಚೌಡಮ್ಮನನ್ನು ಕುರಿತು ಸಮಗ್ರ ಕಾವ್ಯ ಹಾಡುವ ಏಕೈಕ ಕಲಾವಿದೆ ಹಾಲಮ್ಮನವರು. ಜೊತೆಗೆ ದಕ್ಷಿಣ ಕರ್ನಾಟಕದಲ್ಲಿ ಮಹಿಳೆಯರು ಹಾಡುವ ಹಾಡುಗಾರಿಕೆಯಲ್ಲಿ ಎಷ್ಟೊಂದು ಪ್ರಭೇದಗಳಿವೆಯೋ ಅವೆಲ್ಲವನ್ನೂ ಅತ್ಯಂತ ಸುಶ್ರಾವ್ಯವಾಗಿ ಹಾಡಬಲ್ಲ ಹಾಡುಗಾರ್ತಿ ಹಾಲಮ್ಮ, ಸಿರಿಕಂಠದಿಂದ ಕುಣಿಗಲ್ ತಾಲೂಕಿನಲ್ಲೆಲ್ಲ ಕೋಗಿಲೆ ಕಂಠದ ಹಾಲಮ್ಮ ಎಂದೇ ಖ್ಯಾತರು. ಚಿಕ್ಕಮ್ಮ, ಹನುಮಕ್ಕ, ನಿಂಗಮ್ಮ ಈಕೆಯ ಶಿಷ್ಯರು.

ಹಾಲಮ್ಮನ ಗಂಡ ಈ ಮೊದಲೇ ತೀರಿಕೊಂಡರು. ಆಸರೆಗಾಗಿ ಇದ್ದ ಒಂದೇ ಒಂದು ಕರುಳ ಕುಡಿ ಹೆಣ್ಣುಮಗಳು. ಆಕೆಯೂ ಅನಾರೋಗ್ಯದಿಂದಾಗಿ ಅಕಾಲಿಕ ಸಾವಿಗೆ ಒಳಗಾದರು. ಹೀಗೆ ಒಂದರ ಮೇಲೊಂದು ಆಘಾತ ಈಕೆಯ ಬದುಕಿನಲ್ಲಿ ಎದುರಾಗಿ, ಹಾಡುವ ಕಂಠ, ನೆನಪಿನಶಕ್ತಿ, ಶಾರೀರ ಎರಡೂ ಶಕ್ತಿ ಕಳೆದುಕೊಂಡು ಅನುಭವ.

ತನ್ನದೆಂಬುದು ಗುಡಿಸಲೊಂದನ್ನು ಬಿಟ್ಟು ಬೇರೇನೂ ಮಾಡಿಕೊಂಡಿಲ್ಲದ ಹಾಲಮ್ಮ ಉಜ್ಜನಿಯ ಸಿರಿಕಂಠದ ಕೋಗಿಲೆಯಾದರೆ ಆಕೆಯ ಬದುಕಿನಲ್ಲಿ ಸಿರಿ ಎಂಬುದನ್ನು ಕಾಣಲೇ ಇಲ್ಲ. ಕಿತ್ತು ತಿನ್ನುವ ಬಡತನ, ಶಕ್ತಿ ಕುಂದಿದ ಜೀವನ, ನನ್ನವರು ಎಂಬುದನ್ನು ಅರಿಯದ ಒಂಟಿತನ ಈಕೆಯ ದುರಂತ ಬದುಕಿನ ರೂಪವಾಗಿದೆ.

ಉಜ್ಜನಿಯ ಹಾಲಮ್ಮನ ಹಾಡಿನ ಖ್ಯಾತಿ ಎಲ್ಲೆಡೆ ಹರಡಿದೆ. ಇವರು ಹಾಡಿರುವ ಹಾಡುಗಳನ್ನು ಡಾ. ಹಿ. ಚಿ. ಬೋರಲಿಂಗಯ್ಯನವರು 'ಉಜ್ಜನಿಯ ಚೌಡಮ್ಮ' ಎಂಬ ಹೆಸರಲ್ಲಿ ಸಂಗ್ರಹಿಸಿ, ಪ್ರಕಟಿಸಿದ್ದಾರೆ. ಹರಿಜನರಿಗೆ ಕೆಲವು ದಿನಗಳ ಮಟ್ಟಿಗೆ ಮಾತ್ರ ಜನಿವಾರ ಹಾಕುವ ಮೂಲಕ ಬ್ರಾಹ್ಮಣೀಕರಣ ಅನುಭವಿಸುವ ವಿಶಿಷ್ಟ ಆಚರಣೆಯು

ಉಜ್ಜನಿಯ ಚೌಡಮ್ಮನ ಜಾತ್ರೆ ಮಹೋತ್ಸವದ ಕಾಲದಲ್ಲಿ ನಡೆಯುತ್ತದೆ. ಈ ಬಗೆಯ ಜನಾಂಗಿಕ ಸಂಸ್ಕೃತಿಯ ಆಚಾರ–ವಿಚಾರ ರೂಢಿ ಸಂಪ್ರದಾಯವನ್ನು ಕುರಿತು ಸಮಗ್ರ ಮಾಹಿತಿ ನೀಡಬಲ್ಲ ಅಪರೂಪದ ಗಾಯಕಿ ಉಜ್ಜನಿಯ ಹಾಲಮ್ಮ. ನೀಲವಾದ ಕಥನಕಾವ್ಯ, ಪುಟ್ಟ ಗೀತೆ, ಒಗಟು ಇವುಗಳ ಜೊತೆಗೆ ಚೌಡಮ್ಮನನ್ನು ಕುರಿತ ಸಮಗ್ರ ಮಹಾಕಾವ್ಯ ಹಾಡಬಲ್ಲ ಹಾಲಮ್ಮ ಅವರಿಗೆ, ಹಲವಾರು ಪ್ರಶಸ್ತಿ ಗೌರವಗಳು ಸಂದಾಯವಾಗಿದೆ. ಕರ್ನಾಟಕದ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ೧೯೮೭ನೇ ಸಾಲಿನಲ್ಲಿ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಗೌರವ ಪ್ರಶಸ್ತಿ ನೀಡಿ ಗೌರವಿಸಿರುವುದು ಈಕೆಯ ಬದುಕಿನ ಬಹುದೊಡ್ಡ ಗೌರವ. ಆ ಗೌರವಕ್ಕೂ ಮೀರಿ ತಮ್ಮ ಅಪೂರ್ವ ಕಲಾವಂತಿಕೆ ಮೆರೆದಿರುವ ಹಾಲಮ್ಮ ನಮ್ಮ ಬಯಲುಸೀಮೆಯ ಗ್ರಾಮದೇವತೆಗಳ ಕುರಿತ ಮಾಹಿತಿಯ ವಿಶ್ವಕೋಶ ಬ್ಯಾಡರಹಳ್ಳಿ ಶಿವರಾಜ್, ತಮ್ಮ ಉಜ್ಜಯಿನಿಯ ಚೌಡಮ್ಮ ಅಧ್ಯಯನ ಸಂಶೋಧನೆಯಲ್ಲಿ ಇವರನ್ನು ಆಕಾರವಾಗಿ ಬಳಸಿಕೊಂಡಿದ್ದಾರೆ.

**ಉಜ್ಜನಿಯ ಹಾಲಮ್ಮ,**
**ಜನಪದ ಹಾಡುಗಾರ್ತಿ,**
**ಉಜ್ಜನಿ ಕುಣಿಗಲ್ ತಾಲೂಕು, ತುಮಕೂರು ಜಿ.**

## ಗುಡ್ಡರಮೇಳದ ಅಂದಾನಿಗೌಡ

ಅಂದಾನಿಗೌಡರು ತುಮಕೂರು ಜಿಲ್ಲೆಯ, ಗುಡ್ಡರ ಮೇಳದ ವಿಶಿಷ್ಟ ಕಲಾವಿದರು. ತಮ್ಮ ೬೩ ವರ್ಷಗಳ ತನಕ ಗುಡ್ಡ ಕಲಾಮೇಳವನ್ನು ಸಮರ್ಥವಾಗಿ ಸಂಘಟಿಸಿದ ಹಿರಿಮೆಗೆ ಪಾತ್ರರಾಗಿದ್ದಾರೆ.

ಚಕ್ರಾಕಾರದ ಮಣ್ಣಿನ ಬಳೆ ಹೊತ್ತು. ಆಡಿನ ಚರ್ಮದಿಂದ ತಯಾರಿಸಿದ ದಮಡಿ ಆಕೃತಿಯ ತಾಳ ಹಿಡಿದು, ಕಾಸೆಬಟ್ಟೆ, ಪೇಟ, ಅಡ್ಡವಸ್ತ್ರ, ನಿಲುವಂಗಿ, ಪೈಜಾಮ ತೊಟ್ಟು ಕಾಲಿಗೆ ಗೆಜ್ಜೆಕಟ್ಟಿ, ಸೊಂಟಪಟ್ಟಿ ಸುತ್ತಿಕೊಂಡು ಎಂಟು ಜನ ಕುಣಿಯುತ್ತಾ ಹಾಡುವುದನ್ನು ಗುಡ್ಡರ ಮೇಳ ಎಂದು ಗುರುತಿಸಲಾಗುತ್ತಿದೆ. ಇದು ತುಮಕೂರು ಜಿಲ್ಲೆಯ ಕುಣಿಗಲ್ ತಾಲೂಕಿನಲ್ಲಿ ಪಾವಗಡ ಆಂಧ್ರದ ಕೆಲವು ಗಡಿ ಗ್ರಾಮಗಳಲ್ಲಿ ಕುರುಬರು ಆಚರಿಸುವ ದೋಣೆ ಸೇವೆ, ಗೊರವದೀಕ್ಷೆ, ಗೊರವ ಸಂಸ್ಕಾರ, ಮೈಲಾರಲಿಂಗ ದೇವಸ್ಥಾನದ ಪೂಜೆ ವಿಶೇಷ ಆಚರಣೆಯ ಸಂದರ್ಭದಲ್ಲಿ ಬಳಕೆಯಲ್ಲಿದೆ. ಗುಡ್ಡರಮೇಳವನ್ನು ಕುರುಬರು ಆದಿಕರ್ನಾಟಕ ಜನಾಂಗದವರೂ ಕೂಡಿ ನಡೆಸುವುದು ವಿಶೇಷ.

ಅಂದಾನಿಗೌಡರು ಕುರುಬ ಜನಾಂಗಕ್ಕೆ ಸೇರಿದವರು. ೬೩ ವರ್ಷಗಳನ್ನು ಸವೆಸಿದರೂ ಬತ್ತದ ಉತ್ಸಾಹ. ತನ್ನ ತಂದೆ ಬೀರೇಗೌಡ ಹಾಗೂ ಅಮ್ಮನಹಟ್ಟಿ ಅವಳಿಗೌಡರಿಂದ ಹಾಡುವುದನ್ನು ಕಲಿತಿದ್ದಾರೆ. ವ್ಯವಸಾಯದ ಜೊತೆಗೆ ಕುರಿ ಉಣ್ಣೆ ಕತ್ತರಿಸುವುದು, ಕಂಬಳಿ ನೇಯುವುದು ಇವರ ಪ್ರಧಾನ ಕಾಯಕ. ಯಡೆಯೂರು ಸಿದ್ಧಲಿಂಗೇಶ್ವರ, ಬೀರೇದೇವರು, ಹೊನ್ನಪ್ಪ, ದೊಡ್ಡಯ್ಯ, ಮೈಲಾರಲಿಂಗೇಶ್ವರ ಈ ದೇವರುಗಳು ಉತ್ಸವದಲ್ಲಿ ಈ ಕಲೆಯನ್ನು ದೇವರ ಸೇವೆಯಾಗಿ ಮಾಡುತ್ತಾ ಬಂದಿರುತ್ತಾರೆ. ಅಲ್ಲದೆ ಹುಚ್ಚಮ್ಮ, ಲಕ್ಕಮ್ಮ, ಚಿಕ್ಕಮ್ಮ ಮುಂತಾದ ದೇವರುಗಳ ಉತ್ಸವದಲ್ಲೂ ಆಹ್ವಾನಿತ ಕಲಾವಿದರಾಗಿ ಕಲಾಸೇವೆ ಮಾಡುತ್ತಾ ಬರುತ್ತಿದ್ದಾರೆ. ಯಾವುದೇ

ಗೌರವ ಸಂಭಾವನೆಯನ್ನಾಗಲೀ, ಊರಿಂದ ಊರಿಗೆ ಹೋಗಿ ಹಣಕ್ಕಾಗಿ ಕಲಾ ಪ್ರದರ್ಶನ ಮಾಡುವುದಿಲ್ಲ. ದೇವರ ಹೆಸರಿನ ಕಾರ್ಯ ಕ್ರಮಗಳಾದರೆ ಹೋಗಿ ಮಾಡಿಬರುತ್ತೇವೆ ಎಂದು ಯುವ ಗುಡ್ಡದಮೇಳದ ಕಲಾವಿದ ಬೀರೇಗೌಡ ಹೇಳುತ್ತಾರೆ. ತನ್ನ ಮಗನೂ ಸೇರಿದಂತೆ, ಕುರುಬರು, ಒಕ್ಕಲಿಗರು, ಗೊಲ್ಲರು ಕೂಡಿಕೊಂಡು ಅಚ್ಚುಕಟ್ಟಾಗಿ ಅಭ್ಯಾಸ ಮಾಡುತ್ತಿರುವ ಈ ಕಲೆಯ ಪ್ರಸಾರ ಮಾತ್ರ ಅಪರೂಪವಾಗಿದೆ. ಕಂಬಳಿ ನೇಯ್ದು, ಮಾರಾಟ ಇವುಗಳ ಒತ್ತಡದಲ್ಲಿ ನಮಗೆ ಬಿಡುವೆಲ್ಲಿದೆ ಸ್ವಾಮಿ ಎಂಬುದಾಗಿ ಪ್ರಶ್ನಿಸುವ ಈ ಅಪೂರ್ವ ಕಲಾವಿದರು ಜೀಶಂಪ, ಹೆಚ್.ಎಲ್. ನಾಗೇಗೌಡ, ಹಿ. ಚಿ. ಬೋರಲಿಂಗಯ್ಯ ಮೊದಲಾದ ವಿದ್ವಾಂಸರ ಮುಂದೆ ಕಲಾಪ್ರದರ್ಶನ ಮಾಡಿ ಮೆಚ್ಚುಗೆ ಗಳಿಸಿರುವುದು ವಿಶೇಷ. ಇವರು ನೃತ್ಯದ ಜೊತೆಗೆ ಹಾಡುವ ಹಾಡುಗಳನ್ನು ಡಾ. ಚಿಕ್ಕಣ ಯಣ್ಣೆಕಟ್ಟೆ ಸಂಗ್ರಹಿಸಿದ್ದಾರೆ. ಈ ವಿಶಿಷ್ಟ ಅಪೂರ್ವ ಕಲೆಯನ್ನು ಗುರುತಿಸಿದ ಡಾ॥ ಜೀಶಂಪ ಅಧ್ಯಕ್ಷತೆಯಲ್ಲಿ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ೧೯೯೪ರಲ್ಲಿ ವಿಶೇಷ ಕಲಾಪ್ರಶಸ್ತಿ ನೀಡಿ ಗೌರವಿಸಿರುವುದು ವಿಶೇಷವಾಗಿದೆ.

ಗುಡ್ಡರಮೇಳದ ಅಂದಾನೇಗೌಡ,
ಕುರುಬರ ಹೊಸೂರು,
ರಾಗಿಹಳ್ಳಿ ಅಂಚೆ, ಕುಣಿಗಲ್ ತಾಲೂಕು.

# ತಂಬೂರಿ ಬಸಪ್ಪ

ತಿಪಟೂರು ತಾಲೂಕು ಗುರುಗದಹಳ್ಳಿ ಸಮೀಪದ ಬೆಣ್ಣೆಹಳ್ಳಿ ದಿ॥ ಬಸಪ್ಪ, ಖಂಡಕಾವ್ಯಗಳ ಗಣಿ. ಕರ್ನಾಟಕ ವೃತ್ತಿಗಾಯಕ ಪರಂಪರೆಯ ಹಲವು ಕಥನ ಕಾವ್ಯಗಳನ್ನು ಸೊಗಸಾಗಿ ಪಾಡುತ್ತಾ ಹಾಡುತ್ತಾ ಜಾನಪದ ವಿದ್ವಾಂಸರಾದ ಜೀಶಂಪ, ಡಾ. ಹೆಚ್. ಎಲ್. ನಾಗೇಗೌಡರಂಥ ಧೀಮಂತರ ಅತೀವ ಗಮನಸೆಳೆದ ಭಿಕ್ಷುಕ ಬಸಪ್ಪ ಅವರ ಸಾಧನೆ ಅಪಾರ, ಪಾಂಡಿತ್ಯ ವಿಸ್ಮಯ, ಕಂಠಸಿರಿ ಸಾಟಿಯಿಲ್ಲದ್ದು.

ತಾತ, ತಂದೆ, ತಾನೂ ಈ ಮೂರು ಪರಂಪರೆಯ ಭಿಕ್ಷಾಟನೆಯ ಬದುಕಿನಲ್ಲಿ ಅತ್ಯಂತ ಜತನದಿಂದ ಕಾಪಾಡಿಕೊಂಡು ಬಂದ ಕಥನಕಾವ್ಯಗಳನ್ನು ಜನಪದ ಪರಂಪರೆಯ ಮೂಲಕ ನಿರಂತರವಾಗಿ ಸಾಗಿಸುತ್ತಾ ಬಂದ ಹಿರಿಮೆ ಈ ಮನೆತನದ್ದು. ಉಳುಮೆಗೆ ಹೊಲವಿಲ್ಲ, ವಾಸಿಸಲು ಮನೆಯಿಲ್ಲ. ಹಾಗಾಗಿ ಊರಿಂದ ಊರಿಗೆ ಅಲೆದಾಡಿ ಜೀವನ ಕಳೆದರೂ ಬೆಣ್ಣೆಹಳ್ಳಿ ಇವರ ಒಲವಿನ ಊರು. ಪೂರ್ವಿಕರ ಕಾಲದಿಂದಲೂ ಇಲ್ಲಿಯೇ ನೆಲೆಸಿದ್ದರು. ಸೋಗೆ ಜೋಪಡಿ ಇವರ ಪರಂಪರಾಗತವಾಸ, ಭಿಕ್ಷಾಟನೆ ಶ್ರೀಯುತರಿಗೆ ಪರಂಪರಾಗತವಾಗಿ ಬಂದ ಬಳುವಳಿ. ತಾತ ನನಗೆ ಕೊಟ್ಟ ಅಮೂಲ್ಯ ಆಸ್ತಿ ತಂಬೂರಿಯೊಂದೆ ಎಂದೇ ಬೀಗುತ್ತಿದ್ದ ಬಸಪ್ಪನ ಮಧುರಕಂಠಕ್ಕೆ ಸರಿಸಾಟಿಯಿಲ್ಲ ಎಂದು ಕಲಾರಸಿಕರು ನೆನೆಯುತ್ತಾರೆ.

ಆಸ್ತಿ ಗಳಿಕೆಯಲ್ಲಿ ಬಡವಣ್ಣನಾದರೂ ಹಾಡಿನಲ್ಲಿ ಹಿರಿಯಣ್ಣನಾದ ಈತ ೨೫ಕ್ಕೂ ಹೆಚ್ಚು ಕಾವ್ಯಗಳನ್ನು ಹಾಡುತ್ತಾರೆ. ಈ ಹಾಡುಗಳನ್ನು ಡಾ ॥ ಜೀಶಂಪ, ಹೆಚ್. ಎಲ್. ನಾಗೇಗೌಡರು ಸಂಪಾದಿಸಿರುವುದು ವಿಶೇಷ. ಬಂಜೆ ಹೊನ್ನಮ್ಮ, ಮಾಗಡಿ ಕೆಂಪೇಗೌಡ ಕಾಡುಸಿದ್ಧಮ್ಮ, ಬಳ್ಳಾರಿ ಕತೆ, ಸಿಪಾಯಿ ಕತೆ, ಶೆಟ್ಟಣ್ಣಗೌಡರ ಕತೆ ಇವರು ಹಾಡಿರುವ ಪ್ರಮುಖ ಕಥನ ಕಾವ್ಯಗಳು. ಇದರಲ್ಲಿ ಕೆಲವು ಜೀಶಂಪ ಸಂಗ್ರಹಿಸಿ ಪ್ರಕಟಿಸಿದ್ದಾರೆ.

ದೇವರ ಉತ್ಸವ, ನಾಮಕರಣ, ಹೊಸಮನೆ ಗೃಹಪ್ರವೇಶ ಈ ಬಗೆಯ ಧಾರ್ಮಿಕ ಹಾಗೂ ಸಾಂಸ್ಕೃತಿಕ ಉತ್ಸವಗಳಲ್ಲಿ ರಾತ್ರಿಯಿಡೀ ಹಾಡುವ ಮೂಲಕ ಸಂಗೀತ ಸಂಜೆ ಹರಿಸುತ್ತಿದ್ದ ಬಸಪ್ಪನವರು ಸಾವಿರಾರು ಆಸ್ತಿಕರ ಶಿಷ್ಯತ್ವಕ್ಕೆ ಕಾರಣರಾಗಿದ್ದಾರೆ. ತಿಪಟೂರು ಸೀಮೆಯ ಸತ್ಸಂಗ, ಭಜನೆ ಸಂಘಗಳ ಉಗಮಕ್ಕೆ ಮೂಲ ಪ್ರೇರಕರು. ನೂರಾರು ಹಡುಗಾರರಿಗೆ ಭಜನೆಪದ, ತತ್ವ ಪದಗಳನ್ನು ಕಲಿಸಿಕೊಟ್ಟ ಹಿರಿಮೆಯೂ ಇವರಿಗೆ ಸಲ್ಲುತ್ತದೆ. ಯಾವುದೇ ಸನ್ಮಾನ ಗೌರವ ಪಡೆದಿರದ ಈ ಹಿರಿಯ ಕಲಾವಿದ ಪ್ರೀತಿಯಿಂದ ಕೊಟ್ಟ ಕಾಸು, ಧಾನ್ಯವನ್ನು 'ಶಿವಭಿಕ್ಷೆ' ಎಂದೇ ಕಣ್ಣಿಗೊತ್ತಿ ಜೋಳಿಗೆ ತುಂಬಿಸಿಕೊಳ್ಳುತ್ತಿದ್ದ ಪರಿ ಹೃದಯವಿದ್ರಾವಕವಾದುದು. ಯಾವುದೇ ಆಸ್ತಿ ಮಾಡದೆ ನಿಜವಾದ ಆಸ್ತಿಕರ ಹಾಡುಗಳನ್ನೇ ಆಸ್ತಿಯನ್ನಾಗಿ ಮಾಡಿಕೊಂಡು ಬದುಕಿ ಬಾಳಿಹೋದ ಧೀಮಂತ ಕಲಾವಿದರಿಗೆ ೧೯೮೮ರಲ್ಲಿ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ತನ್ನ ವಾರ್ಷಿಕ ಪ್ರಶಸ್ತಿ ನೀಡಿ ಗೌರವಿಸಿದ್ದು ವಿಶೇಷ. ನೂರಾರು ಭಜನೆ ಪದಗಳ ಮೂಲಕ ನಾದಲೋಕದಲ್ಲಿ ನಿತ್ಯ ನೆನಪಿಗೆ ಬರುವ ಬಸಪ್ಪ ನಮ್ಮೊಳಗಣ ಅಪೂರ್ವ ಜನಪದ ಕಲಾವಿದರು.

**ಬಸಪ್ಪ, ಬೆಣ್ಣೋನಹಳ್ಳಿ,**
**ಗುರುಗದಹಳ್ಳಿ ಅಂಚೆ, ತಿಪಟೂರು ತಾಲೂಕು.**

## ಕೆ. ಮುದಿಗೆರೆ ಸೋಬಾನೆ ಗಿರಿಯಮ್ಮ

ಜನಪದ ಸಂಗೀತ ಕ್ಷೇತ್ರದಲ್ಲಿ ಅಪಾರ ಹೆಸರು ಮಾಡಿರುವ ಹಿರಿಯ ಕಲಾವಿದೆ ಸೋಬಾನೆ ಗಿರಿಯಮ್ಮ ಅವರು ಎಂಬತ್ತು ವರ್ಷ ಪ್ರಾಯ. ಈ ಸಂಗೀತ ಅಜ್ಜಿಗೆ ಸಂಗೀತದ ಗೀಳು ತಪ್ಪಿಲ್ಲ, ಧ್ವನಿ ಅಡಗಿಲ್ಲ, ಉತ್ಸಾಹ ಬತ್ತಿಲ್ಲ. ಇದೇ ಈಕೆಯ ವಿಶೇಷತೆ. ತುರುವೇಕೆರೆ ತಾಲೂಕು ದಬ್ಬೇಘಟ್ಟ ಹೋಬಳಿಗೆ ಸೇರಿದ ಕಾಡಸೂರ ಮುದಿಗೆರೆಯ ಗಿರಿಯಮ್ಮ ತಮ್ಮ ಸಂಗೀತ ಕುರಿತು ಹೇಳುವುದು ಹೀಗೆ 'ಸ್ವಾಮಿ, ಅನಾದಿ ಕಾಲದಿಂದಲೂ ಹಾಡುತ್ತಾ ಬಂದಿದ್ದೇನೆ. ನಮ್ಮ ತಾಯಿಯವರೇ ನಮಗೆ ಗುರು. ಅವರಿಂದ ಕಲಿತೆ. ಹುಡುಸಲಮ್ಮ, ಹೊನ್ನಾದೇವಿ ಮೇಲೆ ಹಾಡುವುದನ್ನು ನಾನು ಋತುಮತಿ ಆಗುವುದಕ್ಕೆ ಪೂರ್ವದಿಂದಲೂ ಹಾಡುತ್ತಿದ್ದೆ' ಎನ್ನುತ್ತಾರೆ.

ಗಿರಿಯಮ್ಮ ಸೋಬಾನೆ ಪದಗಳಲ್ಲಿ ವೈವಿಧ್ಯತೆ ತರಬಲ್ಲರು. ಕುಟ್ಟುವ, ಬೀಸುವ, ಹೊಸ್ತಿಲು ತಡೆಯುವ, ಲಾಲಿ ಹಾಡುವ, ಬೀಗರ ಪದಗಳಲ್ಲಿ ನೆಂಟರನ್ನು ಜರಿಯುವ, ಬೀರಕ್ಕಿ ಪದಗಳನ್ನು ಸಾಂದರ್ಭಿಕತೆಗೆ ತಕ್ಕಂತೆ, ಹೆಣ್ಣು-ಗಂಡು, ಬೀಗರು ಹೆಸರು, ಮದುವೆಯ ಮುಖಂಡರ, ಪಿರಕದವರ ಒಂದೊಂದು ವರ್ಗವನ್ನು ಪ್ರತ್ಯೇಕವಾಗಿ, ಹೆಸರಿಡಿದು ಕಟ್ಟಿ ಹಾಡುವುದು ಈಕೆಯ ವಿಶೇಷ. ಹಾಗಾಗಿಯೇ ಈಕೆಯ ಹಾಡುಗಾರಿಕೆಗೆ ಎಲ್ಲಿಲ್ಲದ ಆಕರ್ಷಣೆ.

ವಾರದ ಮದುವೆ ಶಾಸ್ತ್ರಗಳಿಲ್ಲ, ಹಟ್ಟಿ ಅಂಗಳದಲ್ಲಿ ಮದುವೆ ಮಾಡುವುದಿಲ್ಲ, ಛತ್ರಗಳ ಮದುವೆಗೆ ನಮ್ಮ ಹಾಡುಬೇಕಾಗಿದ್ದಲ್ಲ, ಯಾರೂ ಕೇಳುವುದಿಲ್ಲವೆಂಬ ಕೊರಗನ್ನು ತೋಡಿಕೊಳ್ಳುವ ಗಿರಿಯಮ್ಮ ವಾರಗಟ್ಟಲೆ ಪದ ಹಾಡುತ್ತೇನೆ ಎಂಬ ಉತ್ಸಾಹ. ಹೊನ್ನಾದೇವಿ, ಶಿವಗಂಗೆ ಮೇಲಿನ ಪದ, ಉಡುಸಲಮ್ಮ, ಹಟ್ಟಿ ಲಕ್ಕಮ್ಮ, ಚಿಕ್ಕಮ್ಮ, ದೊಡ್ಡಮ್ಮ ಇವರನ್ನು ಕುರಿತು ವಿಶೇಷವಾಗಿ ಹಾಡುವ ಗಿರಿಯಮ್ಮ ಬಾಲನಾಗಮ್ಮ,

ಗುಣಸಾಗರಿ ಹಾಗೂ ಎಲ್ಲಮ್ಮ ದೇವಿಯ ಕತೆಯನ್ನು ಸೊಗಸಾಗಿ ಹಾಡುತ್ತಾರೆ. ಹೆರಿಗೆಯ ಪ್ರಸೂತಿಗಾರಿಕೆಯಲ್ಲಿಯೂ ಪಳಗಿರುವ ಈಕೆ ಸೂಲಗಿತ್ತಿಯಾಗಿಯೂ ಹೆಸರು ಮಾಡಿದ್ದಾರೆ. ಕಣ್ಣು ಮಬ್ಬಾಗಿರುವುದರಿಂದ ಹೆರಿಗೆ ಸ್ವಲ್ಪ ಕಷ್ಟ ಎಂದು ವಯೋಮಾನದ ಬಗೆಗೆ ಆತ್ಮವಿಮರ್ಶೆ ಮಾಡಿಕೊಳ್ಳುವ ಗಿರಿಯಜ್ಜಿ ಗಟ್ಟಿ ಹೆಂಗಸು. ಅಷ್ಟೇ ಕರಾರುವಕ್ಕಾಗಿ ಮಾತಾಡುವ ಹೃದಯವಂತೆಯೂ ಹೌದು.

ಆದಿಚುಂಚನಗಿರಿಯ ಭೈರವನ ಮೇಲೆ ಪದಕಟ್ಟಿ ಹಾಡುವುದು, ಪ್ರತಿವರ್ಷ ಆದಿಚುಂಚನಗಿರಿಯ ಜಾನಪದ ಸಮ್ಮೇಳನದಲ್ಲಿ ಭಾಗವಹಿಸಿ ಹಾಡುವುದು, ಸ್ವಾಮೀಜಿ ಅವರಿಂದ ವಸ್ತ್ರದಾನ ಪಡೆಯುವುದಾಗಿ ಹೆಮ್ಮೆಯಿಂದ ಹೇಳುವ ಈ ಗಿರಿಯಜ್ಜಿಗೆ ಒಮ್ಮೆ ಆಕಾಶವಾಣಿಗೂ ಹಾಡಬೇಕು, ಹಣ ಕೊಡದಿದ್ದರೂ ವಾಸಿ ಹಾಡುವ ಮೂಲಕ ತಮ್ಮ ಸಂಗೀತವನ್ನು ಈ ಧರೆಯ ಮೇಲೆ ಬಿಟ್ಟು ಹೋಗಬೇಕೆಂಬ ಅದಮ್ಯ ಉತ್ಸಾಹ ಹೊಂದಿದ್ದಾರೆ. ತುರುವೇಕೆರೆ, ದಂಡಿನಶಿವರ, ಮಾಯಸಂದ್ರ, ದಬ್ಬೇಘಟ್ಟ ಈ ಪ್ರದೇಶಗಳ ಯಾವುದೇ ಧರ್ಮಕಾರ್ಯ, ಸಾಂಸ್ಕೃತಿಕ ಸಮಾರಂಭಗಳಲ್ಲಿ ತಪ್ಪದೆ ಹಾಡುವ ಗಿರಿಯಜ್ಜಿಗೆ ಇಬ್ಬರು ಹಿಮ್ಮೇಳದವರ ಅವಶ್ಯಕತೆಯೂ ಇದೆ. ಒಂಟಿಯಾಗಿ ಹಾಡುವ ಪದ ಬೇರೆ, ಹಿಮ್ಮೇಳ–ಮುಮ್ಮೇಳ ಸೇರಿ ಹಾಡುವ ಪದ ಬೇರೆ. ಸೋಬಾನೆ ದೇವರುಗಳ ಮೇಲಿನ ಪದ ಹಾಡುವುದಕ್ಕೆ ಹಿಮ್ಮೇಳದವರ ಸ್ವರ ಸೇರಬೇಕು ಎನ್ನುವ ಇವರಿಗೆ ತಕ್ಕವಾಗಿ ನಾಲ್ಕಾರು ಹಿರಿಯ ಸಮಕಾಲೀನ ಹಾಡುಗಾರ್ತಿಯರನ್ನು ಹೊಂದಿಸಿಕೊಂಡಿದ್ದಾರೆ. ಇವರು ಅಜ್ಜಿಯ ಧ್ವನಿಗೆ ತಕ್ಕನಾಗಿ ಧ್ವನಿ ಸೇರಿಸುತ್ತಾರೆ. ಆದರೆ ಯಾರು ಹಾಡಿದರೇನು ಗಿರಿಯಜ್ಜಿಯ ಸೊಲ್ಲಿಗೆ ಸಮಾನವಿಲ್ಲ ಎಂಬ ಮಾತು ಈ ಪರಿಸರದಲ್ಲಿ ಕೇಳಿಬರುತ್ತಿದೆ. ಅಷ್ಟರಮಟ್ಟಿಗೆ ಗಿರಿಯಜ್ಜಿ ಸೋಬಾನೆ ಸಂಪನ್ನೆಯಾಗಿದ್ದಾಳೆ.

**ಗಿರಿಯಮ್ಮ ಲೇ॥ ಮರಿಯಪ್ಪ,**
**ಕಾಡಸೂರ ಮುದಿಗೆರೆ,**
**ದಬ್ಬೇಘಟ್ಟ ಅಂಚೆ, ತುರುವೇಕೆರೆ ತಾಲೂಕ.**

## ಮಡ್ಡಾಗನಹಟ್ಟಿ ದಾಸಪ್ಪ

ತುಮಕೂರು ಜಿಲ್ಲೆಯ ಮಧುಗಿರಿ ತಾಲೂಕಿನ ಮಾಡ್ಡಾಗನಹಟ್ಟಿಯ ದಾಸಪ್ಪ ಜನಪದ ಹಾಡುಗಾರ. ಕಾಡುಗೊಲ್ಲರ ಪರಂಪರೆಯ ಸಾಂಸ್ಕೃತಿಕ ವೀರರನ್ನು ಕುರಿತು ಆರೇಳು ರಾತ್ರಿಗಳ ಕಾಲ ನಿರಂತರವಾಗಿ ಕತೆ ಮಾಡುವುದು ದಾಸಪ್ಪನಿಗೆ ಸಿದ್ಧಿಸಿದೆ.

ಮಡ್ಡಾಗನಹಟ್ಟಿಯ ಚಿಕ್ಕಣ್ಣ, ಚಿಕ್ಕನಾಗಮ್ಮ ದಂಪತಿಗಳ ಮಗನಾದ ಇವರು ತಮ್ಮ ವೃತ್ತಿ, ಬಸವನನ್ನು ಹೊಡೆದುಕೊಂಡು ಭಕ್ತರ ಮನೆಗಳಲ್ಲಿ ಭಿಕ್ಷೆ ಬೇಡುವುದು. ವೃತ್ತಿಗಾಯಕ ಕಲಾವಿದರಾದ ಇವರು ತಮ್ಮ ತಂದೆಯಿಂದ ಕಲಿತ ಪದಗಳೇ ಸಾವಿರಾರು ಎಂದು ಹೇಳುತ್ತಾರೆ. ಒಂದು ಅಕ್ಷರದ ಪರಿಚಯವೇ ಇಲ್ಲದ ದಾಸಪ್ಪ, ತಲೆಯ ಮೇಲೆ ಪೇಟ ಸುತ್ತಿ, ಕೈಯಲ್ಲಿ ಗಣೆ ಹಿಡಿದು ಕುಂತರೆಂದರೆ ಅಲ್ಲಿ ಗಾನ ಗಂಧರ್ವ ಲೋಕವೇ ಸೃಷ್ಟಿ. ಹಗಲು ರಾತ್ರಿಯ ಪರಿವೆಯಿಲ್ಲದೆ, ಕೇಳುಗರನ್ನು ಸೂರೆಗೊಳ್ಳುವ ಅದ್ಭುತ ಹಾಡುಗಾರ. ಪುರಾಣ, ಇತಿಹಾಸ ಎರಡೂ ಪರಂಪರೆಯ ಹಾಡುಗಳನ್ನು ಹಾಡುವುದು ಈತನಿಗೆ ಸಿದ್ಧಿಸಿದೆ.

ದಾಸಪ್ಪನಿಗೆ ಇಬ್ಬರು ಗಂಡುಮಕ್ಕಳು. ಇಬ್ಬರೂ ಓದುತ್ತಿದ್ದಾರೆ. ಕೊನೆಯವರು ಜುಂಜಪ್ಪನ ಪದಗಳನ್ನು ಹಾಡುತ್ತಾರೆ. ಮೊದಲನೆಯವರದು ಮೇಕೆ ಕಾಯುವ ಕಾಯಕ. ದಾಸಪ್ಪನ ಬದುಕು ಜುಂಜಪ್ಪ ಹಾಗೂ ಭೂತಪ್ಪನ ಗುಡಿಯ ಪೂಜಾರಿಕೆ. ಬಿಡುವು ಮಾಡಿಕೊಂಡು ಜುಂಜಪ್ಪನ ಮೀಸಲು ಬಸವನೊಂದಿಗೆ ಭಕ್ತರ ಮನೆಗೆ ಊರೂರು ಸುತ್ತುವುದು, ಬಸವನಿಗೆ ಹುಲ್ಲು, ದವಸ ಸಂಗ್ರಹ. ಹೀಗೆ ಸಂಗ್ರಹಿಸಿದ ದವಸದಿಂದಲೇ ಆರು ಜೀವಗಳ ಬದುಕು ಎನ್ನುವುದು ದಾಸಣ್ಣನವರ ಅಳಲು. ಪೂರ್ವಿಕರಿಂದಲೂ ಏನೇನೂ ಬರಲಿಲ್ಲ ಎನ್ನುವ ದಾಸಣ್ಣ ಇಂದಿಗೂ ಹುಲ್ಲು ಎಲೆಗಳಿಂದ ಕಟ್ಟಿರುವ ಗುಡಿಸಲಲ್ಲಿ ವಾಸಿಸುತ್ತಾರೆ. ದಾಸಣ್ಣ ಹಾಡಿರುವ ಜುಂಜಪ್ಪನ ಕಥೆಯನ್ನು ಹಂಪಿ ಕನ್ನಡ

ವಿಶ್ವವಿದ್ಯಾಲಯ ಸಂಗ್ರಹಿಸಿದೆ. ಜಾನಪದ ವಿಭಾಗದ ಪ್ರಾಧ್ಯಾಪಕ ಚೆಲುವರಾಜ್ ಸಮಗ್ರ ಜುಂಜಪ್ಪನ ಕಥೆಯನ್ನು ಸಂಗ್ರಹಿಸಿದ್ದಾರೆ. ಇದರಲ್ಲಿ ಚಿತ್ರದೇವರು, ಕಾಟಂದೇವರು ಮತ್ತಿತರ ಬುಡಕಟ್ಟು ದೇವರುಗಳ, ಸಾಂಸ್ಕೃತಿಕ ವ್ಯಕ್ತಿಗಳ ಎಲ್ಲ ವಿವರನ್ನು ಒಮ್ಮೆಗೆ ಸಂಗ್ರಹಿಸಲಾಗಿದೆ. ಕುರುಬರು, ಕುಂಚಿಟಗರು, ಕಾಡುಗೊಲ್ಲರು, ತಿರುಪತಿಯ ವೆಂಕಟರಮಣ, ಮೈಲಾರಲಿಂಗ, ರಂಗನಾಥ ಹೀಗೆ ಹಲವು ಜನಾಂಗ ದೈವದ ವಿವರಗಳೂ ಇದರಲ್ಲಿ ಸೇರ್ಪಡೆಯಾಗಿದೆ. ಹೀಗಾಗಿ ಇಡೀ ಜುಂಜಪ್ಪನ ಹೆಸರಿನ ಈ ಕಾವ್ಯ ಬುಡಕಟ್ಟು ವರ್ಗದ ಸಾಂಸ್ಕೃತಿಕ ಕಥನವಾಗಿಯೂ ಕಾಣುವುದರ ಜೊತೆಗೆ ಸಮಗ್ರ ಜುಂಜಪ್ಪನ ಕಾವ್ಯವನ್ನು ಓದಲಪೇಕ್ಷಿಸುವವರಿಗೆ ಕೊಂಚ ತೊಡಕಾಗಲೂಬಹುದು. ಜನಾಂಗಿಕವಾಗಿ ಹಲವು ಸಾಂಸ್ಕೃತಿಕ, ಐತಿಹಾಸಿಕ ಮಾಹಿತಿ ಒದಗಿಸುವ ಈ ಕಾವ್ಯ, ಸಿತ್ತಯ್ಯನ, ಕಾಟುಮುಲಿಂಗರ ಹುಟ್ಟಿನ ಸಂದುವಿನಿಂದ ಆರಂಭವಾಗಿ ಜುಂಜಪ್ಪನ ಸೋದರ ಮಾವಗಳು ಕೊಂದ ಸಂದುವಿನವರೆಗೆ ಮಾತ್ರ ಕತೆಯನ್ನು ನಿರೂಪಿಸಲಾಗಿದೆ. ಇಷ್ಟಾಗಿಯೂ ೨೮೩೬೪ ಪಾದಗಳಲ್ಲಿ ಹರಡಿಕೊಂಡಿರುವ ಜುಂಜಪ್ಪನ ಕತೆ ಈವರೆಗೆ ಪ್ರಕಟವಾಗಿರುವ ಕಾವ್ಯಗಳಲ್ಲೆಲ್ಲ ವಿಸ್ತಾರವಾದುದಾಗಿದೆ. ದಾಸಪ್ಪ ಜನಪದ ಕಾವ್ಯಗಳಲ್ಲದೆ ಕೋಲಾಟ, ಕೋಲುಪದ, ಜನಪದ ಗೀತೆ, ಒಗಟುಗಳನ್ನು ಸೊಗಸಾಗಿ ಹೇಳುತ್ತಾರೆ. ಕಥೆ ಹೇಳುವುದರಲ್ಲಿಯೂ ಸಿದ್ಧಹಸ್ತರು. ಮಾಗೋಡು ರಂಗನಾಥನ ಕತೆ ಮಾಡುವುದಾಗಿಯೂ ಹೇಳುತ್ತಾರೆ. ಆದರೆ ಪೂರ್ಣ ಪಾಠ ಇಲ್ಲ ಮೇಲೆ ಸ್ತರದಲ್ಲಿ ಒಂದೆರಡು ಸಂದುಗಳನ್ನು ಮಾತ್ರ ಹಾಡುತ್ತಾರೆ.

ದಾಸಪ್ಪನವರ ತಂದೆ ಚಿಕ್ಕಣ್ಣ ಮೂಲತಃ ಅತ್ಯುತ್ತಮವಾದ ಜನಪದ ಗಾಯಕ. ಜುಂಜಪ್ಪ, ಕಾಟಂದೇವರು, ಚಿತ್ರದೇವರುಗಳ ಬಗೆಗೆ ಕಾವ್ಯ ಹಾಡುತ್ತಾರೆ. ಹಾಡುತ್ತಲೇ ಬಸವನೊಂದಿಗೆ ವೃತ್ತಿಕಾಯಕ ಮಾಡಿ ಹೊಟ್ಟೆ ಹೊರೆಯುವೆ ಎಂದೇ ಹೇಳುವುದು ಇವರಿಗೆ ರೂಢಿಯಾಗಿದೆ. ವಯಸ್ಸಾಗಿದೆ, ಕಾಡುಗೊಲ್ಲರ ಹಟ್ಟಿಯ ಒಳಭಾಗದಲ್ಲಿಯೇ ಇರುವ ಭೂತಪ್ಪ, ಜುಂಜಪ್ಪ ದೇವರ ಪೂಜಾರಿಕೆಯಲ್ಲಿ ನಿರತರಾಗಿದ್ದಾರೆ. ಇವರ ಜನಪದ ಮಹಾ ಕಾವ್ಯ ಹಾಡುಗಾರಿಕೆಗಾಗಿ ಕರ್ನಾಟಕ ಜಾನಪದ ಅಕಾಡೆಮಿ ೧೯೯೯ನೇ ಸಾಲಿನ ಪ್ರಶಸ್ತಿ ನೀಡಿದೆ.

ದಾಸಪ್ಪ, ಕಾವ್ಯ ಹಾಡುಗಾರರು,<br>ಮಾಡ್ಗಾನಹಳ್ಳಿ ಗೊಲ್ಲರಹಟ್ಟಿ,<br>ಮಧುಗಿರಿ ತಾಲೂಕು.

# ಅರಳುಗುಪ್ಪೆ ಚೌಡಿಕೆ ಎಲ್ಲಪ್ಪ

ಚೌಡಿಕೆ ಕಲೆಯನ್ನು ಪ್ರಸಾರ ಮಡುವುದೂ ಸೇರಿದಂತೆ ಯಕ್ಷಗಾನ, ಕರಕುಶಲ, ಕಲೆ, ಗೊಂಬೆ ಮಡಿಕೆಗಳಿಗೆ ಚಿತ್ತಾರ, ಹಾಡುಗಾರಿಕೆ ಈ ಎಲ್ಲ ಕಲೆಗಳಲ್ಲೂ ನಿಷ್ಣಾತರಾಗಿರುವ ಎಲ್ಲಪ್ಪ ಹುಟ್ಟಿದ್ದು ತಿಪಟೂರು ತಾಲೂಕು ಅರಳಗುಪ್ಪೆ ಗ್ರಾಮದಲ್ಲಿ. ಪರಂಪರಾಗತ ಕುಂಬಾರಿಕೆಯ ಶ್ರೀ ಚಿಕ್ಕಲ್ಲಯ್ಯ ಹಾಗೂ ತಾಯಿ ಲಕ್ಷ್ಮಮ್ಮ ಇವರ ಮಗನಾಗಿ ಜನಿಸಿದ ಎಲ್ಲಪ್ಪ ಮೂಲತಃ ಎಲ್ಲಮ್ಮದೇವಿಯ ಭಕ್ತರು. ತಮ್ಮ ಕುಲದೈವದ ಬಗೆಗೆ ಕತೆಕಟ್ಟಿ ಹಾಡುವುದು ಸಾಮಾನ್ಯ. ವಿಶೇಷವಾಗಿ ಆದಿಕರ್ನಾಟಕ ಪಂಥಕ್ಕೆ ಸೇರಿದವರು ಚೌಡಿಕೆ ಎಲ್ಲಮ್ಮನ ಕತೆ ಮಾಡುವುದು ಸಾಮಾನ್ಯ. ಚೌಡಿಕೆ ಪರಂಪರೆಯಲ್ಲಿ ವಿಶೇಷವಾಗಿ ಕಂಡುಬರುವುದು ಇದೇ ವರ್ಗದ ಕಲಾವಿದರು. ಆದರೆ ತುಮಕೂರು ಜಿಲ್ಲೆಯ ಚಿಕ್ಕನಾಯಕನಹಳ್ಳಿ, ಸಿರಾ, ತುರುವೇಕೆರೆ, ತಿಪಟೂರು ಈ ಭಾಗದಲ್ಲಿ ಚೌಡಿಕೆ ಕಲೆಯ ಸಾರ್ವತ್ರಿಕ ಕಲೆಯನ್ನಾಗಿಸಿಕೊಂಡಿರುವುದು ಕಂಡುಬರುತ್ತದೆ. ಕುರುಬರು ಚಿಕ್ಕನಾಯಕನಹಳ್ಳಿ, ಸಿರಾ ಭಾಗಗಳಲ್ಲಿ ಚೌಡಿಕೆ ಕಲೆಗೆ ಪ್ರಸಿದ್ಧರಾದಂತೆ ತಿಪಟೂರು ತಾಲೂಕಿನಲ್ಲಿ ಕುಂಬಾರರು, ಗಾಣಿಗರು ಚೌಡಿಕೆ ಭಕ್ತರಿದ್ದಾರೆ. ಹಾಗಾಗಿ ಚೌಡಿಕೆ ಕಲೆಯನ್ನು ಪ್ರಸಾರ ಮಾಡುವುದು ಧರ್ಮದ ಒಂದು ಭಾಗವೆಂದೇ ನಂಬುತ್ತಾರೆ. ಅದರಂತೆ ಭಕ್ತರಾಗಿದ್ದಾರೆ.

ತಿಪಟೂರು ತಾಲೂಕು ಅರಳಗುಪ್ಪೆಯ ಚೌಡಿಕೆ ಎಲ್ಲಪ್ಪ, ಚೌಡಿಕೆ ಬೋರಪ್ಪ ಇಂದು ಪ್ರಸಿದ್ಧ ಚೌಡಿಕೆ ಕಲಾವಿದರು. ಈ ಪರಂಪರೆಯಲ್ಲಿ ಬಂದ ಕುಂಬಾರ ಚಿಕ್ಕಲ್ಲಯ್ಯನವರೂ ಒಬ್ಬರು. ಇವರ ಮಗ ಚೌಡಿಕೆ ಸಂಪ್ರದಾಯಕ್ಕೆ, ತಮ್ಮ ಅನನ್ಯ ಪಂಡಿತ್ಯ, ಹಾಡುಗಾರಿಕೆ, ಕುಣಿತಗಳಿಂದ ಇಂದಿಗೂ ಜೀವಂತಿಕೆ ತಂದ ಹಿರಿಯ ಕಲಾವಿದರು.

ಮೂರನೇ ತರಗತಿಯ ತನಕ ವ್ಯಾಸಂಗ ಮಾಡಿರುವ ಇವರು ಅಕ್ಷರಾಭ್ಯಾಸಕ್ಕಿಂತ ಕಲಾಭ್ಯಾಸದತ್ತ ಹೊತ್ತು ಕೊಟ್ಟಿದ್ದು ಹೆಚ್ಚು. ಹಾಗಾಗಿ ಊರ ತುಂಬಾ ತುಂಬಿ

ಕೊಂಡಿದ್ದ ಯಕ್ಷಗಾನ ಕಲೆ, ಭಾಗವತರ ಗುಂಪು, ನಿತ್ಯವೂ ಒಂದಲ್ಲ ಒಂದು ತಂಡದವರಿಂದ ಯಕ್ಷಗಾನ ಪ್ರದರ್ಶನ ಇವು ಬಾಲಕ ಎಲ್ಲಪ್ಪನನ್ನು ಅತೀವವಾಗಿ ಸೆಳೆದವು. ಈ ಕಾರಣದಿಂದಾಗಿ ಮೊದಲು ಭಾಗವತ ದಿವಾಕರಾಚಾರ್, ಗಂಗಾಧರಾಚಾರ್ ಅವರ ಮಾರ್ಗದರ್ಶ ಯಕ್ಷಗಾನ ಕಲಿತು. ಮೊದಮೊದಲು ಬಾಲಪಾತ್ರಗಳಲ್ಲಿ ಕಾಣಿಸಿಕೊಂಡು ನಂತರ ಘೋರ ಪಾತ್ರಗಳಲ್ಲಿ ಅಭಿನಯಿಸತೊಡಗಿದರು. ರತಿಕಲ್ಯಾಣ, ಕರ್ಣಾರ್ಜುನರ ಕಾಳಗ, ದೇವಿ ಮಹಾತ್ಮೆ, ಬಬ್ರುವಾಹನ, ಲವಕುಶರ ಕಾಳಗ ಮೊದಲಾದ ಯಕ್ಷಗಾನದಲ್ಲಿ ಅಭಿನಯಿಸಿದ್ದಾರೆ.

೧೯೭೦ ರಿಂದ ಚೌಡಿಕೆ ಕಲೆಯ ಕಲಿಕೆ, ಪ್ರಸಾರದಲ್ಲಿ ತೊಡಗಿಸಿಕೊಂಡಿರುವ ಎಲ್ಲಪ್ಪ ಚೌಡಿಕೆ ಗುರು ಪೂಜಾರಿ ಎಲ್ಲಪ್ಪ ಅವರಿಂದ ಈ ಕಲೆಯನ್ನು ಶಾಸ್ತ್ರೀಯವಾಗಿ ಕಲಿತರು. ಆರು ವರ್ಷಗಳ ಕಾಲ ನಿರಂತರವಾಗಿ ಚೌಡಿಕೆ ವಾದನ, ಹಾಡುಗಾರಿಕೆ, ನೃತ್ಯ ಹಾಗೂ ಚೌಡಿಕೆ ವಾದ್ಯ ತಯಾರಿಕೆಯಲ್ಲಿ ತರಬೇತಿ ಪಡೆದರು.

೧೯೮೫ ರಿಂದ ಕಾರ್ಯಕ್ರಮ ನೀಡತೊಡಗಿದ ಎಲ್ಲಪ್ಪ ಒಂದಿಷ್ಟು ದಿನಗಳ ಕಾಲ ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ಜಾನಪದ ವಿದ್ಯಾರ್ಥಿಗಳಿಗೆ ಜಾನಪದ ಚೌಡಿಕೆ ಪ್ರಾತ್ಯಕ್ಷಿಕೆಯನ್ನು ನೀಡುತ್ತಾ ಡಾ. ಜೀಶಂಪ ಅವರಿಗೆ ಚೌಡಿಕೆ ಕಾವ್ಯಸಂಗ್ರಹಣೆಗೆ ನೆರವಾದರು.

ರೇಣುಕೆ ಎಲ್ಲಮ್ಮ, ಕಾಡುಸಿದ್ಧಮ್ಮ, ಸರಸಜಪ್ಪನಾಯಕ ಈ ಮೊದಲಾದ ಕತೆಗಳನ್ನು ಹಾಡುತ್ತಾರೆ.

ಬೆಂಗಳೂರಿನ ಆಕಾಶವಾಣಿ, ಮೈಸೂರು ಆಕಾಶವಾಣಿ ಕೇಂದ್ರಗಳ ಮೂಲಕ ೧೯೮೬ರಿಂದ ಈತನಕ ಸತತವಾಗಿ ಚೌಡಿಕೆ ಕಲೆಯನ್ನು ಪ್ರಸಾರ ಮಾಡುತ್ತಲೇ ಇದ್ದಾರೆ. ಮೈಸೂರಿನ ದಸರಾ ಉತ್ಸವದಲ್ಲಿ ಜಗನ್ಮೋಹನ ಅರಮನೆ ಹಾಗೂ ಅರಮನೆ ಮುಂಭಾಗದಲ್ಲಿ, ರಾಮನಗರದ ಜಾನಪದ ಲೋಕ, ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರ, ಬೆಂಗಳೂರು ವಿಶ್ವವಿದ್ಯಾಲಯದ ಪ್ರಸಾರಾಂಗದ, ಹೊಸ ಸಹಸ್ರಮಾನದ ಜಾನಪದ ಸಮಾವೇಶ, ಪಟ್ಟದಕಲ್ಲಿ ಜಾನಪದ ಸಂಗೀತ ನೃತ್ಯೋತ್ಸವ ಮುಂತಾದ ಜಾನಪದ ಕಾರ್ಯಕ್ರಮಗಳಲ್ಲಿ ಭಾಗವಹಿಸಿರುವ ಹಿರಿಯ ಕಲಾವಿದರಾದ ಇವರು ಹಲವು ಸನ್ಮಾನ, ಗೌರವ, ಪ್ರಶಸ್ತಿ ಪಡೆದಿದ್ದಾರೆ. ಅರಳಗುಪ್ಪೆಯಲ್ಲಿ ಚೌಡಿಕೆ ಮೇಳ, ಕಲಾ ತಂಡ ಸ್ಥಾಪಿಸಿ ಆ ಮೂಲಕ ಚೌಡಿಕೆ ಕಲಾ ಪರಂಪರೆಯನ್ನು ಮುಂದುವರಿಸುವ ಅಚಲ ವಿಶ್ವಾಸ ಹೊಂದಿದ್ದಾರೆ.

**ಚೌಡಿಕೆ ಎಲ್ಲಪ್ಪ ತಂದೆ ಚಿಕ್ಕಲ್ಲಯ್ಯ**
**ಅರಳುಗುಪ್ಪೆ ಗ್ರಾ, ತಿಪಟೂರು ತಾಲೂಕ.**

# ಬಜಗೂರು ಎಲ್ಲಯ್ಯ

ಚೌಡಿಕೆ ಎಲ್ಲಯ್ಯ, ಮೇಳದ ಎಲ್ಲಯ್ಯ ಎಂದೆಲ್ಲಾ ಕರೆಸಿಕೊಂಡು ಕಲಾವಿದರಾಗಿ ಸದಾ ಸುದ್ದಿಯಲ್ಲಿರುವ ಬಜಗೂರು ಎಲ್ಲಯ್ಯ ಇವರಿಗೆ ಎಪ್ಪತ್ತರ ಪ್ರಾಯ. ಕಂಠಮಾಧುರ್ಯ, ಪರಿಸರಕ್ಕೆ ಹೊಂದುವ ದೃಶ್ಯಾವಳಿಗಳ ನಿರ್ಮಾಣದ ಮೂಲಕ ಅಪ್ರತಿಮ ಕಲಾವಿದರಾಗಿ ಚೌಡಿಕೆ ಕ್ಷೇತ್ರದಲ್ಲಿ ಉತ್ತಮ ಸಾಧನೆ ಮಾಡಿದ್ದಾರೆ. ಚೌಡಿಕೆ ಎಲ್ಲಯ್ಯ ಅವರದು ತಿಪಟೂರು ತಾಲೂಕಿನ ಬಜಗೂರು. ತಂದೆ ಚಿಕ್ಕ ಎಲ್ಲಯ್ಯ, ಎಲ್ಲಮ್ಮನ ಪರಮಭಕ್ತರಾದ ಇವರು ಸೌದತ್ತಿ ಎಲ್ಲಮ್ಮನ ನಾಮಸ್ಮರಣೆಯ ಮೂಲಕ ಚೌಡಿಕೆಯನ್ನು ನುಡಿಸುತ್ತಾ ದೇವಿ ಎಲ್ಲಮ್ಮನ ಕತೆಯನ್ನು ಪ್ರಸಾರ ಮಾಡುವುದು ಇವರ ಕಾಯಕವಾಗಿದೆ.

ಚೌಡಿಕೆ ಎಲ್ಲಯ್ಯ ಅವರ ಇಡೀ ಕುಟುಂಬವೇ ಚೌಡಿಕೆ ಕಲೆಯ ಪ್ರಸಾರದಲ್ಲಿ ನಿರತವಾಗಿದೆ. ಅಣ್ಣ ಎಲ್ಲಯ್ಯ, ಇವರ ಇಬ್ಬರು ಮಕ್ಕಳು ಚೌಡಿಕೆ ಕಲೆಯನ್ನು ರೂಢಿಸಿಕೊಂಡು ಪ್ರಸಾರ ಮಾಡುತ್ತಿದ್ದಾರೆ.

ಎಲ್ಲಯ್ಯ ಚೌಡಿಕೆ ವಾದ್ಯದೊಂದಿಗೆ ತರೀಕೆರೆಯ ಪಾಳೆಯಗಾರರು, ಸರ್ಜಪ್ಪನಾಯಕ, ಚಾಮುಂಡಿ ಪುರಾಣ, ಕಾಡುಸಿದ್ದಮ್ಮನ ಕಥೆ, ಮಾರಪ್ಪನ ಪುರಾಣ ಇವುಗಳನ್ನು ಸೊಗಸಾಗಿ ಹಾಡುತ್ತಾರೆ. ಇವರು ಹಾಡಿರುವ ಚೌಡಿಕೆ ಪದಗಳನ್ನು ಸಂಗ್ರಹಿಸಿ ತಿಪಟೂರಿನ ತಾಲೂಕಿನ ಮಾಕನಹಳ್ಳಿಯ ನಂ. ನಾರಾಯಣಗೌಡ ಅವರು ಎಲ್ಲಯ್ಯ ಹಾಡಿರುವ ಚೌಡಿಕೆ ಕಾವ್ಯಗಳು ಎಂಬ ಹೆಸರಲ್ಲಿ ಪುಸ್ತಕ ಪ್ರಕಟಿಸಿದ್ದಾರೆ. ಸುಮಾರು ೨೦೦ ಪುಟಗಳಿಗೂ ಮಿಕ್ಕ ಸಂಗ್ರಹವಾಗಿರುವ ಗ್ರಂಥದಲ್ಲಿ ಚೌಡಿಕೆ ಎಲ್ಲಮ್ಮ ಕುರಿತ ಸುದೀರ್ಘ ಕಥನವಿದೆ. ಹಾಡುವ ಧಾಟಿ, ಪದಬಂಧ, ವಿನ್ಯಾಸ ಹಾಗೂ ಪ್ರತಿ ಪದ್ಯಗಳಿಗೂ ಅರ್ಥಪೂರ್ಣವಾದ ವಿವರಣೆಯನ್ನು ಸಂಪಾದಕರು ಒದಗಿಸಿದ್ದಾರೆ.

ಚೌಡಿಕೆ ಎಲ್ಲಯ್ಯ ಅವರಿಗೆ ಇಬ್ಬರು ಗಂಡುಮಕ್ಕಳು. ಅವರೆಲ್ಲರಿಗೂ ಮದುವೆಯಾಗಿದೆ. ಮದುವೆ ಮೊದಲಾದ ಶುಭ ಸಮಾರಂಭಗಳಿಗೆ ವಾದ್ಯ ನುಡಿಸುವ

ವಿಶೇಷ ಕಲೆಯನ್ನು ಇವರ ಕುಟುಂಬ ರೂಢಿಸಿಕೊಂಡಿದೆ. ಎಲ್ಲಯ್ಯನವರೂ ಕರಡಿವಾದ್ಯ ಹಾಗೂ ಬ್ಯಾಂಡ್‌ಸೆಟ್ ವಾದ್ಯ ಕಲಾವಿದರಾಗಿಯೂ ಕೆಲಸ ಮಾಡುತ್ತಿದ್ದಾರೆ.

ಚೌಡಿಕೆ ಇವರ ಪ್ರೀತಿಪಾತ್ರ ಕಲೆ, ಕುಲದೈವ, ಆರಾಧ್ಯದೈವವಾಗಿಯೂ ಇವರ ಪಾಲಿಗಿದೆ. ತುಮಕೂರು, ಚಿತ್ರದುರ್ಗ, ಶಿವಮೊಗ್ಗ, ಧಾರವಾಡದ ಕೆಲವು ತಾಲೂಕುಗಳಲ್ಲಿ ಚೌಡಿಕೆ ಸಂಪ್ರದಾಯದ ಮನೆಗಳಿಗೆ ಇವರು ಖಾಯಂ ಭಕ್ತರಾಗಿ, ಗುರು ಪರಂಪರೆಯ ಮುಂದುವರಿಕೆಯ ರೂಪವಾಗಿ ಇಂದಿಗೂ ಕೆಲಸ ಮಾಡುತ್ತಿದ್ದಾರೆ. ಭಕ್ತರ ಮನೆಯಲ್ಲಿ ಯಾವುದೇ ದೈವ ಕಾರ್ಯಕ್ರಮವಾದರೂ ಎಲ್ಲಮ್ಮನ ಕತೆ ಮಾಡಿಸುವುದು ಸಂಪ್ರದಾಯ. ಅಂಥ ಎಲ್ಲಮ್ಮ ತಾಯಿಯ ಕಥೆಯನ್ನು ರಾತ್ರಿಯಿಡೀ ಮಾಡುವ, ಅದಕ್ಕೆ ಆಕರ್ಷಕ ಕುಣಿತ, ವೇಷಭೂಷಣಗಳಿಂದ ಆಕರ್ಷಿಸುವ ವಿಶೇಷ ತಂತ್ರಗಾರಿಕೆಯನ್ನು ಎಲ್ಲಯ್ಯ ಮಾಡುತ್ತಾರೆ. ಇದೊಂದು ಕೇಳುಗರ ಪಾಲಿಗೆ ಆಕರ್ಷಕವಾಗಿ ಕಡೆತನಕ ನೋಡಲು ಪ್ರೇರಕವಾಗುತ್ತದೆ.

ಮಾರಿದೇವಿಯ ಕತೆಯನ್ನು ವಿಶೇಷವಾಗಿ ಮಾಡುವ ಎಲ್ಲಯ್ಯನವರು ಮಾರಿ ಜಾತ್ರೆಗಳಲ್ಲಿ ಅಸಾದಿಯಾಗಿಯೂ ಕುಣಿಯುತ್ತಾರೆ. ಇದೊಂದು ರೋಚಕ ಪ್ರಸಂಗವಾಗಿದ್ದು, ಉರಿಬಿಸಲ ಧಗೆಯಲ್ಲಿ ಮಾರಿ ಬೀದಿಯ ಮೇಲೆ ಬಂದಾಗ ತಮಟೆಯ ಸಪ್ಪಳ, ಜನಗಳ ಕೇಕೆ, ಅಂಥ ಸಂದರ್ಭಕ್ಕೆ ತಕ್ಕನಾಗಿ, ತನ್ನ ಗಂಡನನ್ನು ಅತ್ತೆ ಮಾವನನ್ನು ಕೊಂದ ಮಾರಮ್ಮನ ಚರಿತ್ರೆಯನ್ನು ಹೀಯಾಳಿಸುತ್ತಾ, ಕೆಲವೊಮ್ಮೆ ತೀರಾ ಅಶ್ಲೀಲವಾಗಿ ನಿಂದನಾ ಕ್ರಮದಲ್ಲಿ ಕುಣಿಯುವ ಆಸಾದಿ, ನಿಜ ಅರ್ಥದಲ್ಲಿ ಮಾರಿ ಜಾತ್ರೆಯ ರೂವಾರಿ. ಮಾರೆವ್ವನ ಆವೇಶಕ್ಕೆ ಪ್ರೇರಕ. ಅಂಥ ವಿಶಿಷ್ಟ ಕಲೆಯನ್ನು ಬಜಗೂರಿನ ಎಲ್ಲಯ್ಯ ಸಮರ್ಥವಾಗಿ ರೂಢಿಸಿಕೊಂಡಿದ್ದಾರೆ.

ಯಕ್ಷಗಾನ ಕಲಾವಿದರೂ ಆಗಿರುವ ಎಲ್ಲಯ್ಯ, ಆದಿಶಕ್ತಿ, ಕರ್ಣ, ದೇವಿ ಪಾತ್ರಗಳಿಗೆ ವಿಶೇಷ ಕಳೆ ತುಂಬುತ್ತಾರೆ. ಭಾಗವಂತಿಕೆಗೆ ಸಾಥಿ ನೀಡುತ್ತಾರೆ. ಕೋಲಾಟ, ಭಜನೆ, ಹಾಡುಗಾರಿಕೆ ಗಳಲ್ಲಿಯೂ ಸಮಾನ ಆಸಕ್ತಿ ಹೊಂದಿರುವ ಎಲ್ಲಯ್ಯ ಸಮಗ್ರ ನೋಟದ ಜನಪದ ಕಲಾವಿದ, ಚೌಡಿಕೆಯ ತಜ್ಞ ಇವರ ಈ ಬಗೆಯ ಸಾರ್ಥಕ ಕಲಾ ಬದುಕನ್ನು ಗಮನಿಸಿ ಕರ್ನಾಟಕ ಸರ್ಕಾರ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಪ್ರಶಸ್ತಿ ನೀಡಿ ೨೦೦೫ರಲ್ಲಿ ಸನ್ಮಾನಿಸಿದೆ. ಇವರು ಹಾಡಿರುವ ಚೌಡಿಕೆ ಬಿಡಿ ಪದಗಳನ್ನು, ಲಾವಣಿಗಳನ್ನು ಡಾ|| ಚಿಕ್ಕಣ್ಣ ಯಣ್ಣೆಕಟ್ಟೆ ಇತ್ತೀಚೆಗೆ ಸಂಗ್ರಹಿಸಿದ್ದಾರೆ. ಎಪ್ಪತ್ತರ ಇಳಿವಯಸ್ಸಿನಲ್ಲಿಯೂ ರಾಜ್ಯಾದ್ಯಂತ ಪ್ರವಾಸ ಮಾಡಿ, ಚೌಡಿಕೆ ಕಲೆ ಪ್ರಸಾರದಲ್ಲಿ ತೊಡಗಿರುವ ಬಜಗೂರು ಎಲ್ಲಯ್ಯ ದಣಿವರಿಯದ ಜನಪದ ದುಡಿಗಾರ ಎಂಬುದು ವಿಶೇಷ ಸಂಗತಿಯಾಗಿದೆ.

**ಬಜಗೂರು ಎಲ್ಲಯ್ಯ**
**ಬಜಗೂರು ಅಂಚೆ, ತಿಪಟೂರು ತಾಲೂಕು.**

# ನಿಡುಗಟ್ಟೆ ಚೌಡಿಕೆ ರಾಮಣ್ಣ

ಸಿರಾ ತಾಲೂಕು ಹುಲಿಕುಂಟೆ ಹೋಬಳಿಗೆ ಸೇರಿದ ನಿಡಗಟ್ಟೆ ರಾಮಣ್ಣನವರ ಹುಟ್ಟೂರು. ೧೯೪೦ರಲ್ಲಿ ಹುಟ್ಟಿದ ಓದು ಬರಹ ಕಲಿಯದ ಆದರೆ ಕಲಿತವರನ್ನು ಮೀರಿಸುವ ಚಮತ್ಕಾರಿಕ ಕತೆ ಹೇಳುವ ಅಪರೂಪದ ಕಲಾವಿದ.

ಚರ್ಮ ಹದಮಾಡುವ ಕಾಯಕದ ಮಾರಣ್ಣನವರಿಗೆ ಹುಟ್ಟಿದ ಇಬ್ಬರು ಗಂಡುಮಕ್ಕಳಲ್ಲಿ ರಾಮಣ್ಣ ಮೊದಲನೆಯವರು. ಮೊದಮೊದಲು ಜೀತಗಾರರಾಗಿ ಬೆಜ್ಜಿಹಳ್ಳಿಯಲ್ಲಿದ್ದು, ನಂತರ ಎಲ್ಲಮ್ಮನ ಜೋಗಿಯಾಗಿ ನಿಡುಗಟ್ಟೆಗೆ ಬಂದರು. ತಮ್ಮ ಜೀತಗಾರಿಕೆಯಲ್ಲಿದ್ದ ಅವಧಿಯಲ್ಲಿಯೇ ಹಿರಿಯೂರು ಮೂಲದ 'ಹೊನ್ನಾರಪ್ಪ' ಎಂಬ ಗುರುಗಳ ಮೂಲಕ ರೇಣುಕೆ ಎಲ್ಲಮ್ಮದೇವಿಯ ಪದಗಳನ್ನು, ಚೌಡಿಕೆ ವಾದ್ಯ ಬಾರಿಸುವುದನ್ನು ಕಲಿತರು. ಒಂದು ಗಂಡು ಎರಡು ಹೆಣ್ಣು ಮಕ್ಕಳಿರುವ ರಾಮಣ್ಣ ಇಂದು ಚೌಡಿಕೆ ರಾಮಣ್ಣನಾಗಿ ರೂಪಾಂತರ ಹೊಂದಿದ್ದಾರೆ. ಜೊತೆಗೆ ಸಿರಾ, ಪಾವಗಡ, ಪರಶುರಾಮಪುರ, ಚಳ್ಳಕೆರೆ, ಹಿರಿಯೂರು ಈ ಭಾಗಗಳಲ್ಲಿ ಚೌಡಿಕೆ ವಾದನದ ಜೊತೆಗೆ ಸೌದತ್ತಿ ಎಲ್ಲಮ್ಮನ ಭಕ್ತರ ಕುಲಗುರುವಾಗಿಯೂ ಪವಿತ್ರ ಸ್ಥಾನಮಾನವನ್ನು ಶ್ರೀ ರಾಮಣ್ಣ ಪಡೆದಿದ್ದಾರೆ.

ರಾಮಣ್ಣ ಸೀರ್‍ಯಾದ ರಂಗಣ್ಣ, ಸರ್ಜಪ್ಪನಾಯಕ, ಮದಕರಿನಾಯಕ ಈ ಸಾಂಸ್ಕೃತಿಕ ವೀರರ ಕತೆಗಳನ್ನು ಚೌಡಿಕೆ ವಾದನದೊಂದಿಗೆ ಶೃತಿ ಬೆರೆಸಿ ಮಧುರವಾಗಿ ಹಾಡುತ್ತಾರೆ. ಈ ಬಗೆಗೆ ಬೆಳಗು ಹರಿಯುವವರೆಗೂ ಕತೆ ಮಾಡುತ್ತಾರೆ. ಹೀಗೆ ಪಾಳೇಗಾರಿಕೆ ವೀರ ಕಥನಗಳನ್ನು ಹಾಡುವ ಚೌಡಿಕೆ ಸಂಪ್ರದಾಯದ ಕಲಾವಿದರಲ್ಲಿ ರಾಮಣ್ಣ ತುಂಬಾ ವಿಶಿಷ್ಟವೂ, ಅಪರೂಪವೂ ಆದ ಕಲಾವಿದರು. 'ಅಸಾದಿ' ಕಲೆಯೂ ಇವರಿಗೆ ಸಿದ್ಧಿಸಿದೆ. ಏಳೂರು ಮಾರಿಜಾತ್ರೆಯಲ್ಲಿ ರಾಮಣ್ಣನಿಗೆ ಎಲ್ಲಿಲ್ಲದ ಗೌರವ.

ಮಾರಿ ಕರೆಯುವ ಹಾಗ ಸಾಗುಹಾಕುವ ವೇಳೆಗೆ ಅಸಾದಿ ರಾಮಣ್ಣನ ದೃಷ್ಟಿಯಲ್ಲಿ ಮಾರಮ್ಮ 'ಮಾದಿಗರಿಗೆ' ವಂಚಕಿ. ತಮ್ಮ ಕುಲಪುರುಷರ ವಂಶವನ್ನೇ ನಾಶಮಾಡಿದ ಚಂಡಿ. ಅಂಥ ಮಾರಮ್ಮನ ಮೆರವಣಿಗೆ, ಅಲಂಕಾರ, ಅರಿಶಿನ ಕುಂಕುಮ ಸೌಭಾಗ್ಯ ಏಕೆ ಬೇಕು ಎಂದೇ ದೇವತೆಗೆ ಛೇಡಿಸುತ್ತಾರೆ. ಜೊತೆಗೆ ಮೆರವಣಿಗೆ ಹೊರಟ ದೇವತೆಯ ಮುಂದೆ ನಿಂತು ಚೌಡಿಕೆ ಬಾರಿಸುತ್ತಾ, ವಾಚಾನುವಾಚವಾಗಿ ನಿಂದಿಸುತ್ತಾರೆ. ಹೀಗೆ ನಿಂದಿಸುತ್ತಾ, ಕುಣಿಯುತ್ತಾ ಒಮ್ಮೊಮ್ಮೆ ಅಳುತ್ತಾ ದುಃಖ, ಕೋಪ, ಸಿಟ್ಟು, ತಾಪಗಳ ಆರ್ಭಟಕ್ಕೆ ದೇವರನ್ನು ಹೊತ್ತವರು ಉದ್ರೇಕದಿಂದ ಮುನ್ನುಗ್ಗಿ ಪ್ರೇಕ್ಷಕ ಭಕ್ತರ ಎದುರು ಆವೇಶ, ಕೋಪಗೊಂಡು ಗಾಗೇಳುವುದು ಇಲ್ಲಿನ ಸಾಮಾನ್ಯ ಚಿತ್ರ. ದೇವರ ಈ ಬಗೆಯ ರೌದ್ರಾವತಾರದ ಪ್ರೇರಕ ಶಕ್ತಿ ಚೌಡಿಕೆ ರಾಮಣ್ಣ, ಅಂದು ಆಸಾಧಿ ರಾಮಣ್ಣನೆಂಬುದು ವಿಶೇಷವಾಗಿದೆ.

ಚೌಡಿಕೆ ರಾಮಣ್ಣ ಒಂದು ರೀತಿಯಲ್ಲಿ ಬಹುಕಲಾ ವಲ್ಲಭ. ಕೋಲಾಟ, ಯಕ್ಷಗಾನ, ಸಾಮಗಾನ ಈ ಕಲೆಗಳಲ್ಲಿ ಸಮಾನ ಆಸಕ್ತಿ ಬೆಳೆಸಿಕೊಂಡವರು. ಯಕ್ಷಗಾನವೆಂದರೆ ಪ್ರಾಣ ಬಿಡುವಷ್ಟು ಪ್ರೀತಿ ಬೆಳೆಸಿಕೊಂಡಿರುವ ರಾಮಣ್ಣನಿಗೆ ಯಕ್ಷಗಾನದಲ್ಲಿ ಬಾಗವತರೊಂದಿಗೆ ಹಿಮ್ಮೇಳ ಹಾಡುವುದು ಬಹು ಪ್ರಿಯವಾದ ಕೆಲಸ. ಜೊತೆಗೆ, ದ್ರೌಪದಿ ಸ್ವಯಂವರ, ಶ್ರೀಕೃಷ್ಣ ಪಾರಿಜಾತ, ಕರ್ಣಾರ್ಜುನರ ಕಾಳಗ ಇವುಗಳಲ್ಲಿ ದ್ರೌಪದಿಯ ಪಾತ್ರದ ಮೂಲಕ ಅತೀವ ಗಮನ ಸೆಳೆದ ಯಕ್ಷಗಾನ ಕಲಾವಿದರೂ ಹೌದು.

ರೇಣುಕಾ ಎಲ್ಲಮ್ಮ, ಮಾರೆಮ್ಮನ ಕತೆಗಳನ್ನು ಸಮಗ್ರವಾಗಿ ಹಾಡುವ ಏಕೈಕ ಕಲಾವಿದರೆಂಬ ಹಿರಿಮೆಗೂ ಪಾತ್ರರಾಗಿರುವ ರಾಮಣ್ಣನಿಗೆ ಇಂದಿಗೂ ಇರಲಿಕ್ಕೆ ಒಂದು ಪುಟ್ಟ ಗುಡಿಸಲೇ ಸೋಪ್ತಿ. ಹಾಡು ಹಾಡುತ್ತಲೇ ಗೂರಲು-ಕಫ ಕಟ್ಟಿಕೊಂಡು ಕಣ್ಣು ಪಿಳಪಿಳನೆ ಬಿಡುತ್ತ ಸ್ವಲ್ಪ ಸಾವರಿಸಿಕೊಂಡು ಧ್ವನಿ ಎತ್ತಿ ಹಾಡುವ ಕಲಾ ಮೋಡಿಗಾರ.

ಚೌಡಿಕೆ ರಾಮಣ್ಣ,
ನಿಡಗಟ್ಟೆ, ಸಿರಾ ತಾಲೂಕ.

# ಮಾಗೋಡ ಜೋಗೀರಣ್ಣ

ಸಿರಾ ತಾಲೂಕಿನ ಮಾಗೋಡು ಒಂದು ಪುಟ್ಟ ಗ್ರಾಮ. ಇಲ್ಲಿ ರಂಗನಾಥ ಈ ಭಾಗದ ಪ್ರಸಿದ್ಧ ಆರಾಧ್ಯದೈವ. ವರ್ಷಕ್ಕೊಮ್ಮೆ ಮಾಘ ಮಾಸದಲ್ಲಿ ಅದ್ದೂರಿ ಜಾತ್ರೆಯೂ ನಡೆಯುತ್ತದೆ. ಮಾಗೋಡು ರಂಗನಾಥ ಹೂವಿನ ಪರಿಷೆಗೆ ಹೆಸರುವಾಸಿ. ಆಂಧ್ರಪ್ರದೇಶ, ತಮಿಳುನಾಡು ಈ ಭಾಗಗಳ ಅಪಾರ ಭಕ್ತರನ್ನು ಈ ದೇವರು ಹೊಂದಿದೆ.

ಜೋಗೀರಣ್ಣ ಮಾಗೋಡಿನ ರೈತಾಪಿ ಬದುಕಿನ ವ್ಯಕ್ತಿ. ಸುಮಾರು ೭೫ ವರ್ಷ ಪ್ರಾಯದ ಇವರು ಮಾಗೋಡು ರಂಗನಾಥನ ಸಮಗ್ರ ಕಥನವನ್ನು ಕಾವ್ಯದ ಮೂಲಕ ಹಾಡುತ್ತಾರೆ. ಬುಡಕಟ್ಟು ಸಂಸ್ಕೃತಿಯಲ್ಲಿ ಕಾಡುಗೊಲ್ಲರದು ವಿಶಿಷ್ಟ ಸಾಂಸ್ಕೃತಿಕ ವ್ಯಕ್ತಿತ್ವ. ಜನಾಂಗಿಕ ಹಿನ್ನೆಲೆ, ಸಾಂಸ್ಕೃತಿಕ ಪರಿಸರ, ಸಾಂಸ್ಕೃತಿಕ ನಾಯಕರನ್ನು ಕಾವ್ಯ ಕಟ್ಟಿ ಹಾಡುವುದು ಕಾಡುಗೊಲ್ಲರ ವಿಶೇಷ. ಕುರಿಗಾಹಿಗಳಾದ ಇವರು ಕುರಿ ಮೇಯಿಸುತ್ತಾ, ರಾತ್ರಿಯೆಲ್ಲಾ ಕುರಿ ಮಂದೆ ಕಾಯುತ್ತಾ, ತಮ್ಮ ಪಾಡಿಗೆ ತಾವು ಹಾಡುವುದು ಇವರ ವಿಶೇಷ. ಇವರ ಹಾಡುಗಳಲ್ಲಿ ಪುರಾಣ, ಇತಿಹಾಸ ಪುರುಷರನ್ನು ಕುರಿತ ಮಹಾಕಾವ್ಯಗಳು ರೂಪುಗೊಂಡಿವೆ.

ಜನಪದ ಬುಡಕಟ್ಟು ಕಾವ್ಯ ಪ್ರಕಾರಗಳಲ್ಲಿ ಜುಂಜಪ್ಪನ ಕಾವ್ಯದ ನಂತರ ಅಷ್ಟೇ ಗೌರವಾದರಗಳಿಂದ ಭಾವಿಸಲ್ಪಡುವ ಕಾವ್ಯ ಎಂದರೆ ಮಾಗೋಡು ರಂಗನಾಥನ ಕಾವ್ಯ. ಕಂಬದ ರಂಗನ ಕಥೆ, ಕಂಬದರಾಯನ ಕಥೆ, ರಂಗನಾಥನ ಕಾವ್ಯ ಎಂದೆಲ್ಲಾ ಕರೆಯಲ್ಪಡುವ ರಂಗನಾಥನ ಕಥೆ ತುಂಬಾ ವಿಶಿಷ್ಟವೂ, ಮಹಾಕಾವ್ಯ ಸ್ವರೂಪದ್ದೂ ಆಗಿದೆ. ಇಂಥ ಜನಪದ ಸಮಗ್ರ ಕಾವ್ಯವನ್ನು ಹಾಡುವ ಕರ್ನಾಟಕದ ಏಕೈಕ ಕಲಾವಿದ ಎಂದರೆ ಮಾಗೋಡಿನ ಜೋಗೀರಣ್ಣ ಒಬ್ಬರೇ. ಇವರು ಹಾಡಿರುವ ಮಾಗೋಡು ರಂಗನಾಥನ ಕಥೆಯನ್ನು ಡಾ. ಚಿಕ್ಕಣ್ಣ ಯಣ್ಣೆಕಟ್ಟೆ ೨೦೦೨ರಲ್ಲಿ ಸಂಗ್ರಹಿಸಿ ಪ್ರಕಟಿಸಿದ್ದಾರೆ.

ಜೋಗೀರಣ್ಣ ಅವರಿಗೆ ೭೫ರ ಪ್ರಾಯ. ಕರಿಯ ಕಂಬಳಿ ಗದ್ದಿಗೆ ಹಾಸಿ, ಗಣೆ ಹಿಡಿದು ಕುಂತರೆ ರಾತ್ರಿ ಪೂರ ರಂಗನಾಥನ ಕಥೆಯನ್ನು ಸಮಗ್ರವಾಗಿ ಹಾಡುತ್ತಾರೆ.

ದೇವರ ಬಸವ ಅಥವಾ ದಾಸಯ್ಯ ಎಂದೇ ಕರೆಯಲ್ಪಡುವ ಇವರು ಸಂಪೂರ್ಣವಾಗಿ ಹಾಡುವುದನ್ನೇ ವೃತ್ತಿಯನ್ನಾಗಿ ಮಾಡಿಕೊಂಡಿದ್ದಾರೆ. ರಂಗನಾಥ ದೇವರ ಒಕ್ಕಲುಗಳು ದೇವರನ್ನು ಬೇರೆ ಬೇರೆ ಗ್ರಾಮಗಳಿಗೆ ಮೆರವಣಿಗೆ, ಉತ್ಸವಕ್ಕೆ ಕರೆದುಕೊಂಡು ಹೋಗುತ್ತಾರೆ. ರಾತ್ರಿ ದೇವರನ್ನು ಗದ್ದಿಗೆ ಮಾಡಿದ ಮೇಲೆ ದೇವರನ್ನು ಕುರಿತ ಕಥೆಯನ್ನು ಮಾಡಿಸುವುದು ವಾಡಿಕೆಯಾಗಿದೆ. ಈ ಪರಂಪರೆಯನ್ನು ಇಂದಿಗೂ ಅರ್ಥಪೂರ್ಣವಾಗಿ ನಡೆಸಿಕೊಂಡು ಬರುತ್ತಿರುವ ಕಲಾವಿದ ಜೋಗೀರಣ್ಣನವರು. ಶನಿವಾರ ವಿಶೇಷವಾಗಿ ರಂಗನಾಥ ದೇವರ ಪೂಜೆ ಇರುತ್ತದೆ. ಅಂಥ ಸಂದರ್ಭದಲ್ಲೂ ದೇವಸ್ಥಾನದ ಜಗಲಿಯ ಮೇಲೆ ಕುಳಿತು, ದೇವರ ಕಥೆ ಮಾಡುವುದು, ಗಣೆ ನುಡಿಸುವುದು ವಾಡಿಕೆಯಾಗಿದೆ. ಗಣೆ ಹಾಗೂ ಹಾಡುಗಾರಿಕೆ ಎರಡರಲ್ಲೂ ಚಾಕಚಕ್ಯತೆಯನ್ನು ಕಾಯ್ದುಕೊಂಡು ಬಂದಿರುವ ಜೋಗೀರಣ್ಣ, ದೈವನಿಷ್ಠ, ಶೀಲ-ಶೌಚಗಳಲ್ಲಿ ಕಟ್ಟುನಿಟ್ಟುತನವನ್ನು ಕಾಯ್ದುಕೊಂಡು ಬರುತ್ತಿದ್ದಾರೆ.

ಜೋಗೀರಣ್ಣ ಕೂಲಿಮಠದಲ್ಲಿ ಎರಡನೇ ತರಗತಿಯ ತನಕ ಓದಿದ್ದಾರೆ. ಕನ್ನಡ ಓದಲು, ಬರೆಯಲು ಮಾತ್ರ ಬರುತ್ತದೆ. ಆದರೂ ಗಣೆಯನ್ನು ಕೈಲಿಡಿದು, ಕರಿಯ ಕಂಬಳಿಯನ್ನು ಹಾಸಿ ಅದರ ಮೇಲೆ ಕುಳಿತರೆಂದರೆ ರಂಗನಾಥನ ಕಥೆಯ ವಿವರವುಳ್ಳ ಸಮಗ್ರ ಕಾವ್ಯ ಪುಂಖಾನುಪುಂಖವಾಗಿ ರಸಭಾವಗಳೊಂದಿಗೆ ಹಾಡುತ್ತಾ ಸಾಗುವುದು ಈ ಕಲಾವಿದನ ವಿಶೇಷವಾಗಿದೆ. ಆರ್ಥಿಕವಾಗಿ ಅತ್ಯಂತ ದುಃಸ್ಥಿತಿಯಲ್ಲಿಯದ್ದರೂ, ಕೌಟುಂಬಿಕ ಜಂಜಾಟದಿಂದ ದೂರ ಇರುವುದಾಗಿ ಜೋಗೀರಣ್ಣನವರೇ ಹೇಳುತ್ತಾರೆ. ಇಬ್ಬರು ಗಂಡುಮಕ್ಕಳು ಅವರಿಬ್ಬರೂ ಸಂಸಾರದೊಂದಿಗೆ ಬೇರೆ ಬೇರೆ ಕಡೆ ವಾಸಿಸುತ್ತಿದ್ದಾರೆ. ದೇವಸ್ಥಾನದ ಕೆಲಸ, ಹಾಡುಗಾರಿಕೆಗಾಗಿಯೇ ತಮ್ಮನ್ನು ಸಂಪೂರ್ಣವಾಗಿ ಒಪ್ಪಿಸಿಕೊಂಡು ಕಾವ್ಯಸೇವೆ ಮಾಡುತ್ತಾ ಬರುತ್ತಿದ್ದಾರೆ.

ಜೋಗೀರಣ್ಣನ ಕಲಾಸೇವೆ ಅರವತ್ತು ವರ್ಷಗಳಿಗೂ ಅಧಿಕವಾದುದು. ತಾತ ದಾಸಣ್ಣನಿಂದ ಕಲಿತ ಈ ಕಲೆಯನ್ನು ಇನ್ನಾರೂ ಕಲಿತಿಲ್ಲ, ಹಾಡುವುದಿಲ್ಲ. ಗೊಲ್ಲರಹಟ್ಟಿಯಲ್ಲಿ ಪುರಾಣ, ಕಥನ, ಸೋಬಾನೆ, ಕೋಲುಪದ ಮಾಮೂಲಿ ಪ್ರಸಂಗಗಳು. ಜುಂಜಪ್ಪ, ಚಿತ್ರದೇವರು, ಕಾಟಂದೇವರು, ಕ್ಯಾತೆ ದೇವರು, ಪಾತೆ ದೇವರು ಈ ಮುಂತಾದ ದೈವಸಂಬಂಧಿ ಕಥನವನ್ನು ರಾತ್ರಿ ಪೂರಾ ಹಾಡುತ್ತಾರಾದರೂ, ಮಾಗೋಡಿನ ರಂಗನಾಥನನ್ನು ವಸ್ತುವನ್ನಾಗಿಸಿಕೊಂಡು ಕಾವ್ಯ ಹಾಡುವ ಜನರೇ ಸಿರಾ ತಾಲೂಕಿನಲ್ಲಿ ಇಲ್ಲದಿರುವುದನ್ನು ಕಾಣಬಹುದು. ಅಂಥ ವಿರಳ ಹಾಗೂ ಅಪರೂಪದ ಕಲಾವಿದ ಮಾಗೋಡು ಜೋಗೀರಣ್ಣ. ಮೈಸೂರು, ತಮಿಳುನಾಡು, ಆಂಧ್ರ, ಶಿವಮೊಗ್ಗ, ದಾವಣಗೆರೆ ಇಲ್ಲೆಲ್ಲಾ ಕಾವ್ಯ ಹಾಡುವ ಮೂಲಕ ಅಪಾರ ಜನಮೆಚ್ಚುಗೆ, ದೈವಮೆಚ್ಚುಗೆ ಎರಡಕ್ಕೂ ಪಾತ್ರವಾಗಿರುವ ಇವರು ಮಾಗೋಡು ರಂಗನಾಥ್ನ ಕಾವ್ಯ ಹಾಡಬಲ್ಲ ಏಕೈಕ ಹಾಗೂ ಕೊನೆಯ ಕೊಂಡಿಯಾಗಿರುವುದು ವಿಶೇಷವಾಗಿದೆ.

ಜೋಗೀರಣ್ಣ,
ಮಾಗೋಡು ಗೊಲ್ಲರಹಟ್ಟಿ, ಸಿರಾ ತಾಲೂಕು.

## ಅರಳಗುಪ್ಪೆ ಚೌಡಿಕೆ ಬೋರಶೆಟ್ಟಿ

ತುಮಕೂರು ಜಿಲ್ಲೆಯ ತಿಪಟೂರು ತಾಲೂಕಿನ ಅರಳಗುಪ್ಪೆಯ ಕಲಾಗ್ರಾಮದ, ಹತ್ತಾರು, ಜನಪದ ಕಲಾಪ್ರಕಾರಗಳಲ್ಲಿ ಚೌಡಿಕೆಯೂ ಒಂದು. ಚೌಡಿಕೆ ಕಲೆಯನ್ನು ರಾಷ್ಟ್ರೀಯ ಮಟ್ಟಕ್ಕೆ ಏರಿಸಿದ ಹಲವು ಗ್ರಾಮ್ಯ ಪ್ರತಿಭೆಗಳಲ್ಲಿ ಬೋರಶೆಟ್ಟಿಯೂ ಒಬ್ಬರು. ಎಪ್ಪತ್ತು ವಯಸ್ಸಿನ ಈ ನಿಸ್ಸೀಮ ಕಲಾವಿದ ಚೌಡಿಕೆಯನ್ನು ಕೈಯಲ್ಲಿ ಹಿಡಿದು ಹಾಡಲು ಆರಂಭಿಸಿದರೆ ಅಲ್ಲೊಂದು ಸಂಗೀತಶಾಲೆ ತೆರೆದಂತೆ. ಚೌಡಿಕೆ, ತಾಳ, ಚಿಟಿಕೆ ಒಟ್ಟು ಸೇರಿಸಿ ದೇವಿ ಎಲ್ಲಮ್ಮಳ ಕತೆ ಮಾಡುವುದು ಇವರ ವಿಶೇಷ. ಚೌಡಿಕೆಯ ತಂಡದೊಂದಿಗೆ ಕರ್ನಾಟಕದಾದ್ಯಂತ ತಿರುಗಾಟ ನಡೆಸಿರುವುದು ಇವರ ವಿಶೇಷ.

೧೯೩೦ರಲ್ಲಿ ಅರಳಗುಪ್ಪೆಯಲ್ಲಿ ಕುಂಬಾರ ಕುಟುಂಬದಲ್ಲಿ ಜನಿಸಿದ ಬೋರಾಶೆಟ್ಟಿಯ ತಂದೆ ಚೌಡಿಕೆ ಬೋರಯ್ಯ, ತಾಯಿ ಮಲ್ಲಮ್ಮ. ಸಾಮಗಾನ, ಕೋಲಾಟ, ಭಜನೆ, ತತ್ವಪದಗಳಲ್ಲಿ ಆರಂಭಿಕ ಆಸಕ್ತಿಯನ್ನು ಬೆಳೆಸಿಕೊಂಡ ಬೋರಶೆಟ್ಟಿ ಕ್ರಮೇಣ ಯಕ್ಷಗಾನ ವೇಷಧಾರಿಗಳಾದರು. ದಿ॥ ದಿವಾಕರಾಚಾರ್ಯ, ಹೊನ್ನಂಜಾಚಾರ್ಯರು, ವೀರಭದ್ರಾಚಾರ್ಯ ಹಾಗೂ ಶ್ರೀಕಂಠಾಚಾರ್ಯರ ಮೂಲಕ ಯಕ್ಷಗಾನ, ಜನಪದ ಸಂಗೀತದಲ್ಲಿ ವಿಶೇಷ ಪರಿಣತಿ ಪಡೆದರು. ತಮ್ಮ ಕುಲದೈವ ಎಲ್ಲಮ್ಮ ದೇವಿ ಕುರಿತು, ಚಿಕ್ಕನಾಯಕನಹಳ್ಳಿ, ತುರುವೇಕೆರೆಗಳಲ್ಲಿ ಹಾಡುತ್ತಿದ್ದ ಹಾಡು ಇವರನ್ನು ಆಕರ್ಷಿಸಿತು. ತಂದೆಯೂ ಚೌಡಿಕೆ ಪದ ಹಾಡುವ ಕಲಾವಿದರಾಗಿದ್ದರು. ಮಗ ಶಾಸ್ತ್ರೀಯವಾಗಿ ಸಂಗೀತ ಕಲಿಯಲಿ ಎಂದು ದಿವಾಕರಾಚಾರ್ಯ ಮುಂತಾದ ಗುರುವರ್ಯರ ಮೂಲಕ ಕಲಾಲೋಕಕ್ಕೆ ಪ್ರವೇಶ ನೀಡಿದರು. ಮುಂದೆ ತುರುವೇಕೆರೆಯ ಚೌಡಿಕೆ ಎಲ್ಲಯ್ಯನವರಿಂದ ಚೌಡಿಕೆ ಪದಗಳು ಹಾಗೂ ತರೀಕೆರೆ ಸರ್ಜಪ್ಪನಾಯಕ, ಸೀರ್‍ಯದ ರಂಗಪ್ಪನಾಯಕ, ಚಿಕ್ಕನಾಯಕನಹಳ್ಳಿ ಚಿಕ್ಕವೀರನಾಯಕ ಈ ಮೊದಲಾದ ಸಾಂಸ್ಕೃತಿಕ ನಾಯಕರ ಕಥೆಗಳನ್ನು ಕಲಿತರು. ತಾವು ಕಲಿತ ಈ ಐತಿಹಾಸಿಕ ವೀರರ ಪದಗಳ ಹಾಡುಗಾರಿಕೆ ಇವರಿಗೆ ವಿಶೇಷ

ಗೌರವ ತಂದ ಸಂದರ್ಭಗಳು. ಗ್ರಾಮದೇವತೆ ಮಾರಮ್ಮಳನ್ನು ಕುರಿತು ಸಮಗ್ರವಾಗಿ ಕಥೆ ಮಾಡುವ ಅಪರೂಪದ ಕಲಾವಿದರಾಗಿರುವುದು ಹೆಮ್ಮೆಯ ಸಂಗತಿಯಾಗಿದೆ.

ಇವರ ಚೌಡಿಕೆ ವಾದ್ಯ ವಿಶೇಷ ಹಾಡುಗಾರಿಕೆಯನ್ನು ಮೊದಲಿಗೆ ಗುರುತಿಸಿದ ಡಾ. ಜೀಶಂಪ ಅವರು ಇವರನ್ನು ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಕನ್ನಡ ಜಾನಪದ ಎಂ.ಎ. ತರಗತಿಗೆ ಸಂದರ್ಶಕ ಪ್ರಾಧ್ಯಾಪಕರನ್ನಾಗಿ ನೇಮಿಸಿಕೊಂಡಿದ್ದು ವಿಶೇಷವಾಗಿದೆ. ಆರೇಳು ವರ್ಷಗಳ ಕಾಲ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಕಲಾ ಪ್ರದರ್ಶನ ನೀಡುವ ಮೂಲಕ ಜನಪದ ಚೌಡಿಕೆ ಕಾವ್ಯ ಹಾಡಿದ, ಆಸಕ್ತ ವಿದ್ಯಾರ್ಥಿಗಳಿಗೆ ಕಲಿಸಿದ ಹಿರಿಮೆಗೆ ಪಾತ್ರರಾಗಿರುವುದು ಇವರ ವಿಶೇಷವಾಗಿದೆ.

ಬೆಂಗಳೂರು, ಮೈಸೂರು, ಧಾರವಾಡ ಆಕಾಶವಾಣಿ ಕೇಂದ್ರಗಳ ಮೂಲಕ ಚೌಡಿಕೆ ಕಲೆಯನ್ನು ಪ್ರಸಾರ ಮಾಡಿರುವ ಬೋರಸೆಟ್ಟಿ, ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರದಲ್ಲಿ ವಿಶೇಷ ಕಲಾ ಪ್ರಾತ್ಯಕ್ಷಿಕೆ ನೀಡಿದ್ದಾರೆ. ಬೀದರ್‌ನಲ್ಲಿ ನಡೆದ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಕಲಾ ಪ್ರದರ್ಶನವನ್ನು ಉದ್ಘಾಟಿಸಿದ ಹಿರಿಮೆಗೂ ಪಾತ್ರರು. ತುಮಕೂರು ಜಿಲ್ಲೆಯಲ್ಲಿ ನಡೆದ ಸುವರ್ಣ ಕರ್ನಾಟಕ ಸಾಂಸ್ಕೃತಿಕ ದಿಬ್ಬಣದ ಹಲವು ಕಡೆ ಕಲಾಪ್ರದರ್ಶನ ನೀಡಿರುವ ಇವರು ಜಾಥಾದ ಹಿರಿಯ ಕಲಾವಿದರಾಗಿಯೂ ಕಾರ್ಯ ನಿರ್ವಹಣೆ ಮಾಡಿದ್ದಾರೆ.

ಹಲವು ಯಕ್ಷಗಾನ ಬಯಲಾಟಗಳಲ್ಲಿ ವೇಷಧಾರಿಗಳಾಗಿ ಇಂದಿಗೂ ಅಭಿನಯಿಸುತ್ತಿರುವ ಇವರಿಗೆ ಯಕ್ಷಗಾನ ಕಲೆಯೂ ಆಸಕ್ತಿಯ ಕ್ಷೇತ್ರವಾಗಿದೆ.

ಬೀದರ್, ಮೈಸೂರು, ಚಿಕ್ಕಮಗಳೂರು, ತುಮಕೂರು ಜಿಲ್ಲೆಯ ಬಹುತೇಕ ತಾಲೂಕು ಕೇಂದ್ರವೂ ಸೇರಿದಂತೆ ವಿಶೇಷ ಧಾರ್ಮಿಕ, ಸಾಂಸ್ಕೃತಿಕ ಕೇಂದ್ರಗಳಲ್ಲಿ ಚೌಡಿಕೆ ಕಲಾ ಪ್ರದರ್ಶನ ನೀಡಿದ್ದಾರೆ. ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಪ್ರಶಸ್ತಿ, ವಿಶ್ವ ಕನ್ನಡ ಸಮ್ಮೇಳನ ಪ್ರಶಸ್ತಿ, ಮೈಸೂರು ವಿಶ್ವವಿದ್ಯಾನಿಲಯ ಸುವರ್ಣ ಮಹೋತ್ಸವ ಪ್ರಶಸ್ತಿ, ಜಾನಪದ ಕಲಾ ಮೇಳಗಳ ಪ್ರಶಸ್ತಿಯೂ ಸೇರಿದಂತೆ ಹತ್ತಾರು ಪ್ರತಿಷ್ಠಿತ ಸಾಂಸ್ಕೃತಿಕ ಸಂಸ್ಥೆಗಳ ಗೌರವಕ್ಕೂ ಕಾರಣವಾಗಿರುವುದು ಇವರು ಕಲಾಕ್ಷೇತ್ರಕ್ಕೆ ನೀಡಿರುವ ಅನನ್ಯ ಕೊಡುಗೆಯ ಭಾಗವಾಗಿದೆ.

ಮಗ ಶ್ರೀ ರಂಗಸ್ವಾಮಿ ಅವರೊಂದಿಗೆ ಇಂದಿಗೂ ರಾತ್ರಿ ಪೂರಾ ನಿರಂತರವಾಗಿ ಹಾಡುವ, ಕತೆ ಮಾಡುವ ಜಿಲ್ಲೆಯ ಅಪರೂಪದ ಕಲಾವಿದ.

ಚೌಡಿಕೆ ಬೋರಶೆಟ್ಟಿ,
ಅರಳಗುಪ್ಪೆ ಗ್ರಾಮ, ತಿಪಟೂರು ತಾಲೂಕು.

# ವಡೇರಪುರದ ಸಿದ್ಧಯ್ಯ

ಕರ್ನಾಟಕ ಕರಪಾಲ ಕಲೆಗೆ ರಾಷ್ಟ್ರವ್ಯಾಪಿ ಕಲಾ ಸ್ವರೂಪ ನೀಡಿದ, ಈ ಕಲೆಯನ್ನು ವಿಶ್ವವಿದ್ಯಾಲಯಗಳ ಮಟ್ಟಕ್ಕೆ ಕೊಂಡೊಯ್ದ ಹಿರಿಯ ಅಪರೂಪದ ಕಲಾವಿದ ಕರಪಾಲ ಸಿದ್ದಯ್ಯ.

ಕರಪಾಲ ಸಿದ್ಧಯ್ಯ ತುಮಕೂರು ಜಿಲ್ಲೆಯ, ತಿಪಟೂರು ತಾಲೂಕಿನ ವಡೇರಪುರ ಅಥವಾ ವಡೇರಹಳ್ಳಿಯವರು. ಗಂಡುಮಕ್ಕಳಿಲ್ಲದೆ ಪತ್ನಿಯನ್ನು ಚಿಕ್ಕ ವಯಸ್ಸಿನಲ್ಲಿಯೇ ಕಳೆದುಕೊಂಡು, ಏಕೈಕ ಮಗಳ ಪೋಷಣೆಯೊಂದಿಗೆ ಕರಪಾಲ ಕಲೆಯ ಪೋಷಣೆಯನ್ನು ಮಾಡುತ್ತಾ ಬಂದರು. ಕರಪಾಲ ಕಲೆಯನ್ನು ಒಂದು ಸಮುದಾಯಕ್ಕೆ ಕಲಿಸಿದ, ವಿಶೇಷವಾಗಿ ಮೈಸೂರು ವಿಶ್ವವಿದ್ಯಾನಿಲಯದ ಜನಪದ ಅಧ್ಯಯನ ಕೇಂದ್ರದ ಮೂಲಕ ಎಂ.ಎ. ಪದವೀಧರರಿಗೆ ಜನಪದವನ್ನು ಪ್ರೀತಿಸಲು ಪ್ರೇರಕವಾದವರು ಸಿದ್ಧಯ್ಯನವರು.

ಕರಪಾಲ ಕಲೆಯನ್ನು ಮತ್ತಿಹಳ್ಳಿಯ ಕುರುಡಯ್ಯ ಎಂಬುವವರಿಂದ ಕಲಿತಿದ್ದ ಬಗೆಗೆ ಹೇಳಲಾಗಿದೆ. ಚಿಕ್ಕಂದಿನಲ್ಲಿ ಇವರ ಶಿಷ್ಯನಾಗಿ ಧಾರ್ಮಿಕ ಕಾರ್ಯಗಳಲ್ಲಿ ರಾತ್ರಿಯಿಂದ ಬೆಳಗಿದ ತನಕ ಕಥೆ ಮಾಡುತ್ತಿದ್ದರೆಂದು ಹೇಳಲಾಗುತ್ತಿದೆ. ಮುಂದೆ ಇದೇ ಕಲೆಯನ್ನು ವೈವಿಧ್ಯತೆಯಿಂದ ಬೆಳೆಸಿದರು. ತಿಪಟೂರು ತಾಲೂಕಿನ ಕೊನೆಹಳ್ಳಿಗೆ ಬಂದ ನಂತರ ಭಾಗವತ ಕೆಂಪೇಗೌಡ, ನಾರಸಪ್ಪ ಇವರ ಮೂಲಕ ಜೀಶಂಪ ಅವರ ಸಂಪರ್ಕವಾದದ್ದು ಯೋಗಾಯೋಗ. ಇವರಿಂದಾಗಿ ಇವರ ಕಲೆ ರಾಷ್ಟ್ರವ್ಯಾಪಿ ಪ್ರಸಾರವಾಗಲು ಪ್ರಮುಖ ವೇದಿಕೆಯಾಯಿತು.

ಕಾಡುಸಿದ್ಧಮ್ಮ, ನೀಲಕಂಠ ರೂಪಾವತಿ, ಶಿವಯೋಗಿ ಬಸವಕುಮಾರ, ಲೋಹಿತ ಕುಮಾರ ಎಂಬ ಕಾವ್ಯಗಳನ್ನು ಕರಪಾಲಮೇಳಕ್ಕೆ ವಸ್ತುವನ್ನಾಗಿ ಮಾಡಿಕೊಂಡಿದ್ದರು.

ತಾವೇ ಸ್ವತಂತ್ರವಾದ ತಂಡವೊಂದನ್ನು ರಚಿಸಿಕೊಂಡು, ತುರುವೇಕೆರೆ, ನಾಗಮಂಗಲ, ತಿಪಟೂರು, ಮೈಸೂರು, ಚನ್ನರಾಯಪಟ್ಟಣ ಈ ಭಾಗಗಳಲ್ಲಿ ಕಲಾಪ್ರದಶನ ನೀಡುತ್ತಾ ಬಂದರು. ಆರಂಭದಲ್ಲಿ ಧಾರ್ಮಿಕ ಸಭೆಗಳಲ್ಲಿ ಹತ್ತು ರೂಪಾಯಿ ಸಂಭಾವನೆ ಪಡೆದು ಕಲಾ ಪ್ರದರ್ಶನ ನೀಡುತ್ತಿದ್ದರೆಂದು ಅವರ ಶಿಷ್ಯ ಜಿ. ಸಿ. ಬಸವರಾಜ್ ಹೇಳುತ್ತಾರೆ. ಇವರ ಕರಪಾಲ ಮೇಳ ಕಾವ್ಯಗಳನ್ನು ಡಾ. ಜೀಶಂಪ ಅವರು ಸಂಗ್ರಹಿಸಿ 'ಕರ್ನಾಟಕ ವೃತ್ತಿಗಾಯಕ ಕಾವ್ಯಗಳು' ಕೃತಿಯಲ್ಲಿ ಪ್ರಕಟಿಸಿದ್ದಾರೆ. ಹಲವಾರು ಜನಪದ ಕತೆಗಳನ್ನು ಇವರು ಹೇಳುತ್ತಿದ್ದು ಅದರಲ್ಲಿ 'ಪೂಜಾರಿ ಪುಟ್ಟ' ಜನಪದ ಕತೆಯೂ ಒಂದಾಗಿದೆ. ಬೆಂಗಳೂರು, ಮೈಸೂರು ಆಕಾಶವಾಣಿಯಲ್ಲಿ ಕರಪಾಲಮೇಳ ಕಲೆಯನ್ನು ಪ್ರಸಾರ ಮಾಡಿದ ಮೊದಲಿಗರು. ಇವರು ಹಾಡುತ್ತಿದ್ದ ಕರಪಾಲ ಕಾವ್ಯಗಳನ್ನು ಆಧರಿಸಿ ಡಾ. ಜೀಶಂಪ ಅವರು ೧೯೬೪ ರಿಂದ 'ಸುಧಾ' ವಾರಪತ್ರಿಕೆಗೆ ಪರಿಚಯಾತ್ಮಕ ಕಥೆಗಳನ್ನು ಬರೆಯುತ್ತಿದ್ದರು.

ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಪ್ರಶಸ್ತಿಕೃತರೂ ಆಗಿದ್ದ (೧೯೮೧) ಕರಪಾಲ ಸಿದ್ಧಯ್ಯನವರು ತಾವು ಹಾಡುತ್ತಿದ್ದ, ಶಿಷ್ಯರನ್ನು ಬೆಳೆಸಿದ್ದ ಕೇಂದ್ರ ನೆಲ ಮತ್ತಿಹಳ್ಳಿ, ಕೊನೆಹಳ್ಳಿಯನ್ನು ಬಿಟ್ಟು ಮಗಳ ಆಶ್ರಯದಲ್ಲಿ ಅರಸೀಕೆರೆ ತಾಲೂಕು ಹಬ್ಬನಗಟ್ಟದಲ್ಲಿ ತಮ್ಮ ೮೫ನೇ ವಯಸ್ಸಿನಲ್ಲಿ ತೀರಿಕೊಂಡರು. ಆದರೆ ಇವರ ಶಿಷ್ಯರಾದ ಗಾಣದಾಳು ಬಸವರಾಜ್, ಕುಪ್ಪಾಳು ಚಂದ್ರಶೇಖರಯ್ಯ ಮೊದಲಾದ ಶಿಷ್ಯರು ಕರಪಾಲ ಕಲೆಯನ್ನು ಸಮರ್ಥವಾಗಿ ಮುಂದುವರಿಸುತ್ತಿರುವುದು ವಿಶೇಷ.

## ಕರಪಾಲ ಬಸವರಾಜು

ಜನಪದ ಕರಪಾಲ ಕಲೆಗೆ ರಾಷ್ಟ್ರವ್ಯಾಪ್ತಿ ಮನ್ನಣೆ, ಗೌರವ ತಂದು ಕೊಟ್ಟ ಹಿರಿಮೆಗೆ ಪಾತ್ರರಾಗಿರುವ ಗಾಣದಾಳು ಕರಪಾಲ ಬಸವರಾಜು ಅವರಿಗೆ ಇದೀಗ ಅರವತ್ತೆರಡು ವರ್ಷಗಳ ಪ್ರಾಯ. ತಂದೆ ಶ್ರೀ ಚನ್ನಬಸವಯ್ಯ, ತಾಯಿ ಶ್ರೀಮತಿ ಸಿದ್ಧಮ್ಮ. ತಮ್ಮ ಹುಟ್ಟೂರು ಗಾಣದಾಳುವಿನಲ್ಲಿ ಪ್ರಾಥಮಿಕ ವಿದ್ಯಾಭ್ಯಾಸ ಮಾಡಿದ ಇವರು ಪ್ರೌಢಶಿಕ್ಷಣವನ್ನು ಬೋರನಕಣಿವೆಯ ಸುವರ್ಣಮುಖಿ ವಿದ್ಯಾಸಂಸ್ಥೆಯಲ್ಲಿ ಮಾಡಿದರು.

ಆರಂಭದಲ್ಲಿ ಯಕ್ಷಗಾನ ಕಲೆಯ ಬಗೆಗೆ ಒಲವು ಇರಿಸಿಕೊಂಡು, ತಮ್ಮ ಗ್ರಾಮದ ಹೋಟೆಲ್ ಬಸವಯ್ಯನವರ ಪ್ರೇರಣೆ ಹಾಗೂ ರಂಗಗೀತೆಗಳ ಹಾಡುಗಾರಿಕೆಯಿಂದಾಗಿ ಮೊದಲು ಯಕ್ಷಗಾನಗಳಲ್ಲಿ ಬಾಲಕ ಪಾತ್ರಗಳ ಮೂಲಕ ರಂಗ ಪ್ರವೇಶಿಸಿದರು.

ಒಮ್ಮೆ ಗಣಪತಿ ವಿಸರ್ಜನೆಯ ಸಮಾರಂಭದಲ್ಲಿ ಕರಪಾಲ ಕಲಾ ಪ್ರದರ್ಶನದಲ್ಲಿ ಕಾಡು ಸಿದ್ಧಮ್ಮನ ಕಥೆಯನ್ನು ತಿಪಟೂರು ತಾಲೂಕು ಒಡೆಯರಹಳ್ಳಿ ಸಿದ್ಧಯ್ಯನವರು ಪ್ರದರ್ಶಿಸಿದರು. ಅರ್ಧ ರಾತ್ರಿಯತನಕ ನಡೆದ ಕರಪಾಲ ಕಥೆಯನ್ನು ಬಾಲಕ ಬಸವರಾಜು ತೀಕ್ಷ್ಣವಾಗಿ ಗಮನಿಸಿದರು. ಅಲ್ಲಿಂದ ಮುಂದೆ ಆ ಕಲೆಯ ಬಗೆಗೆ ಆಸಕ್ತಿ ಮೂಡಿ ಅವರನ್ನು ಬೆನ್ನು ಹತ್ತಿ ಕರಪಾಲ ಕಲೆಯ ನೃತ್ಯ, ಮಾತುಗಾರಿಕೆ, ಪ್ರಸಂಗ, ವೇಷಭೂಷಣಗಳನ್ನು ಅಭ್ಯಾಸ ಮಡಿದರು. ಸತತವಾಗಿ ಆರು ವರ್ಷಗಳ ಕಾಲ ಕರಪಾಲ ಕಲೆಯನ್ನು, ಕರಪಾಲ ಬಸವಯ್ಯನವರಿಂದ ಕಲಿತರು.

ಚಿಕ್ಕನಾಯಕನಹಳ್ಳಿ ತಾಲೂಕು ಹುಳಿಯಾರು ಹೋಬಳಿ ಗಾಣದಾಳು ಕರಪಾಲ ಬಸವರಾಜು ಅವರ ಕಾರ್ಯಕ್ಷೇತ್ರ. ಆದರೂ ೧೯೭೭ ರಿಂದ ಸಂಪೂರ್ಣವಾಗಿ ಕರಪಾಲ ಕತೆಗಾಗಿಯೇ ತಮ್ಮನ್ನು ಸಂಪೂರ್ಣ ಒಪ್ಪಿಸಿಕೊಂಡಿದ್ದಾರೆ.

ಬೆಂಗಳೂರಿನ ಆದರ್ಶ ಫಿಲಂ ಇನ್ಸ್ಟಿಟ್ಯೂಟ್‌ನಲ್ಲಿ ಚಲನಚಿತ್ರ ಅಭಿನಯ, ನಿರ್ದೇಶನ, ತಾಂತ್ರಿಕ ವಿಷಯವಾಗಿ ವಿಶೇಷ ತರಬೇತಿಯನ್ನು ಪಡೆದಿದ್ದು ಇವರ ಕರಪಾಲ ಅಭಿನಯಕ್ಕೆ ವಿಶಾಲವಾದ ವ್ಯಾಪ್ತಿಯನ್ನು ಒದಗಿಸಿದೆ. ಹಲವು ಚಲನಚಿತ್ರಗಳಲ್ಲೂ ನಟಿಸಿರುವ ಇವರ ಪ್ರೀತಿಯ ಬದುಕು ಕರಪಾಲ.

೧೯೮೦ ರಿಂದ ಬೆಂಗಳೂರಿನ ಆಕಾಶವಾಣಿ ಕೇಂದ್ರ ಮೂಲಕ ಕಾಡುಸಿದ್ಧಮ್ಮನ ಕತೆಯನ್ನು ಮೊದಲು ಮಾಡಿದರು. ನಂತರ ಸತತವಾಗಿ ವರ್ಷಕ್ಕೆ ಎರಡರಂತೆ ಸುಮಾರು ಮೂವತ್ತಾರು ಕತೆಗಳನ್ನು ಆಕಾಶವಾಣಿಯ ಮೂಲಕ ಪ್ರಸಾರ ಮಾಡಿದ್ದಾರೆ.

೧೯೯೫ ರಿಂದ ೨೦೦೦ ದವರೆಗೆ ಬೆಂಗಳೂರು ದೂರದರ್ಶನ ಮೂಲಕ ಹೇಮರೆಡ್ಡಿ ಮಲ್ಲಮ್ಮ, ಸಾರಂಗಧರ, ಜಗಜ್ಯೋತಿ ಬಸವೇಶ್ವರ ಕಥಾಪ್ರಸಂಗಗಳನ್ನು ನಿರಂತರವಾಗಿ ಪ್ರಸಾರ ಮಾಡಿರುತ್ತಾರೆ.

ಶಿವಶರಣೆ ಕಾಡುಸಿದ್ದಮ್ಮ, ಬಿಲ್ವಶಂಕರ ವಿಲಾಸ, ನೀಲಕಂಠ ರೂಪಾವತಿ ಕಲ್ಯಾಣ, ಬಸವ ಕುಮಾರ–ಲೋಲಕುಮಾರ, ಕಾಳಿಂಗ ಕುಮಾರ, ಅರಣ್ಯಕುಮಾರ, ಭಾನುಶೇಖರ ವಿಲಾಸ, ರಾಜಶೇಖರ ವಿಲಾಸ, ಹೇಮರೆಡ್ಡಿ ಮಲ್ಲಮ್ಮ, ಸಾನಂದ ಗಣೇಶ, ರುದ್ರೇಶ್ವರ ಮಹಾತ್ಮೆ, ನಲ್ಲತಂಗಾದೇವಿ, ರೇಣುಕಾದೇವಿ ಮಹಾತ್ಮೆ, ಬಾಲನಾಗಮ್ಮ, ಹುಳಿಯಾರು ಕೆಂಚಮ್ಮ, ಗುಂಟನೂರು ದ್ಯಾಮಲಾಂಬ, ಜಲಧಿ ಬೊಪ್ಪರಾಯ, ವೀರಕ್ಯಾತರಾಯ, ವಡ್ಡಗೆರೆ ನಾಗಮ್ಮ, ಮದಲಿಂಗನ ಕಣಿವೆ, ಜಗಜ್ಯೋತಿ ಬಸವೇಶ್ವರ, ಗುರುಸಿದ್ಧರಾಮೇಶ್ವರ, ಉಕ್ಕಡಗಾತ್ರಿ ಕರಿಬಸವೇಶ್ವರ, ಗಂಗೆ–ಗೌರಿ, ರತ್ನಮಂಜರಿ, ತಿರುಕುಳವಿನಾಚಿ ಈ ಮೊದಲಾದ ಐವತ್ತು ಕರಪಾಲಮೇಳದ ಕಥೆಗಳ ಕುರಿತ ಹಸ್ತಪ್ರತಿ ನಿರ್ಮಿಸಿಕೊಂಡು ನಿರಂತರವಾಗಿ ಕಥೆ ಮಾಡುತ್ತಿರುವುದು ಇವರ ವಿಶೇಷವಾಗಿದೆ.

ದೇಶಾದ್ಯಂತ ಎಂಟು ಸಾವಿರಕ್ಕೂ ಹೆಚ್ಚು ಕರಪಾಲ ಕಥಾಪ್ರಸಂಗವನ್ನು ನಡೆಸಿಕೊಟ್ಟಿರುವ ಇವರೊಂದಿಗೆ ಒಂದು ಕಲಾತಂಡವನ್ನು ಸಿದ್ಧಮಾಡಿಕೊಂಡಿರುವುದು ವಿಶೇಷವಾಗಿದೆ. ಜಿ. ಎಸ್. ಕುಮಾರಸ್ವಾಮಿ ಸಹಪಾಠಿ ತಾಳವಾದಕ ಈಶ್ವರಯ್ಯ ಸಹಪಾಠಿ ಕರಪಾಲವಾದಕ ಸಾದರಹಳ್ಳಿ ದೇವರಾಜು, ಹಾರ್ಮೋನಿಯಂ ವಾದಕ ಬುಕ್ಕಾಪಟ್ಟಣ ಸುರೇಶ, ತಬಲಾವಾದಕರಾಗಿ ಕರಪಾಲ ಕಲಾತಂಡದ ಒಂದು ಗುಂಪು ೧೯೮೨ ರಿಂದ ಇಂದಿನವರೆಗೆ ರಾಷ್ಟ್ರವ್ಯಾಪಿ ಕರಪಾಲ ಕಲಾಪ್ರದರ್ಶನ ನೀಡಿದೆ. ಭಾರತ ಸರ್ಕಾರದ ಸಂಗೀತ ನಾಟಕ ವಿಭಾಗ, ವಾರ್ತಾ ಮತ್ತು ಪ್ರಸಾರ ಮಂತ್ರಾಲಯ ಇವರುಗಳ ಸಾಂಸ್ಕೃತಿಕ ವಿನಿಮಯದ ಯೋಜನೆಯಲ್ಲಿ ಆಂಧ್ರಪ್ರದೇಶ, ತಮಿಳುನಾಡು, ಕೇರಳ ಇಲ್ಲೆಲ್ಲಾ ಕಾರ್ಯಕ್ರಮ ನೀಡಿದ್ದಾರೆ. ದಕ್ಷಿಣಭಾರತ ಸಾಂಸ್ಕೃತಿಕ ಕೇಂದ್ರ ತಂಜಾವೂರು ಇವರುಗಳ ಸಹಯೋಗದಲ್ಲಿ ಗುರುಶಿಷ್ಯ ಪರಂಪರೆಯ ಯೋಜನೆಯ ಅಡಿಯಲ್ಲಿ ೧೮

ವರ್ಷಗಳಿಂದ ಸತತವಾಗಿ ಕರಪಾಲ ಕಲೆಯನ್ನು ಶಾಸ್ತ್ರೀಯವಾಗಿ ಕಲಿಸುತ್ತಾ ಸುಮಾರು ಹತ್ತು ಶಿಷ್ಯರನ್ನು ತಯಾರಿಸಿರುವ ಹಿರಿಮೆಯೂ ಇವರದು.

ಸುಮಧುರ ಕಂಠ, ಆಕರ್ಷಕ ಉಡುಗೆ-ತೊಡುಗೆ, ಸಂಭಾಷಣಾ ಚತುರತೆಗಳಿಂದಾಗಿ 'ಕರ್ನಾಟಕದ ಏಕಮೇವ ಕರಪಾಲ ಕಲಾವಿದ' ಹಿರಿಮೆಗೆ ಪಾತ್ರರಾಗಿರುವುದು ಇವರ ವಿಶೇಷ. ಸ್ವಗ್ರಾಮದಲ್ಲಿ ಸಂಗಮೇಶ್ವರ ಕರಪಾಲ ಮಂಡಲಿಯನ್ನು ಸ್ಥಾಪಿಸಿ, ಜನಪದ ಕಲಾಪ್ರಸಾರದಲ್ಲಿಯೂ ತೊಡಗಿದ್ದಾರೆ.

ಜಿ. ಪಿ. ಬಸವರಾಜು,
ಗಾಣದಾಳು - ೫೭೨ ೨೧೮
ಚಿಕ್ಕನಾಯಕನಹಳ್ಳಿ ತಾಲೂಕು.

# ಕದಿರೆಹಳ್ಳಿ ಶ್ರೀ ಸಿರಿಯಪ್ಪ

ತುಮಕೂರು, ಚಿತ್ರದುರ್ಗ, ಗೌರಿಬಿದನೂರು, ಚಿಕ್ಕಬಳ್ಳಾಪುರ, ಬೆಂಗಳೂರು ಗ್ರಾಮಾಂತರ ಜಿಲ್ಲೆಗಳಲ್ಲಿ ಯುವಕ ಸಂಘವೂ ಸೇರಿದಂತೆ, ಹವ್ಯಾಸಿ ಕಲಾವಿದರಿಗೆ ಶಾಸ್ತ್ರೀಯ ರೂಪದಲ್ಲಿ ಕೋಲಾಟ ಕಲಿಸುತ್ತ, ಕೋಲಾಟದ ಗುರುವಾಗಿರುವ ಶ್ರೀ ಸಿರಿಯುಪ್ಪ ಅದ್ಭುತ ಹಾಡುಗಾರ. ಕೋಲಾಟವನ್ನು ಸಂಪೂರ್ಣ ಸಾಕ್ಷರತಾ ಆಂದೋಲನದಲ್ಲಿ ತೊಡಗಿಸಿಕೊಂಡು ಪಾವಗಡ ಸಾಕ್ಷರತಾ ಸಂಪನ್ಮೂಲ ಕಲಾವಿದರಾಗಿಯೂ ಕಾರ್ಯ ನಿರ್ವಹಣೆ ಮಾಡಿರುವುದು ಇವರ ವಿಶೇಷತೆ. ಸರ್ಕಾರದ ವಿವಿಧ ಯೋಜನೆಗಳ ಉಪಯೋಗ, ಪಡೆಯುವ ವಿಧಾನ ಮೊದಲಾದ ಯೋಜನೆಯ ವಿವರಗಳನ್ನು ಕೋಲಾಟದ ಪದಗಳ ಮೂಲಕ ಜನಸಾಮಾನ್ಯರಲ್ಲಿ ಅರಿವಿನ ಆಂದೋಲನ ಮೂಡಿಸಿದ ಹಿರಿಮೆಗೆ ಪಾತ್ರರಾಗಿದ್ದಾರೆ.

ತಮ್ಮ ಬಾಲ್ಯದ ಇಪ್ಪತ್ತು ವರ್ಷಗಳಿಂದ ಸಂಪೂರ್ಣ ಬದುಕನ್ನು ಕೋಲುಪದ, ಜನಪದ ಸಂಗೀತ, ಲಾವಣಿ, ಕುಣಿತ, ಗಾದೆ, ಒಗಟುಗಳ ಪ್ರಸಾರಗಳಿಗಾಗಿ ತೊಡಗಿಸಿಕೊಂಡಿದ್ದಾರೆ.

ಕಾಡುಗೊಲ್ಲ ಜನಾಂಗವಾದರೂ ಕುರಿ ಪೋಷಣೆಯನ್ನು ಬಿಟ್ಟು ವ್ಯವಸಾಯವನ್ನು ನಚ್ಚದೆ ಹಾಡು, ನೃತ್ಯಗಳಿಗಾಗಿ ಇಡೀ ಬದುಕನ್ನು ಮೀಸಲಿಟ್ಟಿರುವುದು ಇವರ ವಿಶೇಷ.

ಸಿರಿಯಣ್ಣ, ಕಾಡುಗೊಲ್ಲರ ಬೇರೆ ಬೇರೆ ಕತೆ, ಪುರಾಣ ಹಾಗೂ ಸಾಂಸ್ಕೃತಿಕ ವೀರರನ್ನು ಕುರಿತು ಕಾವ್ಯ ಹಾಡುತ್ತಾರೆ. ವೀರಬುಡಪ್ಪನ ಕತೆ, ಚಿತ್ರದೇವರ ಕತೆ, ಕ್ಯಾತೆ-ಪಾತೆ ದೇವರ ಕತೆಗಳನ್ನು ಹಾಡುವುದು ಇವರ ವಿಶೇಷವಾಗಿದೆ. ಜೊತೆಗೆ ಕರೆದಾಗ ಬಂದು ಈ ಕಾವ್ಯವನ್ನು ಹಾಡುವುದರ ಜೊತೆಗೆ, ಅಪೇಕ್ಷೆಪಟ್ಟರೆ ವಾರದಲ್ಲಿ

ಕಲಿಸುತ್ತೇವೆನ್ನುವುದು ಇವರ ಹಾಡಿನ ಬಗ್ಗೆ ಸಾಧಿಸಿರುವ ಹಿಡಿತವನ್ನು ಹೇಳುತ್ತದೆ.

೧೯೫೦ ರಿಂದಲೂ ಯುವಜನ ಮೇಳ, ಸಾಂಸ್ಕೃತಿಕ ಉತ್ಸವ ಮೊದಲಾದ ಸಮಾರಂಭಗಳಲ್ಲಿ ಆಸಕ್ತಿಯಿಂದ ಸ್ವಪ್ರೇರಣೆಯಿಂದ ಹಾಡುವುದು ಇವರ ಹವ್ಯಾಸ. ಮುಂದೆ ಇದೇ ಹವ್ಯಾಸ ರಾಜ್ಯ ಮಟ್ಟದ ಹಲವು ಸಾಂಸ್ಕೃತಿಕ ಉತ್ಸವಗಳಲ್ಲಿ ಭಾಗವಹಿಸಲು ಪ್ರೇರಕವಾಯಿತು. ಜೊತೆಗೆ ಯುವಜನ ಮೇಳಗಳ ಮೂಲಕ ಜನಮೆಚ್ಚುಗೆಯನ್ನು, ಪ್ರೋತ್ಸಾಹವನ್ನು ಪಡೆಯುವಲ್ಲಿ ಯಶಸ್ವಿಯಾಯಿತು. ಸುಮಾರು ಒಂದು ನೂರಕ್ಕೂ ಹೆಚ್ಚು ಜನರಿಗೆ ಕೋಲಾಟದ ಪದಗಳನ್ನು ಹೇಳಿಕೊಟ್ಟಿರುವುದು ಇವರ ವಿಶೇಷವಾಗಿದೆ. ಪಾವಗಡದ ಬಹುತೇಕ ಸಾಂಸ್ಕೃತಿಕ ತಂಡಗಳಲ್ಲಿ ನಾಯಕತ್ವದ ಜೊತೆಗೆ ಹಿರಿಯ ಕಲವಿದರಾಗಿ ಕೋಲಾಟಕ್ಕೆ ಮಾರ್ಗದರ್ಶನ ಮಾಡಿರುವುದು ಇವರ ಹೆಗ್ಗಳಿಕೆಯಾಗಿದೆ. ಪಾವಗಡದ ಶನಿಮಹಾತ್ಮ ದೇವಸ್ಥಾನ ಟ್ರಸ್ಟ್, ತಾಲೂಕು ಆಡಳಿತ ಸೇರಿದಂತೆ ಜಿಲ್ಲೆಯ ಹಲವು ಸಾಂಸ್ಕೃತಿಕ ಸಂಘ-ಸಂಸ್ಥೆಗಳು ಇವರನ್ನು ಗೌರವಿಸಿದೆ.

೧೯೯೩ನೇ ಸಾಲಿನಲ್ಲಿ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಕಲಾವಿದ ಪ್ರಶಸ್ತಿ ನೀಡಿ ಗೌರವಿಸಿರುವುದು, ಈ ಕಲಾವಿದನಿಗೆ ನೀಡಿದ ಬಹು ದೊಡ್ಡ ಗೌರವವಾಗಿದೆ.

**ಸಿರಿಯಪ್ಪ, ಕದಿರೆಹಳ್ಳಿ,**
**ಎಸ್. ಆರ್. ಪಾಳ್ಯ ಅಂಚೆ,**
**ಪಾವಗಡ ತಾಲೂಕು.**

# ದ್ವಾರನಕುಂಟೆ ಪಾತಲಿಂಗಪ್ಪ

ತುಮಕೂರು ಜಿಲ್ಲೆ ಸಿರಾ ತಾಲೂಕಿನ ಪಾತಲಿಂಗಪ್ಪ ಬಹುಮುಖಿ ವ್ಯಕ್ತಿತ್ವದ ಚೌಡಿಕೆ ಕಲಾವಿದ. ಕಳೆದ ೭೦ ವರ್ಷಗಳಿಂದಲೂ ಚೌಡಿಕೆ ಕಲೆಯನ್ನು ಬದುಕಿನ ಭಾಗವೆಂದು ನಂಬಿ, ವೃತ್ತಿ ಕಲೆಯನ್ನಾಗಿಸದೆ, ಹವ್ಯಾಸಿ ಕಲೆಯನ್ನಾಗಿಸಿ ಕರ್ನಾಟಕದ ಉದ್ದಗಲಕ್ಕೂ ಚೌಡಿಕೆ ಕಲೆಯನ್ನು ಪ್ರಸಾರ ಮಾಡಿದವರು.

ಕೂಲಿಮಠದಲ್ಲಿ ಎರಡನೇ ತರಗತಿಯವರೆಗೆ ಓದಿರುವ ಇವರು, ಅಮರಕೋಶ, ರೇಣುಕೆ ಎಲ್ಲಮ್ಮ, ದೇವಿಪುರಾಣ ಮೊದಲಾದ ಧಾರ್ಮಿಕ ಕಲಾಕೃತಿಗಳನ್ನು ಕುರಿತು ಸಮಗ್ರವಾಗಿ ಹಾಡುವುದು, ರೇಣುಕೆ ಎಲ್ಲಮ್ಮನ ಕತೆ ಹಾಡುವುದು ಇವರ ವಿಶೇಷ.

ದ್ವಾರನಕುಂಟೆಯ ರೈತ ಕುಟುಂಬದಲ್ಲಿ ಜನಿಸಿದ ಇವರು, ಕಂಬಳಿ ನೇಯ್ಗೆ ಇವರ ಕುಲ ಕಸುಬು. ಕೃಷಿ ಮೂಲ ರೈತಾಪಿ ಬದುಕು. ಆದರೆ ನೇಯ್ಗೆಯ ಜೊತೆಗೆ ಚೌಡಿಕೆಯನ್ನು ಪ್ರಧಾನ ನೆಲೆಯನ್ನಾಗಿ ಮಾಡಿಕೊಂಡು ರಾಜ್ಯಾದ್ಯಂತ ಸುತ್ತಿದವರು.

ಯಕ್ಷಗಾನ, ತತ್ವಪದ, ಕೋಲಾಟ ಪದಗಳನ್ನು ಸೊಗಸಾಗಿ ಹಾಡುವ ಪಾತಲಿಂಗಪ್ಪ, ಯಕ್ಷಗಾನ ಕಲಾವಿದರು. ಮಹಿಷಾಸುರ, ರಾವಣ, ಶ್ರೀರಾಮ, ಭೀಮ ಈ ಮೊದಲಾದ ಪಾತ್ರಗಳಿಂದ ಜನಾದರ ಗಳಿಸಿದ ಹಿರಿಯ ಕಲಾವಿದರು.

ಇವರ ಚೌಡಿಕೆ ವಾದನಕ್ಕೆ ಸರಿಜೋಡಿಯಾದವರು ಡಿ. ಕೆ. ಮಹಲಿಂಗಪ್ಪನವರು. ಕರೇರಂಗಪ್ಪನವರ ಮಗನಾದ ಮಹಲಿಂಗಪ್ಪ, ಪಾತಲಿಂಗಪ್ಪನವರಿಗೆ ಚೌಡಿಕೆಯ ಶಿಷ್ಯ ಗೆಳೆಯ, ಸಖ ಎಲ್ಲವೂ ಆಗಿದ್ದರು.

ಕರ್ನಾಟಕ ಸರ್ಕಾರದ ಹಲವು ಸಾಂಸ್ಕೃತಿಕ ಸಭೆ, ಸಮಾರಂಭಗಳಲ್ಲಿ ಆಹ್ವಾನಿತ ಕಲಾವಿದರಾಗಿ ಹಾಡುತ್ತಿದ್ದ ಚೌಡಿಕೆ ಪಾತಲಿಂಗಪ್ಪ, ಸಿರಾ, ಹಿರಿಯೂರು, ಧರ್ಮಪುರ,

ಕೊರಟಗೆರೆ, ಮಧುಗಿರಿ, ಪಾವಗಡ ಇಲ್ಲೆಲ್ಲಾ ಎಲ್ಲಮ್ಮದೇವಿಯ ಭಕ್ತರ ಮನೆಯಲ್ಲಿ ರಾತ್ರಿಯಿಂದ ಬೆಳಗಿನ ತನಕ ದೇವಿಕತೆ ಮಾಡುತ್ತಿದ್ದ, ಅಪಾರ ಜನಮೆಚ್ಚಿನ ಕಲಾವಿದರಾಗಿದ್ದರು.

ಕಲ್ಪತರು ಉತ್ಸವ ಮಧುಗಿರಿ, ದುರ್ಗದ ಉತ್ಸವ, ಚಿತ್ರದುರ್ಗ, ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಚಿತ್ರದುರ್ಗ ಜಿಲ್ಲೆ ಹರ್ತಿಕೋಟೆ ಹಾಗೂ ಚಳ್ಳಕೆರೆ ತಾಲೂಕು ಪರಶುರಾಮಪುರ ಹಾಗೂ ಪಾವಗಡದಲ್ಲಿ ನಡೆದ ಗಡಿನಾಡ ಜಾನಪದ ಉತ್ಸವ ಸಮಾರಂಭಗಳಲ್ಲಿ ಭಾಗವಹಿಸಿದ್ದರು. ಇವರ ಹಾಡುಗಳನ್ನು ಹೆಚ್. ಎಲ್. ನಾಗೇಗೌಡ ಸಂಗ್ರಹಿಸಿದ್ದಾರೆ. ಆದರೆ 'ಪುಸ್ತಕ ರೂಪದಲ್ಲಾಗಲೀ ಅಥವಾ ನನ್ನ ಹೆಸರಿನ ಪದ್ಯವಾಗಲಿ ಬರಲಿಲ್ಲ ಎನ್ನುವುದು, ನನ್ನ ಹಾಡು ವ್ಯರ್ಥ, ಎಂಬ ಕೊರಗು ಸದಾ ವ್ಯಕ್ತಪಡಿಸತ್ತಲೇ, ಕರೆದಾಗ, ಸಮಯ ಸಿಕ್ಕಷ್ಟು ಕಾಲ ಅತ್ಯಂತ ಸೊಗಸಾಗಿ, ಯಾವುದೇ ಬಿಗುಮಾನ-ಹೆಗ್ಗಳಿಕೆ ಇಲ್ಲದೆ ಹಾಡುವ ಸಮಯಾನುಸಾರ ಸಂಭಾವನೆಯನ್ನು ನಿರೀಕ್ಷಿಸದೆ ಹಾಡುತ್ತಿದ್ದ ಅಪರೂಪದ ಕಲಾವಿದರು.

ಪಾತಲಿಂಗಪ್ಪನವರು ೨೦೦೬ನೇ ಜುಲೈನಲ್ಲಿ ಬೆಳಗಾವಿ ಜಿಲ್ಲೆಯ ಸವದತ್ತಿಯಲ್ಲಿ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಹತ್ತುದಿನಗಳ ಕಾಲ ನಡೆಸಿದ, ಚೌಡಿಕೆ ಕಲಾವಿದರ ಕಮ್ಮಟದಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ, ಶಿಬಿರಾರ್ಥಿಗಳಿಗೆ ಚೌಡಿಕೆ ಪದ ಹಾಗೂ ಚೌಡಿಕೆ ವಾದ್ಯ ನುಡಿಸುವುದನ್ನು ಹೇಳಿಕೊಟ್ಟವರು. ಇವರ ಜೊತೆಗೆ ಡಿ. ಕೆ. ಮಹಲಿಂಗಪ್ಪನವರೂ ಭಾಗವಹಿಸಿದ್ದರು.

ಜಾನಪದಲೋಕ, ದಸರಾ ಉತ್ಸವ, ಆದಿಚುಂದನಗಿರಿ ಉತ್ಸವ, ಚಿಕ್ಕನಾಯಕನಹಳ್ಳಿ ಚೌಡಿಕೆ ಬಳಗದ ಗೌರವವೂ ಇವರಿಗೆ ಸಂದಿವೆ. ಚೌಡಿಕೆ ನುಡಿಸುತ್ತಲೇ ಏಕಾಂತದಲ್ಲಿ ಏಕಾಂತವಾದ, ಧ್ಯಾನಸ್ಥ ಸ್ಥಿತಿಯ ಪಾತಲಿಂಗಪ್ಪನವರಿಗೆ ಇಬ್ಬರು ಗಂಡುಮಕ್ಕಳು, ಒಬ್ಬಳು ಮಗಳು. ಮಗ ನಾಗರಾಜ್ ಶಿಕ್ಷಕ, ಇನ್ನೊಬ್ಬರು ರೈತಾಪಿ. ಇವರ್‍ಯಾರೂ ಚೌಡಿಕೆ ಮುಂದುವರಿಸದಿದ್ದುದು ಪಾತಲಿಂಗಪ್ಪ ಅವರಿಗೆ ಅಸಮಾಧಾನ ತಂದಿದೆ. ಸಜ್ಜನಿಕೆ, ಶ್ರದ್ಧೆ, ಸಂಭಾವ್ಯ ಕಲಾವಿದ ಪಾತಲಿಂಗಪ್ಪ ೨೦೦೬ನೇ ಡಿಸೆಂಬರ್ ೮ ರಂದು ವಿಧಿವಶರಾದರು. ಇವರ ಸಾವಿನ ಸುದ್ದಿ ತಿಳಿದ ಗೆಳೆಯ ಕಲಾವಿದ ಮಹಲಿಂಗಯ್ಯ ವಾರದೊಪ್ಪತ್ತಿನಲ್ಲಿ ಸಾವನ್ನಪ್ಪಿದರು. ಚೌಡಿಕೆ ಕಲೆಯ ಅಪೂರ್ವ ಕಲಾಕುಡಿಗಳು ಒಂದೇ ತಿಂಗಳಲ್ಲಿ ವಿಧಿವಶರಾದದ್ದು ವಿಪರ್ಯಾಸ.

ದ್ವಾರನಕುಂಟೆ ಪಾತಲಿಂಗಪ್ಪ,
ದ್ವಾರನಕುಂಟೆ,
ಸಿರಾ ತಾಲೂಕು, ತುಮಕೂರು ಜಿಲ್ಲೆ.

# ಚೌಡಿಕೆ ಎಲ್ಲಯ್ಯ

ಸವದತ್ತಿ ಎಲ್ಲಮ್ಮನ ಭಕ್ತರನ್ನು ಚೌಡಿಕೆಯವರು ಎನ್ನುತ್ತಾರೆ. ಇವರು ಹಾಡಿನೊಂದಿಗೆ ಬಳಸುವ ವಾದ್ಯವೇ ಚೌಡಿಕೆ. ಚೌಡಿಕೆಯವರಿಗೆ ಎಲ್ಲಮ್ಮನ ಹೆಸರಿನಲ್ಲಿ, ದೇವಸ್ಥಾನಗಳಲ್ಲಿ ದೀಕ್ಷೆಯಾಗಿರುತ್ತದೆ. ಇವರು ಎಲ್ಲಮ್ಮನ ಮಹಿಮೆಯನ್ನು ಸಾರುತ್ತಾ, ಎಲ್ಲಮ್ಮನ ಪೂಜೆಗಳಲ್ಲಿ ಭಾಗವಹಿಸುತ್ತಾ, ಕಥೆ ಮಾಡುತ್ತಾ ಕಲಾಸೇವೆ ಮಾಡುತ್ತಾರೆ. ಮಾರಮ್ಮ, ಎಲ್ಲಮ್ಮ ಈ ಮೊದಲಾದ ದೇವತೆಗಳನ್ನು ಕುರಿತು ಕಾವ್ಯ ಹಡುತ್ತಾರೆ. ಕುಣಿದು ಮೇಳವನ್ನೂ ನಡೆಸುತ್ತಾರೆ. ಈ ಬಗೆಯ ಪುರುಷ ಚೌಡಿಕೆಯವರು ವಿಶೇಷವಾದಿ ಮಧ್ಯ ಕರ್ನಾಟದಲ್ಲಿ ವ್ಯಾಪಕವಾಗಿ ಕಂಡುಬರುತ್ತಾರೆ. ಚಿಕ್ಕ ತುರುವೇಕೆರೆಯ ಚೌಡಿಕೆ ಎಲ್ಲಯ್ಯ ಈ ಸಂಪ್ರದಾಯಕ್ಕ ಸೇರಿದ ಹಿರಿಯ ಕಲಾವಿದ.

ತುಮಕೂರು ಜಿಲ್ಲೆಯ ತುರುವೇಕೆರೆ ತಾಲೂಕಿನ ಚಿಕ್ಕತುರುವೇಕೆರೆ ಗ್ರಾಮದ ಆದಿಕರ್ನಾಟಕ ಜನಾಂಗಕ್ಕೆ ಸೇರಿದ ಎಲ್ಲಯ್ಯ, ೧೯೦೮ರಲ್ಲಿ ಜನಿಸಿದವರು. ತಂದೆ ಚಿಕ್ಕ ಎಲ್ಲಯ್ಯ ಗುಬ್ಬಿ ತಾಲೂಕು ಅರೆಯೂರು ಚೌಡಿಕೆ ಎಲ್ಲಯ್ಯ ಇವರಿಂದ ಚೌಡಿಕೆ ಕಲಿತರು. ಮೇಳ ನಡೆಸುವುದನ್ನು ತಂದೆ ಚಿಕ್ಕ ಎಲ್ಲಯ್ಯ ಅವರಿಂದ ಕಲಿತರು. ಇವರ ಮಗ ಮಸಿಯಪ್ಪನೂ ತಂದೆಯಿಂದ ಚೌಡಿಕೆ ಕಾವ್ಯ-ವಾದ್ಯ ಕಲಿತು ಕತೆ ಮಾಡುತ್ತಾರೆ.

ಎಲ್ಲಯ್ಯನವರು ಹತ್ತಕ್ಕೂ ಹೆಚ್ಚು ಕಾವ್ಯಗಳನ್ನು ಹಾಡುತ್ತಾರೆ. ವಿಶೇಷವಾಗಿ ಚೌಡಿಕೆ ಪಂಥದ ಎಲ್ಲಮ್ಮ, ಮಾರಿ ಕುರಿತ ಕಾವ್ಯ ಇವುಗಳ ಜೊತೆಗೆ ತರೀಕೆರೆ ಸರ್ಜಪ್ಪನಾಯಕರನ್ನು ಕುರಿತು ಕಾವ್ಯ ಹಾಡುತ್ತಿದ್ದರು. ಕರಪಾಲ ಪರಂಪರೆಯ ಕಾಡುಸಿದ್ದಮ್ಮ, ನೀಲಕಂಠ ರೂಪವತಿ, ಬಸವಕುಮಾರ, ಲೋಹಿತಕುಮಾರ ಈ ಮೊದಲಾದ ಕಾವ್ಯಗಳು ಇವರಿಗೆ ಲೌಕಿಕ ಕಾವ್ಯಗಳು. ಈ ಕಾವ್ಯಗಳನ್ನು ಚೌಡಿಕೆ ಪರಂಪರೆಯಲ್ಲಿ ಹಾಡುವುದು ಇವರ ವಿಶೇಷ. ಮೂವರು ಸಹ ಕಲಾವಿದರೊಂದಿಗೆ

ಮೇಳ ಮಾಡುವುದು ತುರುವೇಕೆರೆ, ತಿಪಟೂರು ಭಾಗಗಳಲ್ಲಿ ವಿಶೇಷವಾಗಿತ್ತು. ಚೌಡಿಕೆ ಹಿಡಿದ ಗುರುವಾಗಿ ಮಧ್ಯ ನಿಂತು, ಇದನ್ನು ಬಾರಿ ಚೌಡಿಕೆ ಎನ್ನುತ್ತಾರೆ. ಸುತ್ತ ಇಬ್ಬರು ಸಹಕಲಾವಿದರು ಸುತ್ತ ಕುಣಿಯುತ್ತಾ, ಶೃತಿ ಚೌಡಿಕೆ ಬಾರಿಸುತ್ತಾ ಹಿಮ್ಮೇಳ ಮಾಡುತ್ತಾರೆ. ಹಾಡಿದ ಮೇಲೆ ಕಥೆಯ ನಿರೂಪಣೆಯನ್ನು ಎಲ್ಲಯ್ಯ ಸೊಗಸಾಗಿ ನೀಡುತ್ತಿದ್ದರು.

ಎಲ್ಲಯ್ಯ ಕರ್ನಾಟಕ ಚೌಡಿಕೆ ಸಂಪ್ರದಾಯದ ಶ್ರೇಷ್ಠ ಕಲಾವಿದರಾಗಿದ್ದರು. ೧೯೬೫ರ ಸುಮಾರಿಗೆ ಜಾನಪದ ವಿದ್ವಾಂಸ ವಲಯದಲ್ಲಿ ಗುರುವೆನಿಸಿಕೊಂಡಿದ್ದ ಎಲ್ಲಯ್ಯ ಹಾಡಿದ ಚೌಡಿಕೆ ಕಾವ್ಯವನ್ನು ಡಾ. ಜಿಶಂಪ 'ಕರುಣೆ ಕಣ್ಣ ತೆರೆಯೆ' ಎಂಬ ಹೆಸರಲ್ಲಿ ಸಂಗ್ರಹಿಸಿ, ಪ್ರಕಟಿಸಿದ್ದಾರೆ. ೧೯೬೭ರಲ್ಲಿ ತರೀಕೆರೆಯಲ್ಲಿ ನಡೆದ ಪ್ರಪ್ರಥಮ ಜನಪದ ಸಮ್ಮೇಳನದಲ್ಲಿ ಕಲಾ ಪ್ರದರ್ಶನ ನೀಡಿ ಅಪಾರ ಮೆಚ್ಚುಗೆ ಪಡೆದ ಕಲಾವಿದರು. ೧೯೭೧ರಲ್ಲಿ ನಾಗಮಂಗಲದಲ್ಲಿ ಜರುಗಿದ ಅಖಿಲ ಕರ್ನಾಟಕ ಮೂರನೇ ಜನಪದ ಸಮ್ಮೇಳನದಲ್ಲೂ ಇವರು ಭಾಗವಹಿಸಿದ್ದರು. ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ಕೇಂದ್ರದ ಜಾನಪದ ವಿಭಾಗದಲ್ಲಿ ಜನಪದ ಸಂದರ್ಶಕ ಅಧ್ಯಾಪಕ, ಕಲಾವಿದರಾಗಿಯೂ ಕಾರ್ಯಕ್ರಮ ನೀಡಿದ್ದಾರೆ.

ಆಕಾಶವಾಣಿಯ ಮೂಲಕ ಮಧ್ಯ ಕರ್ನಾಟಕದ ಚೌಡಿಕೆ ಕಾವ್ಯ ಪ್ರಕರಣವನ್ನು ಮೊದಲಿಗೆ ಪ್ರಸಾರ ಮಾಡಿದ ಹಿರಿಮೆಯೂ ಇವರಿಗೆ ಸಲ್ಲುತ್ತದೆ. ಇವರ ಸಾರ್ಥಕ ಜನಪದ ಪ್ರತಿಭೆಯನ್ನು ಸಾಧನೆಯನ್ನು ಗುರುತಿಸಿ ಡಾ. ಹೆಚ್. ಎಲ್. ನಾಗೇಗೌಡರ ಅಧ್ಯಕ್ಷತೆಯಲ್ಲಿ, ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಕಲಾವಿದ ಪ್ರಶಸ್ತಿ ನೀಡಿ ಗೌರವಿಸಿದೆ. ತೊಂಬತ್ತು ವರುಷ ಬದುಕಿ, ಎಪ್ಪತ್ತೈದು ವರ್ಷಗಳ ಸುದೀರ್ಘ ಕಲಾ ಸೇವೆ ಮಾಡಿದ ಹಿರಿಮೆಗೆ ಪಾತ್ರರಾಗಿದ್ದ ಎಲ್ಲಯ್ಯ ಈಗ ದಿವಂಗತರು. ಮಕ್ಕಳಾದ ಮಸಿಯಪ್ಪ ಈ ಕಲೆಯನ್ನು ಸಮರ್ಥವಾಗಿ ಮುಂದುವರಿಸುತ್ತಿದ್ದಾರೆ.

**ಚೌಡಿಕೆ ಎಲ್ಲಯ್ಯ**

**ಚಿಕ್ಕ ತುರುವೇಕೆರೆ, ತುರುವೇಕೆರೆ ತಾಲೂಕು.**

# ಸೂತ್ರದ ಗೊಂಬೆ ಸಿದ್ಧೇಗೌಡ

ತುಮಕೂರು ಜಿಲ್ಲೆ ಪ್ರಸಿದ್ಧವಾಗಿರುವ ಜನಪದ ಕಲೆಗಳಿಂದ, ರೋಮಾಂಚನ ಗೊಳಿಸಬಲ್ಲ ಹಲವಾರು ಕಲೆಗಳು ಈ ನೆಲದ ಸಿರಿಯಾಗಿವೆ. ಸೋಮನ ಕುಣಿತ, ಯಕ್ಷಗಾನ, ಬಯಲಾಟ, ಗಣೆ ಕಲೆ, ಕೋಲುಮೇಳ, ಗಾರುಡಿ ಗೊಂಬೆ, ಹುಲಿವೇಶ, ತೊಗಲು ಗೊಂಬೆ, ಸೂತ್ರದ ಗೊಂಬೆ ಜಿಲ್ಲೆಯ ಪ್ರಮುಖ ಜನಪದ ಕಲೆಗಳು. ಕರಪಾಲ ಕಲೆಯೂ ವಿಶೇಷವಾಗಿ ಈ ಜಿಲ್ಲೆಯ ಸಾಂಸ್ಕೃತಿಕ ಲೋಕಕ್ಕೆ ಹೊಸ ಅಯಾಮವನ್ನಿತ್ತಿದೆ.

ಸೂತ್ರದ ಗೊಂಬೆ ಈ ಜಿಲ್ಲೆಯ ವಿರಳ ಕಲೆ. ಈ ವಿರಳ ಕಲೆಯನ್ನು ನಾಡಿನಾದ್ಯಂತ ಪ್ರದರ್ಶಿಸಿ, ವೈವಿಧ್ಯ ರೂಪ ನೀಡಿದವರು ತುಮಕೂರು ತಾಲೂಕು ವೀರನಾಯ್ಕನಹಳ್ಳಿಯ ಸಿದ್ಧೇಗೌಡರು. ತಮ್ಮ ಕೃಷಿ ಕಾಯಕದ ನಡುವೆಯೂ, ಮನೆಯ ಹಿರಿಯ ಮಗನಾದರೂ ಈ ಕಲೆಯನ್ನು ಉಳಿಸಬೇಕೆಂಬ ಅಚಲ ಶ್ರದ್ಧೆ, ನಿಷ್ಠೆ, ಪರಿಶ್ರಮಗಳಿಂದ ಸೂತ್ರದ ಗೊಂಬೆ ಕಲೆಯನ್ನು ಜತನದಿಂದ ಕಾಪಾಡಿಕೊಂಡು ಬಂದವರು ಶ್ರೀ ಸಿದ್ದೇಗೌಡರು.

ಕರಿಬಂಟ, ಜಾಂಬವ, ಲವಕುಶ, ದುಶ್ಯಾಸನ ಕಥೆ ಈ ಮೊದಲಾದ ಕಥಾ ಪ್ರಸಂಗಗಳಿಗೆ ಗೊಂಬೆಯ ಮೂಲಕ ಜೀವ ತುಂಬುತ್ತಿರುವುದು ಇವರ ವಿಶೇಷ. ವಿಶೇಷವಾಗಿ ಶ್ರೀರಾಮ, ಲಕ್ಷ್ಮಣ, ದಶಕಂಠ, ಕೀಚಕ, ಜಟಾಯು ಈ ತರಹದ ವಿಶಿಷ್ಟ ಪಾತ್ರಗಳನ್ನು ಆ ಪಾತ್ರಕ್ಕೆ ಒಪ್ಪುವ ಹಾಗೆ ಗೊಂಬೆ ತಯಾರಿಸಿ, ಅದಕ್ಕೆ ಸಾಂದರ್ಭಿಕ ಕತೆ ನಿರ್ಮಿಸಿ, ಪ್ರದರ್ಶಿಸುವುದು ಇವರ ವಿಶೇಷ. ಸಿದ್ದೇಗೌಡರಿಗೆ ವಯಸ್ಸಾದಂಥೆ ಅವರ ಮಗ ಸಿದ್ದಲಿಂಗಪ್ಪ ಈ ಕಲೆಯನ್ನು ಸಮರ್ಥವಾಗಿ ಮುಂದುವರಿಸಿದ್ದಾರೆ. ತನ್ನ ತಾತ ಬೋರೇಗೌಡ, ತಂದೆ ಸಿದ್ದೇಗೌಡ, ಗುರು ವೀರಾಚಾರ್ ಇವರ ಪರಂಪರೆಯನ್ನು ಸಮರ್ಥವಾಗಿ ಎತ್ತಿಹಿಡಿದವರು. ಸಿದ್ಧಗಂಗಾ ವಸ್ತುಪ್ರದರ್ಶನ ಮಂಟಪದಲ್ಲಿ ಪ್ರತಿ

ವರ್ಷವೂ ಸೂತ್ರದ ಗೊಂಬೆ ನಾಟಕ ಪ್ರದರ್ಶನ, ಮೈಸೂರಿನ ದಸರಾ ವಸ್ತುಪ್ರದರ್ಶನ ಕಲಾ ಮಳಿಗೆಯಲ್ಲಿ ಕಲಾ ಪ್ರದರ್ಶನ, ಮೈಸೂರು ವಿಶ್ವವಿದ್ಯಾಲಯ, ರವೀಂದ್ರ ಕಲಾಕ್ಷೇತ್ರ ಬೆಂಗಳೂರು ಬಾಲಭವನ ಇಲ್ಲೆಲ್ಲಾ ಸೂತ್ರದ ಗೊಂಬೆ ಪ್ರದರ್ಶಿಸಿದ ಹಿರಿಮೆಗೆ ಪಾತ್ರರಾಗಿರುವ ಸಿದ್ದೇಗೌಡರು ಈಗಿಲ್ಲವಾಗಿದ್ದಾರೆ. ತಮ್ಮ ಬದುಕಿನ ತೊಂಬತ್ತು ವರ್ಷಗಳ ಕಾಲ ನಿರಂತರವಾಗಿ ಗೊಂಬೆ ಪ್ರದರ್ಶನವದಲ್ಲಿಯೇ ಕಳೆದ ಸಿದ್ದೇಗೌಡರು ಯಾವುದೇ ಪ್ರಶಸ್ತಿ ಪುರಸ್ಕಾರಕ್ಕೆ ಆಶೆಪಟ್ಟವರಲ್ಲ, ಅಪ್ಪಟ ಹಳ್ಳಿಗಾಡಿನ, ಈ ಕಲೆಯನ್ನು ಹಳ್ಳಿಗಳಲ್ಲಿ ಪ್ರದರ್ಶಿಸುತ್ತಾ, ರಾಮಾಯಣ, ಮಹಾಭಾರತ ಕಥಾನಕವನ್ನು ಪ್ರಸಾರ ಮಾಡಿದ ಹಿರಿಮೆ ಇವರಿಗೆ ಸಲ್ಲುತ್ತದೆ.

ಅತ್ಯುತ್ತಮ ಯಕ್ಷಗಾನ, ಭಾಗವತ ಕಲಾವಿದರೂ ಆಗಿದ್ದ ಸಿದ್ದೇಗೌಡರು ಗಂಡು ಪಾತ್ರಗಳಲ್ಲಿ ವಿಶೇಷ ಅಭಿನಯ ನೀಡುತ್ತಿದ್ದರು. ಶತಕಂಠ, ದುರ್ಯೋಧನ, ಭೀಮ, ಕರಿಭಂಟ ಇವರ ಅಭಿನಯದ ಪ್ರಮುಖ ಪಾತ್ರಗಳು. ಜಿಲ್ಲೆಯ ಸೂತ್ರದ ಗೊಂಬೆ ಕಲಾವಂತಿಕೆಗೆ ಮೆಚ್ಚಿ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ೧೯೮೫ ನೇ ಸಾಲಿನ ಪ್ರಶಸ್ತಿ ನೀಡಿ ಗೌರವಿಸಿದೆ.

ಸಿದ್ದೇಗೌಡ,
ವೀರನಾಯ್ಕನಹಳ್ಳಿ, ತುಮಕೂರು ತಾಲೂಕು.

# ಲಾವಣಿಕಾರ ಹೆಬ್ಬಾಕ ಕೆಂಪಯ್ಯ

ಜಾನಪದ ಗಾಯನ, ಅಭಿನಯ, ಪ್ರಸಾರ ಈ ಮೂರು ಪ್ರಕಾರಗಳಲ್ಲಿ ಕಳೆದ ಐವತ್ತು ವರ್ಷಗಳಿಂದಲೂ ಸಕ್ರಿಯವಾಗಿ ತೊಡಗಿಸಿಕೊಂಡಿರುವ ಹೆಬ್ಬಾಕ ಕೆಂಪಯ್ಯ ಮೂಲ ಸೊಗಡಿನ ಜನಪದ ಗಾಯಕರು.

ಇವರು ತುಮಕೂರು ತಾಲೂಕು ಕಸಬಾ ಹೆಬ್ಬಾಕ ಗ್ರಾಮದಲ್ಲಿ ರಂಗಭೂಮಿ ಹಾಗೂ ಯಕ್ಷಗಾನ ಕಲಾವಿದರಾಗಿದ್ದ ದಿ॥ ಹುಚ್ಚಮಲ್ಲಯ್ಯ ಮತ್ತು ಕೆಂಪಮ್ಮನವರ ಪುತ್ರರಾಗಿ ಜನಿಸಿದ ಕೆಂಪಯ್ಯನವರಿಗೆ ರಂಗಭೂಮಿಯ ನಂಟು ತನ್ನ ತಂದೆಯಿಂದಲೇ ಅಂಟಿಕೊಂಡಿತು. ೧೨ನೇ ವಯಸ್ಸಿನಲ್ಲಿ ದಕ್ಷ ಯಾಗದಲ್ಲಿ ಗೌರಿ ಪಾತ್ರ ಮಾಡಿದ ಇವರು, ಎಸ್ಸೆಸ್ಸಲ್ಸಿ ವಿದ್ಯಾಭ್ಯಾಸ ಮುಗಿಸಿದ ನಂತರ ಕಲಾರಂಗದಲ್ಲಿ ಖಾಯಂ ಸೇವಕರಾದರು. ನಂತರ ಇವರು ಅನೇಕ ನಾಟಕಗಳನ್ನು ಅಭಿನಯಿಸಿದರು. ಶ್ರೀಯುತರಿಗೆ ಹೆಸರು ತಂದುಕೊಟ್ಟ ನಾಟಕಗಳೆಂದರೆ ಹನ್ನೆರಡು ವರ್ಷಗಳ ಕಾಲ ಪದೇ ಪದೇ ಅಭಿನಯಿಸಿದ 'ಶನಿಮಹಾತ್ಮ' ನಾಟಕದ ಲೋಲಿಕೆ ಪಾತ್ರ, ದಾನಶೂರ ಕರ್ಣದ ಸ್ವಯಂಪ್ರಭೆ, ಬಸವರಾಜ ವಿಜಯದ ಸದಾನಂದ ಹಾಗೂ ಕುರುಕ್ಷೇತ್ರ ನಾಟಕದ ವಿದುರನ ಪಾತ್ರ ಮುಂತಾದವು. ತಂದೆಯಿಂದಲೇ ಯಕ್ಷಗಾನವನ್ನು ಕಲಿತು ಜಾನಪದ ಮತ್ತು ಲಾವಣಿ ಹಾಡುಗಳ ಬರವಣಿಗೆ ಹಾಗೂ ಹಾಡುಗಾರಿಕೆಯನ್ನು ಸ್ವಯಂ ಪ್ರಯತ್ನದಿಂದಲೇ ಕಲಿತ ಇವರು ಲಾವಣಿ ಕೆಂಪಯ್ಯ ಎಂಬ ಹೆಸರಿನಿಂದಲೇ ಪ್ರಸಿದ್ಧಿ ಪಡೆಯುವಷ್ಟರ ಮಟ್ಟಿಗೆ ಸಿದ್ಧಿಯನ್ನು ಸಾಧಿಸಿದ್ದಾರೆ. ಇವರು ಸುಮಾರು ೩೦ ವರ್ಷಗಳಿಂದ ಆರೋಗ್ಯ ಇಲಾಖೆ, ವಾರ್ತಾ ಮತ್ತು ಪ್ರಚಾರ ಇಲಾಖೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕನ್ನಡ ಸಾಹಿತ್ಯ ಪರಿಷತ್ತು, ನೆಹರು ಯುವಕೇಂದ್ರ, ಸಾಕ್ಷರ ಮಿತ್ರ, ಎನ್. ಎಸ್. ಎಸ್. ಕ್ಯಾಂಪ್‌ಗಳು ಮತ್ತು ಯುವಜನ ಮೇಳಗಳಲ್ಲಿ ಯಶಸ್ವಿ ಕಾರ್ಯಕ್ರಮಗಳನ್ನು ತುಮಕೂರು ಜಿಲ್ಲೆಯಲ್ಲದೆ, ಬೆಂಗಳೂರು, ಚಿತ್ರದುರ್ಗ ಮತ್ತು

ಕೋಲಾರ ಜಿಲ್ಲೆ ಮುಂತಾದವುಗಳಲ್ಲಿ ಕಾರ್ಯಕ್ರಮ ಕೊಟ್ಟ ಕೀರ್ತಿಗೆ ಪಾತ್ರರಾಗಿರುವ ಕೆಂಪಯ್ಯನವರು, ಇಂಪಾದ ಸ್ವರದಿಂದ ಹಾಡಿ ಜನಮನ ಗೆದ್ದಿದ್ದಾರೆ. ಈಗಲೂ ಸಹ ಸುಮಾರು ೭೦ ವರ್ಷ ವಯಸ್ಸಾದರೂ ಕಾರ್ಯಕ್ರಮಗಳನ್ನು ನೀಡುತ್ತಿರುವುದು ಅವರ ಕಲಾಪ್ರತಿಭೆ ಹಾಗೂ ಆಸಕ್ತಿಗೆ ಸಾಕ್ಷಿಯಾಗಿದೆ.

ಶ್ರೀಯುತರ ಪ್ರತಿಭೆಯನ್ನು ಗುರುತಿಸಿ ಸಾಕಷ್ಟು ಸಂಘ-ಸಂಸ್ಥೆಗಳು, ಶಾಲಾ ಕಾಲೇಜುಗಳು, ಸನ್ಮಾನ-ಸನ್ಮಾನಗಳನ್ನು ನೀಡಿ ಗೌರವಿಸಿವೆ. ಅವುಗಳಲ್ಲಿ ಮುಖ್ಯವಾದವುಗಳೆಂದರೆ ಯುವಜನ ಮತ್ತು ಕ್ರೀಡಾ ಇಲಾಖೆ, ವರದಕ್ಷಿಣೆ ವಿರೋಧಿ ವೇದಿಕೆ, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ಸಿದ್ಧಿವಿನಾಯಕ ಗ್ರಾಮಾಭಿವೃದ್ಧಿ ಸಂಸ್ಥೆ, ರಾಜಕುಮಾರ್ ಕನ್ನಡ ಅಭಿಮಾನಿಗಳ ಸಂಘ, ಚಾಮುಂಡೇಶ್ವರಿ ಗ್ರಾಮೀಣ ಜನಪದ ಯುವ ಕಲಾವೃಂದ, ಮಧುಗಿರಿ ದಂಡಿನ ಮಾರಮ್ಮ ಜಾತ್ರಾ ಉತ್ಸವ ಸಮಿತಿ ಮತ್ತು ಕನ್ನಡ ಸಾಹಿತ್ಯ ಸಮ್ಮೇಳನ ಮುಂತಾದವು. ಶ್ರೀಯುತರ ಲಾವಣಿಯ ಧ್ವನಿಸುರುಳಿಯಾದ ಜಾನಪದ ಲಾವಣಿಗಳು ಕೂಡ ಬಿಡುಗಡೆಯಾಗಿದೆ.

ಈ ಎಲ್ಲಾ ಅದ್ಭುತವಾದ ಗಾನಸಿರಿಯಿಂದ ಜನರ ದುಃಖ ದುಮ್ಮಾನಗಳನ್ನು ಹೋಗಲಾಡಿಸುತ್ತಾ ಗ್ರಾಮೀಣ ಪ್ರದೇಶಗಳಲ್ಲಿ ಸಾಂಸ್ಕತಿಕ ಚಟುವಟಿಕೆಗಳತ್ತ ಜನರನ್ನು ಸೆಳೆದು ಕಲೆಯ ಜೀವಂತಿಕೆಗೆ ಕಾರಣಕರ್ತರಾಗಿರುವ ಕೆಂಪಯ್ಯನವರಿಗೆ 'ಗಾನಕಲಾಕುಸುಮ' ಎಂಬ ಬಿರುದನ್ನು ನೀಡಿ ಕಲಾಕುಸುಮ ಸಂಘ ಗೌರವಿಸಿದೆ.

**ಹೆಚ್. ಕೆಂಪಯ್ಯ**
**ಹೆಬ್ಬಾಕ,**
**ಊರುಕೆರೆ ಅಂಚೆ, ತುಮಕೂರು ತಾಲೂಕು,**

# ಸೋಬಾನೆ ಹನುಮಕ್ಕ

ಬುಡಕಟ್ಟು ಸಂಸ್ಕೃತಿಯಲ್ಲಿ ಜನಪದ ಹಾಡುಗಾರಿಕೆ ಪ್ರಧಾನ ಬದುಕು. ಬೆಳಕು–ಬೈಗು ಹಾಡುತ್ತಲೇ ತಮ್ಮ ನಿತ್ಯದ ಕಾಯಕ ಮಾಡುವುದು ಇವರ ಬಹು ಮುಖ್ಯ ಹವ್ಯಾಸ. ಕುಟ್ಟುವ, ಬೀಸುವ, ಹೊಲದ ಕೆಲಸ, ಕಣದ ಕೆಲಸ ಶ್ರಮ–ಬೌದ್ಧಿಕ ಯಾವುದೇ ಕಾಯಕವಾದರೂ ಪದಗಳು ಮೊದಲು ನುಗ್ಗಬೇಕು. ನಂತರ ಕಾಯಕದ ಜಾಡು ಹಿಡಿಯುವುದು ಇವರ ಪ್ರಮುಖ ಗುಣ ನಡಾವಳಿಗಳು.

ತುಮಕೂರು ಜಿಲ್ಲೆಯ ಚಿಕ್ಕನಾಯಕನಹಳ್ಳಿ ತಾಲೂಕಿನ ಹೊಸೂರು ಗ್ರಾಮದ ಹಿರಿಯಜ್ಜಿ ಹನುಮಕ್ಕ ಈ ಸಂಸ್ಕೃತಿಗೆ ಹೇಳಿ ಮಾಡಿಸಿದ ನಿದರ್ಶನ. ತಂಗಿ ತಿಮ್ಮಲಕ್ಕ ಒಂದೇ ಊರಿನ ಕುಳಗಳು. ಕೊಟ್ಟಿದ್ದು, ಹುಟ್ಟಿದ್ದು ಇದೇ ಊರಲ್ಲಿ. ಕೂಲಿ ಕಾಸಿನ ಬಿಡುವಿನ ವೇಳೆಯಲ್ಲಿ ಹೆಂಗಸು, ಮಕ್ಕಳನ್ನೆಲ್ಲಾ ಹಟ್ಟಿಯ ಮುಂಭಾಗದಲ್ಲಿ ಕೂರಿಸಿಕೊಂಡು ಸಣ್ಣ ಸಣ್ಣ ಕತೆಯ ಮೂಲಕ ಜಾನಪದ ಸಂಸ್ಕೃತಿಯ ಪ್ರೀತಿ ಮೂಡಿಸುವ ಹನುಮಕ್ಕ ನಿಜ ಅರ್ಥದಲ್ಲಿ ಜಾನಪದ ವಾಹಿನಿಯಾಗಿ ಕಾಯಕ ಮಾಡುತ್ತಿರುವುದು ವಿಶೇಷವಾಗಿದೆ. ಬಾಲ್ಯದಲ್ಲಿಯೇ ಗಂಡನನ್ನು ಕಳೆದುಕೊಂಡಿದ್ದಾರೆ. 'ಉಟ್ಟ ಸೀರೆಯನ್ನು ಬಿಗಿಯಾಗಿಟ್ಟರೆ ಯಾರ ಹಂಗೇನು ಸ್ವಾಮಿ' ಎಂದು ಪ್ರಶ್ನಿಸುವ ತಿಮ್ಮಕ್ಕ ತನ್ನ ಅಕ್ಕ ಹನುಮಕ್ಕಗೆ ರಾಜ್ಯ ಜಾನಪದ ಅಕಾಡೆಮಿ ಬಹುಮಾನ ಬಂದಾಗ ಬೆಂಗಳೂರಿಗೆ ಹೋಗಿ ಬಂದ ಸಡಗರ, ಜಗಜಗಿಸುವ ಸಮಾರಂಭದ ಆಡಂಬರ, ಅಕ್ಕನಿಗೆ ನೀಡಿದ ಗೌರವ ಕಣ್ಣಮುಂದೆ ಇದೆ. 'ಹಳ್ಳಿಯ ಮುಕ್ಕನಿಗೆ ಇಷ್ಟೆಲ್ಲಾ ಗೌರವ ನೀಡಲಾಗುತ್ತದೆಯೇ ? ಎಂದೆಲ್ಲಾ ಪಿಳಪಿಳನೆ ಕಣ್ಣುಬಿಟ್ಟು ನೋಡಿದೆ ಸ್ವಾಮಿ' ಎಂದು ಎದೆತುಂಬಿ ಹೇಳುವ ತಿಮ್ಮಕ್ಕ ಅಕ್ಕನಿಂದ ಹಾಡು ಕಲಿತ ಬಗ್ಗೆ ಹೇಳುವುದಕ್ಕೆ ಯಾವುದೇ ನಿರ್ಬಂಧ ಇಲ್ಲದಿರುವ ಕತೆ, ಹಾಡುವ ಸಂದರ್ಭ, ಜನರ ಭಾವನಗೆ ಕಲಾವಿದರ ಸ್ಪಂದನ

ಇವನ್ನೆಲ್ಲಾ ಸೊಗಸಾಗಿ ಅರ್ಥವತ್ತಾಗಿ ವಿವರಿಸುವ ರೀತಿ ನಿಜವಾದ ಕ್ಷೇತ್ರ ಕಾರ್ಯತಜ್ಞನಿಗೆ ಮಾರ್ಗದರ್ಶಿ ಪಾಠವಾಗುತ್ತದೆ. ಅಷ್ಟೊಂದು ಜಾನಪದ ನಿಜ ಅರ್ಥದಿ ತಜ್ಞೆಯಾಗಿರುವುದು ವಿಶೇಷ.

ಹನುಮಕ್ಕ ತನ್ನ ತಾಯಿಯಿಂದ ಕಲಿತ ಪದಗಳು ಕಡಿಮೆ ಎಂದರೂ ಸಾವಿರ ಮೇಲಿದ್ದು ತಾನು ಕಲಿತವುಗಳು. ಈ ಎಲ್ಲವುಗಳನ್ನು ಹಾಡಲು ಕನಿಷ್ಠ ಒಂದು ತಿಂಗಳುಗಳ ಕಾಲವಾದರೂ ಬೇಕು ಎಂದು ಹೇಳುವ ದಾಷ್ಟ್ಯತೆ. ಈಕೆ ಜಾನಪದ ಹಾಡುಗಳ ಬಗೆಗೆ ಸಾಧಿಸಿರುವ ಹಿಡಿತ, ತನ್ನ ಗುಡಿಸಲ ಹಗೇವಿನಲ್ಲಿ ತುಂಬಿರುವ ಹಾಡುಗಳ ಸಾಮಗ್ರಿಯ ಒಂದು ಪುಟ್ಟ ರೂಪವಾಗುತ್ತದೆ.

ಹಳಿಯಾರು ಕೆಂಚಮ್ಮ, ಗುಣಸಾಗರಿ, ಚಿತ್ರದೇವರು, ಎತ್ತಪ್ಪ, ಕಾಟಮುಲಿಂಗ, ಮೈಲಾರ ದೇವರು, ಬೀರೇದೇವರ ಕತೆ, ಬಸವಣ್ಣನವರ ಪುರಾಣ, ಹರಳಯ್ಯನ ಕತೆ, ಕುಮಾರರಾಮನ ಕತೆ ಈ ಬಗೆಯ ದೀರ್ಘ ಕಥನ ಕಾವ್ಯಗಳು ಜೊತೆಗೆ, ಸೋಬಾನೆ ಪದ, ಬೀಗರ ಪದ, ಲಾಲಿ ಪದ, ಕೃಷಿ ಸಂಬಂಧಿ ಪದ, ಬೇಟೆ ಪದಗಳು, ಬೀಗರ ಜರಿಯುವ ಪದ ಹೀಗೆ ಒಪ್ಪವಾಗಿ, ಬಿಡಿಬಿಡಿಯಾಗಿ ಒಂದು ಪದಕ್ಕೂ ಇನ್ನೊಂದಕ್ಕೆ ಸಂಬಂಧವೇ ಇಲ್ಲದಷ್ಟು ಒಪ್ಪವಾಗಿ ಕಥನ ಕ್ರಿಯೆಗೆ ಪೂರಕವಾಗಿ ಸ್ಫುಟವಾಗಿ ಹಾಡುವ ಅಪರೂಪದ ಮಹಿಳೆ.

ಡಾ॥ ತೀನಂಶ್ರೀ, ಡಾ ॥ ಶಂಕರನಾರಾಯಣ, ಡಾ॥ ಚಿಕ್ಕಣ್ಣ ಯಣ್ಣೆಕಟ್ಟೆ ಈ ಮೂರೂ ತಲೆಮಾರಿನ ವಿದ್ವಾಂಸರು ಈಕೆಯ ಹಾಡುಗಳ ಪರಿಶೀಲನೆ ಸಂಗ್ರಹ ಮಾಡಿರುವುದು ವಿಶೇಷ. ಕರ್ನಾಟಕ ಸರ್ಕಾರ ೧೯೯೧ರಲ್ಲಿ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಪ್ರಶಸ್ತಿ ನೀಡಿ ಗೌರವಿಸಿರುವುದು ವಿಶೇಷವಾಗಿದೆ. ಈಗ ದಿವಂಗತರು.

## ಮಾರನಹಳ್ಳಿ ಸಿದ್ಧೇಗೌಡ

ಪಾಪಣ್ಣ ತಾತನೆಂದೇ ಪ್ರೀತಿಯಿಂದ ಕರೆಯಲ್ಪಡುವ ೧೦೦ ವಸಂತಗಳನ್ನು ಪೂರೈಸಿಯೂ ಸರಸರನೆ ನಡೆದಾಡುತ್ತ, ಜನಪದ ಸಂಗೀತ, ಭಜನೆ, ಯಕ್ಷಗಾನ, ಕೋಲು ಕಲೆಗಳಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿರುವ ಜನಪದ ಹಿರಿಯಜ್ಜ ಸಿದ್ದೇಗೌಡರು. ಗುಬ್ಬಿ ತಾಲೂಕು, ಚೇಳೂರು ಹೋಬಳಿಗೆ ಸೇರಿದ ಮಾರನಹಳ್ಳಿಯ ಸಿದ್ದೇಗೌಡರು ಮೂಲತಃ ರಂಗಕಲಾವಿದರು. ಕಂಪನಿ ನಾಟಕಗಳಲ್ಲಿ ಬಾಲಕ ಪಾತ್ರ ಅಭಿನಯಿಸಿ ಬೆಳಕಿಗೆ ಬಂದವರು. ಈ ಸಂದರ್ಭದಲ್ಲಿ ಯಕ್ಷಗಾನ ಪ್ರಸಿದ್ಧವಾಗಿದ್ದರಿಂದ ಯಕ್ಷಗಾನ ಕಲೆಗೆ ವಿಶೇಷ ಗಮನ ಹರಿಸಿ ಮೂರುವರೆ ವಜ್ರ, ರಾಮಾಯಣ, ಕುಮಾರರಾಮನ ಕತೆ, ವಿರಾಟಪರ್ವ, ಅಭಿಮನ್ಯುವಿನ ಕಾಳಗ, ದುಶ್ಯಾಸನ ಕತೆಗಳ ಮೂಲಕ ಗ್ರಾಮೀಣ ಪರಿಸರದಲ್ಲಿ ಯಕ್ಷಗಾನ ಪ್ರಭಾವ ಬೀರಿದರು. ಗುರು ಅಂಜಿನಪ್ಪ, ಶ್ರೀರಂಗಯ್ಯ ಇವರ ಮೂಲಕ ಯಕ್ಷಗಾನಕ್ಕೆ ಹಿನ್ನೆಲೆ ಸಂಗೀತ ಹಿಮ್ಮೇಳ ಕಲಾವಿದರಾಗಿ ಹಲವಾರು ವರ್ಷ ಕೆಲಸ ಮಾಡಿದ್ದಾರೆ. ಗ್ರಾಮೀಣ ಪರಿಸರದಲ್ಲಿ ನಾಟಕ ಸಂಘಟನೆಗೆ ವಿಶೇಷ ಹೊತ್ತು ನೀಡಿರುವುದು ಇದರ ವಿಶೇಷವಾಗಿದೆ.

ದಿನಾಂಕ ೧೪-೧೦-೧೯೦೬ರಲ್ಲಿ ಜನಿಸಿದ ಇವರಿಗೆ ಮೊದಲು ಆಸಕ್ತಿ ಕೋಲುಮೇಳ. ಕಾಡುಗೊಲ್ಲರು, ತಿಗಳರು ಸಭೆ ಸಮಾರಂಭಗಳಲ್ಲಿ ಕೋಲು ಹಾಕುವುದನ್ನು ಕಂಡು ಪ್ರಭಾವಿತರಾದರು. ಮುಂದೆ ಕೋಲಾಟ ತಂಡಗಳನ್ನು ಕಟ್ಟಿ ಧಾರ್ಮಿಕ ಸಭೆ ಸಮಾರಭಂಗಳಲ್ಲಿ ಕೋಲುಮೇಳದ ಭಾಗವತರಾಗಿ ಪ್ರದರ್ಶನ ನೀಡತೊಡಗಿದರು. ಸುಮಾರು ೬೦ ವರ್ಷಗಳಿಂದ ಸತತವಾಗಿ, ಕೋಲುಮೇಳ, ಯಕ್ಷಗಾನ, ಸಾಮಗಾನ ನಾಟಕಗಳನ್ನು ಸಂಘಟಿಸುತ್ತಾ ಬರುತ್ತಿರುವುದು ಇವರ ವಿಶೇಷವಾಗಿದೆ.

ನೂರು ದಾಟಿದ ಸಂದರ್ಭದಲ್ಲಿ ಅವರ ಶಿಷ್ಯರ ಅಪೇಕ್ಷೆ, ಒತ್ತಾಯದ ಮೇರೆಗೆ ಭಜನೆ ತಂಡವನ್ನು ಸಂಘಟಿಸಿ, ಅದನ್ನು ಅಚ್ಚುಕಟ್ಟಾಗಿ ಬೆಳೆಸಿದ್ದಾರೆ. ಕುರುಬರು, ಗೊಲ್ಲರು, ವೀರಶೈವರು ಈ ಮೊದಲಾದ ಸಹಕಲಾವಿದರ ಒಂದು ಗುಂಪು ಇವರ ಬಳಿ ಸದಾ ಇರುತ್ತದೆ. ಇವರನ್ನು ದೈವತ್ವದ ನೆಲೆಯಲ್ಲಿ ಕಾಣುತ್ತಾ ನಿಜವಾದ ಗುರುವಿನ ಸ್ಥಾನಮಾನ ನೀಡುತ್ತಾ, ಜಾತ್ಯಾತೀತ ಕಲಾವೇದಿಕೆ, ಧಾರ್ಮಿಕ ಬಳಗವನ್ನು ನಿರ್ಮಿಸಿರುವುದು ಇವರ ಹೆಗ್ಗಳಿಕೆಯಾಗಿದೆ.

ಚೇಳೂರಿಗೆ ಸಮೀಪದ ಈರೇಹಳ್ಳಿಯಲ್ಲಿ, ಅಳಿವಿನ ಹಾದಿಯಲ್ಲಿದ್ದ ಬಸವೇಶ್ವರ ದೇವಾಲಯವನ್ನು ಸಿದ್ದೇಗೌಡರ ಭಜನಾ ತಂಡದ ಕಲಾವಿದರಾದ ದೊಡ್ಡಯ್ಯ, ರಂಗೇಗೌಡ ಕೂಡಿಕೊಂಡು ಆ ದೇವಸ್ಥಾನವನ್ನು ಪುನರ್‌ರೂಪಿಸಿ ಮತ್ತೊಮ್ಮೆ ಪೂಜಾಕಾರ್ಯವೂ ಸೇರಿದಂತೆ ಇಂದು ಇದನ್ನು ಒಂದು ಪ್ರವಾಸಿ ಕೇಂದ್ರವನ್ನಾಗಿ ರೂಪಿಸಿರುವುದು ಇವರ ಹಿರಿಮೆಯ ಪ್ರತೀಕವಾಗಿದೆ.

ಆರು ಜನ ಮಕ್ಕಳು, ಇಪ್ಪತ್ತೊಂದು ಮೊಮ್ಮಕ್ಕಳು, ನಲವತ್ತಮೂರು ಮರಿಮೊಮ್ಮಕ್ಕಳು ಸೇರಿ ಒಟ್ಟು ೮೧ ಜನ ಕುಟುಂಬ ಸದಸ್ಯ ಬಳಗದ ಈ ಪ್ರೀತಿಯ ಅಜ್ಜ ಕೈಯಲ್ಲಿ ಕೋಲಿಡಿದು ತಿರುಗಾಡ ಹೊರಟರೆ, ಯುವಕರೂ ನಾಚುವಂತಹ ನಡಿಗೆ, ಅದೇ ಧೀರ ತೇಜಸ್ಸು, ಅಪೂರ್ವ ಕಲಾಕ್ರಾಂತಿ. ಸರಳ ಆಹಾರ, ಸದಾ ದೇವರ ಭಜನೆ, ಪೂಜೆ ಇವರ ಇಂದಿನ ನಿತ್ಯಕರ್ಮವಾಗಿದೆ. ಕುಟುಂಬ, ಸ್ವಜನ ಈ ಎಲ್ಲಾ ವ್ಯಾಮೋಹದಿಂದ ದೂರ ಉಳಿದು, ಹಾಡು, ಕುಣಿತ, ಧಾರ್ಮಿಕ ಸಂಘಟನೆಯಲ್ಲಿ ತೊಡಗಿಕೊಂಡಿದ್ದು ಶ್ರೀ ಸಿದ್ಧೇಗೌಡ ನಮ್ಮೊಳಗಣ ಜಾಗೃತಿಯ ರೂಪ, ಕಲಾ ಹಿರಿಮೆಯ ತೋರುಗಂಭ.

ಸಿದ್ದೇಗೌಡ (ಪಾಪಣ್ಣನವರು),
ಮಾರನಹಳ್ಳಿ, ಚೇಳೂರು, ಗುಬ್ಬಿ ತಾಲೂಕು.

# ಹಾಡುಗಾರ್ತಿ ಚಿಕ್ಕಮ್ಮ

ಸೋಬಾನೆ, ಕೃಷಿ ಪದಗಳ ಶ್ರೀಮಂತ ಗುಡಾಣ ಶ್ರೀಮತಿ ಚಿಕ್ಕಮ್ಮನವರದು ತುರುವೇಕೆರೆ ತಾಲೂಕು ವಿಠಲಾಪುರ ಗ್ರಾಮ. ಅಪ್ಪಟ ರೈತಾಪಿ ಕುಟುಂಬದಿಂದ ಬಂದವರು. ಮದುವೆಯ ಎಲ್ಲಾ ಕ್ರಿಯೆಗಳನ್ನು ಅಳವಡಿಸಿಕೊಂಡು, ಜನಸಾಮಾನ್ಯರ ಮನಗೆದ್ದುಕೊಂಡಿರುವ ವಿಶಿಷ್ಟ ಜನಪದ ಹಾಡುಗಾರ್ತಿ ಚಿಕ್ಕಮ್ಮನವರು. ತಮ್ಮ ಅಜ್ಜಿ ದೊಡ್ಡಮ್ಮ, ತಾಯಿ ಸಿದ್ದಮ್ಮರಿಂದ ಬಾಲ್ಯದಲ್ಲಿಯೇ ಕಲಿತ ಸೋಬಾನೆ, ಕೃಷಿ ಮೂಲದ ಹಾಡುಗಳನ್ನು ಈಗ್ಗೆ ಐವತ್ತು ವರ್ಷಗಳಿಂದಲೂ ಹಾಡುತ್ತಲೇ ಬಂದಿದ್ದಾರೆ. ತುರುವೇಕೆರೆ, ತಿಪಟೂರು, ಕುಣಿಗಲ್, ನಾಗಮಂಗಲ, ಬೆಳ್ಳೂರು ಈ ಭಾಗಗಳಲ್ಲಿ ಚಿಕ್ಕಮ್ಮನ ಪದವಿಲ್ಲದೆ ಮದುವೆ ಆಗಲಾರದು ಎಂಬಷ್ಟರ ಮಟ್ಟಿಗೆ ಪ್ರಸಿದ್ಧಿ. ಆದಿಚುಂಚನಗಿರಿ ಕಲಾಮಹೋತ್ಸವದಲ್ಲಿ ತಪ್ಪದೇ ಭಾಗವಹಿಸುತ್ತಾ, ಹಾಡುತ್ತಾ, ಧಾರ್ಮಿಕ ಮಠದ ಗೌರವ ಸ್ವೀಕರಿಸುತ್ತಾ ಬರುತ್ತಿದ್ದಾರೆ. ಚಿಕ್ಕಮ್ಮನ ಮದುವೆ ಹೊಸ್ತಿಲ ತಡೆಯುವ ಪದ, ಹೊರಳಕ್ಕಿ ಕುಟ್ಟುವ ಪದ, ಬೀಗರನ್ನು ಜರಿಯುವ ಪದ, ಸೋಬಾನೆ ಪದ ತುಂಬ ಅರ್ಥ ಪೂರ್ಣವಾದ ಪದಗಳು. ಸಂದರ್ಭ, ಹೆಸರು, ಕುಲವನ್ನು ಸಾಂದರ್ಭಿಕವಾಗಿ ಕಟ್ಟಿ ಹಾಡುವುದು ಈಕೆಯ ವಿಶೇಷ. ಒಂದು ನೂರಕ್ಕೂ ಹೆಚ್ಚು ಮಹಿಳೆಯರಿಗೆ ಸೋಬಾನೆ ಪದ ಹೇಳಿಕೊಟ್ಟಿದ್ದಾರೆ. ಕೃಷಿಪದ, ಮಳೆರಾಯನ ಪದ, ಜನಪದ ಅಡಿಗೆ, ಔಷಧಿ ಸಂಬಂಧಿಸಿದಂತೆಯೂ ಪದ ಹಾಡುವುದು ಈಕೆಯ ವಿಶೇಷ.

ಚಿಕ್ಕಮ್ಮನ ಮತ್ತೊಂದು ವಿಶೇಷ ಹೆರಿಗೆ ಹಾಗೂ ಗಿಡಮೂಲಿಕೆ ಔಷಧೋಪಚಾರ. ಕಳೆದ ೪೦ ವರ್ಷಗಳಿಂದಲೂ ಸತತವಾಗಿ ಅಜ್ಜಿಯಿಂದ ಕಲಿತ ಗಿಡಮೂಲಿಕೆಯ ಔಷಧೋಪಚಾರವನ್ನು ಮಾಡುತ್ತಾ ಬಂದಿದ್ದಾರೆ. ಸ್ತ್ರೀಯರ, ಮಕ್ಕಳ ಬಾಣಂತಿಯರ ಖಾಯಿಲೆಗಳಿಗೆ ಸ್ಥಳೀಯ ಸಸ್ಯಗಳಿಂದಲೇ ಉಪಚಾರ ನೀಡುವ, ಖಾಯಿಲೆ ವಾಸಿಮಾಡುವ ಕೈಚಳಕ ವಿಶಿಷ್ಟವಾದುದು. ಲೆಕ್ಕವಿಲ್ಲದಷ್ಟು ಜನಗಳಿಗೆ ಔಷಧೋಪಚಾರ

ಮಾಡಿರುವುದಾಗಿ ಹೇಳುವ ಈಕೆ ಜನಪದ ವಿಶ್ವಕೋಶವಿದ್ದಂತೆ. ಯಾವುದೇ ಒಡಪು, ಗಾದೆಗಳನ್ನು ಮಾತಿಗೆ ಮುಂಚೆ ತೇಲಿಸಿ, ಪರಿಸ್ಥಿತಿಯನ್ನು ಹಗುರಗೊಳಿಸುತ್ತಾ ಮಾತಿಗೆ ಮುಂಚೆ ನಕ್ಕುಬಿಡುವುದು ಈಕೆಯ ಜನಪ್ರಿಯ ಕ್ರಿಯೆ.

ದೇವರನಾಮ, ಪದ ಹಾಡುವ ಮೂಲಕ ನೂರಾರು ಹೆರಿಗೆಗಳನ್ನು ಕ್ಷಣಾರ್ಧದಲ್ಲಿ ಮಾಡಿ ಮುಗಿಸಿರುವುದಾಗಿ ದಾರ್ಷ್ಟತೆಯಿಂದ ಹೇಳುವ ಚಿಕ್ಕಮ್ಮ, ಇಂದು ಹಣ್ಣಾಗಿದ್ದಾರೆ. ಆಸರೆಯ ಅಗತ್ಯವೂ ಇದೆ. ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಡಾ. ಹೆಚ್. ಜಿ. ಲಕ್ಕಪ್ಪಗೌಡರ ನೇತೃತ್ವದಲ್ಲಿ ೧೯೯೫ರ ಸಾಲಿನ ಕಲಾವಿದ ಪ್ರಶಸ್ತಿ ನೀಡಿ ಗೌರವಿಸಿರುವುದು ಈಕೆಯ ಜನಪದ ಬದುಕಿಗೆ ಅರ್ಥ ತಂದಿದೆ.

ಸೋಬಾನೆ ಚಿಕ್ಕಮ್ಮ,
ವಿಠಲಾಪುರ ಮತ್ತು ಅಂಚೆ, ತುರುವೇಕೆರೆ ತಾಲೂಕು.

# ಬರಗೂರು ಲಕ್ಷ್ಮಮ್ಮ

ಬರಗೂರು ಲಕ್ಷ್ಮಮ್ಮ ಜನಪದ ಹಾಡುಗಾರ್ತಿ. ಪಾವಗಡ ತಾಲೂಕು ಮುದ್ದೆ ಗ್ರಾಮದ ಆದಿಕರ್ನಾಟಕ ಮನೆತನದ ಓಬಣ್ಣನವರ ಮಗಳು. ಈಕೆಯನ್ನು ಸಿರಾ ತಾಲೂಕು ಬರಗೂರು ಗ್ರಾಮದ ಮೈಲಾರ ಲಿಂಗೇಶ್ವರ ದೇವಸ್ಥಾನದ ಪೂಜಾರಿ ಭೂತಣ್ಣನವರಿಗೆ ಕೊಟ್ಟು ಮದುವೆ ಮಾಡಲಾಗಿದೆ. ತನ್ನ ತಾಯಿ ಹನುಮಕ್ಕಳಿಂದ ಕಲಿತ ಪದಗಳೇ ರಾಶಿ ರಾಶಿ, ಹಗಲು ರಾತ್ರಿ ಎರಡು ಹೊತ್ತೂ ಒಂದೇ ಸಮನೆ ಹಾಡುತ್ತೇನೆ ಎಂಬ ದಾಷ್ಟಿಕತೆ ಈಕೆಯದು. ಎರಡು ಹೆಣ್ಣು, ಎರಡು ಗಂಡುಮಕ್ಕಳನ್ನು ಬೆಳೆಸಿರುವ ಇವರು ಇಂದಿಗೂ ಕೂಲಿಯಿಂದ ಜೀವಿಸುತ್ತಿದ್ದಾರೆ.

ಲಕ್ಷ್ಮಮ್ಮ ಸೊಗಸಾದ ಹಾಡುಗಾರ್ತಿ. ಮೈಲಾರಲಿಂಗನ ಪದ, ದೇವಿ ಸ್ವಾರಮ್ಮನ ಪದ, ಚಿತ್ರದೇವರ ಪದ, ದೇವರು ಕರೆಯುವ ಪದಗಳನ್ನು ಹಾಡುವುದು ಈಕೆಯ ವಿಶೇಷ. ಸೋಬಾನೆ ಲಕ್ಷ್ಮಮ್ಮ ಎಂಬ ಹಿರಿಮೆಗೂ ಪಾತ್ರವಾಗಿದ್ದಾರೆ. ಬೆಂಗಳೂರು ಆಕಾಶವಾಣಿಯಲ್ಲಿ ೧೯೯೦ ರಿಂದಲೂ ಸೋಬಾನೆ ಪದಗಳನ್ನು ಹಾಡುತ್ತಿದ್ದಾರೆ. ಇವರೊಂದಿಗೆ ನಿಂಗಮ್ಮ ಎಂಬ ಇನ್ನೊಬ್ಬರು ಕಲಾವಿದೆ ಇವರಿಗೆ ಹಿಮ್ಮೇಳಗಾರರಾಗಿ ಸಾತಿ ನೀಡಿದ್ದಾರೆ. ನಂಜಮ್ಮ, ಲಕ್ಷ್ಮಮ್ಮ ಇವರ ಜೋಡಿ ಸಂಗೀತ ಈ ಭಾಗದಲ್ಲಿ ಜನಪ್ರಿಯವಾಗಿದೆ. ರಾಮನಗರದ ಜನಪದಲೋಕ ಇವರ ಹಾಡುಗಳನ್ನು ಧ್ವನಿಮುದ್ರಿಸಿಕೊಂಡಿದೆ. ಜೊತೆಗೆ ೨೦೦೨ರಲ್ಲಿ ಜನಪದ ಲೋಕ ಪ್ರಶಸ್ತಿ ನೀಡಿ ಪುರಸ್ಕರಿಸಲಾಗಿದೆ. ಶಿರಾ–ಪಾವಗಡ ಸಾಂಸ್ಕೃತಿಕ ವೇದಿಕೆಗಳ ಸನ್ಮಾನಗಳು ಇವರಿಗೆ ಸಂದಾಯವಾಗಿವೆ.

ಬರಗೂರು ವೀರನಾಗಮ್ಮ, ಜುಂಜಪ್ಪ, ಮದ್ದೆಯ ಸ್ವಾರಮ್ಮ ದೇವಿಯ ಸಮಗ್ರ ಬದುಕು ಕುರಿತು ಕಾವ್ಯ ಹಾಡುತ್ತಾರೆ. ತನ್ನ ಅಜ್ಜಿ ನರಸಮ್ಮರಿಂದ ಸ್ವಾರಮ್ಮ ದೇವಿಯ

ಕಾವ್ಯ ಹಾಡುವುದನ್ನು ಕಲಿತಿರುವ ಇವರು ಕುಟ್ಟುವ, ಬೀಸುವ, ದೇವರು ಕರೆಯುವ, ಬೇರೆ ಬೇರೆ ದೇವತೆಗಳ ಮೇಲೂ ಪದ ಹಾಡುತ್ತಾರೆ. ಸೋಬಾನೆ ಇವರ ವಿಶಿಷ್ಠ ಕಲಾಪ್ರಕಾರ. ಈ ಭಾಗದ ಯಾವುದೇ ಸಾಂಸ್ಕೃತಿಕ, ಶುಭ ಸಮಾರಂಭವಿರಲಿ ಅಲ್ಲಿ ಹಾಜರಾಗಿ ಪದ ಹಾಡುತ್ತಾರೆ. ಸಂಭಾವನೆ, ಗೌರವ ಈ ಬಗೆಯ ಯಾವುದೇ ಸೌಲಭ್ಯ ಬಯಸುವುದಿಲ್ಲ. ಸ್ವಯಂ ಪ್ರೇರಿತವಾಗಿ ಹಾಡುತ್ತಾ ಬರುತ್ತಿರುವುದು, ಇವರೊಂದಿಗೆ ಹತ್ತು ಜನ ಹೆಣ್ಣುಮಕ್ಕಳನ್ನು ಸೋಬಾನೆ ಹಾಡುಗಾರಿಕೆಗೆ ತಯಾರು ಮಾಡಿರುವುದು ಇವರ ಸೋಬಾನೆ ಸಂಪ್ರದಾಯವನ್ನು ಬಿತ್ತುವ ಕಾಯಕವನ್ನು ಸದ್ದಿಲ್ಲದೆ ನಡೆಯುತ್ತಾ ಬಂದಿದೆ. ಯಾವುದೇ ಬಿರುದು, ಗೌರವ, ಪ್ರಶಸ್ತಿಯ ಹಂಗಿಗೆ ಬೀಳದೆ, ತನ್ನ ಪಾಡಿಗೆ ತಾನು ಬದುಕಿನ ಮಧ್ಯ ಹಾಡುತ್ತಾ, ಗಡಿ ನೆಲದಲ್ಲಿ ಕನ್ನಡ ಜಾನಪದ ಸಂಸ್ಕೃತಿಯನ್ನು ಪ್ರಸಾರ ಮಾಡುತ್ತಾ, ಕೂಲಿ ಕಾಸಿನಲ್ಲಿ ಬದುಕು ಸವೆಸುತ್ತಿರುವ ಲಕ್ಷ್ಮಮ್ಮ ಮುಗ್ಧ ಕಲಾವಂತಿಕೆಗೆ ಸಾಕ್ಷಿಯಾಗಿದ್ದಾರೆ.

**ಬರಗೂರು ಲಕ್ಷ್ಮಮ್ಮ,**<br>
**ಪೂಜಾರಿ ಭೂತಣ್ಣ,**<br>
**ಹರಿಜನ ಕಾಲೋನಿ, ಬರಗೂರು, ಸಿರಾ ತಾಲೂಕು.**

# ರಂಗಾಪುರ ಸಣ್ಣಮ್ಮ ಮುತ್ತಣ್ಣ

ಸಣ್ಣಮ್ಮ ಮಧುಗಿರಿ ತಾಲೂಕು ಬಡವನಹಳ್ಳಿಗೆ ಸಮೀಪದ ರಂಗಾಪುರದವರು. ಎಂಭತ್ತರ ಪ್ರಾಯ. ಕಾಡುಗೊಲ್ಲರ ಎಲ್ಲ ರೀತಿ ರಿವಾಜು, ಶಾಸ್ತ್ರ ಸಂಪ್ರದಾಯಗಳ ಬಗೆಗೆ ಅಧಿಕೃತ ವಕ್ತಾರರಂತೆ ಪಟಪಟನೆ ಹೇಳಿಬಿಡಬಲ್ಲ ಚಾಕಚಕ್ಯತೆ, ಜಲ ಕೆಟ್ಟರೂ ಕುಲಾಚಾರ ಕೆಡಬಾರದೆಂಬ ದೃಢ ನಿಲುವು.

ಸಣ್ಣಮ್ಮ ಹುಟ್ಟಿದ್ದು ೧೯೩೦ರ ಸುಮಾರು ಸಿರಾ ತಾಲೂಕಿನಲ್ಲಿ. ಪುಣೆಯ ರಾಷ್ಟ್ರೀಯ ಹೆದ್ದಾರಿಗೆ ಸಮೀಪದಲ್ಲಿರುವ ಲಕ್ಷ್ಮೀಸಾಗರ ಗೊಲ್ಲರಹಟ್ಟಿಯಲ್ಲಿ ಬಾಲ್ಯವಿವಾಹ. ತನಗೆ ಮಕ್ಕಳಾಗಲಿಲ್ಲವೆಂಬ ಕಾರಣಕ್ಕಾಗಿ ತನ್ನ ಗಂಡ ಮುತ್ತಣ್ಣ ಎರಡನೇ ಮದುವೆ ಮಾಡಿಕೊಂಡರೂ ಪ್ರೀತಿಗೇನೂ ಕೊರತೆಯಿಲ್ಲ ಎಂಬುದು ಈಕೆಯ ಮನದಾಳದ ಮಾತು. ಸುಕ್ಕು ಕೆನ್ನೆಗಳ, ಒಳ ಹೊಕ್ಕ ಕಣ್ಣುಗಳ ಒಳಗೂ ಬಾಲ್ಯದ ಸೊಬಗನ್ನು ಮನಸಾರೆ ಚಪ್ಪರಿಸುವ ಹೃದಯವಂತಿಗೆ ಮಾಸಿಲ್ಲ, ಬದುಕನ್ನು ಸವಿಯುವ ದೀಕ್ಷತೆ ಹೋಗಿಲ್ಲ.

ಸಣ್ಣಜ್ಜಿ ಜನಪದ ಹಾಡುಗಳ ಕಣಜ. ಈಕೆಯ ಮಾತೇ ಒಂದು ಬಗೆಯ ಜನಪದ ಸಂಸ್ಕೃತಿ. ನಡೆ, ನುಡಿ, ಬದುಕು ಎಲ್ಲವೂ ಜನಪದ. ಜಾನಪದ ಅಂದರೇನು ಎಂದೇ ತಿಳಿದಿಲ್ಲ. ಆದರೆ ಜನಪದ ಹಾಡುಗಳ ವಕ್ತಾರೆಯಾಗಿರುವುದು ವಿಶೇಷ.

ಸಣ್ಣಮ್ಮ ಕಾಡುಗೊಲ್ಲರ ದೇವರ ಉತ್ಸವ, ಮದುವೆ, ಹೊಸಮನೆಯ ಕಾರ್ಯ ಈ ಮೊದಲಾದ ಶಾಸ್ತ್ರ ಸಂಬಂಧಿ ಚಟುವಟಿಕೆಗಳಲ್ಲಿ ಭಾಗವಹಿಸಲೇಬೇಕೆಂಬ ಬಲವಾದ ನಂಬಿಕೆ ಈ ಭಾಗದಲ್ಲಿ. ಸಿರಾ, ಮಧುಗಿರಿ, ಕೊರಟಗೆರೆ, ಪಾವಗಡ ಈ ನಾಲ್ಕು ತಾಲೂಕುಗಳ ಸಾಂಸ್ಕೃತಿಕ ರಾಯಭಾರಿಯಾಗಿ ಕಾರ್‍ಯ ನಿರ್ವಹಿಸುವುದು, ಪದಹಾಡುವುದು, ಒಡಪು ಕಟ್ಟಿ, ಬಿಡಿಸಿ, ಬೊಚ್ಚು ಬಾಯಿಂದ ಮುದ್ದಾಗಿ ನಗುವುದು, ನಗಿಸುವುದು ಈಕೆಯ ನಡಾವಳಿ ಹಾಗೂ ಜಾತ್ಯಾತೀತವಾಗಿ ಪ್ರೀತಿಸುವ, ಗೌರವಿಸುವ ಸಂಸ್ಕಾರವನ್ನು ಈಕೆ ಯಥೇಚ್ಛವಾಗಿ ಪಡೆದಿರುವುದು ಹೆಮ್ಮೆ. ಇದೇ ಸನ್ಮಾನ,

ಗೌರವಗಳಿಗೂ ಹಿರಿದಾದುದೆಂಬ ನಂಬಿಕೆ. ಕಾಡುಗೊಲ್ಲರ ಪುರುಷರು, ತಮ್ಮ ಜನಾಂಗಿಕ ಸಾಂಸ್ಕೃತಿಕ ನಾಯಕರನ್ನು ಕುರಿತು ಕಾವ್ಯ ಕಟ್ಟುತ್ತಾರೆ. ಕಟ್ಟಿರುವ ಕಾವ್ಯಕ್ಕೆ ಕಥನ ರೂಪದ ವಿಸ್ತರಣೆ ಒದಗಿಸುತ್ತಾರೆ. ಹಾಡುತ್ತಾ ಹಾಡುತ್ತಾ ವಿಸ್ತರಿಸುತ್ತಾ ಹೋಗುತ್ತಾರೆ. ಇವರ ಹಾಡಿಗೆ ಇನ್ನೊಬ್ಬರು ಗಣೆಯ ಶೃತಿ ನೀಡುತ್ತಾರೆ. ಜುಂಜಪ್ಪ, ಎತ್ತಪ್ಪ, ಚಿತ್ರಲಿಂಗ, ಕಾಟಂಲಿಂಗ ಈ ಬಗೆಯ ವೀರ ನಾಯಕರು, ಹಾಗೆಯೇ ಪಾತೇಲಿಂಗ, ಕಂಬದರಂಗ, ಕ್ಯಾತೇಲಿಂಗ, ವೀರಬಡಪ್ಪ, ಈರಣ್ಣ ಈ ಬಗೆಯ ಈರಗಾರರ ಕಥನಗಳೂ ಜನಪದರಲ್ಲಿವೆ. ಈ ಎಲ್ಲವೂ ಖಂಡಕಾವ್ಯಗಳ ಸ್ವರೂಪದಲ್ಲಿವೆ.

ಸಣ್ಣಮ್ಮ ಈ ಎಲ್ಲ ಸಾಹಿತ್ಯ, ಹಾಡುಗಳ ಗುಡಾಣ. ಗಣೆಯ ಶೃತಿಯೂ ಈಕೆಗೆ ಬೇಕಾಗಿಲ್ಲ, ಕುಂತ ಕುಂತಲ್ಲೇ ಕೈಗಳು ನೆಲ ಕೆರೆಯುತ್ತಲೇ, ಪೈರು ನಾಟಿ ಮಾಡುತ್ತಲೇ, ಕಾಳು–ಕಡಿ ಸ್ವಚ್ಛಗೊಳಿಸುತ್ತಲೇ ಕಥೆ ಮಾಡಿಬಿಡಬಲ್ಲಳು. ಸೋಬಾನೆ, ಕುಟ್ಟುವ, ಬೀಸುವ, ಒಕ್ಕುವ, ಬಡಿಸುವ, ಬೀಗರು ಕರೆಯುವ, ಮದುವೆಗೆ ಸಂಬಂಧಿಸಿದ, ಒಸಗೆ, ಶೋಭನ, ಧಾರೆ, ಬಾಗಿಲು ತಡೆಯುವುದು, ಧಾರೆಕಂಬ, ಮಲನೀರು ಮೀಯುವುದು, ಗಂಡು ಕರೆಯುವ ಬಗೆಗೆ ಅಧಿಕೃತವಾಗಿ ಬಿಡಿಬಿಡಿಯಾಗಿ ಹಾಡು ಹೇಳುವುದು ಈಕೆಯ ವಿಶೇಷ. ಹಾಗಾಗಿಯೇ ಸಣ್ಣಜ್ಜಿ ಹಾಡುವ ಅಜ್ಜಿಯಾಗಿ ರೂಪುಗೊಂಡಿರುವುದು ಈಕೆಯ ವಿಶೇಷ. ಕರೆದಲ್ಲಿಗೆ ಅಕ್ಕರೆಯಿಂದ ಹೋಗಿ, ಕೇಳಿದಲ್ಲಿ ಲಗುಬಗೆಯಿಂದ ಹಾಡುವ ಅಜ್ಜಿಯ ಕಲಾ ಬದುಕು ಮಾದರಿಯಾದುದು. ಇವರ ಹಾಡುವ ಕ್ರಿಯೆಗೆ ಒತ್ತಾಸರೆಯಾಗಿ, ಹಾಡಲು ಉತ್ತೇಜಿಸಿರುತ್ತಿರುವ ರಂಗಾಪೂರದ ಪ್ರೊ. ಕೆ. ಮಹಾಲಿಂಗಯ್ಯನವರು ಹಾಗೂ ಈ ಬಗೆಯವರಿಂದ ನನ್ನ ಹಾಡಿಗೆ ಬರಗಾಲವಿಲ್ಲ ಎಂದು ಧನ್ಯತೆಯಿಂದ ನುಡಿಯುವ ಈ ಅಜ್ಜಿಗೆ ರೈತಾಪಿ ಬದುಕೇ ಆಶ್ರಯ.

ಶ್ರೀಮತಿ ಸಣ್ಣಮ್ಮ,<br>ರಂಗಾಪುರ,<br>ಬಸವನಹಳ್ಳಿ ಅಂಚೆ, ಮಧುಗಿರಿ ತಾಲೂಕು.

## ಶ್ರೀಮತಿ ಹನುಮಕ್ಕ

ಹನುಮಕ್ಕ ಜನಪದ ಕಲಾವಂತಿಕೆಯ ಅಪರೂಪದ ಗಾಯಕಿ. ಕಥನಗಾರ್ತಿ ಹಾಗೂ ವಿಶೇಷವಾಗಿ ಸೋಬಾನೆ ಹಾಡುಗಾರ್ತಿ. ಗುಬ್ಬಿ ತಾಲೂಕಿನ ಬೇಡನಕಟ್ಟೆ ಗ್ರಾಮದ ಬುಡಕಟ್ಟು ವರ್ಗದ ಬುಕ್ಕಯ್ಯ ಎಂಬುವವರ ಮಗಳಾದ ಹನುಮಕ್ಕನನ್ನು ಕೊಟ್ಟು ಮದುವೆ ಮಾಡಿದ್ದು ಗುಬ್ಬಿ ತಾಲೂಕು ಚೇಳೂರು ಹೋಬಳಿ ಎಣ್ಣೆಕಟ್ಟೆ ಗ್ರಾಮದ ಗೊರವಯ್ಯ ಎಂಬುವವರಿಗೆ. ತನ್ನ ಅಜ್ಜಿ ಸಣ್ಣಮ್ಮ ಎಂಬುವವರಿಂದ ಕಲಿತ ಸೋಬಾನೆ, ದೇವರು ಕರೆಯುವ ಹಾಡು, ಮಕ್ಕಳ ಲಾಲಿಹಾಡು, ಗಾದೆ, ಒಗಟು ಇವುಗಳ ಮೂಲಕ ಸೋಬಾನೆ ಹನುಮಕ್ಕ ಮೋಡಿ ಮಾಡುವ ಹಾಡುಗಾರ್ತಿ.

ಎಳ್ಳಟ್ಟಿ ಮಾರಮ್ಮನ ಸಮಗ್ರ ಕಥೆಯನ್ನು ಹಾಡಿನ ಮೂಲಕ ಹಾಡುವ ವಿಶಿಷ್ಟ ಹಾಡುಗಾರ್ತಿಯಾಗಿದ್ದಾರೆ. ಎಳಟ್ಟಿಯ ಮಾರಮ್ಮಗೆ ಮೂವರು ಸೋದರಿಯರು. ಮೊದಲನೆಯವರು ಮಣ್ಣೆಮ್ಮ, ಎರಡನೆಯವರು ಮಾದೇನಹಳ್ಳಿ ಮಾರಮ್ಮ, ಮೂರನೆಯವರು ಎಣ್ಣೆಕಟ್ಟೆ ಮಾರಮ್ಮ. ಈ ಮೂರೂ ಸೋದರಿಯರು ಒಮ್ಮೆ ತಿರುಗಾಟ ಮಾಡುವಾಗ ಎಡವಿದ ಒಬ್ಬ ಮಾರಮ್ಮ, ಎಣ್ಣೆಕಟ್ಟೆಯಲ್ಲಿ ತಂಗುತ್ತಾಳೆ. ಆಕೆಯನ್ನು ತಿರುಗಿಯೂ ನೋಡದೆ ಅಲ್ಲೇ ಬಿಟ್ಟು ಹೋದ ಕುಂಟು ಮಾರಿಗೆ, ಸೋದರಿ ಮಣ್ಣೆಮ್ಮನ ಬಗೆಗೆ ಅಪಾರ ಕೋಪ. ಆಕೆಯ ವಾದ್ಯ ಸಂಗೀತವೂ ಈ ಕುಂಟುಮಾರಿಗೆ ಅಪಥ್ಯ. ನುಡಿಸಿದ ಆರೆಯೂ ಒಡೆದುಹೋಗುತ್ತದೆ ಎಂಬ ನಂಬಿಕೆ. ಈ ಬಗೆಯ ಕಥನವನ್ನು ತುಂಬಾ ಸ್ವಾರಸ್ಯಕರವಾಗಿ ಹಡುವ ಏಕೈಕ ಕಲಾವಿದೆ ಶ್ರೀಮತಿ ಹನುಮಕ್ಕ ಅವರು.

ಹನುಮಕ್ಕ ಕೋಲು ಪದವನ್ನು ಹಾಡುತ್ತಾರೆ, ಕೋಲು ಪದಗಳಲ್ಲಿ ವಿಶೇಷವಾಗಿ ಬಳಸುವ ಕೊರವಂಜಿ ಕೋಲು, ಮಾತಾಡು ಮಾತಾಡು ಮಲ್ಲಿಗೆ ಮೊದಲಾದ ವಿಶೇಷ

ಮಟ್ಟುಗಳನ್ನು ಸೊಗಸಾಗಿ ಹಾಡುತ್ತಾರೆ. ಹೆರಿಗೆ ತಜ್ಞೆಯೂ ಆಗಿರುವ ಶ್ರೀಮತಿ ಹನುಮಕ್ಕ ಸಾವಿರಾರು ಹೆರಿಗೆಗಳನ್ನು ಯಾವುದೇ ಬಾಧಕವಿಲ್ಲದೆ ಸುಸೂತ್ರವಾಗಿ ನೆರವೇರಿಸಿ ಕೊಟ್ಟಿರುವುದು ಇವರ ಮತ್ತೊಂದು ಕೈಚಳಕವಾಗಿದೆ.

ಇವರು ಹಾಡಿರುವ ಗೀತೆಗಳನ್ನು ಡಾ|| ಚಿಕ್ಕಣ್ಣ ಯಣ್ಣೆಕಟ್ಟೆ ಸಂಗ್ರಹಿಸಿದ್ದಾರೆ. ಗಾದೆ, ಒಗಟುಗಳನ್ನು ಸಂಗ್ರಹಿಸಿ, ಜಾನಪದ ಸಮಾಚಾರ, ತುಮಕೂರು ಜಿಲ್ಲೆಯ ಜಾನಪದೀಯ ಅಧ್ಯಯನ ಗ್ರಂಥಗಳಲ್ಲಿ ಪ್ರಕಟಿಸಿದ್ದಾರೆ.

ಮಾರಿ ಜಾತ್ರೆ, ಆರತಿ ಉತ್ಸವ, ಮದುವೆಯ ಸಂದರ್ಭಗಳಲ್ಲಿ ಹಾಡುವ ಶ್ರೀಮತಿ ಹನುಮಕ್ಕ ಯಾವುದೇ ಸಭೆ ಸಮಾರಂಭಗಳಲ್ಲಿ ಹಾಡಿದವರಲ್ಲ. ಬಿರುದು, ಗೌರವ, ಪ್ರಶಸ್ತಿಗಳ ಗೊಡವೆಯೂ ಈಕೆಗಿಲ್ಲ. ಶುಭ ಸಮಾರಂಭಗಳಲ್ಲಿ ಕುಳಿತು ಒಂದಿಬ್ಬರು ಹೆಂಗಸರ ಜೊತೆಗೂಡಿ ಮುಮ್ಮೇಳ ಹಿಮ್ಮೇಳ ಮಾಡಿಕೊಂಡು ತನ್ನ ಪಾಡಿಗೆ ತಾನು ಹಾಡುತ್ತಾ, ಕಥಾ ಭಿತ್ತಿಯನ್ನು ಬಿಚ್ಚುತ್ತಾ ಹೋಗುವುದು ವಿಶೇಷ.

ಹನುಮಕ್ಕನಿಗೆ ಮೂರು ಜನ ಮಕ್ಕಳು. ಕೊನೆಯವಳು ಹೆಣ್ಣುಮಗಳು. ಈಕೆಯ ಹೆಸರು ದೊಡ್ಡಕ್ಕ. ಈಕೆಯನ್ನು ಚೇಳೂರಿನ ಸಮೀಪ ಬೇಡನಕಟ್ಟೆಯ ಕೆಂಪಯ್ಯ ಎನ್ನುವವರಿಗೆ ಕೊಟ್ಟು ಲಗ್ನ ಮಾಡಲಾಗಿದೆ. ಈಕೆಯೂ ಜನಪದಗೀತೆಗಳನ್ನು ವಿಶೇಷವಾಗಿ ಮಾರಮ್ಮ ದೇವರ ಬಗೆಗೆ ಸೊಗಸಾಗಿ ಪದ ಹಾಡುತ್ತಾರೆ. ಮಗ ಚಿಕ್ಕಗೊರವಯ್ಯ ಒಳ್ಳೆಯ ಯಕ್ಷಗಾನ ಕಲಾವಿದ. ಲಕ್ಷ್ಮಣ, ದೇವೇಂದ್ರ ಮೊದಲಾದ ಪಾತ್ರಗಳಲ್ಲಿ ಯಕ್ಷಗಾನ ಮೇಳದಲ್ಲಿ ಪಾತ್ರ ವಹಿಸಿದ್ದಾನೆ. ಗಣಪತಿ ಉತ್ಸವ, ಸ್ತ್ರೀಪರ ಸಂಘಟನೆ, ಗ್ರಾಮಾಭಿವೃದ್ಧಿ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿದ್ದಾನೆ.

ಹನುಮಕ್ಕನಿಗೆ ಈಗ ಎಪ್ಪತ್ತರ ಪ್ರಾಯ: ಮೊಮ್ಮಕ್ಕಳು, ಮರಿಮಕ್ಕಳು ಸೇರಿದಂತೆ ಒಟ್ಟು ಹದಿನಾರು ಮಕ್ಕಳನ್ನು ಪಡೆದಿರುವ ಇವರ ಗಂಡ ಗೊರವಯ್ಯ ೧೯೬೫ರಲ್ಲಿ ದಿವಂಗತರಾಗಿದ್ದಾರೆ. ಬಾಲ್ಯದಿಂದಲೂ ಕೂಲಿ ಕಸುಬು, ಕುರಿ ಪೋಷಣೆ, ರೈತಾಪಿ ಬದುಕಿನೊಂದಿಗೆ ದೈವದತ್ತವಾದ ಹಾಡುಗಾರಿಕೆಯನ್ನು ಮೈಗೂಡಿಸಿಕೊಂಡು ಬಿಡುವಿನ ವೇಳೆಯಲ್ಲಿ ಹಾಡುತ್ತಾ, ಅತ್ಯುತ್ತಮ ಕಲಾವಿದೆ ಎಂದು ಗ್ರಾಮಾಂತರದಲ್ಲಿ ಕರೆಸಿಕೊಳ್ಳುವ ಹನುಮಕ್ಕ ಹಾಡುಗಳ ಕೋಶವಿದ್ದಂತೆ.

ಶ್ರೀಮತಿ ಹನುಮಕ್ಕ,<br>ಎಣ್ಣೆಕಟ್ಟೆ,<br>ಚೇಳೂರು ಅಂಚೆ, ಗುಬ್ಬಿ ತಾಲೂಕು.

## ತತ್ವಪದದ ನರಸಮ್ಮ

ಜನಪದ ಸಂಗೀತದ ಹಲವು ಪ್ರಕಾರಗಳಲ್ಲಿ ಅರ್ಥಪೂರ್ಣವಾಗಿ ಹಾಡುವ ಪ್ರತಿಭಾವಂತ ಕಲಾವಿದೆ ಶ್ರೀಮತಿ ನರಸಮ್ಮನವರು. ಕೊರಟಗೆರೆ ತಾಲೂಕು ಮಲ್ಲೇಶಪುರದವರು. ಸುಮಾರು ಅರವತ್ತೈದು ವರ್ಷ ವಯಸ್ಸಿನ ಈಕೆಗೆ ಹಾಡುವುದೇ ಉದ್ಯೋಗ ಎಂಬ ಸ್ಥಿತಿ. ಸಮರ್ಥ ಭಜನೆ ಕಲಾವಿದೆಯಾಗಿ, ತತ್ವಪದಗಳ ಜಂಗಮದಂತೆ ಕಾಣಿಸಿಕೊಳ್ಳುವ ನರಸಮ್ಮ ಸಾವಿರಾರು ತತ್ವಪದ ಹಾಡುತ್ತಾರೆ. ಶುಭ ಸಮಾರಂಭ, ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ದಿನವಿಡೀ ಹಾಡುವ ಸಾಕಷ್ಟು ಸಾಮಗ್ರಿ ಹೊಂದಿಸಿಕೊಂಡಿರುವ ನರಸಮ್ಮ ಹಾಡುಗಾರರ ಒಂದು ಪಡೆಯನ್ನೇ ಅಣಿಮಾಡಿರುವುದು ವಿಶೇಷ.

ಕರ್ನಾಟಕ ಸಾಹಿತ್ಯ ಅಕಾಡೆಮಿ, ಜಾನಪದ ಅಕಾಡಮಿಗಳು ಸಂಕಲಿಸಿರುವ ಕರ್ನಾಟಕ ತತ್ವಪದಕಾರರು ಹಾಗೂ ತತ್ವಪದ ಹಾಡುಗಳ ಗಾಯಕರಾಗಿ ಹಲವು ಹಾಡುಗಳನ್ನು ಈಕೆ ಹಾಡಿದ್ದಾರೆ. ಕನ್ನಡ ಸಂಸ್ಕೃತಿಯ ಬಹು ಹಿಂದಿನಿಂದಲೂ ಜನಪದ ಸಂಗೀತ ಮೂಲಕ ನೆಲ ಮೂಲ ಸಂಸ್ಕೃತಿಯನ್ನು, ಅದಕ್ಕೆ ಪೂರಕವಾಗಿ ಆಯಾಯಾ ಪರಿಸರದ ಧಾರ್ಮಿಕ, ಸಾಂಸ್ಕೃತಿಕ ನಾಯಕರನ್ನು ಅವರ ವಿಚಾರ, ಪವಾಡ, ಅಸದೃಶ ನಡಾವಳಿಯನ್ನು ಅಕ್ಷರ ಸಂಸ್ಕೃತಿಗೆ ಹೊರತಾಗಿ, ನುಡಿನಮನದ ರೂಪದಲ್ಲಿ ಕಟ್ಟಿ, ನಾಲಿಗೆಯ ಮೇಲೆ ನಿತ್ಯ ನೆನೆಯುವ, ಪಸರಿಸುವ ನಿರಂತರ ವಾಹಿನಿಯಾಗಿ ಕೆಲಸ ಮಾಡುವ ಈ ತತ್ವಪದಕಾರರು ಯಾವುದೇ ಮಡಿಮೈಲಿಗೆ, ಸೂತಕದ ಅರಿವಿಲ್ಲದೆ ವಿಹರಿಸುವ ಜಂಗಮ ಸದೃಶ್ಯರು. ಅಷ್ಟೇ ಅಲ್ಲ, ಸೂತಕವನ್ನು ಕಳೆಯಬಲ್ಲ ಆಧ್ಯಾತ್ಮಿಕ ಅವತಾರಿಗಳು. ಅಷ್ಟರಮಟ್ಟಿಗೆ ತತ್ವಪದಕಾರರಿಗೆ ಸಾಮಾಜಿಕ ಗೌರವವಿದೆ, ಸಾಂಸ್ಕೃತಿಕ ಅನನ್ಯತೆ ಇದೆ.

ಮಲ್ಲೇಶಪುರದ ನರಸಮ್ಮ ಈ ಪರಂಪರೆಯನ್ನು ಸಮರ್ಥವಾಗಿ ಮುಂದುವರಿಸುವ ಅಪರೂಪದ ಹಾಡುಗಾರ್ತಿ. ಕೊರಟಗೆರೆ, ಮಧುಗಿರಿ, ಗೊರವನಹಳ್ಳಿ ಈ ಭಾಗಗಳ ಸಾಂಸ್ಕೃತಿಕ, ಧಾರ್ಮಿಕ ಸ್ಥಳಗಳಲ್ಲಿ ಸಾಂಸ್ಕೃತಿಕ ವೀರರನ್ನು ಕುರಿತು ಪದಕಟ್ಟಿ ಹಾಡುವುದು ಈಕೆಯ ವಿಶೇಷ. ಇತ್ತೀಚೆಗೆ ನಿಧನರಾದ ಹಾಗೂ ಸಿದ್ದರಬೆಟ್ಟದ ಸಾಂಸ್ಕೃತಿಕ, ಧಾರ್ಮಿಕ ಪ್ರಕಾಶನಕ್ಕೆ ಪ್ರೇರಕ ಹಾಗೂ ಈ ಕ್ಷೇತ್ರದ ಬೆಳವಣಿಗೆಗಾಗಿ ಇಡೀ ಬದುಕನ್ನು ಮುಡುಪಾಗಿಟ್ಟಿದ್ದ ಅಮ್ಮಾಜಮ್ಮನವರ ಬಗ್ಗೆಯೂ ಹಾಡುಕಟ್ಟಿ ಹಾಡುವುದು ನರಸಮ್ಮನವರ ವಿಶೇಷವಾಗಿದೆ.

ಮಧುಗಿರಿಯ ದಂಡಿನ ಮಾರಮ್ಮ, ತಾಡಿಯ ವೀರನಾಗಮ್ಮ, ನಾಯಕನಹಟ್ಟಿ ತಿಪ್ಪೇಸ್ವಾಮಿ, ಶಿಶುನಾಳ ಷರೀಫ ಹೀಗೆ ನಾನಾ ವಸ್ತುವನ್ನು ಕುರಿತು ತತ್ವಪದ ಹಾಡುತ್ತಾರೆ. ಏಕತಾರಿ, ಚಿಟಿಕೆಯನ್ನು ಕೈಲಿ ಹಿಡಿದು ಹಾಡುವುದಕ್ಕೆ ಆರಂಭಿಸಿದರೆ, ಸಾಕು ಅನ್ನುವ ತನಕ ಒಂದರ ಹಿಂದೆ ಒಂದರಂತೆ ಪದಕಟ್ಟಿ ಹಾಡುತ್ತಲೇ ಸಾಗುವುದು ಈಕೆಯ ವಿಶೇಷವಾಗಿದೆ.

ಗಂಡ ಹನುಮಂತಪ್ಪ ರೈತಾಪಿ ಬದುಕಿನಲ್ಲಿ ಒಕ್ಕಲು ಸಾಗಿಸಿದವರು. ಅವರೂ ತೀರಿಕೊಂಡು ೧೫ ವರ್ಷಗಳಾಗಿವೆ. ಇಬ್ಬರು ಮಕ್ಕಳಿದ್ದಾರೆ. ಅವರ ಪಾಡು ಅವರದು, ನನ್ನ ಪಾಡು ನನ್ನದು. ನನಗೆ ಗುರುವೇ ದಾರಿ, ಅನ್ನದಾನ ಎಂದು ನಮ್ರವಾಗಿ ನುಡಿಯುವ ಕಲಾವಿದೆ ನರಸಮ್ಮನವರ ಬದುಕು ಅಷ್ಟೇನೂ ಉತ್ತಮವಾಗಿಲ್ಲ. ಆರ್ಥಿಕ ಜರ್ಝರಿತ ಇವರನ್ನು ಬಾಧಿಸಿದೆ. ಆದರೆ ಸಂಗೀತದ ತಾತ್ವಿಕ ಒಡನಾಟ, ಸಂಗೀತ ಗುಂಪು ಈಕೆಯನ್ನು ಮಾನಸಿಕವಾಗಿ ಬಲಿಷ್ಠೆಯನ್ನಾಗಿಸಿವೆ.

ಶ್ರೀಮತಿ ನರಸಮ್ಮ ಗಂಡ ದಿ|| ಹನುಮಯ್ಯ
ಮಲ್ಲೇಶಪುರ,
ಕೊರಟಗೆರೆ ತಾಲೂಕು.

# ಹೆಚ್. ಎಸ್. ನೀಲಕಂಠಯ್ಯ

ಲಿಂಗದ ವೀರನ ಕುಣಿತ, ವೀರಭದ್ರನ ನೃತ್ಯ ಎಂಬ ಹೆಸರಿನಲ್ಲಿ ಪ್ರಖ್ಯಾತವಾದ ರೋಚಕ ಕಲೆ ವೀರಭದ್ರನ ನೃತ್ಯ. ಶಿರದಲ್ಲಿ ಶಿವಲಿಂಗ, ತಲೆಯಲ್ಲಿ ಕಿರೀಟ, ವೀರಲಾಂಛನದ ನಾಗಾಭರಣ, ಕಿವಿಯಲ್ಲಿ ರುದ್ರಾಕ್ಷಿ, ನಾಗಮಂಡಲ, ಕೊರಳಲ್ಲಿ ಕರಡಿಗೆ, ಶಿವದಾರ, ರುದ್ರಾಕ್ಷಿಮಾಲೆ, ಸೊಂಟದಲ್ಲಿ ಅಸುರ ರುಂಡಮಾಲೆ, ಕೀರ್ತಿ ಮುಖದರ್ಪಣ, ಕಾಲಿಗೆ ಗಗ್ಗರಿ, ಕಿರುಗೆಜ್ಜೆ, ಕಾವಿ ನಿಲುವಂಗಿ, ನಡುಪಟ್ಟಿ, ಥಳಥಳಿಸುವ ಖಡ್ಗ ಇವು ವೀರಭದ್ರನ ವೇಷಭೂಷಣ. ಇಂಥ ರೋಚಕ ಕಲೆಗೆ ರಾಷ್ಟ್ರವ್ಯಾಪ್ತಿ ಮನ್ನಣೆ, ಗೌರವ ತಂದ ಹಿರಿಮೆ ನೀಲಕಂಠ್ಯಯನವರದು. ತುಮಕೂರಿನ ನೀಲಕಂಠಯ್ಯ ೧೯೬೨ ರಿಂದ ಸತತವಾಗಿ ವೀರಭದ್ರನ ಕುಣಿತವನ್ನು ಪ್ರದರ್ಶಿಸುತ್ತಾ ಬಂದರು. ಗ್ರಾಮೀಣ ಪರಿಸರದ ವ್ಯವಸಾಯ ಕುಟುಂಬದಲ್ಲಿ ಜನಿಸಿದ ಇವರು, ತಮ್ಮ ಹೈಸ್ಕೂಲ್ ವಿದ್ಯಾಭ್ಯಾಸದ ಅವಧಿಯಿಂದಲೂ ವೀರಗಾಸೆ ಕಲಾವಿದರಾಗಿ ಧಾರ್ಮಿಕ ಸಭೆ, ಸಮಾರಂಭಗಳಲ್ಲಿ ಕಲಾ ಪ್ರದರ್ಶನ ನೀಡತೊಡಗಿದರು. ಬಾಲ ಕಲಾವಿದನನ್ನು, ಮೊದಲಿಗೆ ಗುರ್ತಿಸಿ, ಈತನೊಳಗಣ ಕಲಾಚೇತನಕ್ಕೆ ಪ್ರೇರಣೆ ನೀಡಿದವರು ಆಸ್ಥಾನ ವಿದ್ವಾನ್ ಪದ್ಮಶ್ರೀ ಬಿ. ಶಿವಮೂರ್ತಿ ಶಾಸ್ತ್ರಿಗಳು. ಜೊತೆಗೆ ನಾಟಕರತ್ನ ಗುಬ್ಬಿ ವೀರಣ್ಣ ಇವರ ಕಲಾಶ್ರೀಗೆ ಸೂಕ್ತ ವೇದಿಕೆ ಒದಗಿಸಿ, ತಮ್ಮ ನಾಟಕ ಪ್ರದರ್ಶನಗಳಲ್ಲಿ ವೀರಭದ್ರನ ಕುಣಿತಕ್ಕೆ ಅವಕಾಶ ನೀಡಿದರು.

ಕಳೆದ ನಲವತ್ತೇಳು ವರ್ಷಗಳಿಂದ ಸತತವಾಗಿ ರಾಷ್ಟ್ರಾದ್ಯಂತ ವೀರಭದ್ರನ ಕುಣಿತ ಪ್ರದರ್ಶನದ ಮೂಲಕ ಎಲ್ಲರ ಗಮನ ಸೆಳೆದಿದ್ದಾರೆ. ತಮಿಳುನಾಡು, ಕೇರಳ, ಆಂಧ್ರಪ್ರದೇಶ, ಮಹಾರಾಷ್ಟ್ರ, ಪಾಂಡಿಚೇರಿ, ಗೋವಾ, ಒರಿಸ್ಸಾ, ಅಂಡಮಾನ್, ನಿಕೋಬಾರ್, ದೆಹಲಿ, ವಾರಣಾಸಿಗಳಲ್ಲಿ ಕರ್ನಾಟಕದ ವೀರಭದ್ರನ ಕಲೆಯ ಕಂಪನ್ನು ಪ್ರಸರಿಸಿದ್ದಾರೆ. ಕರ್ನಾಟಕದ ಬಹುತೇಕ ಗಣ್ಯರ ಸಭೆ, ಸಮಾರಂಭಗಳಲ್ಲಿ ಇವರ ಕಲಾಪ್ರದರ್ಶನ ಇದ್ದೇ ಇರುವುದು

ವಿಶೇಷ. ಹಗಲುವೇಶ, ಜನಪದ ಮೊದಲಾದ ಚಲನಚಿತ್ರಗಳಲ್ಲಿ ಕಲಾವಿದರಾಗಿ ಮೈನವಿರೇಳಿಸುವ ಕಲಾ ಪ್ರದರ್ಶನ ನೀಡಿರುವುದು ವಿಶೇಷವಾಗಿದೆ.

ವೀರಭದ್ರನ ನೃತ್ಯವನ್ನು ಒಂದು ಹವ್ಯಾಸಿ ಕಲೆಯಾಗಿ, ಹೊಸ ಹೊಸ ಆವಿಷ್ಕಾರದೊಂದಿಗೆ ಒಂದು ಕಲಾ ತಂಡವನ್ನಾಗಿಸಿದ ಹಿರಿಮೆಯೂ ಇವರದು. ಇದನ್ನು ಒಂದು ವಿಶಿಷ್ಟ ಕಲಾ ಪ್ರಕಾರವನ್ನಾಗಿ ಬೆಳೆಸಿರುವ ಇವರು ಒಂದು ಸಮರ್ಥ ಕಲಾಕೂಟವನ್ನಾಗಿಸಿದ್ದಾರೆ. ೧೫ ರಿಂದ ೨೦ ಕಲಾವಿದರಿಂದ ಕೇಂದ್ರವ್ಯಕ್ತಿ ನೀಲಕಂಠಯ್ಯನವರು. ೮ ಜನ ಮೇಳದವರು, ಕರಡೆ, ಚಮ್ಮೇಳ, ನಗಾರಿ, ದಿಮ್ಮಿ, ತಾಳವೆನಾರಿ, ಶೃತಿ, ಕಹಳೆ ಇವು ಹಿನ್ನೆಲೆ ವಾದ್ಯಗಳು. ಸಹಕಲಾವಿದರೂ ಕೂಡ ವಿಶೇಷವಾದ ಉಡುಗೆ-ತೊಡುಗೆ ತೊಟ್ಟಿರುತ್ತಾರೆ. ಕಾವಿಯ ನಿಲುವಂಗಿ, ಬಿಳಿ ವೀರಗಚ್ಚೆ, ಹಳದಿ ಪೇಟ, ವಕ್ಷಸ್ಥಳದಿಂದ ಕತ್ತರಿಯ ಆಕಾರದಲ್ಲಿ ಬಿಗಿದು ಸೊಂಟದಿಂದ ಕೆಳಕ್ಕೆ ಸುತ್ತಿ ಕಟ್ಟಿದ ಉತ್ತರೀಯ ಇವು ವೀರಭದ್ರನ ಸಹಕಲಾವಿದರ ವೇಷಭೂಷಣ.

ನೀಲಕಂಠಯ್ಯನವರು ವೀರಭದ್ರನ ಕುಣಿತದ ಜೊತೆಗೆ ವೀರಭದ್ರನನ್ನು ಕುರಿತು ಕಾವ್ಯವನ್ನು ಹಾಡುತ್ತಾರೆ. ವೀರಭದ್ರನ ಅವತಾರದ ಸಮಗ್ರ ಕತೆಯನ್ನು ಮೌಖಿಕವಾಗಿ ಹೇಳುವವರು ಜನಪದ ಪರಂಪರೆಯಲ್ಲಿ ವಿರಳ. ಆ ವಿರಳರಲ್ಲಿ ನೀಲಕಂಠಯ್ಯ ಪ್ರಮುಖರು.

ಶಿವನಿಲ್ಲದೆ ಬಂದ ದಾಕ್ಷಾಯಿಣಿ ಸಭೆಯಲ್ಲಿ ಆದ ಅಪಮಾನದಿಂದ ಯಜ್ಞಕುಂಡಕ್ಕೆ ಧುಮುಕಿದಳು. ವಿಷಯ ನಂದಿ, ಭೃಂಗಿಯ ಮೂಲಕ ಪರಶಿವನಿಗೆ ತಲುಪುತ್ತದೆ. ಶಾಂತಸಾಗರದಲ್ಲಿ ಶಿವ ಉಗ್ರನಾಗಿ ಪ್ರಳಯ ಕಾಲದ ರುದ್ರನಾಗಿ ಜಟೆಯನ್ನು ಅಪ್ಪಳಿಸಿದುದರಿಂದಾಗಿ ವೀರಭದ್ರನ ಉದ್ಭವವಾಗುತ್ತದೆ. ಶಿವನ ಆದೇಶದಂತೆ ದಕ್ಷಬ್ರಹ್ಮನ ಯಜ್ಞವನ್ನು ಧ್ವಂಸ ಮಾಡಲು ವೀರಭದ್ರ ರುದ್ರಗಣಗಳೊಂದಿಗೆ ಹೊರಟ ಸನ್ನಿವೇಶವೇ ವೀರಭದ್ರನ ಕುಣಿತದ ಪ್ರಸಂಗ. ಅಂಗಾಂಗಗಳಲ್ಲಿ ಲಿಂಗ, ಜಂಗು, ರುದ್ರನ ತಲೆ ಇರುವುದರಿಂದಲೂ, ಶಿವನ ಲೀಲಾವಳಿಯನ್ನು ಸಾರುವುದರಿಂದಲೂ ಇವರನ್ನು ಲಿಂಗದಬೀರರು ಎಂದು ಕರೆಯಲಾಗುವುದು.

ಶ್ರೀ ಸಿದ್ದಗಂಗೆಯ ಶಿಕ್ಷಕರ ತರಬೇತಿ ಕಾಲೇಜಿನಲ್ಲಿ ಕಲಾ ಶಿಕ್ಷಕರಾಗಿಯೂ ಸೇವೆ ಸಲ್ಲಿಸಿರುವ ನೀಲಕಂಠಯ್ಯ ಅವರಿಗೆ ಕನ್ನಡ ರಾಜ್ಯೋತ್ಸವ ಪ್ರಶಸ್ತಿಯೂ ಸೇರಿದಂತೆ ಹಲವು ಮಹತ್ವದ ಗೌರವವೂ ಸಂದಾಯವಾಗಿದೆ.

ಹೆಚ್. ಎಸ್. ನೀಲಕಂಠಯ್ಯ
ಸಿದ್ಧಗಂಗೆ ಮಠ, ಕ್ಯಾತಸಂದ್ರ ಅಂಚೆ.

## ಭಾಗವತ ಪಟೇಲ್ ಎನ್. ನಾರಸಪ್ಪ

ಅವಿದ್ಯಾವಂತರಾದರೇನಂತೆ, ಕಲೆಯು ಸಂಪರ್ಕದಿಂದಾಗಿ ಉನ್ನತ ವಿದ್ಯಾಸಂಸ್ಥೆಯಾದ ವಿಶ್ವವಿದ್ಯಾನಿಲಯದಲ್ಲಿ ಕಲಾ ಮೇಷ್ಟು ಆಗುವ, ಅಲ್ಲೂ ತಮ್ಮ ಶ್ರೇಷ್ಠತೆಯಿಂದಾಗಿ ಹತ್ತು ವರ್ಷಗಳ ಕಾಲ, ಕಲಾ ಸಂದರ್ಶಕ ಪ್ರಾಧ್ಯಾಪಕರಾಗಿ ಕೆಲಸ ಮಾಡುವ ಹಂತಕ್ಕೆ ಬೆಳೆಯುವ ಮೂಲಕ 'ಮೂಡಲಪಾಯ ಯಕ್ಷಗಾನ ಕೋಗಿಲೆ' ಎಂದೇ ಕರೆಸಿಕೊಂಡವರು ಪಟೇಲ್ ನಾರಸಪ್ಪನವರು.

ಪಟೇಲ್‌ಗಾರಿಕೆಯ ಗತ್ತು, ಹುದ್ದೆಯ ಅಹಂನಿಂದಾಚೆ ಒಬ್ಬ ಕಲಾವಿದ ಹೃದಯ ಹೊಂದಿದ್ದ ನಾರಸಪ್ಪನವರು ಹುಟ್ಟಿದ್ದ ೧೯೧೮ ರಲ್ಲಿ. ತಂದೆ ನರಸಿಂಹಯ್ಯ, ತಾಯಿ ದೇವಮ್ಮ ಈ ದಂಪತಿಗಳ ಪ್ರೀತಿಯ ಮಗ. ಆದರೆ ಆ ಪ್ರೀತಿಯ ಋಣ ಹೆಚ್ಚು ಕಾಲ ಇರಗೊಡದೆ ತಂದೆ ತಾಯಿ ಇಬ್ಬರೂ ಹತ್ತನೇ ವಯಸ್ಸಿನೊಳಗೆ ತೀರಿಕೊಂಡದ್ದು ದುರಂತ.

ತಂದೆ-ತಾಯಿಯರನ್ನು ಕಳೆದುಕೊಂಡ ನಾರಸಪ್ಪನವರು ಬೆಳೆದದ್ದು ತಮ್ಮ ಸೋದರಮಾವನ ಮನೆಯಲ್ಲಿ. ಅದು ಭೈರಾಪುರ. ಅಲ್ಲಿಯೇ ಬೆಳೆದು, ಮಾವನ ಮಗಳನ್ನೇ ವಿವಾಹವಾದರು. ಇವರಿಗೆ ಮೂವರು ಗಂಡು, ಒಂದು ಹೆಣ್ಣು ಮಗಳಿದ್ದಾಳೆ.

ನಾರಸಪ್ಪನವರು ಬಾಲ್ಯದಿಂದಲೂ ಯಕ್ಷಗಾನ ಕಲಾವಿದರು. ಸಾಮಗಾನ ಕಲಾವಿದರಾಗಿಯೂ ವಿಶೇಷ ಸ್ಥಾನಮಾನ ಪಡೆದಿದ್ದರು. ಸಂಪೂರ್ಣ ರಾಮಾಯಣ ನಾಟಕದ ಆಂಜನೇಯನ ಪಾತ್ರ ಇವರಿಗೆ ಅಪಾರ ಖ್ಯಾತಿ ತಂದುಕೊಟ್ಟ ಪಾತ್ರವಾಗಿತ್ತು.

ಯಕ್ಷಗಾನದ ವಿಶೇಷ ಪಾಂಡಿತ್ಯ, ಹಾಡುಗಾರಿಕೆ 'ಉಡನ್ ಎಸೆಯುವುದು' ಈ ಮೊದಲಾದ ಸಂಗತಿಗಳಲ್ಲಿ ವಿಶೇಷ ಪರಿಣತಿ ಪಡೆದಿದ್ದರು. ಜಾನಪದ ವಿದ್ವಾಂಸ ಜೀ.ಶಂ.ಪರಮಶಿವಯ್ಯ, ಕೊನೆಯಹಳ್ಳಿಯ ಸಂಪರ್ಕ ಪಡೆದಂತೆಲ್ಲಾ ನಾರಸಪ್ಪನವರ ನಿಜವಾದ ಪ್ರತಿಭೆಗೆ ಉತ್ತಮ ಅವಕಾಶ ಲಭ್ಯವಾಗತೊಡಗಿತು. ಮೈಸೂರು

ವಿಶ್ವವಿದ್ಯಾಲಯದ ಕಲಾ ಸಂದರ್ಶಕ ಪ್ರಾಧ್ಯಾಪಕರಾಗುವುದಲ್ಲದೆ ಉಡುಪಿ, ದೆಹಲಿ, ನಾಗಪುರ, ಬಾಂಬೆ, ತಂಜಾವೂರು ಈ ಮೊದಲಾದ ಕಡೆ ಯಕ್ಷಗಾನ ಕಲೆ, ವಿಚಾರ ಸಂಕಿರಣ, ಯಕ್ಷಗಾನ ಪ್ರದರ್ಶನದಲ್ಲಿ ಭಾಗವಹಿಸತೊಡಗಿದರು. ದೆಹಲಿಯಲ್ಲಿ ಸಾಂಸ್ಕೃತಿಕ ವಿನಿಮಯದ ಯೋಜನೆಯ ಅಡಿಯಲ್ಲಿ ಮೂರು ಬಾರಿ ಯಕ್ಷಗಾನ ಪ್ರದರ್ಶನ ಹಾಗೂ ಮೂಡಲಪಾಯ ಯಕ್ಷಗಾನದ ಬಗೆಗೆ ಸಂವಾದ ನಡೆಸಿಕೊಟ್ಟ ಹಿರಿಮೆಯೂ ಇವರದು.

ಐರಾವತ, ಕರಿಬಂಟ, ಕೀಚಕನ ವಧೆ, ದುಶ್ಯಾಸನ ಕಾಳಗ, ಲಂಕಾದಹನ, ಲವಕುಶ, ವೀರ ಅಭಿಮನ್ಯು ಮೊದಲಾದ ಇಪ್ಪತ್ತು ಯಕ್ಷಗಾನ ಪ್ರಸಂಗಗಳಿಗೆ ಭಾಗವಂತಿಕೆ ನೀಡಿದರು. ಮೈಸೂರು ವಿಶ್ವವಿದ್ಯಾನಿಲಯದ ಜನಪದ ಕಲಾಕೂಟ ಇವರಿಗೆ ಮೂಡಲಪಾಯ ಯಕ್ಷಗಾನ ಕೋಗಿಲೆ ಎಂಬ ಪ್ರಶಸ್ತಿ ನೀಡಿ ಗೌರವಿಸಿದೆ. ಬೆಂಗಳೂರಿನ ಕರ್ನಾಟಕ ಜಾನಪದ ಟ್ರಸ್ಟ್, ತುಮಕೂರು ಜಿಲ್ಲಾಡಳಿತ ಇವರನ್ನು ಗೌರವಿಸಿದೆ.

ತಾಳ ಹಿಡಿದು ರಂಗಕ್ಕೇರಿದರೆಂದರೆ ಚುರುಕು ಮಾತುಗಾರಿಕೆ, ಅಭಿನಯ, ನೃತ್ಯಗಳನ್ನು ಕಲಾತ್ಮಕವಾಗಿ ಪ್ರಕಟಿಸುತ್ತದ್ದ ನಾರಸಪ್ಪನವರು ಮೂಡಲಪಾಯ ಯಕ್ಷಗಾನ ಕಲೆಯ ಪ್ರಬುದ್ಧತೆಗಾಗಿ ಶ್ರಮಿಸಿದ ಅತ್ಯುತ್ತಮ ಮೂಡಲಪಾಯ ಯಕ್ಷಗಾನ ಸಂಘಟಕರು. ಇದೀಗ ದಿವಂಗತರು. ಇವರೊಂದಿಗೆ ಕೊನೆಯುಹಳ್ಳಿಯ ಮೂಡಲಪಾಯ ಯಕ್ಷಗಾನ ಕೇಂದ್ರವೂ ಬಡವಾಗುತ್ತಿದೆ.

## ಭಾಗವತ ಸಿದ್ಧಲಿಂಗಪ್ಪ

ತುಮಕೂರು ಜಿಲ್ಲೆಯಲ್ಲಿ ಮಾತ್ರ ಉಳಿದಿರುವ ಮೂಡಲಪಾಯ ಯಕ್ಷಗಾನ ಕರ್ನಾಟಕದ ಶ್ರೇಷ್ಠ ಕಲೆ. ಅಪಾರ ಸಂಖ್ಯೆಯಲ್ಲಿ ಭಾಗವತರು, ಯಕ್ಷಗಾನ ಕಲಾವಿದರನ್ನು ಇನ್ನೂ ಉಳಿಸಿಕೊಂಡಿರುವ ತುಮಕೂರು ಜಿಲ್ಲೆ ಮೂಡಲಪಾಯ ಯಕ್ಷಗಾನ ತೌರು ಎನ್ನುತ್ತಾರೆ. ಜನಪದ ವಿದ್ವಾಂಸ ಡಾ|| ಜಿಶಂಪ. ತಿಪಟೂರು ತಾಲೂಕು ಅರಳಗುಪ್ಪೆಯ ಸಿದ್ಧಲಿಂಗಪ್ಪನವರು ಮೂಲತಃ ಶಾಲಾ ಮಾಸ್ತರು. ತಮ್ಮ ಶಾಲಾ ಶಿಕ್ಷಣಗಿರಿಯಷ್ಟೇ ಯಕ್ಷಗಾನ ಕಲೆಯನ್ನೂ ಸಮರ್ಥವಾಗಿ ಕಟ್ಟಿ ಬೆಳೆಸಿದ ಹಿರಿಮೆಗೂ ಪಾತ್ರರು. ಸಿದ್ದಲಿಂಗಪ್ಪನವರದು ಭಾಗವಂತಿಕೆಯ ಕಲಾ ಪರಂಪರೆಯ ಕುಟುಂಬ. ತಂದೆ, ತಾತ ಹೀಗೆ ಪಾರ್ವತಮ್ಮನವರೂ ಜನಪದ ಕಲಾವಿದೆ. ಇಂಥ ಕುಟುಂಬದಲ್ಲಿ ಜನಿಸಿದವರು ಸಿದ್ದಲಿಂಗಪ್ಪನವರು. ತಂದೆ ಭಾಗವರತಾದರೂ, ಯಕ್ಷಗಾನವನ್ನು ಕಲಿತದ್ದು ಗುರು ಮಲ್ಲಿಕಾರ್ಜುನಯ್ಯ ಎಂಬುವರಿಂದ. ಮೃದಂಗ ಕಲಿಸಿದ ಗುರು ಕಿಟ್ಟಣ್ಣನವರು.

ಸಿದ್ದಲಿಂಗಪ್ಪನವರ ಏಕೈಕ ಮಗಳಾದ ಮಲ್ಲಮ್ಮ ತಂದೆಯ ಭಾಗವಂತಿಕೆಯ ಕಲೆಗೆ ಒತ್ತಾಸರೆಯಾಗಿ ನಿಂತವರು. ಸಿದ್ಧಲಿಂಗಪ್ಪನವರು ಶಿಕ್ಷಕರಾಗಿ ಊರೂರು ಅಲೆದರೂ ಅವರ ಕುಟುಂಬ ತೋಟವೆಲ್ಲವನ್ನೂ ಮಗನ ಸ್ಥಾನದಲ್ಲಿ ನಿಂತು ಮಲ್ಲಮ್ಮನವರು ನಡೆಸಿಕೊಂಡು ಬಂದರು.

ಆರಂಭದಲ್ಲಿ ಶ್ರೀ ಗಣಪ, ಶಾರದೆ, ಲವ-ಕುಶ ಈ ಮುಂತಾದ ಬಾಲಕ ಪಾತ್ರಗಳಲ್ಲಿ ಅಟ್ಟವೇರಿದ ಸಿದ್ದಲಿಂಗಪ್ಪನವರು, ಮುಂದೆ ಪ್ರಬುದ್ಧ ಕಲಾವಿದರಾಗಿ, ಭಾಗವತರಾಗಿ, ಮೃದಂಗ ವಾದಕರಾಗಿ, ವೇಷಭೂಷಣಗಳ ತಯಾರಿಕೆಗೂ ವಿಶೇಷ ಗಮನಹರಿಸಿದವರು. ದಿವಾಕರಾಚಾರ್, ಗಂಗಾಧರಾಚಾರ್, ದಾಸಪ್ಪ ಈ ಮುಂತಾದ ಭಾಗವತ ಪಂಡಿತರ ಒಡನಾಟದಲ್ಲಿ ಬೆಳೆದವರು.

ಕಂಸ, ರಾವಣ, ದುರ್ಯೋಧನ, ಶತಕಂಠ ಈ ಮೊದಲಾದ ಘೋರ ಪಾತ್ರದಾರಿಕೆಗೆ ಹೆಸರುವಾಸಿಯಾದ ಸಿದ್ಧಲಿಂಗಪ್ಪನವರು ಮುಂದೆ ಸ್ವತಃ ಭಾಗವತರಾಗಿ ಲವಕುಶ, ಚಿತ್ರಕೇತು, ದಕ್ಷಯಜ್ಞ, ಬಾಣಾಸುರ, ಭಸ್ಮಾಸುರ, ಗಯಚರಿತ್ರೆ, ಗಿರಿಜಾಕಲ್ಯಾಣ, ಕರ್ಣಪರ್ವ, ದೇವಿಮಹಾತ್ಮೆ, ಅಭಿಮನ್ಯು ಕಾಳಗ ಮೊದಲಾದ ಯಕ್ಷಗಾನ ಪ್ರಸಂಗಗಳನ್ನು ತುಮಕೂರು ಜಿಲ್ಲೆಯಾದ್ಯಂತ ಕಲಿಸಿ ಪ್ರಯೋಗ ಮಾಡಿದವರು. ಅರಳಗುಪ್ಪೆಯ ಹಿರಿಯ ಯಕ್ಷಗಾನ ಭಾಗವತ ಚನ್ನಬಸವಯ್ಯರಂಥ ಶ್ರೇಷ್ಠ ಕಲಾವಿದರನ್ನು ರೂಪಿಸಿದ ಹಿರಿಮೆಯೂ ಇವರದು. ಜೀಶಂಪ ಪರಿಶ್ರಮದಿಂದ ರೂಪಿಸಿದ ಕೊನೆಹಳ್ಳಿ ಮೂಡಲಪಾಯ ಯಕ್ಷಗಾನ ಕೇಂದ್ರದ ಸ್ಥಾಪಕ ಸಮಿತಿ ಸದಸ್ಯರಾಗಿ ಕಲಾಕೇಂದ್ರ ನಿರ್ಮಾಣಗೊಳ್ಳಲು ಅಪಾರವಾಗಿ ಶ್ರಮಿಸಿದವರು. ಕರ್ನಾಟಕದ ಉದ್ದಗಲಕ್ಕೂ ಹಿರಿಯ ವಿದ್ವಾಂಸರನ್ನು ತಮ್ಮ ಹುಟ್ಟೂರು ಅರಳಗುಪ್ಪೆಗೆ, ಕೊನೆಹಳ್ಳಿಗೆ ಕರೆಸಿ, ಅವರ ಮುಂದೆ ಮೂಡಲಪಾಯ ಯಕ್ಷಗಾನವನ್ನು ಪ್ರಯೋಗಿಸಿ, ಇವರ ಪರಿಷ್ಕಾರಕ್ಕೆ ಪ್ರೇರಕವಾದವರು ಮೈಸೂರು ವಿಶ್ವವಿದ್ಯಾನಿಲಯದ ಜನಪದ ವಿದ್ಯಾರ್ಥಿಗಳಿಗೆ ಸಂದರ್ಶಕ ಕಲಾವಿದರಾಗಿಯೂ ಕೆಲಸ ನಿರ್ವಹಿಸಿದ್ದು ಇವರ ಹಿರಿಮೆ.

ಇವರು ಇರುವಷ್ಟು ದಿನ ಕೊನೆಹಳ್ಳಿ ಯಕ್ಷಗಾನ ಕಲಾ ಕೇಂದ್ರವಾಗಿ ಪ್ರದರ್ಶನ ನಡೆಯುತ್ತಲೇ ಇದ್ದವು. ಇಲ್ಲಿ ಪ್ರಥಮವಾಗಿ ಮೂಡಲಪಾಯ ಯಕ್ಷಗಾನ ಕಮ್ಮಟವನ್ನು ಏರ್ಪಡಿಸುವಲ್ಲಿ ಇವರ ಪಾತ್ರವು ಅಪಾರವಾಗಿತ್ತು.

ತೊಂಬತ್ತು ವರ್ಷಗಳ ಕಾಲ ಬದುಕಿ, ಅಷ್ಟು ವರ್ಷವೂ ಯಕ್ಷಗಾನಕ್ಕಾಗಿಯೇ ಮುಡಿದ ಶ್ರೇಷ್ಠ ಕಲಾವಿದ ಭಾಗವತ ಸಿದ್ಧಲಿಂಗಪ್ಪನವರಿಗೆ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ೧೯೮೭ರಲ್ಲಿ ಕಲಾವಿದ ಪ್ರಶಸ್ತಿ ನೀಡಿ ಗೌರವಿಸಿದೆ.

ಭಾಗವತ ಸಿದ್ಧಲಿಂಗಪ್ಪ,<br>ಅರಳಗುಪ್ಪೆ,<br>ತಿಪಟೂರು ತಾಲೂಕು.

# ಮೇಳದ ಶಂಭುಲಿಂಗಪ್ಪ

ಸಿರಿವಂತ ಕುಟುಂಬದಲ್ಲಿ ಹುಟ್ಟಿ, ಕುದುರೆ ಮೇಲೆ ತಿರುಗಾಟದ ಸಂದರ್ಭದಲ್ಲಿ ಯಕ್ಷಗಾನ–ಬಯಲಾಟಗಳ ಗೀಳು ಹಿಡಿಸಿಕೊಂಡು, ಮನೆ ಮಠ ತೊರೆದು ವರ್ಷಗಟ್ಟಲೆ ಮೇಳದವರ ಹಿಂದೆ ಅಲೆದದ್ದೂ ಇದೆ, ಹಸಿದು ದೆಸೆ ತಪ್ಪಿದ್ದೂ ಇದೆ. ಅಟ್ಟಿನ ಮುಂದೆ ಕುಂತು ಬೆಳಗ್ಗೆ ತನಕ ಆಟ ನೋಡಿ ಮನೆಗೆ ಬಂದರೆ "ಈ ಪೋಲಿ ನನ್ನ ಮಗನಿಗೆ ಮಠಗಿಠ ಬ್ಯಾಡ, ಕುರಿಗೆ ಹಾಕ್ರಿ ಎಂಬ ಅಪ್ಪನ ಕೋಪಕ್ಕೆ ಒಳಗಾಗಿ ಕುರಿ ಕಾಯೋಕೆ ಸೋಪ್ತಿಯಾದೆ" ಎಂದು ತನ್ನ ಯಕ್ಷಗಾನ ಕಲೆ ರೂಪುಗೊಂಡ ಬಗೆಯನ್ನು ಶಂಭಣ್ಣ ತೋಡಿಕೊಂಡ ಬಗೆ ಹೀಗೆ.

ಶಂಭಣ್ಣ ಈಗಿಲ್ಲ, ೯೦ ವರ್ಷ ಬದುಕಿದ್ದ ಮಹಾನ್ ಕಲಾವಿದ ಯಾವುದೇ ಪ್ರಶಸ್ತಿ, ಮಾಸಾಶನ, ಸನ್ಮಾನ ಕಂಡವರಲ್ಲ. ಆದರೆ ಅದೆಲ್ಲವನ್ನೂ ಮೀರಿದ ಜನಾದರವನ್ನು ಕಂಡು ಅನುಭವಿಸಿದವರು. ತಮ್ಮ ತೊಂಬತ್ತರ ಇಳಿ ವಯಸ್ಸಿನಲ್ಲೂ ಯಕ್ಷಗಾನ ಪ್ರಸಂಗಗಳು ಆಕಾಶವಾಣಿಯಲ್ಲಿ ಪ್ರಸಾರವಾದಾಗ ತಾಳ ಹಿಡಿದುಕೊಂಡು ಹಿಮ್ಮೇಳ, ಮುಮ್ಮೇಳ ಎರಡನ್ನೂ ಹಾಡುವ, ಹಾಡುವ ಧಾಟಿ ತಪ್ಪಿದರೆ ಬೇಸರಿಸಿಕೊಳ್ಳುವ, ಅಸಹಾಯಕರಂತೆ ಮಾತಾಡುವ ಆಟ ಕಳೆಗಟ್ಟಿಲ್ಲ. ಹೀಗಾದರೆ ಹೇಗೆ ಎಂದು ಕೊರಗುವ ಈ ನಿಸ್ಸೀಮ ಮುದುಕ ಬದುಕಿದ್ದು ಕಲೆಗಾಗಿ, ಕಲಾವಿದನಾಗಿಯೇ.

ತುಮಕೂರು ಜಿಲ್ಲೆಯ ಗುಬ್ಬಿ ತಾಲೂಕಿನ ಇರಕಸಂದ್ರದ ಈ ವ್ಯಕ್ತಿ, ದಶಕಂಠ ರಾಮಾಯಣ, ನಳಚರಿತ್ರೆ, ಕುಶಲವರ ಕಾಳಗ, ಪಾಂಡವರ ವನವಾಸ, ಲಂಕಾದಹನ, ದೇವಿಮಹಾತ್ಮೆ, ದಕ್ಷಯಾಗ, ಇಂದ್ರಜಿತ್ ಕಾಳಗ, ದುಶ್ಯಾಸನನ ಕತೆ ಮುಖ್ಯವಾದವುಗಳು. ದಶಕಂಠ ರಾಮಾಯಣದಲ್ಲಿ ದೇವಿ ಪಾತ್ರವನ್ನು ಒಂದು ನೂರು ಪ್ರದರ್ಶನಕ್ಕಿಂತಲೂ ಅಧಿಕ ಬಾರಿ ಅಭಿನಯಿಸಿದ್ದಾರೆ. ಐರಾವತದಲ್ಲಿ ಅಟ್ಟಿನ ಮೇಲೆ ಅಟ್ಟು ಹಾಕಿ ಅಲ್ಲಿಂದಲೇ

ಕೆಳಗೆ ನೆಗೆದು ಕುಣಿಯು ಕಲೆಯನ್ನು ರೂಢಿಸಿ ಬೆಳೆಸಿದ ಹಿರಿಮೆಯೂ ಮೇಳದ ಶಂಭಣ್ಣ ಅವರಿಗೆ ಸಲ್ಲುತ್ತದೆ. ದಶಕಂಠ ರಾಮಾಯಣದಲ್ಲಿ ದೇವಿ ಪಾತ್ರದ ಅಭಿನಯ ಮೈದುಂಬಿ, ರಕ್ತ ಬಲಿ ಆದನಂತರವೇ ಆವೇಶ ಇಳಿಯುತ್ತಿದ್ದ, ಬೀದಿಯ ಮೂಲಕ ಪ್ರೇಕ್ಷಕರ ಬಯಲಿನಿಂದ ದೇವಿಯನ್ನು ತಮಟೆ ವಾದ್ಯ ಹಾಗೂ ಪಂಜಿನ ಮೂಲಕ ವೇದಿಕಗೆ ಕರೆತರುವ ರೋಚಕ ಚಿತ್ರ, ದೇವಿ ಹಾಗೂ ದಶಕಂಠ ರಾವಣ ಇವರ ಯುದ್ಧವನ್ನು ಏಣಿಯನ್ನು ಅಡ್ಡಹಿಡಿದು ಕುಣಿಸುವುದು, ಸಂಭಾಷಣೆ ನಡೆಸುವುದು ಇವರ ವಿಶೇಷ ಕಲಾನೈಪುಣ್ಯವಾಗಿದೆ.

ಮೇಳದ ಶಂಭಣ್ಣ ಭಾಗವತ, ಕಲಾವಿದ, ಗುರು, ಸಂಘಟಕ ಎಲ್ಲವೂ ಆಗಿದ್ದವರು. ಐರಾವತ ಯಕ್ಷಗಾನ ಪ್ರದರ್ಶನದಲ್ಲಿ ಕುಂತಿಗೆ ಗಜಗೌರಿ ವ್ರತಕ್ಕಾಗಿ ಆನೆಯನ್ನು ಪಾಂಡವರು ದೇವೇಂದ್ರನ ಒಡ್ಡೋಲಗದಿಂದ ಕರೆತರುವ ವಿಶೇಷ ಸಂದರ್ಭವನ್ನು ತುಮಕೂರು ಜಿಲ್ಲೆಯಲ್ಲಿ ಮೊದಲಿಗೆ ರೂಪಿಸಿದವರು. ಹಟ್ಟಿನ ಮೇಲೆ ಹಟ್ಟು ಹಾಕಿ ಅಲ್ಲಿಂದ ಕುಣಿದು ಕುಪ್ಪಳಿಸುವುದು ರೋಚಕ ಪ್ರಸಂಗ.

ಭಯಾನಕ ರೀತಿಯಲ್ಲಿ ಯಕ್ಷಗಾನವನ್ನು ಬೆಳೆಸಿದವರು ಶಂಭಣ್ಣನವರು. 'ರಕ್ತಬೀಜಾಸುರ' ಎಂದರೆ ಅದೊಂದು ರಣಭಯಂಕರ, ಕುಳಿತವರು ಹೆದರುವ, ನಿದ್ರಿಸುವವರು ಬೆಚ್ಚಿಬೀಳುವ ಇನ್ನೂ ಹೆಚ್ಚೆಂದರೆ ಗರ್ಭಿಣಿಯರು ಈ ಪ್ರಸಂಗ ನೋಡಬಾರದಂತಹ ಭಯಾನಕ ಸಂದರ್ಭವನ್ನು ಸೃಷ್ಟಿಮಾಡಿ, ನಿಜವಾದ ರಸಭಾವ, ಧ್ವನಿಭಾವದಿಂದ ರಂಗ ಕಳೆಗಟ್ಟುವಂತೆ ಮಾಡಿದವರು.

ಉತ್ತಮ ವೇಷಭೂಷಣ, ಸೀರೆಗಳಿಂದ ಬಿಗಿದು ಕಟ್ಟುತ್ತಿದ್ದ ಕಚ್ಚೆಪಂಚೆ, ಬಣ್ಣಬಣ್ಣದ ಎಂಟು ಮಾರುದ್ದ ಸೀರೆ, ಮುಖಭಾವ, ಅದಕ್ಕೊಪ್ಪುವ ಪಾತ್ರಗಳ ನಿರ್ಮಿತಿಯಲ್ಲಿ ಎತ್ತಿದ ಕೈ.

ಕೊನೆಗಾಲದಲ್ಲಿ ಸಾಮಗಾನ ಕಲೆಗೂ ಮಾರುಹೋಗಿ ಸಂಪೂರ್ಣ ರಾಮಾಯಣ, ದುಶ್ಯಾಸನ ಕತೆ, ದಾನಶೂರ, ಕರ್ಣ ಈ ಮೊದಲಾದ ನಾಟಕಗಳಿಗೆ ಸಮರ್ಥವಾದ ನಿರ್ದೇಶನ ಮಾಡಿದ್ದರು.

ಜನಪದ ಹಾಡುಗಾರಿಕೆ, ಕೋಲು ಮೇಳ, ಕೋಲು ಪದ, ಹಾಸ್ಯಪದಗಳನ್ನು ಸಮರ್ಥವಾಗಿ ಹಾಡಿ ಜನಗಳನ್ನು ನಗೆಗಡಲೊಳಗೆ ಬೀಳಿಸುತ್ತಿದ್ದ ಅಪರೂಪದ ಕಲಾವಿದ ಮೇಳದ ಶಂಭಣ್ಣ. ಇವರ ಮಗ ಸಿದ್ಧಲಿಂಗಯ್ಯನೂ ಅಪ್ಪನ ಹಾದಿಯನ್ನು ಸಮರ್ಥವಾಗಿ ತುಳಿದು ಬಯಲು ಕತೆ, ಸಾಮಗಾನ ಎರಡೂ ಪ್ರಕಾರಗಳ ಕಲೆಯಲ್ಲಿಯೂ ಪಳಗಿದ ಭಾಗವತರಾಗಿದ್ದಾರೆ. ಹತ್ತಾರು ಯಕ್ಷಗಾನ ಪ್ರಸಂಗಗಳನ್ನು ಸಮರ್ಥವಾಗಿ ನಿರ್ದೇಶಿಸಿದ್ದಾರೆ.

**ಮೇಳದ ಶಂಭಣ್ಣ, C/o ಸಿದ್ಧಲಿಂಗಪ್ಪ, ಇರಕಸಂದ್ರ,**
**ತೋಟದ ಮನೆ, ಚೇಳೂರು ಹೋಬಳಿ, ಗುಬ್ಬಿ ತಾಲೂಕು.**

## ಭಾಗವತ ಎ. ಎನ್. ಚನ್ನಬಸವಯ್ಯ

ಯಕ್ಷಗಾನ, ವೀರಗಾಸೆ, ಕರಪಾಲಮೇಳ, ಶಿವಕಥಾ ಪ್ರವಚನ, ಪೌರಾಣಿಕ, ಸಾಮಾಜಿಕ ಹಾಗೂ ಐತಿಹಾಸಿಕ ಈ ಎಲ್ಲ ಕಲಾ ಪ್ರಕಾರಗಳಲ್ಲಿ ಗಣನೀಯ ಕೊಡುಗೆ ನೀಡಿರುವ ಅರಳಗುಪ್ಪೆ ಚನ್ನಬಸವಯ್ಯ ತಮ್ಮ ಅಪೂರ್ವ ಹಾಡು, ಮೂಡಲಪಾಯ ಯಕ್ಷಗಾನದ ನೃತ್ಯಕಲೆಯಿಂದಾಗಿ ಇಂದು ರಾಜ್ಯವ್ಯಾಪಿ ಪ್ರಸಿದ್ಧ ಕಲಾವಿದರಾಗಿ ರೂಪುಗೊಂಡಿದ್ದಾರೆ.

೧೯೨೫ರಲ್ಲಿ ರೈತಾಪಿ ಹಾಗೂ ಯಕ್ಷಗಾನ ಕಲಾವಿದ ಕುಟುಂಬದಲ್ಲಿ ಜನಿಸಿದರು. ತಾಯಿ ಬಸಮ್ಮ, ತಂದೆ ನಂಜಪ್ಪ. ಪ್ರಾಥಮಿಕ ಶಾಲೆಯ ಹಂತದವರೆಗೆ ಮಾತ್ರ ವಿದ್ಯಾಭ್ಯಾಸ ಮಾಡಿರುವ ಇವರು ಯಕ್ಷಗಾನ ಕ್ಷೇತ್ರದಲ್ಲಿ ಒಂದು ಡಾಕ್ಟರೇಟ್ ಪಡೆದ ಅನುಭವ, ಕುಶಲತೆ ಹೊಂದಿರುವುದು ವಿಶೇಷ. ಯಕ್ಷಗಾನ ಪಾತ್ರಧಾರಿಯಾಗಿ, ಭಾಗವತರಾಗಿ, ಯಕ್ಷಗಾನ ಹಸ್ತಪ್ರತಿ ತಯಾರಕರಾಗಿ, ಲೇಖಕರಾಗಿ, ಸಂಘಟಕರಾಗಿ ಯಕ್ಷಗಾನ ತಿರುಗಾಟದ ನೇತಾರರಾಗಿ ಮಾಡಿರುವ ಸಾಧನೆ ಅಸಾಧಾರಣವಾದುದು.

ತಮ್ಮ ತಾತ, ತಂದೆಯವರ ಪ್ರೇರಣೆ, ಪ್ರಭಾವದಿಂದಾಗಿ ಶಿವಜಲಂಧರ ಯಕ್ಷಗಾನದ ಮೂಲಕ ರಂಗ ಪ್ರವೇಶಿಸಿದರು. ಚಿತ್ರಕೇತು ಮಹಾರಾಜ, ಕರ್ಣಪರ್ವ, ದಕ್ಷಯಾಗ, ಗಿರಿಜಾ ಕಲ್ಯಾಣ, ದೇವಿ ಮಹಾತ್ಮೆ ಈ ಯಕ್ಷಗಾನದಲ್ಲಿ ವಿಭಿನ್ನ ಪಾತ್ರಗಳಲ್ಲಿ ಅಭಿನಯಿಸಿ ಜನಮನ್ನಣೆ ಪಡೆದರು. ಆರಂಭದಲ್ಲಿ ಸ್ತ್ರೀವೇಶ, ಹನುಮನಾಯಕ ಮುಂತಾದವುಗಳಲ್ಲಿ ಕಾಣಿಸಿಕೊಂಡು ನಂತರ ಘೋರ ಪಾತ್ರಗಳಲ್ಲಿ ರೋಚಕ ಅಭಿನಯ ನೀಡತೊಡಗಿದರು. ೧೯೪೫ರಿಂದ ಯಕ್ಷಗಾನವನ್ನು ಶಾಸ್ತ್ರೀಯವಾಗಿ ಅಭ್ಯಾಸ ಮಾಡತೊಡಗಿದ ಇವರಿಗೆ ಮೊದಲ ಗುರು ಭಾಗವತ ಸಿದ್ಧಲಿಂಗಪ್ಪನವರು. ನಂತರ ಶಾಂತವೀರಪ್ಪ, ತಿಮ್ಮಣ್ಣ ಈ ಮೊದಲಾದ ಹಿರಿಯ ಯಕ್ಷಗಾನ ಕಲಾವಿದರು ಭಾಗವಂತಿಕೆಯ ವಿವಿಧ ಆಯಾಮಗಳಿಗೆ ಮಾರ್ಗದರ್ಶನ ಮಾಡಿದರು.

೧೯೩೫ರಲ್ಲಿ ತಂದೆ ನಂಜಪ್ಪನವರಿಂದ ಸಂಗೀತ, ರಂಗಗೀತೆ, ಚನ್ನಬಸವ ಪುರಾಣ, ಶರಣ ಲೀಲಾಮೃತ, ಅಮರಕೋಶ, ಸಿದ್ಧಾಂತ ಶಿಖಾಮಣಿ ಇವುಗಳನ್ನು ಶಾಸ್ತ್ರೀಯವಾಗಿ ಅಭ್ಯಾಸ ಮಾಡಿದರು. ಈ ಬಗೆಯ ತಳಪಾಯದ ಸಂಗೀತ, ಪುರಾಣ ಪುರುಷರ ಕತೆಯ ಜ್ಞಾನ ಬಂದಿದ್ದರಿಂದಲೇ ಮುಂದೆ ಯಕ್ಷಗಾನ ಕೃತಿ ರಚಿಸುವ, ಭಾಗವಂತಿಕೆಗೆ ತಕ್ಕ ಮಾರ್ಪಾಡು ಮಾಡಿಕೊಳ್ಳುವ ಜ್ಞಾನ ಲಭಿಸಿದ್ದು ಎಂದು ಹೆಮ್ಮೆಯಿಂದ ಹೇಳಿಕೊಳ್ಳುವ ಚನ್ನಬಸವಯ್ಯ, ಬಾಲ್ಯದ ಸಂಗೀತ – ಯಕ್ಷಗಾನ ಗುರುಗಳಾದ ಹೊನ್ನಂಜಾಚಾರ್ಯರು, ವೀರಭದ್ರಾಚಾರ್ಯರು, ಚಿಕ್ಕವೀರಾಚಾರ್ಯ ಹಾಗೂ ಶ್ರೀಕಂಠಾಚಾರ್ಯರನ್ನು ಕೃತಜ್ಞತೆಯಿಂದ ಸ್ಮರಿಸುತ್ತಾರೆ. ೧೯೫೦ ರಿಂದ ಯಕ್ಷಗಾನ, ಸಂಘಟನೆ, ತಿರುಗಾಟದಲ್ಲಿ ತೊಡಗಿಸಿಕೊಂಡ ಇವರು ಜೀಶಂಪ, ಪಿ. ಆರ್. ತಿಪ್ಪೇಸ್ವಾಮಿ, ಎಸ್. ಕೆ. ಕರೀಂಖಾನ್, ಹೆಚ್. ಎಲ್. ನಾಗೇಗೌಡ ಇವರ ಆತ್ಮೀಯ ಸಂಪರ್ಕ, ಒಡನಾಟಗಳ ಮೂಲಕ ಅರಳಗುಪ್ಪೆಯ ಈ ಅದ್ಭುತ ಕಲೆ ಮೂಡಲಪಾಯ ಬಯಲಾಟವನ್ನು ರಾಜ್ಯಾದ್ಯಂತ ವಿಸ್ತರಿಸಿದ ಹಿರಿಮೆಗೆ ಪಾತ್ರರಾದರು.

೧೯೫೦ ರಿಂದ ಸತತವಾಗಿ ಬೆಂಗಳೂರು, ಮೈಸೂರು ಆಕಾಶವಾಣಿ ಕೇಂದ್ರದಿಂದ ಚಂದ್ರಹಾಸ, ಕುಶಲವರ ಕಾಳಗ, ಕೋಳೂರು ಕೊಡಗೂಸು, ಹರಭಕ್ತ ಹರಳಯ್ಯ, ಶಿವಜಲಂಧರ, ಶಿವತಾಂಡವ ಲೀಲೆ ಈ ಯಕ್ಷಗಾನಗಳನ್ನು ಪ್ರಸಾರ ಮಾಡುತ್ತಲೇ ಬಂದಿದ್ದಾರೆ.

ದೂರದರ್ಶನ ಚಂದನವಾಹಿನಿಯಲ್ಲಿ ಶಿವಜಲಂಧರ, ದಕ್ಷಯಾಗ, ಗಿರಿಜಾ ಕಲ್ಯಾಣ, ಕರ್ಣಪರ್ವ, ದೇವಿ ಮಹಾತ್ಮೆ, ಶಿವತಾಂಡವಲೀಲೆ, ಚಂದ್ರಹಾಸ ಈ ಯಕ್ಷಗಾನ ಪ್ರಸಂಗಗಳನ್ನು ಪ್ರಸಾರ ಮಾಡಿದ್ದಾರೆ.

ವಿಶ್ವಕನ್ನಡ ಸಮ್ಮೇಳನ ಮೈಸೂರು, ಅಖಿಲ ಭಾರತ ಸಾಹಿತ್ಯ ಸಮ್ಮೇಳನ ಬೀದರ್, ಹಾವೇರಿ, ಜನಪದ ಲೋಕ ರಾಮನಗರ, ಮದ್ದೂರು, ಶಿವಮೊಗ್ಗ, ಅಂಬರಜೀರಹಳ್ಳಿ, ಸಿರಿಭುವನ ಬೆಂಗಳೂರು, ರವೀಂದ್ರ ಕಲಾಕ್ಷೇತ್ರ, ಬೆಂಗಳೂರು ಇಲ್ಲಿ ಮೂಡಲಪಾಯ ಯಕ್ಷಗಾನ ಪ್ರದರ್ಶನ ನೀಡಿದ್ದಾರೆ.

ಆದಿಚುಂಚನಗಿರಿ, ಅರ್ಚಕರಹಳ್ಳಿ ಬಾಲಗಂಗಾಧರ ಮಠದಲ್ಲಿ ಅಂಧಮಕ್ಕಳಿಗೆ 'ಚಂದ್ರಹಾಸ' ಯಕ್ಷಗಾನ ಪ್ರಸಂಗವನ್ನು ಕಲಿಸಿದ್ದು, ರಾಮನಗರದ ಜಾನಪದಲೋಕದಲ್ಲಿ ಮಹಿಳೆಯರಿಗೆ ಚಿತ್ರಕೇತು ಮಹಾರಾಜನ ಕತೆ ಕಲಿಸಿ, ಜಾನಪದಲೋಕ, ಬೆಂಗಳೂರಿನ ಸಿರಿಭುವನದಲ್ಲಿ ಮಹಿಳೆಯರು ಅಭಿನಯಿಸಿದ ಯಕ್ಷಗಾನಕ್ಕೆ ಭಾಗವಂತಿಕೆ ನೀಡಿರುವುದು ಇವರ ವಿಶೇಷವಾಗಿದೆ.

ಯಕ್ಷಗಾನ ಕಲೆಯ ಪ್ರಸಾರ ದೀಕ್ಷೆ ಸ್ವೀಕರಿಸಿರುವ ಇವರು, ಹತ್ತಾರು ಭಾಗವತರು, ಕಲಾವಿದರೊಂದಿಗೆ ಸದಾ ಒಡನಾಟ, ರಂಗಸಂಬಂಧಿ ಚಿಂತನೆಗಳಿಂದ ಹಲವು

ಕಲಾವಿದರು, ಯಕ್ಷಗಾನ ನೈಪುಣ್ಯತೆ ತಡೆಯಲು ಪ್ರೇರಕವಾಗಿದ್ದಾರೆ. ಅದಕ್ಕಾಗಿ ಅರಳಗುಪ್ಪೆಯಲ್ಲಿ ಶ್ರೀ ಕಲ್ಲೇಶ್ವರ ಯಕ್ಷಗಾನ ಕಲಾಸಂಘ, ಶಿವಾನುಭವ ಸಮಿತಿ, ಅಭಿನಯ ಕಲಾಸಂಘ, ಬಸವ ಸಮಿತಿಗಳ ಮೂಲಕ ಕಲಾ ಸಂಘಟನೆಗೆ ತೊಡಗಿರುವುದು ವಿಶೇಷವಾಗಿದೆ.

ಮೂಡಲಪಾಯ ಯಕ್ಷಗಾನ ವೇಷಭೂಷಣ ತಯಾರಕರಾಗಿಯೂ ಹೆಸರುಮಾಡಿರುವ ಇವರಿಗೆ ರಾಜ್ಯಸರ್ಕಾರ 'ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ' ನೀಡಿ ಗೌರವಿಸಿದೆ. ಜಾನಪದ ಲೋಕದ ಲಿಂಗೇಗೌಡ ಪ್ರಶಸ್ತಿ, ಆದಿಚುಂಚನಗಿರಿ 'ಚುಂಚಶ್ರೀ' ಪ್ರಶಸ್ತಿ ಇವು ಗೌರವಗಳಲ್ಲಿ ಅತಿ ಮುಖ್ಯವಾದವುಗಳು. ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಚಿತ್ರದುರ್ಗ ಸಾಣೆಹಳ್ಳಿಯಲ್ಲಿ ಏರ್ಪಡಿಸಿದ್ದ ಮೂಡಲಪಾಯ ಭಾಗವತರ ಸಮಾವೇಶದಲ್ಲಿ, ತಿಪಟೂರಿನಲ್ಲಿನ ಮುಖವೇಣಿ ಪ್ರಾತ್ಯಕ್ಷಿಕೆ ಹಾಗೂ ಯಕ್ಷಗಾನ ಪ್ರದರ್ಶನದಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ಭಾಗವಹಿಸಿದ್ದರು.

**ಎ. ಎಸ್. ಚನ್ನಬಸವಯ್ಯ,**
**ಅರಳಗುಪ್ಪೆ ಅಂಚೆ, ತಿಪಟೂರು ತಾಲೂಕು.**

# ಕಲ್ಮನೆ ನಂಜಪ್ಪ

ಯಕ್ಷಗಾನ, ಸಾಮಗಾನ, ಯಕ್ಷಗಾನ ಪರಿಕರ ತಯಾರಿಕೆ ಹಾಗೂ ಜನಪದ ಬಂಡಿ ತಯಾರಿಕೆ ಈ ಎಲ್ಲ ಕಲಾ ಬದುಕಿನಲ್ಲಿ ಅನನ್ಯ ಸಾಧನೆ. ೨೩-೧೨-೧೯೩೭ರಲ್ಲಿ ತಿಪಟೂರು ತಾಲೂಕು ಅರಳಗುಪ್ಪೆಯ ಶಿವನಂಜಪ್ಪ, ರುದ್ರಮ್ಮ ದಂಪತಿಗಳಿಗೆ ಮಗನಾಗಿ ಜನಿಸಿದ ಇವರು ಮೂಲತಃ ಯಕ್ಷಗಾನ ಕುಟುಂಬದಿಂದ ಬಂದವರು. ತಾತ ಮಲ್ಲಿಕಾರ್ಜುನಪ್ಪ ಆ ಕಾಲಕ್ಕೆ ಪ್ರಖ್ಯಾತ ಯಕ್ಷಗಾನ ಭಾಗವತರು. ಮಾವ ಸಿದ್ದಲಿಂಗಪ್ಪನವರೂ ಭಾಗವತರು. ತಂದೆ ಕಲ್ಮನೆ ಶಿವನಂಜಯ್ಯ ಯಕ್ಷಗಾನದ ವೇಷಧಾರಿ. ಚಿಕ್ಕಪ್ಪಂದಿರಾದ ನೀಲಕಂಠಪ್ಪ ಮತ್ತು ಶಾಂತವೀರಪ್ಪ ವೇಷಧಾರಿಗಳು ಹಾಗೂ ಯಕ್ಷಗಾನ ಭಾಗವತರೂ ಹೌದು. ಈ ಎಲ್ಲ ಕಲಾಸಂಪನ್ನರ ಒಡನಾಟ, ಕುಟುಂಬ ಪರಿಸರ ನಂಜಪ್ಪನವರ ಮೇಲೆ ಬಾಲ್ಯಾವಸ್ಥೆಯಿಂದಲೂ ಬಿದ್ದಿತು. ಆ ಪರಿಣಾಮವಾಗಿ ನಂಜಪ್ಪನವರು ತಮ್ಮ ೭ನೇ ವಯಸ್ಸಿನಿಂದಲೇ ಯಕ್ಷಗಾನ ಪಾತ್ರಾಭಿನಯಗಳಿಂದ ಈ ಕ್ಷೇತ್ರದ ಸಮಗ್ರ ಅಭ್ಯಾಸ, ಅಧ್ಯಯನಗಳಲ್ಲಿ ತೊಡಗಿಸಿಕೊಂಡು ಪ್ರಬುದ್ಧ ಕಲಾವಿದರಾಗಿ ಬೆಳೆಯಲು ಪ್ರೇರಕವಾಯಿತು.

ನಂಜಪ್ಪನವರು ಹೆಚ್ಚೇನೂ ಓದಿದವರಲ್ಲ. ೭ನೇ ತರಗತಿಯವರೆಗೆ ವ್ಯಾಸಂಗ ಮಾಡಿದ್ದಾರೆ. ನೊಣವಿನಕೆರೆ ಹಾಗೂ ಬಾಣಸಂದ್ರಗಳಲ್ಲಿ ವಿದ್ಯಾಭ್ಯಾಸದಲ್ಲಿ ಹಿಂದಾದರೂ ಯಕ್ಷಗಾನ ಸಾಮ್ರಾಜ್ಯದಲ್ಲಿ ಬೆಲೆ ಕಟ್ಟಲಾರದ ಸಾಧನೆ, ದಣಿವರಿಯದ ದುಡಿಮೆ. ಶಾರದೆ, ಬಾಲಕೃಷ್ಣ ಮುಂತಾದ ಬಾಲ ನಟನಿಂದ ರಂಗಪ್ರವೇಶ, ನಂತರ ಸ್ತ್ರೀಪಾತ್ರಗಳಲ್ಲಿ ಅಭಿನಯ. ನಂತರ ಘೋರ ಪಾತ್ರಗಳೇ ಇವರನ್ನು ಅರಸಿ ಬಂದವು. ಸತ್ಯಚಿತ್ರಕೇತು, ರಕ್ತಬೀಜಾಸುರ, ದಕ್ಷಬ್ರಹ್ಮ, ಶಿವಜಲಂಧರ, ರಾವಣ ಈ ಪಾತ್ರಗಳ ಮೂಲಕ ತಮ್ಮ ೧೮ನೇ ವಯಸ್ಸಿನಲ್ಲಿಯೇ ಬೆಳಕು ಹರಿಯುವವರೆಗೂ ಕುಣಿತ, ಮಾತು, ಕಂದ, ಅದ್ಭುತ ಅಭಿನಯ. ಇವರು ಪ್ರಬುದ್ಧ ಕಲಾವಿದರಾಗಿ ರೂಪುಗೊಂಡದ್ದು ಹೀಗೆ.

ನಂಜಪ್ಪನವರು ಇಂದು ಕೇವಲ ವೇಷಧಾರಿಗಳಾಗಿ ಮಾತ್ರ ಉಳಿದಿಲ್ಲ. ಯಕ್ಷಗಾನ ಭಾಗವತರಾಗಿ, ಯಕ್ಷಗಾನ ವೇಷಭೂಷಣಗಳ ತಯಾರಕರಾಗಿ, ಯಕ್ಷಗಾನ ಲೇಖಕರಾಗಿ, ಪೌರಾಣಿಕ ಹಸ್ತಪ್ರತಿಗಳ ಅನುವಾದಕರಾಗಿ, ಮದ್ದಳೆ ಕಲಾವಿದರಾಗಿ ಬೆಳೆದಿದ್ದಾರೆ. ಯಕ್ಷಗಾನ ಭಾಗವತರಾಗಿ ನೂರಾರು ಶಿಷ್ಯರನ್ನು ತಯಾರಿಸಿದ ಹಿರಿಮೆಗೂ ಪಾತ್ರರಾಗಿದ್ದಾರೆ. ಇವರು ತಯಾರಿಸಿದ ತಮ್ಮ ಯಕ್ಷಗಾನ ಪ್ರಸಂಗಗಳಲ್ಲಿ ಬಳಸುತ್ತಿದ್ದ ವೇಷಭೂಷಣಗಳಲ್ಲಿ ಒಂದಾದ ದಕ್ಷನ ಪಾತ್ರದ ಕಿರೀಟ, ಭುಜಕೀರ್ತಿ, ಎದೆಹಾರ, ಈರಗಾಸೆ, ಬಿಲ್ಲು ಇವುಗಳನ್ನು ದಾನವಾಗಿ ಸ್ವೀಕರಿಸಿದ ಅಂದಿನ ಮೈಸೂರು ವಿಶ್ವವಿದ್ಯಾಲಯದ ಜಾನಪದ ವಿಭಾಗದ ನಿರ್ದೇಶಕರೂ, ಹೆಸರಾಂತ ಜಾನಪದ ವಿದ್ವಾಂಸರೂ ಆದ ಡಾ. ಜೀ.ಶಂ. ಪರಮಶಿವಯ್ಯನವರು ಮೈಸೂರು ವಿಶ್ವವಿದ್ಯಾನಿಲಯದ ಜಾನಪದ ವಸ್ತು ಸಂಗ್ರಹಾಲಯದಲ್ಲಿ ಪ್ರದರ್ಶನಕ್ಕಿಟ್ಟಿರುವುದು ಇವರ ಈ ಕ್ಷೇತ್ರದ ಪರಿಣತಿಗೆ ಮೇರು ಸಾಕ್ಷಿಯಾಗಿದೆ.

ಯಕ್ಷಗಾನಕ್ಕೆ ಸಂಬಂಧಿಸಿದಂತೆ ಕಿರೀಟ, ಗದೆ, ಭುಜಕೀರ್ತಿ, ಬಿಲ್ಲು-ಬಾಣ ಈ ಮೊದಲಾದವುಗಳನ್ನು ತಯಾರಿಸುವ ಕುಸುರಿ ಕೆಲಸದಲ್ಲೂ ಪರಿಣತಿ ಪಡೆದಿರುವ ನಂಜಪ್ಪನವರು, ರೈತರಿಗೆ ಬೇಕಾಗುವ ಎತ್ತಿನ ಬಂಡಿ ತಯಾರಿಕೆಯ ಬಡಗಿಯೂ ಹೌದು. ಸುಮಾರು ೪೦೦ ರೂ.ಗೆ ಒಂದು ಎತ್ತಿನ ಬಂಡಿ ತಯಾರಿಕೆಯಿಂದ ಆರಂಭಿಸಿ, ಇಂದು ೩೦,೦೦೦ ರೂ. ತನಕ ಎತ್ತಿನ ಬಂಡಿ ತಯಾರಿಸಿ ಮಾರಾಟ ಮಾಡಿದ್ದಾರೆ. ಇಂದಿನ ಆಧುನಿಕ ಯುಗದಲ್ಲೂ ಟೈರುಗಾಡಿ, ಮರಕಬ್ಬಿಣದ ಬಳೆಯಿಂದ ಬಂಡಿ ತಯಾರಿಸುವ ಜಿಲ್ಲೆಯ ಅಪರೂಪದ ಕುಟುಂಬ ಎಂಬ ಹೆಗ್ಗಳಿಕೆ ಕಲ್ಮನೆಗಿದೆ. ಹಾಗೆ ರೈತಾಪಿ ಬದುಕಿಗೆ ಬೇಕಾಗುವ ಹಲವು ಉಪಕರಣಗಳನ್ನು ಇವರು ಇಂದಿಗೂ ತಯಾರಿಸುತ್ತಿದ್ದಾರೆ.

ಆಕಾಶವಾಣಿ, ದೂರದರ್ಶನಗಳಲ್ಲೂ ಇವರ ಭಾಗವಂತಿಕೆಯ ಹಲವು ಯಕ್ಷಗಾನ ಕಲಾಪ್ರಸಂಗಗಳು ಪ್ರಸಾರವಾಗಿವೆ. ಇಂದಿಗೂ ದೂರದರ್ಶನದಲ್ಲಿ ಇವರ 'ದಕ್ಷಯಾಗ' ಪ್ರಸಂಗ ಪ್ರಸಾರವಾಗುತ್ತಿದೆ. ದೇವಿಮಹಾತ್ಮೆ, ಸತ್ಯಚಿತ್ರಕೇತು, ದಕ್ಷಯಜ್ಞ, ಗಿರಿಜಾ ಕಲ್ಯಾ, ಶಿವಲಜಂಧರ, ಇಂದ್ರಜಿತ್ ಕಾಳಗ, ಅಹಿರಾವಣ-ಮಹಿರಾವಣ, ರತಿಕಲ್ಯಾಣ, ತ್ರಿಪುರ ದಾನವರ ಕಥೆ, ಕರ್ಣಾರ್ಜುನರ ಕಾಳಗ, ಅಂಧಕಾಸುರನ ವಧೆ, ಕುಶಲವರ ಕಾಳಗ, ಕನಕಾಂಗಿ ಕಲ್ಯಾಣ, ಬಾಣಾಸುರನ ಕಥೆ, ಪ್ರಹ್ಲಾದ ಚರಿತ್ರೆ, ಗಯಚರಿತ್ರೆ, ಬಬ್ರುವಾಹನ ಕಾಳಗ, ಐರಾವತ ಮೊದಲಾದ ಯಕ್ಷಗಾನ ಪ್ರಸಂಗಗಳನ್ನು ತುರುವೇಕೆರೆ, ತಿಪಟೂರು ತಾಲೂಕುಗಳಲ್ಲಿ ಭಾಗವಂತಿಕೆ ಮಾಡುವ ಮೂಲಕ ಆಡಿಸಿದ್ದಾರೆ. ಪೌರಾಣಿಕ, ಸಾಮಾಜಿಕ ನಾಟಕಗಳಲ್ಲಿಯೂ ಅಭಿನಯಿಸಿದ್ದಾರೆ. ಇಂದಿಗೂ ಯಕ್ಷಗಾನ ಕಲೆಯನ್ನು ಗುರು-ಶಿಷ್ಯ ಪರಂಪರೆಯಲ್ಲಿ ಕಲಿಸುತ್ತಿರುವ ಇವರಿಗೆ ರಾಜ್ಯಮಟ್ಟದ ಹಲವು ಜನಪದ

ಮತ್ತು ಇತರ ಸಾಂಸ್ಕೃತಿಕ ಸಂಘಗಳ ಪ್ರಶಸ್ತಿ, ಗೌರವ ನೀಡಿ ಪುರಸ್ಕರಿಸಿದೆ. ೨೦೦೩ನೇ ಸಾಲಿನಲ್ಲಿ ಜಾನಪದ ಅಕಾಡೆಮಿ ಪ್ರಶಸ್ತಿಯೂ ಲಭಿಸಿದೆ.

ಅರಳಗುಪ್ಪೆಯ ಶ್ರೀ ಕಲ್ಮೇಶ್ವರ ಸ್ವಾಮಿ ಯಕ್ಷಗಾನ ಮಂಡಳಿ ಎಂಬ ಸಂಸ್ಥೆಯನ್ನು ೨೦೦೪ನೇ ಸಾಲಿನಲ್ಲಿ ಸ್ಥಾಪಿಸಿ ಅದರ ಮೂಲಕ ಯಕ್ಷಗಾನ ಕಲಾವಿದರ ತಂಡವನ್ನು ವ್ಯವಸ್ಥಿತವಾಗಿ ಕಟ್ಟಿ ರಾಜ್ಯಾದ್ಯಂತ ಪ್ರದರ್ಶನ ನೀಡುತ್ತಿದ್ದಾರೆ.

ಕಲ್ಮನೆ ಎ. ಎಸ್. ನಂಜಪ್ಪ,
ಅರಳಗುಪ್ಪೆ,
ತಿಪಟೂರು ತಾಲೂಕು.

# ಹಂದನಕೆರೆ ಕರಿಯಣ್ಣ ಶೆಟ್ಟಿ

ಕರಿಯಣ್ಣ ಶೆಟ್ಟಿ ತುಮಕೂರು ಜಿಲ್ಲೆ, ಚಿಕ್ಕನಾಯಕನಹಳ್ಳಿ ತಾಲೂಕು ಹಂದನಕೆರೆಯವರು. ಕುಂಬಾರಿಕೆ ಇವರ ಕುಲಕಸುಬು. ಆದರೂ ಸ್ವಶಕ್ತಿಯಿಂದಲೇ ಚಿತ್ರಕಲೆ, ಗೊಂಬೆ ತಯಾರಿಕೆ, ವೇಷಭೂಷಣ ಸಿದ್ಧಪಡಿಸುವುದು, ರಂಗಸಾಮಗ್ರಿಗಳಿಗೆ ಸೀನರಿ ಬರೆಯುವುದು, ಸೋಮಗಳನ್ನು ತಯಾರಿಸುವುದು, ದೇವತೆಗಳ ವಿಗ್ರಹ ಗೊಂಬೆಗಳಿಗೆ ಬಣ್ಣ ಹಾಕುವುದು ಇವರ ಜನಪ್ರಿಯ ಕೆಲಸ. ಹರಿಗೆ, ಆಂಜನೇಯ, ಗರುಡ, ಹಂಸ, ಆನೆ, ಕುದುರೆ ಮುಂತಾದ ಗೊಂಬೆ ಚಿತ್ರಪಟಗಳನ್ನು ಆಕರ್ಷಕವಾಗಿ ತಯಾರಿಸುವುದು ಇವರ ಮತ್ತೊಂದು ವಿಶೇಷವಾಗಿದೆ.

ಕರಿಯಣ್ಣ ಕರ್ನಾಟಕ ಮಾತ್ರವಲ್ಲದೆ ಹೊರ ರಾಜ್ಯಗಳಲ್ಲೂ ಪ್ರಸಿದ್ಧರು. ಮೋಡಿ ಕರಿಯಣ್ಣ ಎಂಬುದು ಇವರಿಗಿರುವ ಅನ್ವರ್ಥ ಹೆಸರು. ಮೋಡಿ ಹಾಕುವ, ಮೋಡಿ ಕೀಳುವ ಎರಡೂ ಕಲೆಯಲ್ಲಿ ಇವರು ನಿಷ್ಣಾತರು. ಈ ಕಲೆ ಇವರಿಗೆ ಜನಪ್ರಿಯತೆಯನ್ನು ತಂದುಕೊಟ್ಟಿದೆ.

ಕರಿಯಣ್ಣಶೆಟ್ಟಿ ತಮ್ಮನ್ನು ವಿಜಯನಗರದವರು ಎಂತಲೂ, ವಿಜಯನಗರ ಪತನವಾದ ನಂತರ ಸ್ಥಳಾಂತರ ಮಾಡಿದ ತಮ್ಮ ಪೂರ್ವಿಕರು ಚಿಕ್ಕನಾಯಕನಹಳ್ಳಿ ತಾಲೂಕು ಹಂದನಕೆರೆಗೆ ಬಂದು ನೆಲೆಸಿದವರು ಎಂದು ಹೇಳಿಕೊಳ್ಳುತ್ತಾರೆ. ಜೊತೆಗೆ ತಮ್ಮ ಬಳಿ ಇಟ್ಟುಕೊಂಡಿರುವ ಓಲೆ ಗರಿಯ ಗ್ರಂಥಗಳಲ್ಲಿ ಉಲ್ಲೇಖಗೊಂಡಿರುವ ಇವರ ಪೂರ್ವಿಕರ ಹೆಸರುಗಳನ್ನು ಉಲ್ಲೇಖಿಸುತ್ತಾ ತಮ್ಮ ಹಾಗೂ ವಿಜಯನಗರ ಸಾಮ್ರಾಜ್ಯಕ್ಕಿರುವ ಸಂಬಂಧವನ್ನು ವಿವರಿಸುತ್ತಾರೆ.

ಬಹುವಿಧ ಪ್ರತಿಭೆಯ ಕರಿಯಣ್ಣ ಶೆಟ್ಟರು, ತಮ್ಮ ಪರಂಪರಾಗತ ಮಡಿಕೆ ತಯಾರಿಸುವ ಕಲೆಯ ಜೊತೆಗೆ ಸ್ವಯಾರ್ಜಿತವಾದ ಜ್ಯೋತಿಷ್ಯ, ಆಯುರ್ವೇದ ಚಿಕಿತ್ಸೆ ಇವುಗಳ ಬಗೆಗೆ ಹೆಮ್ಮೆ ಪಡುತ್ತಾರೆ. ಬಹಳ ವರ್ಷಗಳ ಕಾಲ ಊರುಬಿಟ್ಟು, ಹುಬ್ಬಳ್ಳಿ

ಜ್ಯೋತಿ ಕಲಾಸಂಘ ಹಾಗೂ ಸೋರಟ್ ಅಶ್ವತ್ಥರ ಕಂಪನಿ ನಾಟಕಗಳಲ್ಲಿ ಕಲಾವಿದರಾಗಿ ಸೇವೆ ಸಲ್ಲಿಸಿದ್ದಾರೆ. ವೇಷಗಾರಿಕೆ ಬಣ್ಣಗಾರಿಕೆ, ಸೀನರಿ ತಯಾರಿಕೆ ಇವು ಈ ಕಂಪನಿಯ ಸಹವಾಸಗಳಿಂದಲೇ ಬಂದವು ಎಂಬುದು ಕರಿಯಣ್ಣನವರ ಅಭಿಮತ.

ಮೋಡಿ ಕರಿಯಣ್ಣನವರು ವಿಸ್ಮಯಕರವಾದ ಮೋಡಿಗಾರರು. ಬೇವಿನಸೊಪ್ಪು ಎರಚಿದರೆ ಚೇಳುಗಳ ರಾಶಿ, ಮಂತ್ರಿಸಿದರೆ ಹಾವುಗಳ ಆರ್ಭಟ. ಆ ನಂತರ ಮುಂಗಸಿ, ಮುಂದೆ ಏನೇನೋ ಪ್ರಾಣಿ ಜಂತುಗಳನ್ನು ಸೃಷ್ಟಿಸುವ ಅದ್ಭುತ ಕೈಚಳಕ ಅನನ್ಯವಾದುದು. ಸಣ್ಣ ದಾರವನ್ನು ಮೋಡಿ ದಾರವೆಂದು, ನೆಲದ ಮೇಲೆ ಗುಂಡಿ ತೋಡಿ ಹೂತರೆ, ಅದನ್ನು ಯಾರಿಂದಲೂ ಕೀಳಲು ಬರುವುದಿಲ್ಲ. ಅಷ್ಟೊಂದು ಕೈಚಳಕ ಇವರದು.

ಆಯುರ್ವೇದ ವೈದ್ಯಕೀಯವನ್ನು ರೂಢಿಸಿಕೊಂಡಿರುವ ಕರಿಯಣ್ಣ ಶೆಟ್ಟಿ, ಕ್ಯಾನ್ಸರ್, ಸಕ್ಕರೆ ಕಾಯಿಲೆ ಮೊದಲಾದ ಕ್ರೂರ ರೋಗಗಳಿಗೂ ಚಿಕಿತ್ಸೆ ನೀಡುತ್ತಾರೆ. ಇವುಗಳ ಬಗೆಗೆ ಅವರು ಹೀಗೆ ಹೇಳುತ್ತಾರೆ. ತನಗೆ ೧೦ ವರ್ಷಗಳ ಹಿಂದೆ ಗಂಟಲು ಕ್ಯಾನ್ಸರ್ ಬಂದು ವಾಸಿಯಾಗುವುದು ದುರ್ಲಭ ಎಂಬ ಮಾತು ವೈದ್ಯರಿಂದ ಕೇಳಿಬಂದಾಗ, ತಾವು ಗಿಡಮೂಲಿಕೆಗಳ ಮೊರೆ ಹೋಗಿ, ಮೂರು ತಿಂಗಳಲ್ಲಿ ಸಂಪೂರ್ಣ ಗುಣಮುಖನಾದೆ, ಹಾಗೆಯೇ ಸಕ್ಕರೆ ಕಾಯಿಲೆ ಬಂದಾಗೂ ಒಂದೆ ಮಾತ್ರೆ ತಿನ್ನಲಿಲ್ಲ. ಗಿಡಮೂಲಿಕೆಗಳಿಂದಲೇ ವಾಸಿ ಮಾಡಿಕೊಂಡೆ ಎನ್ನುತ್ತಾರೆ. ಸರ್ಕಾರ ಉಚಿತವಾಗಿ ಜಮೀನು ನೀಡಿದರೆ ಗಿಡಮೂಲಿಕೆ ಬೆಳೆದು ಕ್ಯಾನ್ಸರ್, ಬಿ. ಪಿ. ಹಾಗೂ ಸಕ್ಕರೆ ಕಾಯಿಲೆಗಳಂಥ ಮಾರಕ ರೋಗವನ್ನು ಗುಣಪಡಿಸುವ ಖಾತರಿ ವ್ಯಕ್ತಪಡಿಸುವ ಹಂದನಕೆರೆ ಕರಿಯಣ್ಣಶೆಟ್ಟಿ ಅವರಿಗೆ, ಇದೀಗ ೬೫ ವರ್ಷ ವಯಸ್ಸು. ಉತ್ಸಾಹ ಕುಗ್ಗಿಲ್ಲ, ಆರೋಗ್ಯ ಕೆಟ್ಟಿಲ್ಲ. ಅಷ್ಟರ ಮಟ್ಟಿಗೆ ಸದಾ ಬಿಜಿಯಾಗಿ, ಹಲವು ಯೋಜನೆಗಳ ತಯಾರಿಕೆ, ಆಗು ಮಾಡುವುದರಲ್ಲಿ ಮಗ್ನರಾಗಿದ್ದಾರೆ.

ಯಕ್ಷಗಾನ ಭಾಗವಂತಿಕೆ, ಅಭಿನಯ, ವೇಷಭೂಷಣ ತಯಾರಿಕೆ ಕಲಾವಿದರಾಗಿಯೂ ಕರಿಯಣ್ಣ ಶೆಟ್ಟಿ ಹೆಸರುಮಾಡಿದ್ದಾರೆ. ವಿಶೇಷವಾಗಿ ಆದಿಶಕ್ತಿ, ದೇವಿ, ದ್ರೌಪದಿ, ಸೀತೆ ಈ ಬಗೆಯ ಪಾತ್ರಗಳಿಗೆ ಜೀವತುಂಬಿ ಅಭಿನಯಿಸಬಲ್ಲ ಸಾಮರ್ಥ್ಯ ಹೊಂದಿದ್ದಾರೆ. ಜನಾದರಣೀಯ ವ್ಯಕ್ತಿಯಾಗಿದ್ದಾರೆ. ಜ್ಯೋತಿಷ್ಯ ಇವರ ಮತ್ತೊಂದು ಹವ್ಯಾಸ. ಇತ್ತೀಚೆಗೆ ಈ ಕಲೆಯಲ್ಲಿಯೂ ತುಂಬಾ ಬಿಜಿಯಾಗಿರುವ ಇವರನ್ನು ಭೇಟಿಮಾಡಲು, ಬೆಂಗಳೂರು, ಚಿಕ್ಕಮಗಳೂರು, ಮೈಸೂರು ಕಡೆಗಳಿಂದಲೂ ಆಸ್ತಿಕರೂ ಬರುತ್ತಿದ್ದಾರೆ. ಕುಂಡಲಿ, ಜಾತಕಗಳನ್ನು ಸಿದ್ಧಪಡಿಸುತ್ತಾರೆ. ಮೈಸೂರಿನಲ್ಲಿ ಜರುಗಿದ ರಾಜ್ಯಮಟ್ಟದ ಜ್ಯೋತಿಷ್ಯ ಸಮ್ಮೇಳನದಲ್ಲಿಯೂ ಭಾಗವಹಿಸಿ ಅಲ್ಲಿ ಎದುರಾದ ಹಲವು ಪ್ರಶ್ನೆಗಳಿಗೆ ಸಮರ್ಪಕವಾದ ಉತ್ತರ ನೀಡಿದ್ದಾರೆ.

ಇವರ ಬಹುಮುಖ ಪ್ರತಿಭೆಗೆ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ೨೦೦೧ನೇ ಸಾಲಿನ ಜಾನಪದ ಜ್ಞಾನ–ವಿಜ್ಞಾನ ಪ್ರಶಸ್ತಿ ನೀಡಿ ಗೌರವಿಸಿದೆ.

**ಕರಿಯಣ್ಣ ಶೆಟ್ಟಿ, ಹಂದನಕೆರೆ, ಚಿಕ್ಕನಾಯಕನಹಳ್ಳಿ ತಾಲೂಕು.**

# ಶಾಗದಡು ಭಾಗವತ ಲಕ್ಷ್ಮೀರಾಮೇಗೌಡ

ತುಮಕೂರು ಜಿಲ್ಲೆ ಸಿರಾ ತಾಲೂಕಿನ ಶಾಗದಡು ಗ್ರಾಮದ ಲಕ್ಷ್ಮೀರಾಮೇಗೌಡ ಯಕ್ಷಗಾನ ಭಾಗವಂತಿಕೆಯ ಅಪ್ರತಿಮ ಕಲಾವಿದ. ಭಾಗವಂತಿಕೆ, ಹಾಡುಗಾರಿಕೆ, ನೃತ್ಯ ಈ ಕಲಾಪ್ರಕಾರಗಳಲ್ಲಿ ಸೈ ಎನ್ನಿಸಿಕೊಂಡಿರುವ ರಾಮೇಗೌಡ ಅವರಿಗೆ ಇದೀಗ ೭೦ ವರ್ಷ ವಯಸ್ಸು.

ಕಳೆದ ಆರು ದಶಕಗಳಿಂದಲೂ ಯಕ್ಷಗಾನದ ಒಡನಾಡಿಯಾಗಿ ಬೆಳೆದ ಇವರು ಯಕ್ಷಗಾನವನ್ನು ಶಾಸ್ತ್ರೀಯವಾಗಿ ಕಲಿತವರು. ಶಾಗದಡು ಒಂದು ಕಾಲಕ್ಕೆ ಯಕ್ಷಗಾನ ಕಲೆಯ ತೌರು. ಕಾಲುವೇ ರಂಗಪ್ಪ ಎಂಬ ವೈಷ್ಣವ ಜನಾಂಗದ ಆಚಾರ್ಯರು ಸಿರಾ ಸೀಮೆಯ ಹತ್ತಾರು ಯುವಕರಿಗೆ ಯಕ್ಷಗಾನ ಕಲೆಯನ್ನು ಶಾಸ್ತ್ರೀಯವಾಗಿ ಬೋಧಿಸಿದ ಹಿರಿಯ ಗುರು. ಆರು ತಿಂಗಳುಗಳಿಂದ ಹಿಡಿದು ಒಂದು ವರ್ಷದವರೆಗೆ ಆಶ್ರಮ ಶಾಲೆಯ ಮಾದರಿಯಲ್ಲಿ ಮನೆಯೇ ಯಕ್ಷಗಾನ ವಿದ್ಯಾಲಯ. ಊಟ, ವಸತಿ ನೀಡಿ ಯಕ್ಷಗಾನ ಕಲೆಯನ್ನು ಕಲಿಸುತ್ತಿದ್ದ ಕಾಲುವೆ ರಂಗಪ್ಪ, ಸ್ವತಃ ಹಲವು ಯಕ್ಷಗಾನ ಪ್ರತಿಗಳನ್ನು ರಚಿಸಿದ್ದಾರೆ. ಲಕ್ಷ್ಮೀರಾಮೇಗೌಡರು ಇವರ ಶಿಷ್ಯರು.

ಲಕ್ಷ್ಮೀರಾಮೇಗೌಡ ಊರಿನ ಪಾಟೀಲಗಿರಿಯ ಜೊತೆಗೆ ಶ್ಯಾಗದಡು ಶ್ರೀ ರಾಮದೇವರ ದೇವಸ್ಥಾನದ ಅರ್ಚಕ ಪರಂಪರೆಯ ಕಾಯಕವೂ ಇವರದು. ಸಂಗೀತ, ನೃತ್ಯ, ತಾಳ, ಲಯ, ಮಾತು ಅರ್ಥಪೂರ್ಣವಾಗಿ ರೂಢಿಸಿಕೊಂಡಿರುವ ಸಮರ್ಥ ಯಕ್ಷಗಾನ ಕಲಾವಿದರು. ಸಿರಾ, ಹಿರಿಯೂರು, ಚಿಕ್ಕನಾಯಕನಹಳ್ಳಿ ಈ ಭಾಗಗಳಲ್ಲಿ ಇಂದಿಗೂ ತಿರುಗಾಟದ ಯಕ್ಷಗಾನ ಭಾಗವತರಾಗಿ ಕೆಲಸ ನಿರ್ವಹಿಸುತ್ತಿರುವುದು ವಿಶೇಷ. ಲಕ್ಷ್ಮೀರಾಮೇಗೌಡರು ೭೦ ವರ್ಷಗಳ ಹಿರಿಯ ಜೀವ. ಆದರೂ ಇವರ ಹಾಡುಗಾರಿಕೆಯ ಉತ್ಸಾಹ ತಗ್ಗಿಲ್ಲ. ವರ್ಷದಲ್ಲಿ ಕನಿಷ್ಠ ಐದು ಯಕ್ಷಗಾನ ಪ್ರಸಂಗವನ್ನಾದರೂ ಕಲಿಸುವುದು ಇವರ ವಿಶೇಷವಾಗಿದೆ. ಹಾರ್ಮೋನಿಯಂ, ಮೃದಂಗ ಹಾಗೂ ಕರಪಾಲ

ಹಾಡುಗಾರಿಕೆಯ ಕಲಾವಿದರೂ ಆಗಿರುವ ರಾಮೇಗೌಡರು, ಕೋಲಾಟ, ಜನಪದ ಸಂಗೀತದಲ್ಲೂ ಸಾಕಷ್ಟು ಪರಿಶ್ರಮ ಹೊಂದಿದ್ದಾರೆ.

೬ನೇ ತರಗತಿಯ ತನಕ ವಿದ್ಯಾಭ್ಯಾಸ, ಅದೂ ಕೂಲಿಮಠದಲ್ಲಿ. ಆದರೆ ರಾಮಾಯಣ, ಮಹಾಭಾರತ, ಭಾಗವತಗಳನ್ನು ಸುಲಲಿತವಾಗಿ ಹಾಡುವ, ಅರ್ಥೈಸುವ ಅಪರೂಪತೆ ಇವರದು. ಕಾಲುವೆ ರಂಗಪ್ಪನವರಿಂದ ಶಾಸ್ತ್ರೀಯವಾಗಿ ಯಕ್ಷಗಾನ ಕಲಿತಿರುವ ಇವರು, ತಮ್ಮ ನಾಲ್ಕು ಜನ ಗಂಡುಮಕ್ಕಳಲ್ಲಿ ಹಿರಿಯ ಮಗ ರಾಮಕೃಷ್ಣಪ್ಪ ಯಕ್ಷಗಾನ ಕಲೆಯಲ್ಲಿ ಭಾಗವಂತಿಕೆ, ಹಾಡುಗಾರಿಕೆಯಲ್ಲಿ ತೊಡಗಿಸಿಕೊಂಡಿದ್ದಾರೆ. ಕೊನೆಯ ಮಗ ಮೃದಂಗ, ಜನಪದ ಸಂಗೀತಗಳಲ್ಲಿ ಆಸಕ್ತಿ, ಕರಪಾಲ ಮೇಳ ಕಲೆಯನ್ನು ಅಭ್ಯಾಸ ಮಾಡುತ್ತಾ, ಮಧುಸೂಧನಾಚಾರಿ ಅವರ ಸಂಗಡ ಹಲವು ಕಡೆ ಕರಪಾಲಮೇಳ ಕಲಾ ಪ್ರಸಾರದಲ್ಲಿ ತೊಡಗಿದ್ದಾರೆ. ಮಕ್ಕಳು ಇನ್ನೂ ಯಕ್ಷಗಾನ ಸೇವೆ ಮಾಡಿ, ನನ್ನ, ನನ್ನ ಗುರು ಕಾಲುವೆ ರಂಗಪ್ಪನವರ ಹೆಸರು ಉಳಿಸಬೇಕು, ಯಕ್ಷಗಾನ ಪ್ರಸಾರ ಮಾಡಬೇಕೆಂಬ ಬಯಕೆಯನ್ನು ವ್ಯಕ್ತಪಡಿಸುತ್ತಾರೆ.

ಲಕ್ಷ್ಮೀರಾಮೇಗೌಡರು ಲವಕುಶರು ಕಾಳಗ, ಭಕ್ತ ಸುಧನ್ವನ ಕಾಳಗ, ದುಶ್ಯಾಸನನ ಕಥೆ, ವಿರಾಟಪರ್ವ, ರುಕ್ಮಿಣಿ ಸ್ವಯಂವರ, ಭಕ್ತ ಮಾರ್ಕಾಂಡೇಯ, ಶಿವಜಲಂಧರ, ಐರಾವತ, ಲಂಕಾದಹನ, ದಕ್ಷಯಾಗ ಮೊದಲಾದ ಹತ್ತು ಯಕ್ಷಗಾನ ಪ್ರಸಂಗಗಳಲ್ಲಿ ಪರಿಣತರು. ಇವುಗಳನ್ನು ಪುಸ್ತಕ ನೋಡದೆ, ಯಾವುದೇ ಭಾಗವನ್ನಾದರೂ ನೇರವಾಗಿ ತಕ್ಷಣವೇ ಹಾಡಬಲ್ಲ ಸಾಮರ್ಥ್ಯ ಇವರಿಗಿದೆ. ಇದಲ್ಲದೆ ಕಾಲ, ಸಂದರ್ಭಗಳಿಗೆ ಅನುಸಾರವಾಗಿ ಯಾವ ಪ್ರಸಂಗವನ್ನಾದರೂ ಕಲಿಸುವ ಸಾಮರ್ಥ್ಯ ಹೊಂದಿರುವ ರಾಮೇಗೌಡರು, ಕಲಾಸಂಬಂಧಿ ಗೌರವ, ಪುರಸ್ಕಾರಗಳಿಗೂ ಒಳಗಾಗಿದ್ದಾರೆ.

ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯ ಯಕ್ಷಗಾನ ತಜ್ಞರಾಗಿ ಕೊನೆಹಳ್ಳಿ ಮುಂತಾದ ಕಡೆ ಕೆಲಸ ಮಾಡಿದ್ದಾರೆ. ಅಂತರ್‌ವಲಯ ಜಾನಪದ ಕಲಾಮೇಳಗಳಲ್ಲಿ ಭಾಗವತರಾಗಿ ಭಾಗವಹಿಸಿದ್ದಾರೆ. ಕೊನೆಹಳ್ಳಿಯಲ್ಲಿ ನಡೆದ ಮೂಡಲಪಾಯ ಯಕ್ಷಗಾನ ಭಾಗವತರ ಸಮಾವೇಶದಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ಭಾಗಿಯಾಗಿದ್ದಾರೆ.

ಕನ್ನಡ ಸಾಹಿತ್ಯ ಸಮ್ಮೇಳನಗಳಲ್ಲಿ ಕಲಾವಿದರಾಗಿಯೂ ಭಾಗವಹಿಸಿರುವ ಲಕ್ಷ್ಮೀರಾಮೇಗೌಡ, ಸುವರ್ಣ ಕರ್ನಾಟಕ ತುಮಕೂರು ಜಿಲ್ಲಾ ವಿಶೇಷ ಪ್ರಶಸ್ತಿ, ಕನ್ನಡ ರಾಜ್ಯೋತ್ಸವ ಪ್ರಶಸ್ತಿ, ತಾಲೂಕು-ಜಿಲ್ಲಾ ಹಂತಗಳ ಕಲಾವಿದ ಪ್ರಶಸ್ತಿಗಳನ್ನು ಗಳಿಸಿರುವುದು ಇವರ ಕಲಾ ಹಿರಿಮೆಗೆ ಸಾಕ್ಷಿಯಾಗಿದೆ.

**ಲಕ್ಷ್ಮೀರಾಮೇಗೌಡ,**
**ಶಾಗದಡು ಗ್ರಾಮ, ಹುಯಲ್‌ದೊರೆ ಮಾರ್ಗ, ಸಿರಾ ತಾಲೂಕು.**

# ಭಾಗವತ ನಲ್ಲೂರು ಬೆಟ್ಟಪ್ಪ

ಮೂರು ತಲೆಮಾರುಗಳ ಕಾಲ ನಿರಂತರವಾಗಿ ಯಕ್ಷಗಾನ ಭಾಗವಂತಿಕೆಯನ್ನು ಒಂದು ಕುಲಕಸುಬು ಎಂಬಂತೆ ಜೀವನದ ಅವಿಭಾಜ್ಯ ಅಂಗವಾಗಿ ಬೆಳೆಸಿಕೊಂಡು ಬರುತ್ತಿರುವ ಅಪರೂಪದ ಕುಟುಂಬ ನಲ್ಲೂರು ಭಾಗವತ ಎನ್. ಕೆ. ಬೆಟ್ಟಪ್ಪ ಅವರದು. ಗುಬ್ಬಿ ತಾಲೂಕು, ಚೇಳೂರು ಹೋಬಳಿ, ನಲ್ಲೂರು ೧೫೦ ಮನೆಗಳ ಗ್ರಾಮ. ರೈತಾಪಿ ಬದುಕಿನ ಬಿಡುವಿಲ್ಲದ ಕೆಲಸದ ಮಧ್ಯದಲ್ಲಿಯೂ ಭಾಗವಂತಿಕೆಯನ್ನು ಒಂದು ವ್ರತ ಎನ್ನುವ ಹಾಗೆ ಕಾಪಾಡಿಕೊಂಡು ಬಂದ ಹಿರಿಮೆ ನಲ್ಲೂರಿನ ಭಾಗವತ ನಿಂಗೇಗೌಡ ಅವರಿಗೆ ಸಲ್ಲುತ್ತದೆ. "ಕುಟುಂಬಕ್ಕೊಬ್ಬ ಮಗ ಯಕ್ಷಗಾನವನ್ನು ಬೆಳೆಸಬೇಕು. ಪಾರಂಪರ್ಯವಾಗಿ ಬಂದ ಮೃದಂಗ, ಹಾರ್ಮೋನಿಯಂ, ತಾಳ ವಾದ್ಯಗಳ ಸೇವೆ ಮಾಡಲೇಬೇಕು. ಇದು ನಮ್ಮ ಮನೆತನಕ್ಕೆ ಹೊಂದಿಕೊಂಡು ಬಂದಿರುವ ಕಲೆ. ಇದು ಸರಸ್ವತಿಯ ಸೇವೆ" ಎಂಬ ವಿನಮ್ರ ಭಾವದಿಂದ ಇಂದಿಗೂ ಮೂರು ತಲೆಮಾರನ್ನು ಸವೆಸುತ್ತಿರುವ ನಲ್ಲೂರಿನ ಭಾಗವತ ಬೆಟ್ಟಪ್ಪ ಹೇಳುತ್ತಾರೆ. ತಾತ ನಿಂಗೇಗೌಡ, ತಂದೆ ಕೆಂಪೇಗೌಡ ಈಗ ನನ್ನ ಸರದಿ. ನನಗೂ ಎಂಬತ್ತು ವರ್ಷ ದಾಟಿತು. ನನ್ನ ಕಲೆಯನ್ನು ನನ್ನ ಮಕ್ಕಳು ಮುಂದುವರಿಸಲು ಮನಸ್ಸು ಕೊಡಲಿಲ್ಲ ಎನ್ನುವ ಅಪಾರ ದುಗುಡ ವ್ಯಕ್ತಪಡಿಸುವ ಬೆಟ್ಟಪ್ಪ ತಮ್ಮ ೨೦ನೇ ವಯಸ್ಸಿನಿಂದ ೮೦ರ ತನಕ ವರ್ಷಕ್ಕೆ ಏನಿಲ್ಲ ಅಂದರೂ ೧೦ ಯಕ್ಷಗಾನವನ್ನಾದರೂ ಆಡಿಸುವ ಜಾಯಮಾನದವರು.

ಒಂದಿಷ್ಟು ಗದ್ದೆ, ಪೂರ್ವಿಕರು ನೆಟ್ಟ ತೆಂಗಿನಮರ, ಬಯಲು ನೆಲ ಇವಿಷ್ಟನ್ನೂ ಅಣ್ಣ ತಮ್ಮಂದಿರಿಗೆ ಬಿಟ್ಟು ತನ್ನ ಪಾಡಿಗೆ ತಾನು ಊರೂರು ಅಲೆಯುತ್ತಾ ಯಕ್ಷಗಾನ ಕಲಿಸುತ್ತಾ ಪ್ರಸಾರ ಕಾರ್ಯದಲ್ಲಿ ತಲ್ಲೀನರಾದದ್ದು ಇವರ ಹೆಚ್ಚುಗಾರಿಕೆ. ವಿವಾಹವಾದರೂ ಕೌಟುಂಬಿಕವಾಗಿ ಸುಖ ಕಾಣಲಿಲ್ಲ ಎನ್ನುವ ಈ ಯಕ್ಷಗಾನ ಕಲಾವಿದರಿಗೆ ಇಬ್ಬರು

ಮಕ್ಕಳು. ಇಳಿವಯಸ್ಸಿನಲ್ಲಿಯೂ ಯಕ್ಷಗಾನದ ಗೀಳಿನಿಂದ ಊರೂರು ಅಲೆಯುವುದು ಇವರ ಅಭ್ಯಾಸ.

ತಮ್ಮ ತಂದೆ, ತಾತರಿಂದ ಪ್ರೇರೇಪಿತರಾಗಿ ತಮ್ಮ ೧೦ನೇ ವಯಸ್ಸಿನಲ್ಲಿಯೇ ಶಾರದೆ ಪಾತ್ರದ ಮೂಲಕ ಅಟ್ಟ ಹತ್ತಿದ ಬೆಟ್ಟಪ್ಪ ೨೦ನೇ ವಯಸ್ಸಿಗೆ ಭಾಗವತರಾಗಿ 'ಐರಾವತ' ಎಂಬ ಯಕ್ಷಗಾನ ಕಲಿಸಿದ್ದು ಅವರ ವಿಶೇಷ. ಇಂದಿಗೂ ಯಕ್ಷಗಾನ ಅನ್ನಲು ಇಚ್ಛಿಸದ ಈ ಕಲಾವಿದರಿಗೆ ಬಯಲಾಟ ಎನ್ನುವುದೇ ಹೆಚ್ಚು ಪ್ರಿಯವಾದ ಹೆಸರು. ಬಯಲಾಟದ ಬೆಟ್ಟಪ್ಪ ಎಂದೇ ಚೇಳೂರು ಸೀಮೆಯಲ್ಲಿ ಜನಜನಿತರಾಗಿರುವ ಬೆಟ್ಟಪ್ಪ ಅವರಿಗೆ ಧ್ವನಿ ಕುಗ್ಗಿದೆ, ಮಾತು ತೊದಲುತ್ತದೆ, ಆದರೆ ಉತ್ಸಾಹ ಪುಟಿದೇಳುತ್ತದೆ. ಇದೇ ಅವರ ಕಲಾಪ್ರೌಢಿಮೆಯ ಹಿರಿತನ.

ದಕ್ಷಯಜ್ಞ, ಬಾಣಾಸುರ, ಗಿರಿಜಾ ಕಲ್ಯಾಣ, ದೇವಿಮಹಾತ್ಮೆ, ಲವಕುಶರ ಕಾಳಗ ಅಭಿಮನ್ಯು ಕಾಳಗ, ಭಸ್ಮಾಸುರ, ರತಿಕಲ್ಯಾಣ, ವಿರಾಟಪರ್ವ, ಕೀಚಕವಧೆ, ಕರಿಭಂಟ, ಐರಾವತ, ಪಾಂಡುವಿಜಯ, ಅಂಬಿಕಾವಿಜಯ, ಇಂದ್ರಜಿತ್ ಕಾಳಗ, ದ್ರೌಪದಿ ಸ್ವಯಂವರ ಹೀಗೆ ನೂರಕ್ಕೂ ಹೆಚ್ಚು ಯಕ್ಷಗಾನ ಪ್ರಸಂಗಗಳು ಬೆಟ್ಟಪ್ಪನವರ ಎದೆಯ ಗೂಡೊಳಗೆ ನಿತ್ಯ ನರ್ತಿಸುತ್ತಿವೆ. ತುದಿನಾಲಿಗೆಯಿಂದಲೇ ಹೇಳಿಬಿಡುವ ಇವರ ಮಾತಿನ ಧಾಟಿ, ಹಾಡಿನ ಲಯ, ತಾಳ ತುಂಬಾ ಅಪೂರ್ವ ಪ್ರಸಂಗವಾಗಿದೆ.

೧೯೪೦ ರಿಂದ ಆರಂಭಗೊಂಡ ಈತನಕ ತುಮಕೂರು, ಚಿತ್ರದುರ್ಗ ಈ ಭಾಗಗಳಲ್ಲಿ ಬಯಲಾಟ ಕಲಿಸಿರುವ ಬೆಟ್ಟಪ್ಪ ಹಲವಾರು ಶಿಷ್ಯರನ್ನು ರೂಪಿಸಿರುವ ಹಿರಿಮೆಗೂ ಪಾತ್ರರಾಗಿದ್ದಾರೆ. ಇವರ ಹಲವು ಶಿಷ್ಯರು ಇಂದು ಭಾಗವತರಾಗಿ ಯಕ್ಷಗಾನ ಕಲಿಸುತ್ತಿರುವುದು ವಿಶೇಷ. ಆ ಸಂತಸವನ್ನು ಬೆಟ್ಟಪ್ಪ ಹೇಳಿಕೊಳ್ಳುವುದು ಹೀಗೆ "ತಾತನ ಕಾಲದಿಂದಲೂ ಬಂದ ಭಾಗವಂತಿಕೆ ನನ್ನ ಕಾಲಕ್ಕೆ ನಿಂತು ಹೋದರೂ ನನ್ನ ಶಿಷ್ಯರು ಆ ಪರಂಪರೆಯನ್ನು ಮುಂದುವರಿಸುತ್ತಿದ್ದಾರೆ. ನಾನು ಕಲಿಸಿದ ಶಿಷ್ಯರೇ ನನ್ನ ಮಕ್ಕಳು ಅಂದುಕೊಳ್ಳುತ್ತೇನೆ." ಈ ಬಗೆಯ ಅಪೂರ್ವ ಶಿಷ್ಯವಾತ್ಸಲ್ಯ, ಕಲಾ ಪ್ರೇಮ ತುಂಬ ಅಪರೂಪವಾದ ಪ್ರಸಂಗವೆಂದೇ ಭಾವಿಸಿಬೇಕಗುತ್ತದೆ.'

ತುಮಕೂರಿನ ಶ್ರೀ ಸಿದ್ಧಗಂಗಾ ಮಠದ ಶ್ರೀ ಸಿದ್ಧಲಿಂಗೇಶ್ವರ ಜಾತ್ರಾ ಮಹೋತ್ಸವದ ಸಿದ್ಧಗಂಗಾ ವಸ್ತುಪ್ರದರ್ಶನದ ಕಲಾಭವನದಲ್ಲಿ ಹಲವಾರು ಬಾರಿ ದಕ್ಷಯಾಗ, ಶಿವಜಲಂಧರ, ಗಿರಿಜಾಕಲ್ಯಾಣ, ದೇವಿಮಹಾತ್ಮೆ ಪ್ರಸಂಗಗಳನ್ನು ಪ್ರದರ್ಶಿಸಿರುವ ಶ್ರೀ ಬೆಟ್ಟಪ್ಪ, ಒಂದು ಬಗೆಯ ಅಲೆಮಾರಿ ಭಾಗವತ. ಕೂಲಿಮಠದಲ್ಲಿ ಓದಿದಂತೆ ಊರೂರು ತಿರುಗಿ ಪ್ರಸಂಗ ಮಾಡಿಸುವುದು ಇವರ ಅಭ್ಯಾಸ. ಹಾಗಾಗಿ ಖಚಿತ ನೆಲೆ, ನಿರ್ದಿಷ್ಟ ಶಿಷ್ಯವರ್ಗ ಏನನ್ನೂ ಮಾಡಿಕೊಳ್ಳದೆ ಇರುವ ಶ್ರೀ ಬೆಟ್ಟಪ್ಪ ಅವರಿಗೆ ಇಬ್ಬರು ಮಕ್ಕಳು, ಮೊಮ್ಮಕ್ಕಳು, ಮರಿಮಕ್ಕಳು ಹೀಗೆ ಮುತ್ತಾತ ಅನ್ನಿಸಿಕೊಂಡರೂ ಕುಟುಂಬ

ನಿರ್ವಹಣೆಯ ದುಃಸ್ಥಿಯಿರುವುದು ಮರುಕು ತರಿಸುತ್ತದೆ. ಯಕ್ಷಗಾನ ಕಲೆಗಾಗಿ ಎಲ್ಲವನ್ನೂ ಕಳೆದುಕೊಂಡರು ಎಂಬ ಸಾಮಾನ್ಯ ಮಾತಿನ ನಡುವೆಯೂ ಅವರ ಕಲಾ ಪ್ರೀತಿಯ ತೀವ್ರತೆ ಬತ್ತಿಲ್ಲ, ಉತ್ಸಾಹ ಕುಗ್ಗಿಲ್ಲ, ಕಳೆದುಕೊಂಡೆ ಅನ್ನುವುದಕ್ಕಿಂತ 'ಗಳಿಸಿಕೊಂಡೆ' ಎಂಬ ಬೆಟ್ಟಪ್ಪ ಅವರ ನಿರ್ಮಲ ಕಲಾ ತೃಪ್ತಿಯೆ ಬೆಲೆ ಕಟ್ಟಲಾರದ ಬಂಗಾರ. ೨೦೦೬ರಲ್ಲಿ ಕರ್ನಾಟಕ ಸರ್ಕಾರದ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಪ್ರಶಸ್ತಿ ಈ ಅಪೂರ್ವ ಕಲಾವಿದನ ಎಂಬತ್ತರ ಮಾಗಿದ ಮನಸ್ಸಿಗೆ ಒಪ್ಪಿದ ಗೌರವ, ಇವರ ಕಲಾ ಬದುಕಿನ ಸಾರ್ಥಕ ರೂಪ.

ಭಾಗವತ ಬೆಟ್ಟಪ್ಪ,
ನಲ್ಲೂರು ಗ್ರಾಮ, ಚೇಳೂರು ಅಂಚೆ, ಗುಬ್ಬಿ ತಾಲೂಕು.

## ಭಾಗವತ ಬಂದಕುಂಟೆ ಗೋಪಾಲಯ್ಯ

ತುಮಕೂರು ಜಿಲ್ಲೆ ಸಿರಾ ತಾಲೂಕಿನ ಗೌಡಗೆರೆ ಹೋಬಳಿಗೆ ಸೇರಿದ ಬಂದಕುಂಟೆ ಗೋಪಾಲಯ್ಯನವರ ಹುಟ್ಟೂರು. ೧೯೨೩ರಲ್ಲಿ ಜನನ. ಕುಂಚಿಟಿಗ ವರ್ಗಕ್ಕೆ ಸೇರಿದ್ದಾರೆ. ಜನಪದ ಸಂಗೀತ, ಯಕ್ಷಗಾನ, ಸಾಮಗಾನ, ಕೋಲುಮೇಳಗಳಲ್ಲೂ ಖ್ಯಾತಿಗಳಿಸಿದ್ದಾರೆ.

ರೈತಾಪಿ ಕುಟುಂಬದ ತಿಪ್ಪಣ್ಣ – ಪುಟ್ಟಮ್ಮ ಅವರ ಐದು ಜನ ಗಂಡುಮಕ್ಕಳಲ್ಲಿ ಮೊದಲನೆಯವರು ಗೋಪಾಲಯ್ಯ. ಇಬ್ಬರು ಸೋದರಿಯರೂ ಇದ್ದಾರೆ. ತನ್ನ ಮೊದಲ ಮಗ ವಿದ್ಯಾವಂತನಾಗಬೇಕೆಂಬ ಆಸೆಯಿಂದ ತಿಪ್ಪಣ್ಣ ಗೋಪಾಲಯ್ಯನವರನ್ನು ಕೂಲಿಮಠಕ್ಕೆ ಸೇರಿಸಿದರು. ಜಟ್ಟಿ ಹನುಮಂತಯ್ಯ ಎಂಬ ಮಠ ಮಾಸ್ತರ ಬಳಿ ಪ್ರಾಥಮಿಕ ವಿದ್ಯಾಭ್ಯಾಸ ಮಾಡಿದ ಗೋಪಾಲಯ್ಯ ನಾಲ್ಕನೇ ತರಗತಿಯವರೆಗೆ ಅಭ್ಯಾಸ ಮಾಡಿದರು. ಮುಂದೆ ಶಾಲಾ ಅಭಾವ, ಹಣಹಾಸಿನ ತೊಂದರೆಯಿಂದಾಗಿ ಶಾಲೆ ಬಿಟ್ಟ ಗೋಪಾಲಲಯ್ಯ ಸಂಗೀತದತ್ತ ವಾಲಿದರು.

ಶಾಗದಡು ಭಾಗವತ ಕಾಲುವೆ ರಂಗಪ್ಪನವರ ಬಳಿ ಎರಡು ವರ್ಷ ಇದ್ದು ಯಕ್ಷಗಾನವನ್ನು ಶಾಸ್ತ್ರೀಯವಾಗಿ ಅಭ್ಯಾಸ ಮಾಡಿದರು. ಕಲೆಯನ್ನು ಕೆಲವರು ಸಂಸರ್ಗ, ಪರಿಸರದಿಂದ ಕಲಿಯುತ್ತಾರೆ. ಕೆಲವರು ಶಾಸ್ತ್ರಬದ್ಧವಾಗಿ ಅಭ್ಯಾಸ ಮಾಡುತ್ತಾರೆ. ಆದರೆ ಗೋಪಾಲಯ್ಯ ನುರಿತ ಭಾಗವತ, ಯಕ್ಷಗಾನ ಲೇಖಕ ಶಾಗದಡು ಕಾಲುವೆ ರಂಗಪ್ಪನವರ ಮನೆಯಲ್ಲಿ ೨ ವರ್ಷ ಶಿಷ್ಯವೃತ್ತಿ ಮಾಡಿ ಯಕ್ಷಗಾನದ ಮಟ್ಟು, ತಾಳ, ನೃತ್ಯ ಈ ಎಲ್ಲ ಪ್ರಕ್ರಿಯೆಯನ್ನು ಅಭ್ಯಾಸ ಮಾಡಿದವರು.

ಗೋಪಾಲಯ್ಯನವರಿಗೆ ಇದೀಗ ೮೪ರ ಪ್ರಾಯ. ಈ ಇಳಿವಯಸ್ಸಿನಲ್ಲಿಯೂ ಯಕ್ಷಗಾನದ ಗೀಳು ಬಿಟ್ಟಿಲ್ಲ. ಇದುವರೆಗೆ ಒಂದು ಸಾವಿರಕ್ಕೂ ಹೆಚ್ಚು ಯಕ್ಷಗಾನವನ್ನು

ಸಿರಾ, ಮಧುಗಿರಿ, ಹಿರಿಯೂರು, ಚಳ್ಳಕೆರೆ, ಪಾವಗಡ ಭಾಗಗಳಲ್ಲಿಯೂ ಕಲಿಸಿದ್ದಾರೆ. ವರ್ಷದಲ್ಲಿ ಏನಿಲ್ಲವೆಂದರೂ ೨೦ ಪ್ರದರ್ಶನವನ್ನು ಏರ್ಪಡಿಸುವ, ಸಾಂದರ್ಭಿಕ ಕಸುಬುಗಾರಿಕೆ ಇವರದು. ರಾಮನವಮಿ, ಯುಗಾದಿ, ಶಿವರಾತ್ರಿ, ಏಕಾದಶಿ, ಶ್ರಾವಣ ಈ ಮುಂತಾದ ಸಾಂದರ್ಭಿಕ ಹಬ್ಬಗಳಂದು ಒಂದೊಂದು ಗ್ರಾಮದಲ್ಲಿ ಒಂದೊಂದು ಪ್ರಯೋಗ ಏರ್ಪಡಿಸುತ್ತಿದ್ದಾರೆ. ನುರಿತ ಹಾಗೂ ಹಿರಿಯ ಕಲಾವಿದರ ತಂಡವನ್ನು ಪ್ರತಿಯೊಂದು ಗ್ರಾಮದಲ್ಲೂ ಸೃಷ್ಟಿ ಮಾಡಿರುವುದು ಇವರ ವಿಶೇಷವಾಗಿದೆ.

ಅಪ್ಪಟ ಗಾಂಧಿವಾದಿಯೂ ಆಗಿರುವ ಗೋಪಾಲಯ್ಯ, ೧೯೪೨ ರ ಕ್ವಿಟ್ ಇಂಡಿಯಾ ಚಳುವಳಿಯಲ್ಲಿ ಭಾಗವಹಿಸಿದ್ದರು. ಈಚಲು ಮರ ಕಡಿಯುವ ಮೂಲಕ ಸಿರಾ ಸೀಮೆಯಲ್ಲಿ ಕ್ರಾಂತಿ ಎಬ್ಬಿಸಿ, ಮಧುಗಿರಿ ನಂತರ ಬಳ್ಳಾರಿ ಜೈಲಿಗೂ ಹೋಗಿಬಂದವರು.

ಜನಪದ ಸಂಗೀತ, ಕೋಲುಮೇಳ, ಪಂಢರಾಪುರ ಭಜನೆ, ಪಾಂಡುರಂಗ ಭಜನೆ ಇವರ ಆಸಕ್ತಿಯ ನೆಲೆಗಳು. ಭಜನೆ ತಂಡವೊಂದನ್ನು ಕಟ್ಟಿ ಸಂಘಟನೆಯಲ್ಲಿಯೂ ತೊಡಗಿಸಿಕೊಂಡಿರುವ ಗೋಪಾಲಯ್ಯ ಯಕ್ಷಗಾನ ಕಲೆಯ ಜೀವಚೇತನ ವ್ಯಕ್ತಿ. ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಏರ್ಪಡಿಸಿದ್ದ ಸಾಣೆಹಳ್ಳಿಯ ಮೂಡಲಪಾಯ ಯಕ್ಷಗಾನ ಭಾಗವತರ ಸಮಾವೇಶದಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ಭಾಗವಹಿಸಿದ್ದರು. ೨೦೦೬ರಲ್ಲಿ ತಿಪಟೂರಿನಲ್ಲಿ ಜಾನಪದ ಅಕಾಡೆಮಿ ಏರ್ಪಡಿಸಿದ್ದ ಮುಖವೀಣೆ ಪ್ರಾತ್ಯಕ್ಷಿಕೆ ಹಾಗೂ ಯಕ್ಷಗಾನ ಪ್ರದರ್ಶನದಲ್ಲಿ ಇವರ ಭಾಗವಂತಿಕೆಯ ತಂಡ 'ರಾಜಾ ಸತ್ಯವ್ರತ' ಎಂಬ ಯಕ್ಷಗಾನವನ್ನು ಪ್ರದರ್ಶಿಸಿದ್ದು ವಿಶೇಷವಾಗಿತ್ತು. ಇವರ ಭಜನೆ ಪದಗಳನ್ನು ಡಾ. ಚಿಕ್ಕಣ್ಣ ಯಣ್ಣೆಕಟ್ಟೆ ಸಂಗ್ರಹಿಸಿದ್ದಾರೆ.

**ಗೋಪಾಲಯ್ಯ,**
**ಬಂದಕುಂಟೆ, ಸಿರಾ ತಾಲೂಕು.**

# ಭಾಗವತ ರಾಮಾಂಜಿನಯ್ಯ

ಹಿರಿಯ ಸ್ವಾತಂತ್ರ್ಯ ಹೋರಾಟಗಾರ, ಕಲಾವಿದ, ಯಕ್ಷಗಾನ ಭಾಗವಂತಿಕೆ, ಪಾತ್ರಾಭಿನಯ ಹೀಗೆ ಬಹುಮುಖಿ ವ್ಯಕ್ತಿತ್ವದ ರಾಮಾಂಜಿನಯ್ಯ ಅವರಿಗೆ ಇದೀಗ ೭೮ ವರ್ಷ ಪ್ರಾಯ. ದಿನಾಂಕ ೧೧-೭-೧೯೨೯ ರಲ್ಲಿ ಮಧುಗಿರಿ ತಾಲೂಕು ಕಿತ್ತಗಳಿ ಗ್ರಾಮದಲ್ಲಿ ಜನಿಸಿದರು. ಶ್ರೀವೈಷ್ಣವ ಜನಾಂಗದವರು. ತಂದೆ ಭಾಗವತ ಪೋಡಿರಂಗಯ್ಯ, ತಾಯಿ ರಂಗಮ್ಮ. ಆರಂಭದಲ್ಲಿ ಸ್ವಾತಂತ್ರ್ಯ ಚಳುವಳಿಯ ಕೂಗಿಗೆ ಓಗೊಟ್ಟು ಶಾಲೆಬಿಟ್ಟರು. ವಿದೇಶಿ ವಸ್ತು ಬಹಿಷ್ಕಾರದ ಕೂಗಿಗೆ ಖಾದಿತೊಟ್ಟರು. ಗಾಂಧಿಯಂತೆ ಬಾಳಿದರು. ಬ್ರಿಟಿಷರ ಬಂಧನದ ಕಾಟದಿಂದ ತಪ್ಪಿಸಿಕೊಂಡು ಸಿರಾ ತಾಲೂಕಿನ ಕಡವಿಗೆರೆ ಗ್ರಾಮಕ್ಕೆ ಬಂದು ನೆಲೆಸಿದರು. ಮುಂದೆ ಸಿರಾ ಸಮೀಪದ ಜುಂಜರಾಮನಹಳ್ಳಿಯ ಆಂಜನೇಯ ದೇವಸ್ಥಾನದ ಅರ್ಚಕರಾಗಿ ಸೇವೆ ಸಲ್ಲಿಸುತ್ತಾ, ಭಾಗವಂತಿಕೆ ಮುಂದುವರಿಸಿದರು.

ತಂದೆ, ತಾತನ ಕಾಲದಿಂದಲೂ ಯಕ್ಷಗಾನ ಭಾಗವಂತಿಕೆ, ಅಭಿನಯದಲ್ಲಿ ವಿಶೇಷ ಆಸಕ್ತಿ. ತಂದೆ ಪೋಡಿರಂಗಯ್ಯನವರು ಕಲಿಸಿದ ಸತ್ಯಹರಿಶ್ಚಂದ್ರ ನಾಟಕದಲ್ಲಿ ಲೋಹಿತಾಶ್ವನ ಪಾತ್ರದ ಮೂಲಕ ರಂಗಪ್ರವೇಶ ಮಾಡಿದರು. ಮುಂದೆ ಕೃಷ್ಣಾರ್ಜುನ ಕಾಳಗ, ಗಿರಿಜಾ ಕಲ್ಯಾಣ, ರಾಜಾ ಸತ್ಯವ್ರತ, ತ್ರಿಪುರ ದಹನ, ಮುಂತಾದ ನಾಟಕಗಳಲ್ಲಿ ಅಭಿನಯಿಸಿದರು. ೧೯೫೦ರಿಂದ ಸ್ವತಃ ಭಾಗವತರಾಗಿ ಕೃಷ್ಣಾರ್ಜುನ ಕಾಳಗವನ್ನು ಕಡವಿಗೆರೆಯಲ್ಲಿ ಪ್ರದರ್ಶಿಸಿದರು. ಅಲ್ಲಿಯ ಇಲ್ಲಿಯ ತನಕ ಮಧುಗಿರಿ, ಪಾವಗಡ, ಕೊರಟಗೆರೆ, ಚಿತ್ರದುರ್ಗ, ಅನಂತಪುರ, ಅಮರಾಪುರ, ಮಡಕಶಿರಾ, ಗುಬ್ಬಿ ಈ ಭಾಗಗಳಲ್ಲಿ ತಿರುಗಾಟದ ಮೂಲಕ ಯಕ್ಷಗಾನ ಕಲಿಸಿದರು. ಕರಿಭಂಟ ಇವರಿಗೆ ಸಿರಾ ಸೀಮೆಯಲ್ಲಿ ಇವರಿಗೆ ಅಪಾರ ಖ್ಯಾತಿ ತಂದುಕೊಟ್ಟ ಪ್ರಸಂಗ. ಲವಕುಶ, ಐರಾವತ, ವಿರಾಟ, ಪರ್ವ, ಗಜಗೌರಿ, ದಕ್ಷಯಾಗ, ದುಶ್ಯಾಸನ ಕಾಳಗ, ಚಿತ್ರಾಂಗದ ಈ ಮೊದಲಾದ

ನಾಟಕಗಳನ್ನು ಭಾಗವಂತಿಕೆಯ ಮೂಲಕ ಬಯಲುಸೀಮೆಯಲ್ಲಿ ರಂಗಕ್ರಾಂತಿ ತಂದವರು. ಕಳೆದ ೬೦ ವರ್ಷಗಳಿಂದಲೂ ಬರದ ಸಂದರ್ಭಗಳಲ್ಲಿ ಯಕ್ಷಗಾನದ ಗೀಳು ಬಿಡದ ರಾಮಾಂಜಿನಯ್ಯ ಐರಾವತ, ವಿರಾಟಪರ್ವ, ಲವಕುಶ ಈ ನಾಟಕಗಳನ್ನು ಶುಭದ ಸೂಚಕ ಎಂದು ಪ್ರತಿವರ್ಷವೂ ಪ್ರದರ್ಶಿಸುತ್ತಾ ಬಂದವರು.

ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರ, ಚಿತ್ರದುರ್ಗದ ಸಾಣೇಹಳ್ಳಿ, ಪರಶುರಾಮಪುರ ಇಲ್ಲೆಲ್ಲಾ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯ ಜಾನಪದ ಕಲಾಮೇಳದ ಸಂದರ್ಭಗಳಲ್ಲಿ ಇವರ ತಂಡ ಯಕ್ಷಗಾನ ಪ್ರದರ್ಶಿಸಿದರು.

ಜಿಲ್ಲಾ ರಾಜ್ಯೋತ್ಸವ ಪ್ರಶಸ್ತಿಯೂ ಸೇರಿದಂತೆ ಮಧುಗಿರಿ, ಅನಂತಪುರ ಹಾಗೂ ತುಮಕೂರು ಜಿಲ್ಲೆಗಳ ಹಲವು ಗೌರವಾನ್ವಿತ ಕಲಾಸಂಸ್ಥೆಗಳು ಇವರಿಗೆ ಕಲಾಗೌರವ ನೀಡಿ ಸತ್ಕರಿಸಿವೆ. ಈಡಿಗರ ದಾಸರಹಳ್ಳಿಯಲ್ಲಿ ಖಾಯಂ ಆಗಿ ಇವರ ಹೆಸರಲ್ಲಿ ಯಕ್ಷಗಾನ ಪ್ರದರ್ಶನಕ್ಕೆ ವ್ಯವಸ್ಥೆ ಮಾಡಿದ್ದಾರೆ. ಇವರ ಶಿಷ್ಯರಲ್ಲಿ ಒಬ್ಬರಾದ ರಮಾನಂದ ಈಡಿಗರ ದಾಸರಹಳ್ಳಿಯ ಯಕ್ಷಗಾನ ತಂಡದ ಭಾಗವತರಾಗಿ, ಯಕ್ಷಗಾನ ಮಂಡಳಿಯ ಅಧ್ಯಕ್ಷರಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಐದು ಜನ ಗಂಡುಮಕ್ಕಳು ವಿದ್ಯಾವಂತರಾದರೂ ಅಪ್ಪನ ಕಲೆಯನ್ನು ಮುಂದುವರಿಸಿಲ್ಲ. ಆ ಕೊರಗು ಭಾಗವತ ರಾಮಾಂಜಿನಯ್ಯ ನವರಲ್ಲಿತ್ತು. ದಿನಾಂಕ ೫-೪-೨೦೦೬ ರಂದು ಕಡವಿಗೆರೆಯಲ್ಲಿ ಐರಾವತ ನಾಟಕ ಆಡಿಸಿ ಮರುದಿನ ವಿಧಿವಶರಾದದ್ದು ಯೋಗಾಯೋಗವೇ ಸರಿ.

**ರಾಮಾಂಜಿನಯ್ಯ**
**ಜುಂಜರಾಮನಹಳ್ಳಿ, ಸಿರಾ ತಾಲೂಕು**

# ಭಾಗವತ ಜಿ. ಆರ್. ಚಿಕ್ಕಮುದ್ದಯ್ಯ

ನೋಡುವುದಕ್ಕೆ ರೌದ್ರಪಾತ್ರ ಮಾಡುವ ನಟನಂತೆ ಕಾಣುವ ಚಿಕ್ಕಮುದ್ದಯ್ಯ ಯಕ್ಷಗಾನ ಭಾಗವತರು, ಮೃದಂಗ ವಾದಕರು ಮತ್ತು ಯಕ್ಷಗಾನ ಪರಿಕರ ತಯಾರಕರು. ಅಸ್ಪೃಶ್ಯರಾದುದರಿಂದ ಅಕ್ಷರ ಕಲಿಯಲು ತೊಡಕಾಯಿತೆಂದು ತಮ್ಮ ಅಳಲನ್ನು ತೋಡಿಕೊಳ್ಳುವ ಈ ತೊಂಬತ್ತರ ಹಿರಿಯ ಕಲಾವಿದ ಜನತಾ ವಿಶ್ವವಿದ್ಯಾಲಯದಲ್ಲಿ ಕಲಿತದ್ದು ಅಪಾರ. ಜನರ ಪ್ರೀತಿ ವಿಶ್ವಾಸಗಳಿಂದಾಗಿ ಭಾಷೆ ಗಡಿಮೀರಿ, ರಾಜ್ಯ ಬೇಧವಿಲ್ಲದೆ ಸಮನ್ವಯ ಕಲಾಕಾರರಾಗಿ ಬೆಳೆದದ್ದು ವಿಶೇಷ.

ತುಮಕೂರು ಜಿಲ್ಲೆ ಮಧುಗಿರಿ ತಾಲೂಕಿನ ಹರಿಜನರೇ ಪ್ರಧಾನವಾಗಿರುವ ಗೋಪಗೊಂಡನಹಳ್ಳಿ ಇವರು ನೆಲಮನೆ. ಆದರೆ ಯಕ್ಷಗಾನದ ಗೀಳು, ಭಾಗವಂತಿಕೆಯ ಹಂಬಲದಿಂದಾಗಿ, ಊರೂರು ಅಲೆದವರು, ಇವರಿಗೆ ಯಕ್ಷಗಾನದ ಮೊದಲ ಗುರು ಸ್ವತಃ ಸೋದರ ಮಾವ ರಾಮಯ್ಯನವರು. ೧೯೪೦ರಿಂದಲೇ ಯಕ್ಷಗಾನ ಕಲಿಯ ತೊಡಗಿದರು. ಹರಿಜನರಾದ ಇವರಿಂದ ಬೇರೆಯವರು ಯಕ್ಷಗಾನ ಕಲಿಯಲು ಹಿಂಜರಿದಾಗ, ಆದಿ ಕರ್ನಾಟಕ ಕೇರಿಗಳಲ್ಲಿ ತಿರುಗಾಡಿ, ಕಲೆ ಬಗೆಗೆ ಅರಿವು ಮೂಡಿಸಿದರು. ಬಯಲಾಟ, ಬಯಲು ಕತೆ ಎಂದೆಲ್ಲಾ ಕರೆದು, ರಾತ್ರಿ ಇಡೀ ಆಟ ಮಾಡಿ, ಸೀಮೆ ಎಣ್ಣೆ ಲಾಟೀನು ಇಲ್ಲವೆ ದೀಪದ ಎಣ್ಣೆ ಪಂಜಿನಿಂದ ಬೆಳಕು ಮಾಡಿಕೊಂಡು ಮೊದಲು ನಾಟಕ ಆಡಿಸುತ್ತಿದ್ದರು. ಅವಿದ್ಯಾವಂತ ಕಲಾವಿದರಾದುದರಿಂದ ಕನಿಷ್ಠ ಆರು ತಿಂಗಳ ಕಾಲ ಒಂದೊಂದು ಊರಿನಲ್ಲಿ ತಂಗಿ ಅವರಿಗೆ ಬಿಡುವಾದ ರಾತ್ರಿ ಕಾಲದಲ್ಲಿ ಯಕ್ಷಗಾನ ಕುಣಿಸಿ ಅಭ್ಯಾಸ ಮಾಡಿಸುವುದು ರೂಢಿ. ಅದಕ್ಕೆ ಪ್ರತಿಯಾಗಿ ಇವರಿಗೆ ಬಟ್ಟೆ, ಕಾಳು, ದವಸ, ಸೇಂಗಾ ನೀಡುತ್ತಿದ್ದರು. ಇದೇ ಇವರ ಉದರ ಪೋಷಣೆಯಾಗಿತ್ತು.

ಚಿಕ್ಕಮುದ್ದಯ್ಯನವರು ಮತ್ತು ಇವರ ಮಾವ ರಾಮಯ್ಯನವರೂ ಕೂಡಿಕೊಂಡು ಬಹಳ ವರ್ಷದವರೆಗೆ ಯಕ್ಷಗಾನ ಕಲಿಸಿದರು. ರೊಳ್ಳೆ ಮಡಕಶಿರಾ, ಅಮರಾಪುರ,

ಆದವಾನಿ, ಬಳ್ಳಾರಿಯ ತನಕ ಯಕ್ಷಗಾನ ಕಲಿಸಿದ್ದಾರೆ. ತೆಲುಗಿನಲ್ಲೂ ಯಕ್ಷಗಾನ ಕಲಿಸಿದ್ದಾರೆ. ತೆಲುಗಿನಲ್ಲೂ ಯಕ್ಷಗಾನ ಕಲಿಸಿದ ಹಿರಿಮೆ ಇವರದು. ಮೂರುವರೆ ವಜ್ರ, ಐರಾವತ, ಕುಮಾರ ರಾಮನ ಕತೆ, ದುಶ್ಯಾಸನನ ಕತೆ, ದೇವಿಮಹಾತ್ಮೆ, ಮನ್ಮಥ ವಿಜಯ, ಇಂದ್ರಜಿತ್ ಕಾಳಗ, ಲವಕುಶರ ಕತೆ ಇವರು ಕಲಿಸಿದ ಪ್ರಮುಖ ಯಕ್ಷಗಾನ ಪ್ರಸಂಗಗಳು ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರ, ಮೈಸೂರಿನ ದಸರಾ ವಸ್ತುಪ್ರದರ್ಶನ ಸಭಾಂಗಣ, ಅನಂತಪುರ, ಮಡಕಶಿರಾ ಈ ಮೊದಲಾದ ಕಡೆ ಯಕ್ಷಗಾನ ಪ್ರದರ್ಶಿಸಿದ್ದಾರೆ. ಇವರಿಗೆ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ೧೯೯೧ನೇ ಸಾಲಿನ ಜಾನಪದ ಅಕಾಡೆಮಿ ಪ್ರಶಸ್ತಿ ನೀಡಿ ಗೌರವಿಸಿದೆ.

**ಚಿಕ್ಕಮುದ್ದಯ್ಯ, ಗೋಪನಹಳ್ಳಿ,**
**ಬಿಜವಾರ ಅಂಚೆ, ಮಧುಗಿರಿ ತಾಲೂಕು.**

# ಭಾಗವತ ಕೊಕ್ಕಟ್ಟೆ ಮರುಳಸಿದ್ಧಪ್ಪ

ಕಳೆದ ಎಪ್ಪತ್ತು ವರ್ಷಗಳಿಂದಲೂ ಯಕ್ಷಗಾನ ಕಲೆಯನ್ನು ಒಂದು ವ್ರತವನ್ನಾಗಿ ಬೆಳೆಸಿಕೊಂಡು, ಅಭಿನಯ, ಭಾಗವಂತಿಕೆ, ಹಿಮ್ಮೇಳ ಕಲಾವಿದರಾಗಿ ಸಾರ್ಥಕ ಕೆಲಸ ಮಾಡುತ್ತಿರುವ ಶ್ರೀ ಮರುಳಸಿದ್ಧಪ್ಪ ಅವರಿಗೆ ಇದೀಗ ಎಪ್ಪತ್ತೆಂಟರ ಪ್ರಾಯ. ತಮ್ಮ ಇಳಿವಯಸ್ಸಿನ ಜರಾಜೀರ್ಣ ಸ್ಥಿತಿಯಲ್ಲಿದ್ದರೂ ಯಕ್ಷಗಾನದ ಗೀಳು ಮಾಸಿಲ್ಲ. ತಲೆ ಮೇಲೆ ಮೈಸೂರು ರುಮಾಲು, ಹೆಗಲ ಮೇಗಳ ಶಲ್ಯ, ಕಚ್ಚೆ ಬಿಗಿದ ಪಂಚೆ, ಶುಭ್ರ ಬಿಳಿಯ ನಿಲುವಂಗಿಯ ವೇಷಭೂಷಣ ಇಂದಿಗೂ ತಪ್ಪಿಲ್ಲ. ಹಾಗಾಗಿಯೇ ಮೊದಲ ನೋಟದಲ್ಲಿಯೇ ಯಕ್ಷಗಾನದ ಭಾಗವಂತಿಕೆಯ ರೂಪ ಲಕ್ಷಣಗಳೊಂದಿಗೆ ಎಲ್ಲರ ಗಮನ ಸೆಳೆಯುತ್ತಿರುವ ಕೊಕ್ಕಟ್ಟೆ ಮರುಳಸಿದ್ಧಪ್ಪನವರು ಚಿಕ್ಕನಾಯಕನಹಳ್ಳಿ ತಾಲೂಕು ಶೆಟ್ಟಿಕೆರೆ ಗ್ರಾಮದವರು. ೧೯೨೯ರಲ್ಲಿ ನಂಜಪ್ಪಶೆಟ್ಟಿ ಮತ್ತು ಸಿದ್ಧಮ್ಮ ದಂಪತಿಗಳಿಗೆ ಏಕೈಕ ಮಗನಾಗಿ ಜನನ. ನಂಜಪ್ಪಶೆಟ್ಟರು ಊರಿನ ಗುಡಿಗೌಡರು. ಗುಡಿ ಗೌಡರಾಗಿದ್ದುಕೊಂಡು ಪ್ರತಿ ಧಾರ್ಮಿಕ ಸಂದರ್ಭಗಳಲ್ಲಿ ಯಕ್ಷಗಾನ, ಬಯಲಾಟ ಕಲೆಗೆ ವಿಶೇಷ ಪ್ರೋತ್ಸಾಹ ನೀಡುವುದರ ಜೊತೆಗೆ ಸ್ವತಃ ಯಕ್ಷಗಾನ ಹಿಮ್ಮೇಳ ಭಾಗವತರಾಗಿ, ಕಲಾವಿದರಾಗಿ ಹೆಸರುವಾಸಿಯಾಗಿದ್ದವರು. ಹಾಗಾಗಿಯೇ ಅವರ ಮಗ ಮರುಳಸಿದ್ದಪ್ಪ, ಶಾಲಾ ಮಾಸ್ತರಾಗುವ ಬದಲು ಯಕ್ಷಗಾನಕ್ಕೆ ಮರುಳಾಗಿ, ಯಕ್ಷಗಾನದ ಕಲಾವಿದನಾದೆ ಎಂದೇ ವ್ಯಾಖ್ಯಾನಿಸುತ್ತಾರೆ.

ಆರಂಭದಲ್ಲಿ ಬಾಲಕೃಷ್ಣನ ಪಾತ್ರದಲ್ಲಿ ರಂಗ ಪ್ರವೇಶಿಸಿದ ಮರುಳಸಿದ್ಧಪ್ಪ ನಂತರ ಘೋರ ಪಾತ್ರಗಳಲ್ಲಿ ಆಕರ್ಷಕ ಅಭಿನಯ ನೀಡತೊಡಗಿದರು. ಸುಮಾರು ೨೫ಕ್ಕೂ ಹೆಚ್ಚು ಯಕ್ಷಗಾನಗಳಲ್ಲಿ ಘೋರ ಪಾತ್ರಗಳ ಮೂಲಕ ರಂಗಕಲೆಯನ್ನು, ಕುಣಿತವನ್ನು ಹಾಡುವ ಧಾಟಿ, ಮಾತಿನ ಶೈಲಿಯನ್ನು ರೂಢಿಸಿಕೊಂಡರು.

ಶನಿಮಹಾತ್ಮೆ ಯಕ್ಷಗಾನದಲ್ಲಿ ಶನಿಯ ಪಾತ್ರ, ದೇವಿ ಮಹಾತ್ಮೆ ನಾಟಕದಲ್ಲಿ ರಕ್ತಬೀಜಾಸುರನ ಪಾತ್ರ, ಕರ್ಣಾರ್ಜುನರ ಕಾಳಗದಲ್ಲಿ ಭೀಮನ ಪಾತ್ರ, ಯುದ್ಧಕಾಂಡ

ರಾಮಾಯಣದಲ್ಲಿ ರಾವಣನ ಪಾತ್ರ, ಗಿರಿಜಾ ಕಲ್ಯಾಣ ನಾಟಕದಲ್ಲಿ ಈಶ್ವರನ ಪಾತ್ರ, ರಾಮಾಂಜನೇಯ ನಾಟಕದಲ್ಲಿ ಆಂಜನೇಯನ ವೇಷ, ಕರಿಬಂಟ ನಾಟಕದಲ್ಲಿ ಕರಿಬಂಟ, ಗಯಚರಿತ್ರೆಯಲ್ಲಿ ಗಯನ ಪಾತ್ರ, ನಳಚರಿತ್ರೆಯಲ್ಲಿ ನಳನ ಪಾತ್ರಗಳಲ್ಲಿ ಅಭಿನಯ ನೀಡತೊಡಗಿದರು. ಇವರಿಗೆ ಗುರು ಹಾಗೂ ಭಾಗವತರಾಗಿದ್ದವರು ಸೋದರ ಸಂಬಂಧಿಯೂ ಆಗಿದ್ದ ಕೊಕ್ಕಟ್ಟೆ ಸಿದ್ಧರಾಮಯ್ಯನವರು. ಅವರಿಂದ ಉಡಾನ್ ಎಸೆಯುವುದೂ ಸೇರಿದಂತೆ ಯಕ್ಷಗಾನದ ಪ್ರಮುಖ ಭಾಗಗಳನ್ನು ಅಭ್ಯಾಸ ಮಾಡತೊಡಗಿದರು.

ನಂತರ ತಾವೇ ಯಕ್ಷಗಾನ ಭಾಗವತರಾಗಿ ೧೯೬೦ ರಿಂದ ಚಿಕ್ಕನಾಯಕನಹಳ್ಳಿ , ಶೆಟ್ಟಿಕೆರೆ, ತಿಪಟೂರು, ಹಾಗಲವಾಡಿ, ಹುಳಿಯಾರು, ಮಲ್ಲಿಗೆರೆ, ಹಂದನಕೆರೆ, ಮತ್ತಿಘಟ್ಟ ಈ ಮೊದಲಾದ ಕಡೆಗಳಲ್ಲಿ ಕರಿಬಂಟ, ಭಸ್ಮಾಸುರ, ಗಯಚರಿತ್ರೆ, ದಕ್ಷಯಾಗ, ಭೀಮಾರ್ಜುನರ ಕಾಳಗ, ದುಶ್ಯಾಸನ ಕಥೆ, ಕೀಚಕನ ದುರಂತ, ಲವಕುಶರ ಕಾಳಗ, ಶನಿಪ್ರಭಾವ, ದೇವಿಮಹಾತ್ಮೆ ಮೊದಲಾದ ಇಪ್ಪತ್ತೈದಕ್ಕೂ ಹೆಚ್ಚು ಯಕ್ಷಗಾನ ಪ್ರಸಂಗಗಳನ್ನು ಸಮರ್ಥವಾಗಿ ಕಲಿಸುತ್ತಾ ಬಂದಿರುವುದು ಇವರ ವಿಶೇಷ.

ಶೆಟ್ಟಿಕೆರೆ, ಸಾಸಲು ಈ ಗ್ರಾಮಗಳ ವೀರಶೈವ ಧಾರ್ಮಿಕ ಚಟುವಟಿಕೆಗಳ ಕೇಂದ್ರ ವ್ಯಕ್ತಿಯಾಗಿ, ತಾಲೂಕು ವೀರಶೈವ ಸಮಿತಿಯ ಅಧ್ಯಕ್ಷರೂ ಆಗಿ ಕಾರ್ಯನಿರ್ವಹಣೆ. ಪೌರಾಣಿಕ, ಯಕ್ಷಗಾನ ಈ ಎರಡೂ ಕ್ಷೇತ್ರಗಳಲ್ಲಿ ನೀಡಿರುವ ಗಣನೀಯ ಸಾಧನೆಯನ್ನು ಪರಿಗಣಿಸಿ ಹಲವು ನಾಗರಿಕ ಗೌರವಗಳೂ ಇವರಿಗೆ ಸಂದಾಯವಾಗಿವೆ. ಜಿಲ್ಲಾ ಕಲಾವಿದರ ಬಳಗದ ಗೌರವ, ಸಿದ್ಧಗಂಗಾ ಮಠದ ಕಲಾವಿದ ಗೌರವ ಪುರಸ್ಕಾರ, ಶ್ರೀ ಸಿದ್ಧಲಿಂಗೇಶ್ವರ ಜಾತ್ರಾ ಮಹೋತ್ಸವ ಕೈಗಾರಿಕಾ ವಸ್ತುಪ್ರದರ್ಶನದಲ್ಲಿ ಇವರ ದಕ್ಷಯಾಗ, ಗಿರಿಜಾ ಕಲ್ಯಾಣ ಮೊದಲಾದ ಯಕ್ಷಗಾನ ಪ್ರಸಂಗಗಳನ್ನು ಪ್ರಯೋಗ ಮಾಡುತ್ತಾ ಬಂದಿರುತ್ತಾರೆ.

ಯಕ್ಷಗಾನದಿಂದಾಗಿ ಏನೇನನ್ನೂ ಮಾಡಿಕೊಳ್ಳಲಿಲ್ಲ. ಕಲೆಗಾಗಿ ಎಲ್ಲವನ್ನು ಕಳೆದುಕೊಂಡೆ ಎಂಬ ಅತೀವ ಕೊರಗು ತೋಡಿಕೊಳ್ಳುವ ಶ್ರೀ ಮರುಳಸಿದ್ದಪ್ಪನವರು ಇಂದು ಅನಾರೋಗ್ಯ ಪೀಡಿತರು. ಸರ್ಕಾರದ ಗೌರವಧನವೂ ಸೇರಿದಂತೆ ಯಾವುದೇ ಸೌಕರ್ಯವೂ ತಮಗೆ ೭೮ ವರ್ಷ ತುಂಬಿದರೂ ಬಾರದಿರುವುದಕ್ಕೆ ತೀವ್ರ ವಿಷಾದ ವ್ಯಕ್ತಪಡಿಸುವ ಇವರು ಕಲೆಗಾರಿಕೆಗೆ ನಿಜವಾದ ಗೌರವ ಸಿಗಬೇಕು. ಇಂದಿನ ಜಾಗತಿಕ ನೆಲೆಯಲ್ಲಿ ಯಕ್ಷಗಾನ ಕಲೆ ಭದ್ರವಾಗಬೇಕಾದರೆ ಮೊದಲು ಯಕ್ಷಗಾನ ಕಲೆಯನ್ನು ಬೆಳೆಸಬೇಕು ಎಂಬುದು ಇವರ ಅಂತರಾಳದ ಬಯಕೆ.

ಭಾಗವತ ಕೊಕ್ಕಟ್ಟೆ ಮರುಳಸಿದ್ದಪ್ಪ,
ಶೆಟ್ಟಿಕೆರೆ, ಚಿಕ್ಕನಾಯಕನಹಳ್ಳಿ ತಾಲೂಕು.

# ಭಾಗವತ ಬೋರಪ್ಪ

ಬೆಂಗಳೂರು ಆಕಾಶವಾಣಿ, ದೂರದರ್ಶನ ಕೇಂದ್ರದ ಮೂಲಕ ವರ್ಷದಲ್ಲಿ ಕನಿಷ್ಠ ಎರಡು ಕಾರ್ಯಕ್ರಮ ಯಕ್ಷಗಾನ ಪ್ರದರ್ಶನ ನೀಡುತ್ತಿರುವ ೭೦ ವಯಸ್ಸಿನ ಹಿರಿಯ ಕಲಾವಿದ ಭಾಗವತ ಮಡೇನೂರು ಎಂ. ಎನ್. ಬೋರಪ್ಪ ಯಕ್ಷಗಾನ ಕಂಡ ಅಪರೂಪದ ಕಲಾವಿದರು.

ತುಮಕೂರು ಜಿಲ್ಲೆಯ ತಿಪಟೂರು ತಾಲೂಕಿನ ಮಡೇನೂರು ಸಮೀಪದ ಅಂಬಿಕಾನಗರದ ವಾಸಿಯಾದ ಇವರು ತಮ್ಮ ೧೦ನೇ ವಯಸ್ಸಿನಲ್ಲಿ ಯಕ್ಷಗಾನ ಪ್ರವೇಶಿಸಿದರು. ಗುರು ಶಿವಪ್ಪನವರು ಯಕ್ಷಗಾನದ ಸಂಗೀತದ ಮಟ್ಟುಗಳನ್ನು ಕಲಿಸಿದವರು. ಶ್ರೀ ಕೋರಿ ಕಲ್ಲಾಚಾರ್ ಮತ್ತು ಪೇಟೆಮಾಸ್ತು ತಿಮ್ಮಪ್ಪನವರು. ಕರ್ಣಪರ್ವ ನಾಟಕದಲ್ಲಿ ಋಷಿಕೇತು ಪಾತ್ರದ ಮೂಲಕ ಪ್ರವೇಶ ಪಡೆದ ಇವರು ನಂತರ ಹನುಮನಾಯಕ, ಆಂಜನೇಯ, ಅರ್ಜುನ, ವಿಷ್ಣು, ಸುಲೋಚನ, ವಿಕ್ರಮ ಹಾಗೂ ಸುಗ್ರೀವನ ಪಾತ್ರಗಳ ಮೂಲಕ ಜನಮನ ಸೆಳೆದವರು.

ತಮ್ಮ ತಂದೆ ನಂಜೇಗೌಡ ಅವರ ಹಾಗೂ ತಾತ ಕೋಡಪ್ಪಜ್ಜನವರು ಯಕ್ಷಗಾನ ಭಾಗವತರಾಗಿದ್ದರು. ಇವರ ಪ್ರೇರಣೆ, ಪ್ರೋತ್ಸಾಹಗಳಿಂದ ಬಾಲ್ಯಾವಸ್ಥೆಯಲ್ಲಿ ಶಾರದೆ, ಮುದ್ದು ಗಣಪ, ಪ್ರಾರ್ಥನೆಯ ಮೂಲಕ ರಂಗಾಸಕ್ತಿ ಬೆಳೆಸಿಕೊಂಡರು. ತಾತನ ಜೊತೆ ಬೇರೆ ಬೇರೆ ಊರುಗಳಿಗೂ ಅಲೆದಾಟ ಮಾಡಿದರು. ಯಕ್ಷಗಾನ ಪಾತ್ರವಿಶೇಷ, ಅಭಿನಯ ಚಾತುರ್ಯ, ಕೌಶಲವನ್ನು ಕಣ್ಣಾರೆ ಕಂಡರು. ರಂಗ ರಸಗಳಾದ ಶೃಂಗಾರ, ಕರುಣ, ಹಾಸ್ಯ, ಅದ್ಭುತ, ಶಾಂತ ರಸಭಾವಗಳನ್ನು ರಂಗದ ಮೇಲೆ ತರುವ ಬಗೆಗೆ ಆರಂಭದಲ್ಲಿಯೇ ಚಿಂತನೆ ನಡೆಸಿ ತಮ್ಮ ಭಾಗವಂತಿಕೆಯ ಹಲವು ಪ್ರಸಂಗಗಳಲ್ಲಿ ಅವುಗಳ ಸಹಜಾಭಿವ್ಯಕ್ತಿಗೆ ಪ್ರೇರಣೆ ನೀಡಿದರು.

ಡಾ. ಎಚ್. ಎಲ್. ನಾಗೇಗೌಡ, ಡಾ. ಜಿ.ಶಂ. ಪರಮಶಿವಯ್ಯನವರ ಆತ್ಮೀಯ ಒಡನಾಟ, ಸಂಪರ್ಕದಿಂದಾಗಿ ಯಕ್ಷಗಾನ ಪ್ರಕರಣಗಳಲ್ಲಿ ಹಲವು ವೈವಿಧ್ಯತೆ ತರಲು ಸಾಧ್ಯವಾಯಿತು ಎಂಬುದನ್ನು ವಿನಯಪೂರ್ವಕವಾಗಿ ಹೇಳುವ ಬೋರಪ್ಪನವರು ತಿಪಟೂರು ತಾಲೂಕು ಕೊನೆಹಳ್ಳಿಯಲ್ಲಿ ಕರ್ನಾಟಕದಲ್ಲಿ ಪ್ರಥಮ ಬಾರಿಗೆ ಮೂಡಲಪಾಯ ಯಕ್ಷಗಾನ ಕಲಾಮಂದಿರ ಸ್ಥಾಪಿಸಲು ಪ್ರೇರಕವಾದರೆಂಬುದು ಗಮನಾರ್ಹ ಸಂಗತಿಯಾಗಿದೆ. ಕಳೆದ ೪೦ ವರ್ಷಗಳಿಂದಲೂ ಸುಭದ್ರಾ ಪರಿಣಯ, ಬಕಾಸುರನ ವಧೆ, ರತಿ ಕಲ್ಯಾಣ, ಶಿವ ಜಲಂಧರ, ರಾಜಸೂಯಯಾಗ, ಗಿರಿಜಾ ಕಲ್ಯಾಣ, ಯುದ್ಧಕಾಂಡ ರಾಮಾಯಣ, ಅಹಿರಾವಣ–ಮಹಿರಾವಣ, ಮೂರುವರೆ ವಜ್ರ, ಅಂಧಕಾಸುರನ ಕಥೆ, ಗಯಚರಿತ್ರೆ, ತ್ರಿಪುರ ದಹನ, ಅಭಿಮನ್ಯು ಕಾಳಗ, ದೇವಿಮಹಾತ್ಮೆ, ಕರಿಭಂಟ, ಲವಕುಶ ಇವರು ಕಲಿಸಿರುವ ಮೂಡಲಪಾಯ ಯಕ್ಷಗಾನ ಪ್ರಸಂಗಗಳು.

ಸಾಂಸ್ಕೃತಿಕ ವಿನಿಮಯ ಯೋಜನೆಯನ್ನು ಅರ್ಥಪೂರ್ಣವಾಗಿ ಬಳಸಿಕೊಂಡ ಯಕ್ಷಗಾನ ಭಾಗವತ ಎಂಬ ಹಿರಿಮೆಗೂ ಪಾತ್ರರಾಗಿರುವ ಬೋರಪ್ಪ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನೆರವಿನೊಂದಿಗೆ ನವದೆಹಲಿ, ಮಹಾರಾಷ್ಟ್ರ, ಮಧ್ಯಪ್ರದೇಶ, ಬಾಂಬೆ, ತಮಿಳುನಾಡು ಇಲ್ಲೆಲ್ಲಾ ಮೂಡಲಪಾಯ ಯಕ್ಷಗಾನದ ಸೌರಭವನ್ನು ಪಸರಿಸಿದ ಶ್ರೇಯಸ್ಸಿಗೆ ಪಾತ್ರರಾದವರು. ಈ ಸಂದರ್ಭದಲ್ಲಿ ಹಿರಿಯ ಜಾನಪದ ತಜ್ಞ ಡಾ. ಜೀಶಂಪ ಅವರ ಸಂಘಟನೆ, ಸಹಕಾರ ಅನನ್ಯವಾದುದು. ಹೆಗ್ಗೋಡು, ಧರ್ಮಸ್ಥಳ, ಮಣಿಪಾಲ್, ಉಡುಪಿ, ಗೋಕರ್ಣ, ಮಂಗಳೂರು, ಜನಪದಲೋಕ, ಮಲೆಮಹದೇಶ್ವರನ ಬೆಟ್ಟ, ಧಾರವಾಡ, ದಾವಣಗೆರೆ, ಹಂಪಿ ಉತ್ಸವ, ಚಿತ್ರದುರ್ಗ ಕಲೋತ್ಸವ ಇಲ್ಲೆಲ್ಲಾ ಕಲಾ ಪ್ರದರ್ಶನ ನೀಡಿದ್ದಾರೆ.

ಮುಖ್ಯಮಂತ್ರಿ ಆರ್. ಗುಂಡೂರಾವ್ ಅವರ ಸಮ್ಮುಖದಲ್ಲಿ ಮೈಸೂರಿನ ಅರಮನೆ ಆವರಣದಲ್ಲಿ ಪ್ರಧಾನಿ ರಾಜೀವ್‌ಗಾಂಧಿ ಅವರ ಸಮ್ಮುಖದಲ್ಲಿ ರಾಷ್ಟ್ರಪತಿ ಭವನದಲ್ಲಿ ಯಕ್ಷಗಾನ ಪ್ರದರ್ಶನ ನೀಡಿದ್ದಾರೆ. ಇಲ್ಲೆಲ್ಲಾ ಶಿವರಾಮ ಕಾರಂತ, ಕಲಾವಿದ ಪಿ. ಆರ್. ತಿಪ್ಪೇಸ್ವಾಮಿ ಅವರ ಸಂಪರ್ಕ, ಸಂಘಟನೆಯಿಂದಾಗಿ ಇದೆಲ್ಲಾ ಸಾಧ್ಯವಾದುದು ಹೆಮ್ಮೆಯ ಸಂಗತಿ ಎಂದು ಹೇಳುತ್ತಾರೆ.

ನಾಡಿನಾದ್ಯಂತ ಕಲಾಸಂಸ್ಥೆಗಳ ಗೌರವ, ಪ್ರಶಸ್ತಿಗೆ ಭಾಜನರಾಗಿರುವ ಬೋರಪ್ಪ ಕೊನೆಹಳ್ಳಿ ಯಕ್ಷಗಾನ ಕೇಂದ್ರದ ಮೂಲಕ ನಾಡಿನ ಗಮನವನ್ನು ಮೂಡಲಪಾಯ ಯಕ್ಷಗಾನದತ್ತ ಸೆಳೆದವರು. ಜೊತೆಗೆ ಅವಿದ್ಯಾವಂತರಾದರೂ ಮೈಸೂರು ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆಯ, ಜಾನಪದ ವಿಭಾಗದ ಸಂಪನ್ಮೂಲ ಸಂದರ್ಶಕ ಅಧ್ಯಾಪಕ, ಗುರುವಾಗಿ ಕಾರ್ಯ ನಿರ್ವಹಿಸಿದ್ದು ಇವರ ವಿಶೇಷವಾಗಿದೆ.

**ಬೋರಪ್ಪ, ಭಾಗವತ, ಮಡೇನೂರು, ತಿಪಟೂರು ತಾಲೂಕು.**

## ಸಿ. ಎಸ್. ಮೇಲೇಗೌಡ

ಮೂಡಲಪಾಯ ಯಕ್ಷಗಾನ ದಕ್ಷಿಣ ಕರ್ನಾಟಕದ ಜಿಲ್ಲೆಗಳಾದ ತುಮಕೂರು, ಹಾಸನ, ಮಂಡ್ಯ, ಬೆಂಗಳೂರು ಗ್ರಾಮಾಂತರ, ಚಿತ್ರದುರ್ಗ, ಕೋಲಾರ ಈ ಭಾಗಗಳಲ್ಲಿ ಮಾತ್ರ ಕಂಡುಬರುವ ಒಂದು ರೋಚಕ ಕಲೆ. ಓದು ಬರಹ ಬಾರದ ಗ್ರಾಮೀಣರು, ಬೇಸಿಗೆಯ ಕಾಲಕ್ಕೆ ರೈತಾಪಿ ಬದುಕಿನ ಬಿಡುವಿನ ವೇಳೆಯನ್ನು ಕಳೆಯುವುದೇ ಯಕ್ಷಗಾನ, ಬಯಲಾಟ ಈ ಮೊದಲಾದ ಗ್ರಾಮೀಣ ಕ್ರೀಡೆಗಳಿಂದ. ಈ ಭಾಗದ ನೂರಾರು ಭಾಗವತರು ಈ ಗಂಡುಕಲೆನ್ನು ಉಳಿಸಿ, ಬೆಳೆಸಲು ದುಡಿಯುತ್ತಿದ್ದಾರೆ. ಹಾಗಾಗಿಯೇ ಒಳ್ಳೆಯ ಭಾಗವತರು, ಕಲಾವಿದರು, ಸಂಗೀತಜ್ಞರು ಅಲ್ಲಲ್ಲಿ ಇಂದಿಗೂ ಉಳಿದಿದ್ದಾರೆ. ಪ್ರೋತ್ಸಾಹ, ಪ್ರೇರಕರಿಲ್ಲದೆ ಬಹುಮಾಧ್ಯಮಗಳ ಒಡೆತನದಲ್ಲಿ ಈ ಯಕ್ಷಗಾನ ಮರೆಯಾಗುತ್ತಿದೆ.

ಮೂಡಲಪಾಯ ಯಕ್ಷಗಾನ ಕಲಾವಿದರಾಗಿ, ಹಿಮ್ಮೇಳ ಭಾಗವತರಾಗಿ, ಸಂಘಟಕದ ಪ್ರೋತ್ಸಾಹ ಈ ಎಲ್ಲ ಮಾನವೀಯ ನೆಲೆಗಳಿಂದ ಸಿ. ಎಸ್. ಮೇಲೇಗೌಡರದು ಕಲಾ ಬದುಕಿಗೆ ಶ್ರೇಷ್ಠ ಕೊಡುಗೆ. ಗುಬ್ಬಿ ತಾಲೂಕು ಚೇಳೂರಿನ ಪಟೇಲ್ ಸಿದ್ಧೇಗೌಡ, ಶ್ರೀಮತಿ ಪುಟ್ಟಚಕ್ಕಮ್ಮ ಇವರ ತಂದೆ-ತಾಯಿಯವರು. ಇವರದು ಊರ ಪಟೇಲಗಾರಿಕೆಯ ಜೊತೆಗೆ ಒಳ್ಳೆಯ ಕಲಾ ಕುಟುಂಬ. ಸಿದ್ಧೇಗೌಡರೂ ಯಕ್ಷಗಾನ ಕಲಾವಿದರು. ದುಶ್ಯಾಸನ, ಭೀಮ, ದುರ್ಯೋಧನ ಈ ಬಗೆಯ ಘೋರ ಪಾತ್ರಗಳಲ್ಲಿ ಇವರದು ಅನನ್ಯ ಅಭಿನಯ. ಊರ ದೇವತೆ ಶ್ರೀ ತಿರುಮಲ ದೇವರ ಜಾತ್ರೆಯಲ್ಲಿ 'ಹಗಲುವೇಷ'ದಲ್ಲಿ ಹನುಮಂತ, ಶ್ರೀರಾಮ ಪರಿವಾರದ ಪಾತ್ರ ಹಾಕುತ್ತಿದ್ದರು. ಇವರ ಮಗ ಸಿ.ಎಸ್. ಮೇಲೇಗೌಡರೂ ಇದೇ ಕಲಾಪರಂಪರೆಯನ್ನು ಸಮರ್ಥವಾಗಿ ಬೆಳೆಸಿಕೊಂಡು ಬಂದರು. ಪೌರಾಣಿಕ, ಯಕ್ಷಗಾನ ಈ ಎರಡೂ ಪ್ರಕಾರದ ಕಲೆಗಳಲ್ಲಿಯೂ ಅಪಾರ ಅಭಿರುಚಿ. ತ್ರಿಪುರ ಸಂಹಾರದಲ್ಲಿನ ಇವರ ಈಶ್ವರನ ಪಾತ್ರ,

ದಕ್ಷಯಾಗದಲ್ಲಿನ ಶಿವ, ಐರಾವತ ನಾಟಕದ ದುಶ್ಯಾಸನ, ಪಾಂಡು ವಿಜಯದ ಧರ್ಮರಾಯನ ಪಾತ್ರಗಳ ಅಭಿನಯ ಮರೆಯಲಾಗದ ಅಭಿನಯಗಳು. ಸ್ವಾತಂತ್ರ್ಯ ಹೋರಾಟ, ಗೋಕಾಕ್ ಚಳುವಳಿ, ಕರ್ನಾಟಕ ಏಕೀಕರಂ ಚಳುವಳಿಗಳಲ್ಲಿ ಮೇಲೇಗೌಡರ ಕುಟುಂಬ ಪಾತ್ರ ಮಹತ್ವವಾದುದು. ರಾಜಸೂಯಯಾಗದಲ್ಲಿನ ಶ್ರೀ ಕೃಷ್ಣನ ಪಾತ್ರ ವೀಕ್ಷಿಸಿದ ಶ್ರೀ ಸಿದ್ಧಗಂಗಾ ಮಠಾಧೀಶರಾದ ಡಾ|| ಶಿವಕುಮಾರಸ್ವಾಮಿಯವರು ಇವರಿಗೆ 'ಕಲಾಭೀಷ್ಮ' ಪ್ರಶಸ್ತಿ ನೀಡಿ ಗೌರವಿಸಿರುವುದು ವಿಶೇಷವಾಗಿದೆ. ಚೇಳೂರಿನ ಶ್ರೀ ಮರುಳ ಬಸವೇಶ್ವರ, ದೃಷ್ಟೇಶ್ವರ, ತಿರುಮಲೇಶ್ವರ, ಬಂಡಿ ಸಿದ್ದೇಶ್ವರ, ಸಂಗಮೇಶ್ವರ, ಗಣಪತಿ ಈ ವಿಶೇಷ ಜಾತ್ರಾ ಮಹೋತ್ಸವದ ಸಂದರ್ಭದಲ್ಲಿ ತಪ್ಪದೆ ಯಕ್ಷಗಾನ ಪ್ರಸಂಗ, ನಾಟಕಗಳ ಮೂಲಕ ಕಾರ್ಯಕ್ರಮ ಆರಂಭಿಸುತ್ತಾ ಬಂದಿರುವುದು ಇವರ ವಿಶೇಷ. ಚೇಳೂರಿನ ಹಿರಿಯ ರಂಗನಿರ್ದೇಶಕ ಚಂದ್ರಶೇಖರಾಚಾರ್, ಭಾಗವತ ಬೆಟ್ಟಪ್ಪ, ಅಂಜನಪ್ಪ ಈ ಮೊದಲಾ ಭಾಗವತರನ್ನು ಕಲಾವಿದರಿಗೆ ಸಮರ್ಪಕವಾಗಿ ಬಳಕೆ ಮಾಡಿ, ನಾಟಕ ನಡೆಯಲು ಪ್ರೇರೇಪಿಸಿದವರು.

ಸಮಾಜಸೇವೆ, ಕಲಾಸೇವೆ, ಧಾರ್ಮಿಕ ಸಂಘಟನೆಯಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡು ಚೇಳೂರಿನ ಗ್ರಾಮ ಅಭಿವೃದ್ಧಿಗೆ ಪ್ರೇರಕ ಶಕ್ತಿಯಾಗಿ ದುಡಿದ ಹಿರಿಮೆಯೂ ಇವರದು. ಈ ಫಲವೇ ೧೯೬೫ ರಿಂದ ೨೦೦೫ ರವರೆಗೆ ಸತತವಾಗಿ, ಅವಿರೋಧವಾಗಿ ಗ್ರಾಮಪಂಚಾಯಿತಿ ಸದಸ್ಯರಾಗಿ ೧೭ ವರ್ಷಗಳ ಕಾಲ ಚೇರ್ಮನ್ ಆಗಿ ಗುಬ್ಬಿ ತಾಲೂಕು ಬೋರ್ಡ್ ಸದಸ್ಯ, ಉಪಾಧ್ಯಕ್ಷರಾಗಿ, ತುಮಕೂರು ಜಿಲ್ಲಾ ಕೈಗಾರಿಕಾ ಅಭಿವೃದ್ಧಿ ಸಂಸ್ಥೆಯ ಅಧ್ಯಕ್ಷರಾಗಿ, ಗುಬ್ಬಿಯ ಪಿಎಲ್‌ಡಿ ಬ್ಯಾಂಕ್ ಹಾಗೂ ತಾಲೂಕು ವ್ಯವಸಾಯೋತ್ಪನ್ನ ಸಹಕಾರ ಸಂಘದ ಮೂರು ಅವಧಿಯ ನಿರ್ದೇಶಕರಾಗಿ ಮಾಡಿರುವ ಸಾಧನೆಯು ಅನನ್ಯವಾದುದು.

ಚೇಳೂರಿನ ದೃಷ್ಟೇಶ್ವರ ಕಲಾಸಂಘ, ನಾಟಕಸಭಾ ಹಗೂ ನೇತಾಜಿ ಯುವಕ ಸಂಘಗಳ ಗೌರವಾಧ್ಯಕ್ಷರಾಗಿ, ವಿನಾಯಕ ಮಂಡಳಿಯ ಸ್ಥಾಪಕ ಅಧ್ಯಕ್ಷರಾಗಿಯೂ ಕೆಲಸ ಮಾಡಿರುವ ಗೌಡರಿಗೆ ಇದೀಗ ೮೫ ವರ್ಷಗಳ ಇಳಿವಯಸ್ಸು. ಆದರೂ ಧಾರ್ಮಿಕ, ಸಾಮಾಜಿಕ, ಸಾಂಸ್ಕೃತಿಕ ಚಳುವಳಿಗಳಿಗೆ ಕಿವಿ ಆನಿಸುತ್ತಲೇ ಸಹಕಾರ ನೂಡುತ್ತಾ, ಕಲೆ ಕಲಾವಿದರ ಪುರೋಭಿವೃದ್ಧಿಗೆ ಶ್ರಮಿಸುತ್ತಿರುವುದು ಇವರಿಗಿರುವ ಕಲಾಭಿರುಚಿಯ ಪ್ರತೀಕವಾಗಿದೆ. ಯಕ್ಷಗಾನ ಕಲಾವಿದ, ಸಮಾಜ ಸೇವಕ, ಚೇಳೂರಿನ ಗ್ರಾಮಪಂಚಾಯ್ತಿ ಅಧ್ಯಕ್ಷರೂ ಆಗಿರುವ ಸಿ. ಎಂ. ಹಿತೇಶ್ ತಂದೆಯ ಕಲಾಭಿರುಚಿಯನ್ನು ಮುಂದುವರಿಸುತ್ತಿರುವ ಸಮರ್ಥ ಕಲಾವಿದ, ಕಲಾ ಸಂಘಟಕ.

ಸಿ. ಎಸ್. ಮೇಲೇಗೌಡ,
ಚೇಳೂರು, ಗುಬ್ಬಿ ತಾಲೂಕು.

# ಭಾಗವತ ತಿಪ್ಪೇಸ್ವಾಮಿ

ತುಮಕೂರು ಜಿಲ್ಲೆಯ ಸಿರಾ ತಾಲೂಕು ಕೇಂದ್ರದ ರಂಗನಾಥ ನಗರದ ಆದಿಕರ್ನಾಟಕ ಕೇರಿಯ ವಾಸಿಯಾದ ಶ್ರೀ ತಿಪ್ಪೇಸ್ವಾಮಿಯವರು ತಮ್ಮ ಅಪೂರ್ವ ಹಾಡುಗಾರಿಕೆ, ನೃತ್ಯ ಮಾತುಗಾರಿಕೆಯಿಂದ ಜನಮನ ಸೆಳೆದ ಹಿರಿಯ ಯಕ್ಷಗಾನ ಭಾಗವತು. ತಂದೆ ರಂಗಶ್ಯಾಮಯ್ಯ ತಾಯಿ ಸಣ್ಣರಂಗಮ್ಮರವರ ಮಗನಾಗಿ ೧೯೪೦ರಲ್ಲಿ ಜನಿಸಿದ ತಿಪ್ಪೇಸ್ವಾಮಿ, ೪ನೇ ತರಗತಿಯ ತನಕ ವ್ಯಾಸಂಗ ಮಾಡಿದ್ದಾರೆ. ಮಗ ಬೇರೆಯವರ ಮನೆಯಲ್ಲಿ ಜೀತಕ್ಕಿರಬಾರದೆಂದು ಓದಿನ ಬಗೆಗೆ ಅಪಾರ ಪ್ರೀತಿ ವಿಶ್ವಾಸ ತೋರಿದ ರಂಗಶ್ಯಾಮಯ್ಯ ಮಗನನ್ನು ಶಾಲೆಗೆ ಸೇರಿಸಿದರು. ಆಗಿನ್ನೂ ಅಸ್ಪೃಶ್ಯತೆಯ ಬಿಗಿ ವ್ಯಾಪಕವಾಗಿದ್ದರೂ ಅದು ತನ್ನ ಬಳಿಗೆ ಸುಳಿಯದಂತೆ ನೋಡಿಕೊಂಡು ಸಂಗೀತ ಕಲಿತರು. ಗುರು ಯಜಮಾನ ದುರ್ಗಪ್ಪ ಅವರ ಅತೀವ ಉತ್ಸಾಹ, ವಿದ್ಯಾಥಿ, ತಿಪ್ಪೇಸ್ವಾಮಿಯನ್ನು ಶಾಲೆಯಿಂದ ಸಂಗೀತದ ಕಡೆ ಸೆಳೆಯಿತು. ಮನೆ ಮಠಗಳಿಗಿಂತ ಯಕ್ಷಗಾನ, ಬಯಲುಕಲೆ, ಸಂಗೀತ ಸಮಾರಂಭಗಳೇ ಆಗ ಇವರಿಗೆ ಪ್ರಿಯವಾದ ವಸ್ತುಗಳಾಗಿಬಿಟ್ಟಿದ್ದವು. ಹಾಗಾಗಿ ಯಕ್ಷಗಾನ ಕಲೆ, ನೋಟ ಅಭ್ಯಾಸಕ್ಕಾಗಿ ಊರೂರು ಅಲೆದದ್ದೂ ಇದೆ. ಕಾಡಿ, ಬೇಡಿ ಶೂದ್ರರನ್ನು ಸಂಘಟಿಸಿ ಯಕ್ಷಗಾನ ಕಲಿಸಿದ್ದೂ ಇದೆ.

ಕುರುಬರು, ಆದಿ ಕರ್ನಾಟಕದವರು, ಬೇಡರು, ಒಕ್ಕಲಿಗರು ಜಾತಿಭೇದ ಮರೆತು ಇವರ ಭಾಗವಂತಿಕೆಯನ್ನು ಪ್ರೀತಿಸಿದ್ದಾರೆ. ಯಕ್ಷಗಾನ, ಭಾಗವಂತಿಕೆ ಗುರುವಾಗಿ ಸ್ವೀಕರಿಸಿದ್ದಾರೆ. ದೇವಿ ಮಹಾತ್ಮೆ, ಲಕ್ಷ್ಮಣ ಮೂರ್ಛೆ ರಾಮಾಯಣ, ರಾಮಾಂಜನೇಯ ಯುದ್ಧ, ಪಾಂಡುವಿಜಯ, ವಿರಾಟಪರ್ವ, ಕುಶ-ಲವರ ಕಾಳಗ, ಶಶಿರೇಖಾ ಪರಿಣಯ ಇವರು ಇಷ್ಟಪಟ್ಟು ಕಲಿಸಿದ ಯಕ್ಷಗಾನ ಪ್ರಸಂಗಗಳು. ಗಡಿನಾಡ ಕರ್ನಾಟಕವಾದ ಆಂಧ್ರ-ಕರ್ನಾಟಕ ಗಡಿಯ ಭಾಗವಾದ ಸಿರಾ, ಅಮರಾಪುರ, ರೊಳ್ಳೆ, ಅಗಳಿ, ಮಡಕಶಿರಾ

ಈ ಭಾಗಗಳಲ್ಲಿ ಯಕ್ಷಗಾನ ಕಲಿಸಿ ಕನ್ನಡ, ತೆಲುಗು ಭಾಷಾ ಪ್ರೇಮಿಗಳಿಗೆ ಕಲಾ ರಸದೌತಣ ನೀಡಿರುವುದು ಇವರ ವಿಶೇಷ.

ಸಿರಾದ ರಂಗನಾಥನಗರದಲ್ಲಿ ಪ್ರತಿ ವರ್ಷವೂ ೪೫ ವರ್ಷಗಳ ಕಾಲ ನಿರಂತರವಾಗಿ ಸಂಪೂರ್ಣ ರಾಮಾಯಣ ಯಕ್ಷಗಾನವನ್ನು ಶ್ರೀರಾಮನವಮಿಯನ್ನು ನೆಪವಾಗಿಟ್ಟುಕೊಂಡು ಪ್ರದರ್ಶಿಸುತ್ತಾ ಭಾಗವಂತಿಕೆಯನ್ನು ಮುಂದುವರಿಸುತ್ತಾ ಬಂದಿರುವ ತಿಪ್ಪೇಸ್ವಾಮಿ ಅವರಿಗೆ ಇದೀಗ ಅರವತ್ತರ ಪ್ರಾಯ. ನಾಲ್ಕು ಜನ ಗಂಡುಮಕ್ಕಳು, ಇಬ್ಬರು ಹೆಣ್ಣುಮಕ್ಕಳ ತಂದೆ. ಮಕ್ಕಳೂ ಕಲಾವಿದರಾಗಬೇಕೆಂಬ ಹಂಬಲ, ನಿರುತ್ಸಾಹ ಕಲಾವಿದನ ಸಧ್ಯದ ಸ್ಥಿತಿ.

ತಿಪ್ಪೇಸ್ವಾಮಿ,
ಅಂಬೇಡ್ಕರ್ ಕಲಾಭವನ ಎದುರು,
ರಂಗನಾಥನಗರ, ಸಿರಾ ಟೌನ.

# ಭಾಗವತ ಧೂಳೇಗೌಡ

ಧೂಳೇಗೌಡರು ಹುಟ್ಟಿದ್ದು ಮಧುಗಿರಿ ತಾಲೂಕು ಐ. ಡಿ. ಹಳ್ಳಿ ಹೋಬಳಿಗೆ ಸೇರಿದ ಇಟಕಲೋಟಿಯಲ್ಲಿ. ಕಾಡುಗೊಲ್ಲರ ನರಸಿಂಹಯ್ಯ ರಂಗಮ್ಮನವರ ಮಗ. ತಾತ ಉದ್ದೇಗೌಡ, ತಂದೆ ನರಸಿಂಹಯ್ಯ ಇಬ್ಬರೂ ಮೂಡಲಪಾಯ ಯಕ್ಷಗಾನ ಭಾಗವತರೆ. ತೆಲುಗು, ಕನ್ನಡ ಈ ಎರಡು ಭಾಷೆಗಳಲ್ಲಿಯೂ ಯಕ್ಷಗಾನ ಕಲಿಸುವುದು ಧೂಳೇಗೌಡರ ಮನೆತನದ ವಿಶೇಷ. ಭಾಗವತ ಧೂಳೇಗೌಡ ಒಳ್ಳೆಯ ಹಾಡುಗಾರರು. ಕಾಡುಗೊಲ್ಲರ ಸಾಂಸ್ಕೃತಿಕ ವೀರರನ್ನು ಕುರಿತು ಪದ ಹೇಳುತ್ತಾರೆ. ಕೋಲುಮೇಳ ಮಾಡುತ್ತಾರೆ. ಬಿಡಿಬಿಯಾಗಿ ಯಕ್ಷಗಾನ ಪದ ಹಾಡುತ್ತಾರೆ. ಐದನೇ ತರಗತಿಯ ತನಕ ವಿದ್ಯಾಭ್ಯಾಸ ತೆರೆಬಿತ್ತು ಎಂಬುದು ಇವರ ಅಭಿಮತ. ಶಾಲೆ ಕಲಿಯದಿದ್ದರೂ ಜನಾಂತರಂಗದ ವಿಶ್ವವಿದ್ಯಾಲಯದಲ್ಲಿ ಕಲಿತದ್ದು ಹೆಚ್ಚು. ಆಂಧ್ರ, ಕರ್ನಾಟಕದ ಗಡಿ ಭಾಗವಾದುದರಿಂದ ಕನ್ನಡ, ತೆಲುಗು ಎರಡೂ ಭಾಷೆಗಳು ಮಾತೃಭಾಷೆಯಂತೆ ಜೊತೆಜೊತೆಯಾಗಿಯೇ ಬಂದವು ಎಂಬುದು ಇವರ ಅಭಿಮತ. ಹಾಗಾಗಿ ರೊಳ್ಳೆ, ಮಡಕಶಿರಾ, ಅಮರಾಪುರ ಈ ತೆಲುಗು ಸೀಮೆಯಲ್ಲಿ ಕನ್ನಡ ಯಕ್ಷಗಾನ ಪ್ರಸಂಗವನ್ನು ತೆಲುಗಿನಲ್ಲಿ ಮಾಡಲೇ ಬೇಕಾಯಿತು. ಕರ್ನಾಟಕದ ಪಾವಗಡ ತಾಲೂಕಿನ ವೈ. ಎನ್. ಹೊಸಕೋಟೆ, ರಂಟವಾಳ, ತಿರುಮಣಿ ಇಲ್ಲೆಲ್ಲಾ ಕನ್ನಡಕ್ಕಿಂತ ತೆಲುಗು ಪ್ರಭಾವೀ ಭಾಷೆಯಾದುದರಿಂದ ತೆಲುಗಿನಲ್ಲಿಯೇ ಯಕ್ಷಗಾನ ಕಲಿಸಬೇಕಾಯಿತು ಎನ್ನುತ್ತಾರೆ. ಇಂದಿಗೂ ಸಮಯಾನುಸಾರ ತೆಲುಗಿನಲ್ಲಿಯೇ ಯಕ್ಷಗಾನ ಕಲಿಸುವ ಪರಿಸ್ಥಿತಿಯನ್ನು ವಿವರಿಸುತ್ತಾರೆ.

ಸತ್ಯಹರಿಶ್ಚಂದ್ರ, ಸತ್ಯವ್ರತ, ರಾಮಾಂಜನೇಯ ಯುದ್ಧ, ಪಾರ್ಥ ಪಾಂಚಾಲಿಯರ ಯುದ್ಧ, ಇಂದ್ರಜಿತ್ ಕಾಳಗ, ಭಕ್ತ ಸುಧನ್ವ, ಕೀಚಕನ ವಧೆ, ದ್ರೌಪದಿ ವಸ್ತ್ರಾಪಹರಣ, ಕರ್ಣಾರ್ಜುನರ ಕಾಳಗ, ಲವಕುಶ ಇವರು ಕಲಿಸಿರುವ ಪ್ರಮುಖ ಯಕ್ಷಗಾನ ಪ್ರಸಂಗಗಳು.

ಮಧುಗಿರಿ, ಪಾವಗಡ, ಮಡಕಶಿರಾ, ಅನಂತಪುರ ಇಲ್ಲೆಲ್ಲಾ ಪ್ರಸಿದ್ಧ ಭಾಗವತರಾಗಿ ಹೆಸರು ಮಾಡಿದ್ದಾರೆ. ಒಬ್ಬ ಮಗ, ನಾಲ್ವರು ಹೆಣ್ಣು ಮಕ್ಕಳ ತುಂಬು ಕುಟುಂಬದ ಈ ಭಾಗವತ ಕುಟುಂಬ ನಿರ್ವಹಣೆಗಿಂತ ಯಕ್ಷಗಾನದ ಬಗೆಗೆ ಒಲವಿರಿಸಿಕೊಂಡು ಊರೂರು ಅಲೆದದ್ದೂ ಇದೆ. ಸಂಪಾದನೆ ಇಲ್ಲದೆ ಮೂಲಸ್ಥಳಕ್ಕೆ ಬಂದು ನೆಲೆ ನಿಂತದ್ದು ಇದೆ.

ಧೂಳೇಗೌಡ,
ಹಳೆ ಇಟಕಲೋಟಿ,
ಐ. ಡಿ. ಹಳ್ಳಿ ಅಂಚೆ, ಮಧುಗಿರಿ ತಾಲೂಕು.

# ಬಯಲಾಟದ ಭೀಮಣ್ಣ

ಶ್ರೀ ಭೀಮಣ್ಣನವರು ೧೦-೦೧-೧೯೪೫ ರಲ್ಲಿ ತುಮಕೂರು ಜಿಲ್ಲೆಯ ಚಿಕ್ಕನಾಯಕನಹಳ್ಳಿಯಲ್ಲಿ ಹೇಮಲಿಂಗಯ್ಯ ಮತ್ತು ಸಿದ್ಧಮ್ಮನವರ ಮಗನಾಗಿ ಜನಿಸಿದರು. ಶನಿಮಹಾತ್ಮೆ, ದೇವಿಮಹಾತ್ಮೆ, ಕರಿಭಂಟನ ಕಾಳಗ, ರಾಮಾಂಜನೇಯ ಕಾಳಗಗಳಂತಹ ಮೂಡಲಪಾಯ ಯಕ್ಷಗಾನದಿಂದ ಪ್ರಭಾವಿತರಾಗಿ ಶ್ರೀ ಕೆಂಪಮ್ಮದೇವಿ ಸಂಘದವರು ನಡೆಸುತ್ತಿದ್ದ ದೇವಿಮಹಾತ್ಮೆ ಬಯಲಾಟದಲ್ಲಿ ಬಾಲಕೃಷ್ಣನಾಗಿ ರಂಗಪ್ರವೇಶ ಮಾಡಿದರು. ಭಾಗವತ ಬಂದಯ್ಯನವರೇ ಇವರ ಮೊದಲ ಗುರು. ಇವರು ಶ್ರೀ ಆದಿತ್ಯಾದಿ ನವಗ್ರಹ ಕೃಪಾಪೋಷಿತ ಯಕ್ಷಗಾನ ಮಂಡಳಿಯ ಸಂಸ್ಥಾಪಕ ಭಾಗವತರು. ಇದು ಇಂದಿಗೂ ಸಹ ನಿರಂತರವಾಗಿ ಬೆಳಗುತ್ತಿದೆ. ಇವರ ಗರಡಿಯಲ್ಲಿ ನುರಿತ ಇವರು ಭಾಗವತರಾದ ಕೆಂಪರಾಮಯ್ಯ ಮತ್ತು ನಿಂಗಪ್ಪನವರುಗಳಲ್ಲಿಯೂ ಕಲಿತು ದೇವಿಮಹಾತ್ಮೆ ಬಯಲಾಟದಲ್ಲಿ ಚಂಡಾಸುರ, ದೇವೇಂದ್ರ, ಸುಗ್ರೀವನ ಪಾತ್ರಗಳನ್ನು ಸುಮಾರು ೨೫ ವರ್ಷಗಳಿಗೂ ಹೆಚ್ಚು ಕಾಲ ಅಭಿನಯಿಸಿದರು. ಇವರು ಶ್ರೀ ಕೆಂಪಮ್ಮ ದೇವಿ ಬಯಲು ನಾಟಕ ಸಂಘದ ಅಮೂಲ್ಯ ಆಸ್ತಿಯಾಗಿ ಇಂದಿಗೂ ಕಾರ್ಯನಿರ್ವಹಿಸುತ್ತಿದ್ದಾರೆ.

ಜಾನಪದದ ವಿವಿಧ ಪ್ರಾಕಾರಗಳಾದ ಸೋಮನ ಕುಣಿತ, ದೇವರ ಪದಗಳ ಗಾಯನ, ತತ್ವಪದಗಳ ಗಾಯನದಲ್ಲಿ ಇಂದಿಗೂ ತೊಡಗಿಸಿಕೊಂಡಿದ್ದಾರೆ. ರಂಗಭೂಮಿಯಲ್ಲಿ ವಿಶಿಷ್ಟ ಸೇವೆ ಸಲ್ಲಿಸಿರುವ ಇವರು ಕೃಷ್ಣ-ಸುಧಾಮ ನಾಟಕದಲ್ಲಿ ಸೂತ್ರಧಾರಿಯಾಗಿ ರುಕ್ಮಿಣಿ ಸ್ವಯಂವರದಲ್ಲಿ ಕಂಸನಾಗಿ, ಕೃಷ್ಣಾರ್ಜುನ ಯುದ್ಧದಲ್ಲಿ ಬಲರಾಮನಾಗಿ, ವಿರಾಟಪರ್ವದಲ್ಲಿ ವಿರಾಟರಾಯನಾಗಿ ಅಭಿನಯಿಸಿದ್ದಾರೆ.

ಜಾನಪದ ಸಂಘಟನಾ ಕಾರ್ಯದಲ್ಲಿ ತೊಡಗಿಸಿಕೊಂಡಿರುವ ಇವರು ತಾಲೂಕು ಜಾನಪದ ಮತ್ತು ಯಕ್ಷಗಾನ ಕಲಾವಿದರ ಸಂಘದ ಸಹಕಾರ್ಯದರ್ಶಿಯಾಗಿ ಇಡೀ

ತಾಲೂಕಿನಲ್ಲಿ ಸಂಚರಿಸುತ್ತಾ ಜಾನಪದ ಕಲೆಗಳ ಉಳಿವಿಗಾಗಿ ಶ್ರಮಿಸುತ್ತಿದ್ದಾರೆ. ಕಲಾವಿದರಿಗೆ ಅನೇಕ ರೀತಿಯಲ್ಲಿ ಸಹಕಾರ ನೀಡುತ್ತಾ ಬರುತ್ತಿರುವ ಇವರು ಶ್ರೀ ಕೆಂಪಮ್ಮದೇವಿ ಬಯಲು ನಾಟಕ ಸಂಘದ ಖಜಾಂಚಿಯಾಗಿಯೂ ನಿರ್ವಹಿಸುತ್ತಿರುವ ಇವರ ಸೇವೆ ಶ್ಲಾಘನೀಯ.

ಜೀವನೋಪಾಯಕ್ಕೆ ಕಂಬಳಿ ನೇಯ್ಗೆಯನ್ನು ಮಾಡುತ್ತಿರುವ ಇವರು ತಮ್ಮ ಬಡತನದಲ್ಲೂ ಜಾನಪದದ ಗೀಳನ್ನು ಬಿಡದೆ ಕಲಾವಿದರಿಗೆ ಮಾದರಿಯಾಗಿದ್ದಾರೆ.

**ಬಯಲಾಟ ಭೀಮಣ್ಣ,**
**ಚಿಕ್ಕನಾಯಕನಹಳ್ಳಿ, ತುಮಕೂರು ಜಿಲ್ಲೆ.**

# ಭಾಗವತ ದೊಡ್ಡಯ್ಯ

ಭಾಗವಂತಿಕೆ, ಕೋಲುಮೇಳ, ಸಾಮಗಾನ ಈ ಮೂರು ಕಲಾ ಪ್ರಕಾರಗಳಲ್ಲಿ ಅದ್ಭುತ ಸಾಧನೆ ಮಾಡಿರುವ ಬಂಗಾರಿಹಟ್ಟಿ ದೊಡ್ಡಯ್ಯ ಅವರಿಗೆ ಇದೀಗ ೬೫ ವರ್ಷ ವಯಸ್ಸು. ಕಳೆದ ೫೦ ವರ್ಷಗಳಿಂದಲೂ ಯಕ್ಷಗಾನ ಕಲೆಯಲ್ಲಿ ಅಭಿನಯದಲ್ಲಿ ತೊಡಗಿಸಿಕೊಂಡು ಈಗ್ಗೆ ೩೦ ವರ್ಷಗಳಿಂದ ಭಾಗವತರಾಗಿ ಕಾರ್ಯ ನಿರ್ವಹಣೆ ಮಾಡುತ್ತಿದ್ದಾರೆ.

ತಮ್ಮ ಗುರುಗಳಾದ ಭಾಗವತ ಕ್ಯಾತಪ್ಪನವರ ಪ್ರಭಾವಕ್ಕೆ ಒಳಗಾಗಿ ಯಕ್ಷಗಾನ ಭಾಗವಂತಿಕೆಯನ್ನು ಅಭ್ಯಾಸ ಮಾಡಿರುವ ದೊಡ್ಡಯ್ಯನವರು ೧೦ ಯಕ್ಷಗಾನಗಳಲ್ಲಿ ಪರಿಣಿತರು. ಪ್ಲಾಟ್ ಇಲ್ಲದೆ ಕಥೆ ಮಾಡುವುದು ಇವರ ನೈಪುಣ್ಯತೆ. ಸೂರ್ಯವಿವಾಹ ಅಥವಾ ಶನಿದೇವನ ಜನನ, ಐರಾವತ, ಶಿವಜಲಂಧರ, ಕುಶ-ಲವರ ಕಥೆ, ಕೃಷ್ಣಾರ್ಜುನರ ಕಾಳಗ, ಗಯಚರಿತ್ರೆ, ಇಂದ್ರಜಿತ್ ರಾವಣ, ಸುಂದರಕಾಂಡ ರಾಮಾಯಣ, ಕೀಚಕವ ವಧೆ ಹಾಗೂ ಭಕ್ತ ಸುಧನ್ವ ಇವರು ಪರಿಣಿತಿ ಪಡೆದಿರುವ ಯಕ್ಷಗಾನ ಪ್ರಸಂಗಗಳು. ನೇರಳಗುಡ್ಡ, ಬುಕ್ಕಾಪಟ್ಟಣ, ಸಾಕ್ಷಿಹಳ್ಳಿ, ಹುಣಸೇಕಟ್ಟೆ ಇಲ್ಲೆಲ್ಲಾ ಯಕ್ಷಗಾನ ಪ್ರಸಂಗಗಳನ್ನು ಕಲಿಸಿರುವ, ಆಡಿಸಿರುವ ದೊಡ್ಡಯ್ಯ ಪ್ರತಿವರ್ಷ ಸತತವಾಗಿ ಐವತ್ತು ವರ್ಷಗಳಿಂದ ಬಂಗಾರಿಹಟ್ಟಿಯಲ್ಲಿ 'ಐರಾವತ', ಸತ್ಯಹರಿಶ್ಚಂದ್ರ ಪ್ರಸಂಗವನ್ನು ಆಡಿಸುತ್ತಾ ಮೂಡಲಪಾಯ ಯಕ್ಷಗಾನ ಕಲೆಯನ್ನು ಜೀವಂತವಾಲಟ್ಟಿರುವ ಹಿರಿಮೆಗೆ ಪಾತ್ರರಾಗಿದ್ದಾರೆ.

ದೊಡ್ಡಯ್ಯ ಅವರು ಆರ್ಥಿಕವಾಗಿ ದುರ್ಬಲರಾದರೂ ಕಲಾ ಶ್ರೀಮಂತರು. ಸದಾ ಒಂದಲ್ಲ ಒಂದು ಕಲೆಯಲ್ಲಿ, ಸಂಘಟನೆಯಲ್ಲಿ ತೊಡಗಿಸಿಕೊಂಡಿದ್ದಾರೆ. ಕಾಡುಗೊಲ್ಲರ ಸಾಂಸ್ಕೃತಿಕ ವೀರರಾದ ಜುಂಜಪ್ಪ, ಚಿತ್ರದೇವರು, ಕಾಟಂಲಿಂಗ ಇವರ

ಕಥೆಯನ್ನು ಹಾಡುಗಳಲ್ಲಿ ಹಾಡುವುದು ಇವರ ಮತ್ತೊಂದ ವಿಶೇಷವಾಗಿದೆ. ಜೊತೆಗೆ ಕಥೆ ಮಾಡುವ ಕಲಾವಿದರಾಗಿ ಸಿರಾ, ಮಡಕಶಿರಾ, ಹಿರಿಯೂರು ಭಾಗಗಳಲ್ಲಿ ಗುರುವಿನ ರೂಪದಲ್ಲಿ ವಿಶೇಷ ಸಂದರ್ಭಗಳಲ್ಲಿ ಕಥೆ ಮಾಡುವ ಕಾಯಕವನ್ನು ಇವರು ಮಾಡುತ್ತಾ ಬರುತ್ತಿದ್ದಾರೆ.

ಬುಡಕಟ್ಟು ಸಂಸ್ಕೃತಿಯ ಅಪ್ಪಟ ರೂಪವಾಗಿರುವ ದೊಡ್ಡಯ್ಯನವರು, ಕೋಲುಮೇಳ ಕಲೆಯಲ್ಲಿ ನಿಷ್ಣಾತರು. ಹಲವರು ವೈವಿಧ್ಯ ರೂಪದಲ್ಲಿ ಕೋಲುಕಲೆಯನ್ನು, ಕಲಾವಿದರನ್ನು ರೂಪಿಸಿರುವ ಹಿರಿಮೆಯೂ ಇವರಿಗೆ ಸಿದ್ದಿಸಿದೆ. ಸುಮಾರು ಐವತ್ತಕ್ಕೂ ಹೆಚ್ಚು ಕೋಲಾಟದ ಹಾಡುಗಳನ್ನು ಹಾಡುವ ಈ ಕಲಾವಿದ, ಬೇಸಿಗೆಯ ಬೆಳದಿಂಗಳ ರಾತ್ರಿಯಲ್ಲಿ ಕಾಡುಗೊಲ್ಲರ ಹಟ್ಟಿ ಅಂಗಳದ ತುಂಬಾ ಸಂಗೀತದ ಲಹರಿ ಹರಿಸುತ್ತಾ, ಕಲಾಸೇವೆಗೈಯುತ್ತಿರುವುದು ಇವರ ವಿಶೇಷತೆ.

ಬಂಗಾರಿಹಟ್ಟಿಯ ಕಾಟಯ್ಯ ದೊಡ್ಡಕ್ಕ ಇವರ ಮೂವರು ಮಕ್ಕಳಲ್ಲಿ ಮೊದಲನೆಯ ಮಗನಾಗಿ ಜನಿಸಿದ ಈ ಕಲಾವಿದ, ಕುರಿ ಕಾಯುತ್ತಲೇ ಕಲಾವಿದರಾಗಿ ಬೆಳೆದದ್ದು ವಿಶೇಷ. ಇಬ್ಬರು ಗಂಡುಗಳನ್ನು ಪಡೆದಿರುವರ ದೊಡ್ಡಯ್ಯನವರಿಗೆ ಇರುವ ಕೊರಗೆಂದರೆ ತಮ್ಮ ಮಕ್ಕಳಿಬ್ಬರೂ ಕಲಾವಿದರಾಗದೆ ಇರುವುದು. ಹೀಗಾದರೆ ನಮ್ಮ ಸಂಸ್ಕೃತಿ ಉಳಿಯುವುದಾದರೂ ಹೇಗೆ ಎಂಬ ಪ್ರಶ್ನೆ.

ಒಟ್ಟಾರೆ, ಕುಣಿತ, ಸಂಗೀತ, ಅಭಿನಯಗಳಲ್ಲಿ ಸದಾ ತೊಡಗಿರುವ ಈ ಕಲಾವಿದ ಆರ್ಥಿಕವಾಗಿ ದುರ್ಬಲನಾದರೂ ಕಲಾವಿದನಾಗಿ ಶ್ರೀಮಂತರು. ಯಾವುದೇ ಪ್ರಶಸ್ತಿ, ಗೌರವ ಧನಗಳ ಗೊಡವೆಗೆ ತಲೆ ಕೆಡಿಸಿಕೊಳ್ಳದೆ ನಿರ್ಮಲವಾಗಿ ಕಲಾಸೇವೆ ಮಾಡುತ್ತಾ, ಊರೂರು ತಿರುಗುತ್ತಾ ಯಕ್ಷಗಾನ ಕಲಾಪ್ರಸಾರದಲ್ಲಿ ಮೂವತ್ತು ವರ್ಷ ಸವೆಸಿರುವುದು ಇವರ ವಿಶೇಷವಾಗಿದೆ.

**ದೊಡ್ಡಯ್ಯ,**
**ಬಂಗಾರಿಹಟ್ಟಿ,**
**ಬುಕ್ಕಾಪಟ್ಟಣ ಮಾರ್ಗ, ಸಿರಾ ತಾಲೂಕು.**

# ಭಾಗವತ ಎಣ್ಣೆಕಟ್ಟೆ ನಿಂಗಯ್ಯ

ಗುಬ್ಬಿ ತಾಲೂಕು ಚೇಳೂರು ಹೋಬಳಿ ಎಣ್ಣೆಕಟ್ಟೆಯ ನಾಗಮ್ಮ ನಿಂಗಯ್ಯ ಅಪರೂಪದ ಯಕ್ಷಗಾನ ಭಾಗವತ. ಸರ್ಕಾರ, ಸಂಘ ಸಂಸ್ಥೆ ಯಾವ ಸಾಂಸ್ಕೃತಿಕ ಸಂಸ್ಥೆಗಳೂ ಎಂದೂ ಗುರುತಿಸದ, ಮರೆಯಲಾರದ ಕಲಾಕೌಸ್ತುಭ. ಯಾವುದೇ ಸಂಭಾವನೆ ಪಡೆಯದೆ, ಅಕ್ಷರದ ಗಂಧವೇ ಇಲ್ಲದ ಮುಗ್ಧ ರೈತಾಪಿ ಜನಾಂಗವನ್ನು ಕಲಾವಂತರನ್ನಾಗಿಸಿದ ಹಿರಿಮೆ ಇವರದು.

ತೊಂಬತ್ತು ವರ್ಷದ ಇಳಿ ವಯಸ್ಸಿನಲ್ಲೂ 'ವೀರಾಭಿಮನ್ಯು ಕಾಳಗ' ಬಯಲಾಟವನ್ನು ಸಮರ್ಥವಾಗಿ ಆಡಿಸಿಯೇ ಕಣ್ಣುಮುಚ್ಚಿದ ಧೀಮಂತ. ನಿಂಗಯ್ಯನವರಿಗೆ ಮಕ್ಕಳಿರಲಿಲ್ಲ. ಹಾಗಂತಾ ಎಂದೂ ಊರು ಬಿಡಲಿಲ್ಲ. ಬೇರೆಯವರ ಹಾಗೆ ಯಕ್ಷಗಾನ ಕಲಿಕೆಗಾಗಿ ಸಂಭಾವನೆ ಪಡೆಯುವುದು ಅಂದರೆ ಅದೊಂದು ಅಸಹ್ಯ ಎಂಬ ಭಾವನೆ ಇವರದು. ರಾತ್ರಿಯಿಡೀ ಯಕ್ಷಗಾನ ಕುಣಿಸಿ, ಅಷ್ಟೇ ಚುರುಕಿನಿಂದ ಹೊಲದಲ್ಲೂ ದುಡಿಯುತ್ತಿದ್ದ ದಣಿವರಿಯದ ದುಡಿಮೆಗಾರ. ಕರಿಭಂಟ, ಅಭಿಮನ್ಯು ಕಾಳಗ, ದುಶ್ಯಾಸನ ಕತೆ, ದಶಕಂಠ ರಾಮಾಯಣ ಇವು ಇವರು ಕಲಿಸುತ್ತಿದ್ದ ಯಕ್ಷಗಾನ ಪ್ರಸಂಗಗಳು. ಶ್ರೀ ನಿಂಗಯ್ಯ ಓದು ಬರಹ ಕಲಿತವರಲ್ಲ. ನೆರೆ ಊರುಗಳಲ್ಲಿ ಯಕ್ಷಗಾನ ಕಲಿಸುತ್ತಿದ್ದ ಪ್ರಾಕ್ಟೀಸ್‌ಗಳಲ್ಲಿ ತಪ್ಪದೆ ಹಾಜರಾಗಿ ಆ ನಾಟಕದ ಮನೆಯಲ್ಲಿ ಕಂಬಳಿ ಹಾಸಿಕೊಂಡು, ಮಲಗಿ, ಪ್ರತಿರಾತ್ರಿ ಯಕ್ಷಗಾನವನ್ನು ನೋಡುತ್ತಾ ಕಲಿತದ್ದು ವಿಶೇಷ. ನಾಟಕದ ದಿನಕ್ಕೆ ಮೂರು ದಿನ ಅಥವಾ ಗೆಜ್ಜೆಪೂಜೆಯ ದಿನ ಮಾತ್ರ ಬೇರೆ ಕಡೆಯಿಂದ ಬೇರೆ ಭಾಗವತರನ್ನು ಕರೆಸಿ, ಸಣ್ಣಪುಟ್ಟ ಮಾರ್ಪಾಡುಗಳನ್ನು ಮಾಡಿಕೊಳ್ಳುತ್ತಿದ್ದರು. ಉಳಿದಂತೆ ತಾವು ಬಾಯಿಪಾಠ ಮಾಡಿಕೊಂಡಿದ್ದ ಯಕ್ಷಗಾನವನ್ನು ಕನಿಷ್ಠ ೫ ತಿಂಗಳುಗಳ ಕಾಲ ಆರಂಭದ ದಿನದಲ್ಲಿ ಕಲಿಸುತ್ತಾ, ಕಲಾವಿದರನ್ನು ನುರಿತ ಕಲಾವಿದರನ್ನಾಗಿಸುತ್ತಿದ್ದರು.

ಹೀಗೆ ಜನಪದ ಪರಂಪರೆಯಲ್ಲಿ ಯಕ್ಷಗಾನವನ್ನು ಜೀವಂತವಾಗಿ ಉಳಿಸಿ, ಬೆಳೆಸಿಕೊಂಡು ಬಂದವರು ಎಣ್ಣೆಕಟ್ಟೆ ನಿಂಗಯ್ಯನವರು.

ನಿಂಗಯ್ಯನವರು ನಿಜವಾಗಿಯೂ ಯಕ್ಷಗಾನದ ಬಗೆಗೆ ಅಪಾರ ತಲೆಕೆಡಿಸಿಕೊಂಡಿದ್ದರು. ಜೀವಕ್ಕೆ ಜೀವವಾಗಿದ್ದರು. ತನ್ನ ಮನೆಯಲ್ಲಿ ರೇಡಿಯೋ ಇಲ್ಲದಿದ್ದರೂ ಆಕಾಶವಾಣಿಯಲ್ಲಿ ಯಕ್ಷಗಾನ ಪ್ರಸಂಗ ಪ್ರಸಾರವಾದಾಗ, ಬೇರೆಯವರ ಮನೆಯ ಮುಂದೆ ಕುಳಿತು, ತಾಳ ಹಿಡಿದು ಆಕಾಶವಾಣಿ ಧ್ವನಿಗೆ ಹಿಮ್ಮೇಳ ಹಾಡುತ್ತಿದ್ದುದು ನಿಜಕ್ಕೂ ಮೋಜು ತರಿಸಿದ ಅಂಶಗಳಾಗಿದ್ದವು. ಅಕ್ಷರ ಕಲಿಯದ, ಬಾಯಲ್ಲೇ ಯಕ್ಷಗಾನ ಪ್ರಸಂಗವನ್ನು ಇಟ್ಟುಕೊಂಡು ಹೇಳುತ್ತಾ, ಅಚ್ಚುಕಟ್ಟಾಗಿ, ಕತೆಗೆ ಹಾಡಿಗೆ ಯಾವುದೇ ದೋಷ ಬಾರದ ಹಾಗೆ ಯಕ್ಷಗಾನ ಕಲಿಸುತ್ತಿದ್ದ ವಿಶಿಷ್ಟ ಕಲಾವಿದೆ. ಕೊನೆಗೆ ಒಂದು ಭಾವಚಿತ್ರವೂ ಇಲ್ಲದಂತೆ ಅಪಾರ ಕಲಾವಿದರನ್ನು ರೂಪಿಸಿಹೋದ ಕಲಾಯೋಗಿ ೧೯೮೮ರಲ್ಲಿ ತೀರಿಕೊಂಡರು.

**ಎಣ್ಣೆಕಟ್ಟೆ ನಿಂಗಯ್ಯ,**
**ಎಣ್ಣೆಕಟ್ಟೆ,**
**ಚೇಳೂರು ಹೋ|| ಗುಬ್ಬಿ ತಾಲೂಕು.**

## ಭಾಗವತ ಕೆ. ಗುಡ್ಡಯ್ಯ

ತುಮಕೂರು ಜಿಲ್ಲೆಯ ತಿಪಟೂರು ತಾಲೂಕಿನ ಅರಳಗುಪ್ಪೆ ಪುಟ್ಟಹಳ್ಳಿಯಾದರೂ ಇದೊಂದು ಕಲಾಗ್ರಾಮ. ಇಂದಿಗೂ ಆರೇಳು ಯಕ್ಷಗಾನ ತಂಡಗಳು, ತಂಡಕ್ಕೊಬ್ಬೊಬ್ಬರು ಬಾಗವತರು, ಸೋಬಾನೆ ಕಲಾವಿದರು, ಸೋಮನಕುಣಿತದ ಕಲಾತಂಡ, ನಂದಿಧ್ವಜ ಕುಣಿತದವರು, ಕೋಲುಮೇಳದವರು, ಯಕ್ಷಗಾನ ಕಲಾವಿದರು, ಊರ ತುಂಬಾ ಕಲಾವಿದರು. ಇಂಥ ಕಲಾ ಗ್ರಾಮದಲ್ಲಿ ಬೆಳೆದವರು ಭಾಗವತ ಗುಡ್ಡಯ್ಯನವರು. ಹಿರಿಯ ಮಕ್ಕಳಾದ ಭಾಗವತ ಸಿದ್ದಲಿಂಗಪ್ಪನವರ ಪ್ರೀತಿಯ ಶಿಷ್ಯರಾದ ಗುಡ್ಡಯ್ಯನವರು, ಇವರ ಬಳಿ ಆರೇಳು ವರ್ಷಗಳ ಕಾಲ ನಿರಂತರವಾಗಿ ಯಕ್ಷಗಾನ, ಕಂದ, ಮಟ್ಟು, ಪಾತ್ರ, ಮಾತುಗಾರಿಕೆ, ಕುಣಿತ, ತಾಳ, ಮೃದಂಗದಿಂದ ಮೊದಲು ಮಾಡಿ ಒಟ್ಟು ಯಕ್ಷಗಾನ ಪ್ರಸಂಗದ ಕಲಿಕೆಗಾಗಿ, ತಮ್ಮನ್ನು ಸಂಪೂರ್ಣವಾಗಿ ಒಪ್ಪಿಸಿಕೊಂಡವರು. ೧೯೫೮ ರಿಂದ ತಾಳ ಕೈಗೆತ್ತಿಕೊಂಡ ಗುಡ್ಡಯ್ಯನವರು ಮೊದಲು ಲವಕುಶ, ದುಶ್ಯಾಸನನ ಕಥೆ, ಶಿವಜಲಂಧರ ಈ ಮೊದಲಾದ ಯಕ್ಷಗಾನ ಪ್ರಸಂಗಗಳಲ್ಲಿ ವೇಷಗಾರಿಕೆಯಲ್ಲಿ ತೊಡಗಿಸಿಕೊಂಡವರು. ಶಾರದೆ ಪಾತ್ರ, ಬಾಲಕೃಷ್ಣನ ಪಾತ್ರ, ಸಖಿ ಪಾತ್ರ, ನಂತರ ಅಭಿಮನ್ಯು ಮುಂತಾದ ಬಾಲಕ ಪಾತ್ರಗಳ ಜೊತೆಗೆ ಸ್ತ್ರೀಪಾತ್ರಗಳ ಮೂಲಕ ರಂಗಪ್ರವೇಶ, ಆರಂಭದ ದಿನಗಳಲ್ಲಿ ಶೂದ್ರರಿಗೆ ನಾಟಕ ಕಲಿಸುವುದಿರಲಿ, ಗ್ರಾಮ ಮಧ್ಯದಲ್ಲಿ ರಂಗಮಂದಿರ ಹಾಕಿ, ನಾಟಕ ಪ್ರದರ್ಶನಕ್ಕೂ ಅವಕಾಶ ಕೊಡುತ್ತಿರಲಿಲ್ಲದ ಕಾಲದಲ್ಲಿ ತಿಪಟೂರು ತಾಲೂಕು ಅರಳಗುಪ್ಪೆಯಲ್ಲಿ ಇದಕ್ಕೆ ಹೊರತಾಗಿ ದಲಿತರನ್ನು ನಾಟಕದಲ್ಲಿ ಸೇರಿಸಿಕೊಳ್ಳುವುದರ ಜೊತೆಗೆ ದಿ॥ ದಿವಾಕರಾಚಾರ್, ಭಾಗವತ ಸಿದ್ದಲಿಂಗಪ್ಪ ಈ ಮೊದಲಾದವರು. ದಲಿತರ ಕೇರಿಗೆ ಬಂದು ಯಕ್ಷಗಾನ ಕಲಿಸುತ್ತಿದ್ದ ಸಂದರ್ಭಗಳಲ್ಲಿ, ದಲಿತ ಕೇರಿಯಿಂದ ಕಲಾವಿದ ಭಾಗವತರಾಗಿ ಮೂಡಿ ಬಂದ ದಲಿತ ಪ್ರತಿಭೆ ಕೆ. ಸಣ್ಣಗುಡ್ಡಯ್ಯ.

ಕೆ. ಗುಡ್ಡಯ್ಯನವರು ಮೂಲತಃ ಪ್ರಾಥಮಿಕ ಶಾಲಾ ಶಿಕ್ಷಕರು. ತಮ್ಮ ಸಾರ್ಥಕ ಐವತ್ತೈದು ವರ್ಷದ ಶಿಕ್ಷಕ ವೃತ್ತಿಯಿಂದ ನಿವೃತ್ತರಾಗಿದ್ದಾರೆ. ನಿವೃತ್ತಿಯ ೨೦ ವರ್ಷಗಳನ್ನು ಕಳೆದಿರುವ ಇವರಿಗೆ ಇದೀಗ ೭೫ ವರ್ಷ ವಯಸ್ಸು.

ಕೆ. ಗುಡ್ಡಯ್ಯ ತಾವು ಬಾಲ್ಯಾವಸ್ಥೆಯಲ್ಲಿ ಕಲಿತ ಯಕ್ಷಗಾನ ಭಾಗವಂತಿಕೆಯನ್ನು ಶಿಕ್ಷಕ ವೃತ್ತಿಯ ಜೊತೆ ಜೊತೆಗೆ ಶಿಕ್ಷಕ ವೃತ್ತಿಯಂತೆಯೇ ಬೆಳೆಸುತ್ತಾ ಬಂದಿದ್ದಾರೆ. ಎಲ್ಲೆಲ್ಲೆ ಶಿಕ್ಷಕರಾಗಿ ಕಾರ್ಯ ನಿರ್ವಹಿಸಿದ್ದಾರೆಯೋ ಅಲ್ಲೆಲ್ಲಾ ಯಕ್ಷಗಾನ ಕಲಿಸುತ್ತಾ, ಕಲಾಪ್ರದರ್ಶನ ನೀಡುತ್ತಾ ಬಂದಿರುವುದು ಇವರ ವಿಶೇಷ. ಕಲಾವಿದರಿಂದ ಸಂಭಾಷಣೆ ಪಡೆಯದೆ ರಾತ್ರಿಯಿಡೀ ರಂಗತರಬೇತಿ ನೀಡಿ ಮೂರು ತಿಂಗಳ ಒಳಗೆ ಒಂದೊಂದು ಪ್ರದರ್ಶನ ನೀಡಿರುವುದು ಇವರು ಕಲೆಯ ಪ್ರಸಾರದಲ್ಲಿ ತೋರಿರುವ ಆಸ್ಥೆಯನ್ನು ತೋರುತ್ತದೆ. ೧೯೭೦ರಲ್ಲಿ ಮೊಟ್ಟ ಮೊದಲಿಗೆ ಸ್ವಯಂ ಭಾಗವತರಾಗಿ ಯಕ್ಷಗಾನ ಭಾಗವಂತಿಕೆ ನೀಡಿದ ಗುಡ್ಡಯ್ಯನವರು, ಈತನಕ ಕನಿಷ್ಠ ವರ್ಷದಲ್ಲಿ ३-೪ ಯಕ್ಷಗಾನ ಪ್ರದರ್ಶನಕ್ಕೆ ಭಾಗವಂತಿಕೆ ನೀಡುತ್ತಾ ಬರುತ್ತಿದ್ದಾರೆ.

ಲವ-ಕುಶ, ಶಶಿರೇಖಾ ಪರಿಣಯ, ಕಲಾವತಿ ಕಲ್ಯಾಣ, ಮನ್ಮಥ ವಿಜಯ, ದೇವಿಮಹಾತ್ಮೆ, ಸತ್ಯಚಿತ್ರಕೇತು, ಸೀತಾ ಪರಿತ್ಯಾಗ ಇವರ ಪರಿಣತಿಯ ಯಕ್ಷಗಾನ ಪ್ರಯೋಗಗಳು. ಈ ಪ್ರಸಂಗ ಕುರಿತ ೧೫೦ಕ್ಕೂ ಹೆಚ್ಚು ರಂಗಪ್ರಯೋಗ ನೀಡಿರುವುದು ಇವರ ವಿಶೇಷವಾಗಿದೆ.

ಹಲವು ಸಾಹಿತ್ಯ, ಸಾಂಸ್ಕೃತಿಕ ಸಭೆ ಸಮಾರಂಭಗಳಲ್ಲಿ ಯಕ್ಷಗಾನ ಪ್ರದರ್ಶನ ನೀಡಿದ್ದಾರೆ. ತುಮಕೂರಲ್ಲಿ ಏರ್ಪಾಡಾಗಿದ್ದ ಅಖಿಲಭಾರತ ಕನ್ನಡ ಸಾಹಿತ್ಯ ಸಮ್ಮೇಳನ, ಹಾಸನದ ರಂಗೋತ್ಸವ, ಚಿತ್ರದುರ್ಗ ಜಿಲ್ಲೆಯ ಸಾಣೆಹಳ್ಳಿಯಲ್ಲಿ ನಡೆದ ಮೂಡಲಪಾಯ ಯಕ್ಷಗಾನ ಭಾಗವತರ ಸಮಾವೇಶ, ತಿಪಟೂರಿನಲ್ಲಿ ನಡೆದ ಯಕ್ಷಗಾನ ಮುಖವೀಣೆ ಪ್ರಾತ್ಯಕ್ಷಿಕೆ ಹಾಗೂ ಯಕ್ಷಗಾನ ಪ್ರದರ್ಶನ ಇಲ್ಲೆಲ್ಲಾ ಭಾಗವಹಿಸಿ ಕಲಾಪ್ರದರ್ಶನ ನೀಡಿದ್ದಾರೆ. ಇವರ ಮಗ ನಾಗರಾಜು ಪದವೀಧರನಾಗಿದ್ದು ಯಕ್ಷಗಾನ ಪಾತ್ರದಾರಿಕೆ ಹಾಗೂ ವೇಷಭೂಷಣ ತಯಾರಿಕೆ ಹಾಗೂ ವಸ್ತ್ರ ಬಣ್ಣ ವಿನ್ಯಾಸಗಾರನಾಗಿಯೂ ಕಾರ್ಯ ನಿರ್ವಹಿಸುತ್ತಾ ಗುಡ್ಡಯ್ಯನವರ ಕಲಾ ಬದುಕನ್ನು ಸಾರ್ಥಕವಾಗಿ ಮುಂದುವರಿಸಿರುವುದು ವಿಶೇಷವಾಗಿದೆ.

ಕೆ. ಗುಡ್ಡಯ್ಯ, ಭಾಗವತ,
ಅರಳಗುಪ್ಪೆ, ತಿಪಟೂರು ತಾಲೂಕು.

# ಭಾಗವತ ಶ್ರೀರಂಗಯ್ಯ

ಗುಬ್ಬಿ ತಾಲೂಕು, ಚೇಳೂರು ಹೋಬಳಿ, ಸಾತೇನಹಳ್ಳಿ ಗ್ರಾಮದ ಶ್ರೀರಂಗಯ್ಯ ಬಹುಮುಖ ಪ್ರತಿಭೆಯ ಕಲಾವಿದರು. ಯಕ್ಷಗಾನ ಭಾಗವಂತಿಕೆ, ಹಾಡುಗಾರಿಕೆ, ಜಾನಪದ ಔಷಧೋಪಚಾರ ಹಾಗೂ ಮರಗಳಿಂದ ಬಗೆಬಗೆಯ ವಸ್ತುಗಳನ್ನು ನಿರ್ಮಿಸುವ, ಅಪರೂಪದ ಕೈಚಳಕಗಳಿಂದ ಅಪಾರ ಜನಪ್ರಿಯರಾಗಿದ್ದವರು.

ಶ್ರೀರಂಗಪ್ಪನವರದು ಕೊರಟಗೆರೆ ತಾಲೂಕು ಥರಟಿ ಗ್ರಾಮ. ಶ್ರೀ ರಂಗನಾಥ, ಆಂಜನೇಯ ದೇವಾಲಯಗಳ ಪೂಜಾರಿಕೆಯ ಹಿನ್ನೆಲೆಯಲ್ಲಿ ಗುಬ್ಬಿ ತಾಲೂಕು ಚೇಳೂರು ಸೀಮೆಗೆ ವಲಸೆ ಬಂದವರು. ಬೆಂಗಳೂರು ಸಮೀಪದ ನಲ್ಲೂರಿನಲ್ಲಿ ನೆಲೆ ನಿಂತರು. ಥರಟಿಯ ಪುರೋಹಿತ ಕುಟುಂಬ. ಅಂಥವರಲ್ಲಿ ಶ್ರೀ ಆಂಜನಪ್ಪನವರೂ ಒಬ್ಬರು. ಆಂಜನಪ್ಪವರದು ಕಲಾವಂತ ಕುಟುಂಬ. ಗ್ರಾಮ ಸೌಹಾರ್ದ, ಭಾವೈಕ್ಯತೆಗೆ ಕೇಂದ್ರವಾಗಿದ್ದ ಆಂಜನಪ್ಪನವರ ಕುಟುಂಬದಿಂದ ಬಂದವರು ಸಾತೇನಹಳ್ಳಿ ಶ್ರೀರಂಗಪ್ಪನವರು.

ಆಂಜನಪ್ಪನವರೂ ಒಳ್ಳೆಯ ಭಾಗವತರಾಗಿದ್ದವರು. ಪ್ರತಿವರ್ಷ ಚೇಳೂರು, ನಲ್ಲೂರು, ಸಾತೇನಹಳ್ಳಿ ಗ್ರಾಮಗಳಲ್ಲಿ ಯಕ್ಷಗಾನ, ಬಯಲಾಟವನ್ನು ತಪ್ಪದೆ ಕಲಿಸುತ್ತಿದ್ದರು. ದಕ್ಷಯಾಗ, ಲವಕುಶರ ಕಾಳಗ ಹಾಗೂ ಕರಿಭಂಟ ಇವರ ಜನಪ್ರಿಯ ಯಕ್ಷಗಾನ ಭಾಗವಂತಿಕೆಯ ಪ್ರಸಂಗಗಳು. ಇವರ ಹಾದಿಯನ್ನು ಸಮರ್ಥವಾಗಿ ಮುಂದುವರಿಸಿದವರು ಅವರ ವಂಶಸ್ಥರಾದ ಸಾತೇನಹಳ್ಳಿ ಶ್ರೀರಂಗಪ್ಪನವರು. ಅಂತಃಕರಣವುಳ್ಳ ವೈದ್ಯರೂ ಆಗಿದ್ದರು. ನಾಟಿ ಔಷಧೋಪಚಾರಗಳ ಮೂಲಕ ಚೇಳೂರು, ಯಣ್ಣೆಕಟ್ಟೆ, ಬ್ಯಾಡನಕಟ್ಟೆ, ನಲ್ಲೂರು ಈ ಭಾಗದ ರೈತಾಪಿ ಸಮುದಾಯದಲ್ಲಿ ಅಯ್ಯನವರು ಆಗಿದ್ದರು. ತಮ್ಮ ಇಪ್ಪತ್ತನೇ ವಯಸ್ಸಿನಿಂದ ಹಿಡಿದು ೭೦ ವರ್ಷ ವಯಸ್ಸಿನ ತನಕ

ಸತತವಾಗಿ ಯಕ್ಷಗಾನವನ್ನು ಕಲಿಸುತ್ತಾ ಬಂದರು. ನಾಯಕರು, ಕುರುಬರು, ತಿಗಳರು, ಕಾಡುಗೊಲ್ಲರ ಹಟ್ಟಿಗಳಲ್ಲಿ ರಾತ್ರಿಯಿಡೀ ಕಳೆದು ಅವಿದ್ಯಾವಂತರಾದ ಈ ಜನಾಂಗಕ್ಕೆ ಯಕ್ಷಗಾನದ ಪಾಠ ಮಾಡಿದ ಆದರ್ಶ ಗುರು. ಕುಣಿತ, ಕಂದ, ಮಟ್ಟು, ಮಾತುಗಳನ್ನು ಅಕ್ಷರ ಬಾರದ ಈ ಜನಾಂಗದ ಯುವಕರಿಗೆ ಸಮರ್ಥವಾಗಿ ಕಲಿಸುವ ಮೂಲಕ ಗ್ರಾಮ ಸೌಹಾದವಾಗಿ ಬೆಳೆದ ಅಪೂರ್ವರು.

ಶತಕಂಠ ರಾಮಾಯಣ, ಲಂಕಾದಹನ, ಸೀತಾ ಪರಿತ್ಯಾಗ, ದೇವಿ ಮಹಾತ್ಮೆ, ದುಶ್ಯಾಸನ ಕತೆ, ಕೀಚಕನ ವಧೆ, ವಿರಾಟಪರ್ವ, ಐರಾವತ ಶ್ರೀರಂಗಪ್ಪನವರು ಕಲಿಸುತ್ತಿದ್ದ ಪ್ರಮುಖ ಯಕ್ಷಗಾನ ಪ್ರಸಂಗಗಳು. ಶ್ರೀರಂಗಪ್ಪನವರು ಯಕ್ಷಗಾನವನ್ನು ಬಯಲುಕತೆ ಎಂದು ಕರೆಯುತ್ತಾರೆ. ತಾವು ಕಲಿಸುತ್ತಿದ್ದ ಯಕ್ಷಗಾನ ಪ್ರಸಂಗಗಳ ಪ್ರದರ್ಶನದ ಸಂದರ್ಭದಲ್ಲಿ ಮೂಡಲದಿಕ್ಕಿಗೆ ಮಾತ್ರ ಸ್ಟೇಜ್ ಹಾಕುತ್ತಿದ್ದರು. ಅದು ಸಂದರ್ಭ, ಪರಿಸರ ಯಾವುದಿದ್ದರೂ ಸ್ಟೇಜನ್ನು ಮೂಡಲ ದಿಕ್ಕಿಗೆ ಮಾತ್ರ ತಿರುಗಿಸುತ್ತಿದ್ದರು. ಇದು ಚೇಳೂರು ಸೀಮೆಯ ವಿಶೇಷವಾಗಿದೆ.

ಶ್ರೀರಂಗಪ್ಪನವರು ಸಾತೇನಹಳ್ಳಿಯ ಶ್ರೀರಂಗನಾಥ ದೇವಾಲಯದ ಪ್ರಧಾನ ಅರ್ಚಕರಾಗಿದ್ದರು, ಅತ್ಯುತ್ತಮ ರೈತರೂ ಆಗಿದ್ದರು. ರೈತಾಪಿ ಜನರಿಗೆ ವ್ಯವಸಾಯಕ್ಕೆ ಅಗತ್ಯವಾಗಿ ಬೇಕಾಗುವ ಕೃಷಿ ಉಪಕರಣಗಳಾದ ನೇಗಿಲು, ನೊಗ ಈ ಬಗೆಯ ತಯಾರಿಕೆಗಳಿಂದಾಗಿ ರೈತರ ಆಪ್ತ ಗೆಳೆಯರಾಗಿದ್ದರು.

ಶ್ರೀರಂಗಪ್ಪನವರಿಗೆ ನಾಲ್ಕು ಜನ ಗಂಡುಮಕ್ಕಳು, ಒಬ್ಬಳೇ ಮಗಳು. ಮೊದಲ ಮಗ ವಕೀಲರಾಗಿ ಕೊರಟಗೆರೆ ಭಾಗದಲ್ಲಿ ಒಳ್ಳೆಯ ಹೆಸರು ಮಾಡಿದ್ದರು. ಎರಡನೆಯ ಮಗ ಪ್ರೊ ॥ ಟಿ. ಎಸ್. ರಾಮಚಂದ್ರ, ಇಂಗ್ಲೀಷ್ ಪ್ರಾಧ್ಯಾಪಕರಾಗಿ ಉತ್ತಮ ಹೆಸರು ಸಂಪಾದಿಸಿ ಈಗ ನಿವೃತ್ತರಾಗಿದ್ದಾರೆ. ಉಳಿದ್ದಿಬ್ಬರು ಗಂಡುಮಕ್ಕಳು ಕುಲಮೂಲದ ಅರ್ಚಕ ವೃತ್ತಿ.

ಒಟ್ಟು ೭೦ ವರ್ಷಗಳ ಸಾರ್ಥಕ ಬದುಕು ಸವೆಸಿದ, ಗ್ರಾಮದ ಅಭಿವೃದ್ಧಿಗಾಗಿ ಸದಾ ಚಿಂತಿಸಿದ, ಮಡಿ-ಮೈಲಿಗೆಯ ಆಚೆ ಜಾತ್ಯಾತೀತವಾಗಿ ಬಾಳಿ ಹೋದ ಶ್ರೀರಂಗಪ್ಪ ಹಿರಿಯ ಕಲಾಜೀವಿ.

**ಶ್ರೀರಂಗಪ್ಪ, ಭಾಗವತರು,**<br>
**ಸಾತೇನಹಳ್ಳಿ,**<br>
**ಚೇಳೂರು ಹೋ ॥ ಗುಬ್ಬಿ ತಾಲೂಕು.**

# ಭಾಗವತ ಸಣ್ಣೀರಯ್ಯ

ತುಮಕೂರು ಜಿಲ್ಲೆಯ ಸಿರಾ ತಾಲೂಕು ಕೇಂದ್ರಕ್ಕೆ ಹೊಂದಿಕೊಂಡಂತಿರುವ ನಾಗಜ್ಜಿಗುಡ್ಲು ಶ್ರೀ ಸಣ್ಣೀರಯ್ಯ ಅವರ ನೆಲಮನೆ. ಹುಟ್ಟು ಅಂಗವಿಕಲರಾದರೂ, ಕಲಾತ್ಮಕ ಗುಣ ನಡಾವಳಿಗಳಿಂದಾಗಿ ಖ್ಯಾತಿಗಳಿಸಿದ್ದಾರೆ. ಸಣ್ಣೀರಯ್ಯ ಹುಟ್ಟಿದ್ದು ೧೯–೧೧–೧೯೪೭ರಲ್ಲಿ. ಸಿರಾ ತಾಲೂಕಿನ ಗಡಿಗ್ರಾಮ ಮದಲೂರು, ತಂದೆ ನರಸಣ್ಣ, ತಾಯಿ ನರಸಮ್ಮ. ಆದಿ ಕರ್ನಾಟಕ ವರ್ಗದ ಈ ದಂಪತಿಗಳ ಐದು ಜನ ಗಂಡುಮಕ್ಕಳಲ್ಲಿ ಕೊನೆಯವರು. ಎಸ್‌ಎಸ್‌ಎಲ್‌ಸಿ ತನಕ ವಿದ್ಯಾಭ್ಯಾಸ ಮಾಡಿರುವ ಇವರು, ಸ್ವಲ್ಪ ಕಾಲ ಮಾಸ್ತರಾಗಿಯೂ ಕಾಯಕ ಮಾಡಿದರು. ತನ್ನೊಳಗಣ ಕಲಾಗುರುವಿನ ಕಾರಣದಿಂದಾಗಿ ಒಂದೆಡೆಗೆ ನೆಲೆಯಾಗಿ ನಿಲ್ಲದ ಈ ಕಲಾವಿದ ಕಲೆಗಾಗಿ ಊರೂರು ಅಲೆಯುತ್ತಾ, ಕಲಾ ಪರಂಪರೆಯನ್ನು ನಿರಂತರ ಪ್ರಸಾರ ಮಾಡುತ್ತಾ ಬಂದರು. ಯಕ್ಷಗಾನ, ಬಯಲಾಟ, ಸಾಮಗಾನ, ಜನಪದ ಗೀತಗಾಯನ, ತತ್ವಪದ, ಶಿವಭಜನೆ, ಪಾಂಡುರಂಗ ಭಜನೆ, ಪುರಾಣ ಪಾರಾಯಣ, ಹರಿಕಥೆ, ಶನಿದೇವರ ಕಥಾಬೋಧನೆ, ಪಾರಾಯಣ ಈ ಬಹುವಿಧದ ಕಲೆಯಲ್ಲಿ ಅಪಾರ ನೈಪುಣ್ಯತೆ. ಅಂಗವಿಕಲರಾದರೂ ತಾಳ, ಮೇಳ, ಲಯ, ಗತ್ತಿನ ಮಾತುಗಾರಿಕೆಯಿಂದಾಗಿ ಪ್ರದರ್ಶನ, ಕಲಾ ಸಂಪರ್ಕದಲ್ಲಿಯೇ ಗಮನ ಸೆಳಯಬಲ್ಲ ಜಾಣ್ಮೆ, ಕಲಾ ನೈಪುಣ್ಯತೆ ಇವರ ವಿಶಿಷ್ಟ ಗುಣವಾಗಿದೆ.

ತಮ್ಮ ಹುಟ್ಟೂರು ಮದಲೂರು ಸಿರಾಕ್ಕೆ ೧೦ ಕಿ. ಮೀ. ದೂರದಲ್ಲಿದ್ದರೂ ನೆರೆಯ ಆಂಧ್ರಪ್ರದೇಶದ ಗಡಿಗ್ರಾಮ. ಮನೆ, ಗ್ರಾಮ ಕರ್ನಾಟಕಕ್ಕೆ ಸೇರಿದ್ದರೂ ಹೊಲ, ತಿಪ್ಪೆ, ತಿರುಗಾಟ ಎರಡೂ ರಾಜ್ಯಗಳ ಗಡಿ ಒಡನಾಡಿಯೇ ಬೆಳೆಯಬೇಕಾಗಿದೆ. ಹಾಗಾಗಿ ತೆಲುಗು, ಕನ್ನಡ ಎರಡೂ ಭಾಷೆ, ಸಂಸ್ಕೃತಿಯನ್ನು ಒಡನಾಡಿಯಾಗಿಯೂ ಬೆಳೆದ, ರೂಢಿಸಿಕೊಂಡ ಸಣ್ಣೀರಯ್ಯ ಆಂಧ್ರಮೂಲದ ಬುರ್ರಾ ಕಥೆಯ ಹಾಡುಗಳನ್ನು ಸೊಗಸಾಗಿ

ಹೇಳುತ್ತಾರೆ. ಯಕ್ಷಗಾನದ ಮಾತುಗಾರಿಕೆ, ತಾಳ, ಲಯ, ರಾಗ, ಪದ ಹಾಡುತ್ತಾರೆ. ಮೃದಂಗ ಬಾರಿಸಿಕೊಂಡು ರಾತ್ರಿಯಿಡೀ ಭಾಗವಂತಿಕೆ ಮಾಡುತ್ತಾರೆ. ಕಳೆದ ೪೦ ವರ್ಷಗಳಿಂದಲೂ ಯಕ್ಷಗಾನ ಭಾಗವತರಾಗಿ ರತಿಕಲ್ಯಾಣ, ಕರ್ಣಾರ್ಜುನರ ಕಾಳಗ, ಲವಕುಶರ ಕಾಳಗ, ಅಭಿಮನ್ಯು ಕಾಳಗ, ದುಶ್ಯಾಸನನ ಕಥೆ, ಭಕ್ತಸುಧನ್ವ, ಇಂದ್ರಜಿತ್ ಕಾಳಗ, ವಿರಾಟಪರ್ವ, ಸತ್ಯಹರಿಶ್ಚಂದ್ರ ಮೊದಲಾದ ಯಕ್ಷಗಾನ ಪ್ರಸಂಗಗಳನ್ನು ಸಮರ್ಥವಾಗಿ ಕಲಿಸಿದ್ದಾರೆ. ಗಿರಿಜಾಕಲ್ಯಾಣ ಯಕ್ಷಗಾನ ಪ್ರಸಂಗವನ್ನು ೧೯೭೬ರಿಂದ ಸಿರಾ ತಾಲೂಕು ಮದಲೂರು ಗ್ರಾಮದಲ್ಲಿ ನಿರಂತರವಾಗಿ ಕಲಿಸುತ್ತಾ ಬಂದಿರುವುದು ಇವರ ವಿಶೇಷವಾಗಿದೆ. ಮುದಿಗೆರೆ ಗ್ರಾಮದಲ್ಲಿ ದ್ರೌಪದಿ ವಸ್ತ್ರಾಪಹರಣ ಯಕ್ಷಗಾನವನ್ನು ೧೯೮೪ರಿಂದಲೂ ಕಲಿಸುತ್ತಾ ಅಭಿನಯಿಸುತ್ತಾ ಬಂದಿರುತ್ತಾರೆ.

ತಮ್ಮ ೧೦ನೇ ವಯಸ್ಸಿನಲ್ಲಿಯೇ ತಮ್ಮೂರಿನವರೇ ಆದ ಭಾಗವತ ಗಂಗಪ್ಪನವರಿಂದ ಯಕ್ಷಗಾನ ಕಲಿಕೆ, ಹಾಡು, ಮಾತುಗಾರಿಕೆಗೆ ಸಹಾಯಕ ಭಾಗವತರಾಗಿ ಸಹಭಾಗಿತ್ವ ಹೊಂದಿ ನಿರಂತರ ಅಭ್ಯಾಸ, ಪ್ರದರ್ಶನ ಸಂಘಟನೆಗಳಿಂದಾಗಿ ಇಂದು ಯಕ್ಷಗಾನ ಭಾಗವತರಾಗಿ ರೂಪುಗೊಂಡಿದ್ದಾರೆ. ಸಿರಾ ತಾ. ಚಂಗಾವರ ರಸ್ತೆಯ ನಾಗಜ್ಜಿಗುಡ್ಲು ಅಥವಾ ರಂಗನಾಥನಗರ ಗ್ರಾಮದಲ್ಲಿ ಶ್ರೀ ಚಾಮುಂಡೇಶ್ವರಿ ಆಶ್ರಮವೊಂದನ್ನು ಸ್ಥಾಪಿಸಿ, ಈ ಮೂಲಕ ಯಕ್ಷಗಾನ, ರಾಮಭಜನೆ, ಶಿವಭಜನೆ ಪಾಂಡುರಂಗ ಭಜನೆ, ತತ್ವಪದಕಾರರ ಸಂಘ, ಹಾಡುಗಾರಿಕೆಗಳಿಂದ ಒಂದು ಬುಡಕಟ್ಟು ಗ್ರಾಮವನ್ನು ಕಲಾಗ್ರಾಮವನ್ನಾಗಿಸಿ ಸದಾ ಸಾಂಸ್ಕೃತಿಕ ಚಟುವಟಿಕೆಗಳಿಂದ ಕೂಡಿರುವ ಭಾಗವತ ಸಣ್ಣೀರಪ್ಪ ಶನಿದೇವರ ಮತ್ತು ದೇವಿ ಪಾರಾಯಣವನ್ನು ಓದುವ ವಿಶಿಷ್ಟ ಕಲೆಗಾರಿಕೆ, ವಾಚನಾ ಚತುರತೆಯಿಂದ ಎಲ್ಲರ ಗಮನ ಸೆಳೆದು ಜಾತ್ಯಾತೀತವಾಗಿ ಭಕ್ತರ ಮನೆಗಳಿಗೆ ಹೋಗಿ ಕಥೆ ಮಾಡುತ್ತಾರೆ.

ಸಿರಾ ತಾಲೂಕು ಕಲಾವಿದರ ಒಕ್ಕೂಟದ ಸ್ಥಾಪಕರಲ್ಲಿ ಒಬ್ಬರಾಗಿ, ಕಲಾವಿದರ ಸಂಘಟನೆಗಳಲ್ಲಿಯೂ ತೊಡಗಿಸಿಕೊಂಡಿರುವುದು ಇವರ ಮತ್ತೊಂದು ವಿಶೇಷವಾಗಿದೆ. ಇವರಿಗೆ ಇಬ್ಬರು ಗಂಡುಮಕ್ಕಳು, ಒಬ್ಬ ಹೆಣ್ಣುಮಗಳ ಜೊತೆಗೆ ಮಡದಿ ಶ್ರೀಮತಿ ರತ್ನಮ್ಮನವರೂ ಈ ಅಲೆಮಾರಿ ಕಲಾವಿದರಿಗೆ ಕಲಾಪ್ರಸಾರ, ಸಂಘಟನೆಗೆ ಸಹಾಯ ಮಾಡುತ್ತಿರುವುದು ನೆನೆಯಲೇ ಬೇಕಾದ ಸಂಗತಿಯಾಗಿದೆ. ಅಂಗವಿಕಲರಾದರೂ ಕಲಾಭಿರುಚಿ, ಸತತಾಭ್ಯಾಸ, ಪ್ರದರ್ಶನ ಸಂಘಟನೆ, ಚಲನಶೀಲತೆಯಿಂದಾಗಿ ಎಲ್ಲರ ಗಮನ ಸೆಳೆದು ಕಲೆಗೆ ಅಂಗವಿಕಲತೆ ಅಡ್ಡಿಯೇನಲ್ಲ ಎಂಬುದನ್ನು ಅರ್ಥಪೂರ್ಣವಾಗಿ ತೋರಿಸಿಕೊಟ್ಟಿರುವ ಕಲಾವಿದ ಸಣ್ಣೀರಯ್ಯನವರು.

ಭಾಗವತ ಸಣ್ಣೀರಯ್ಯ
ರಂಗನಾಥನಗರ, ಚಂಗಾವರ ರಸ್ತೆ, ಸಿರಾ.

## ಭಾಗವತ ಬಸವಯ್ಯ

ಬಸವಯ್ಯನವರು ಚಿಕ್ಕನಾಯಕನಹಳ್ಳಿ ಹಂದನಕೆರೆಯವರು. ಮೂಲತಃ ಯಕ್ಷಗಾನ ಭಾಗವತ ಕುಟುಂಬ. ತಂದೆ ಬೀರಲಿಂಗಯ್ಯ ಯಕ್ಷಗಾನ ಭಾಗವತರಾಗಿ ಹೆಸರು ಮಡಿದವರು. ತಂದೆಯಿಂದ ಬಳುವಳಿಯಾಗಿ, ಗುರುರೂಪದಲ್ಲಿ ಯಕ್ಷಗಾನ ಕಲೆ ಬಂದಿದೆ ಎಂಬುದು ಬಸವಯ್ಯನವರ ಅಭಿಪ್ರಾಯ.

ಬಸವಯ್ಯ ತಮ್ಮ ೧೫ನೇ ವಯಸ್ಸಿನಲ್ಲಿಯೇ ರಂಗಕಲೆಯ ಹುಚ್ಚು ಹತ್ತಿಸಿಕೊಂಡವರು. ತಮ್ಮ ಊರಿನಲ್ಲಿ ವಾರಗಟ್ಟಲೆ ಜರಗುವ ಹಂದನಕೆರೆ ದುರ್ಗಮ್ಮ ದೇವರ ಉತ್ಸವದಲ್ಲಿ ಬಂದ ನೆಂಟರಿಷ್ಟರ ಅಭಿಲಾಷೆಯಂತೆ ಬಯಲು ನಾಟಕವನ್ನು ಅಭಿನಯಿಸತೊಡಗಿದವರು. ಬಯಲು ನಾಟಕ, ಕುಣಿಯುವ ಮೇಳ, ಬಯಲಾಟ ಹೀಗೆ ಬಹು ಹೆಸರುಗಳಿಂದ ಕರೆಯುವ ಯಕ್ಷಗಾನವನ್ನು ಚಿಕ್ಕನಾಯಕನಹಳ್ಳಿ, ಕಂದಿಕೆರೆ, ಶೆಟ್ಟಿಕೆರೆ, ಮತಿಘಟ್ಟ, ತಿಪಟೂರು ತಾಲೂಕು ಮಡೇನೂರು, ಮತ್ತಿಹಳ್ಳಿ ಈ ಭಾಗಗಳಲ್ಲಿ ಯಕ್ಷಗಾನ ಕಲಿಸಿದವರು.

ಶಾರದೆ, ಗಣೇಶ, ಪ್ರಾರ್ಥನಾ ಬಾಲಕ ಈ ಪಾತ್ರಗಳಲ್ಲಿ ರಂಗದ ಮೇಲೆ ಕಾಣಿಸಿಕೊಂಡವರು. ನಂತರ ಬಾಲಕ ಪಾತ್ರವಾದ ಅಭಿಮನ್ಯು ಪ್ರಹ್ಲಾದ, ಲವ ಈ ಪಾತ್ರಗಳಲ್ಲಿ ಅಭಿನಯಿಸತೊಡಗಿದರು. ೧೯೬೭ರಿಂದ ಸ್ವಯಂ ಭಾಗವತರಾಗಿ, ಕಲಾವಿದರಾಗಿ ಹೆಸರುವಾಸಿಯಾದರು. ದುಶ್ಯಾಸನನ ಕತೆ, ಕಿರಾತಾರ್ಜುನ, ಕರಿಭಂಟ, ಲವಕುಶ, ದಶಕಂಠ ರಾಮಾಯಣ, ಮೂರುವರೆ ವಜ್ರ, ದ್ರೌಪತಿ ಸ್ವಯಂವರ ಈ ಮೊದಲಾದ ಬಯಲಾಟ ಯಕ್ಷಗಾನಗಳಿಗೆ ಭಾಗವಂತಿಕೆ ನೀಡಿದ್ದಾರೆ. ಸ್ವಯಂ ಯಕ್ಷಗಾನ ನಾಟಕಗಳಲ್ಲಿ ಹನುಮನಾಯಕನ ಪಾತ್ರಗಳಿಂದ, ಹಾಸ್ಯ, ಗಂಭೀರ, ಶೃಂಗಾರ ಭಾವಗಳನ್ನು ರಸಪೂರ್ಣವಾಗಿ ಅಭಿವ್ಯಕ್ತಿಸ್ತ್ವ, ರಂಗಚಟುವಟಿಕೆಯ ಜೀವಂತಿಕೆಗೆ ಸಾಕ್ಷಿಯಾಗಿದ್ದಾರೆ.

೬ನೇ ತರಗತಿಯವರೆಗೆ ವಿದ್ಯಾಭ್ಯಾಸ ಮಡಿರುವ ಶ್ರೀಯುತರು ಭಾಗವತ, ಪುರಾಣ ಕಾವ್ಯಗಳನ್ನು ಸುಶ್ರಾವ್ಯವಾಗಿ ಹಾಡುವ, ಪ್ರಸಂಗ ನಡೆಸಿಕೊಡುವ ಕಾಯಕವನ್ನು ಮಾಡುತ್ತಿದ್ದಾರೆ. ಪ್ರತಿವರ್ಷ ಶ್ರೀರಾಮನವಮಿ, ಯುಗಾದಿ ಹಬ್ಬಗಳಂದು ತಪ್ಪದೆ ರಕ್ತಬೀಜಾಸುರ ಪ್ರಸಂಗವನ್ನು ಮೂಡಲಪಾಯ ಯಕ್ಷಗಾನ ಕಳೆದ ೪೦ ವರ್ಷಗಳಿಂದ ಪ್ರದರ್ಶಿಸುತ್ತ ಹಳೆಯ ಪಾತ್ರಗಳನ್ನೇ ಮತ್ತೆ ಮತ್ತೆ ರಸವತ್ತಾದ ಸಂಭಾಷಣೆ, ಹಾಡು, ನೃತ್ಯಗಳ ಮೂಲಕ ಯಕ್ಷಗಾನದ ಆವಿಷ್ಕಾರಕ್ಕೂ ಕಾರಣವಾಗಿದ್ದಾರೆ. ಹಾಲುಮತ ಜನಾಂಗಕ್ಕೆ ಸೇರಿದ ಇವರು, ಸಿದ್ಧರಾಮನ ಬಗೆಗೆ ಪದವನ್ನು ಹಾಡುತ್ತಾರೆ. ಕೊನೆಹಳ್ಳಿಯಲ್ಲಿ ನಡೆದ ಮೂಡಲಪಾಯ ಯಕ್ಷಗಾನ ಭಾಗವತರ ಕಮ್ಮಟದಲ್ಲಿ ಭಾಗವಹಿಸಿದ್ದ ಇವರು ಯಕ್ಷಗಾನದಲ್ಲಿ ಆಧುನಿಕ ವಿಚಾರಧಾರೆಯಿರಬೇಕೆಂದು ಪ್ರತಿಪಾದಿಸುತ್ತಾರೆ.

ಭಾಗವತ ಬಸಪ್ಪ,<br>ಹಂದನಕೆರೆ,<br>ಚಿಕ್ಕನಾಯಕನಹಳ್ಳಿ ತಾಲೂಕು.

## ಭಾಗವತ ಕಡವಿಗೆರೆ ಪಿ. ತಿಮ್ಮಯ್ಯ

ಮೂಡಲಪಾಯ ಯಕ್ಷಗಾನಕ್ಕೆ ಕಳೆದ ೫೦ ವರ್ಷಗಳಿಂದಲೂ ಸಾರ್ಥಕ ಸೇವೆ ಸಲ್ಲಿಸುತ್ತಾ ಬಂದಿರುವ ಶ್ರೀ ಪಿ. ತಿಮ್ಮಯ್ಯನವರು ತುಮಕೂರು ಜಿಲ್ಲೆ ಸಿರಾ ತಾಲೂಕಿನ ಕಡವಿಗೆರೆಯವರು. ತಂದೆ ಸಣ್ಣ ವೆಂಕಟಪ್ಪ. ಅವಿದ್ಯಾವಂತರಾದರೂ ಯಕ್ಷಗಾನ ಕಲಾವಿದರಾಗಿದ್ದರು. ಅವರ ಪ್ರೇರಣೆ, ಪ್ರಭಾವದಿಂದಾಗಿ ತಿಮ್ಮಯ್ಯನವರು ಯಕ್ಷಗಾನ ಕಲೆಯಲ್ಲಿ ವಿಶೇಷ ಆಸಕ್ತಿ ಬೆಳೆಸಿಕೊಂಡು ಬಂದರು. ಗುಬ್ಬಿ ತಾಲೂಕಿನ ಚೇಳೂರು ಹೋಬಳಿ ಅಂಕಸಂದ್ರದ ಲಕ್ಷ್ಮೀನಾರಾಯಣಪ್ಪ ಎಂಬುವರ ಮಾರ್ಗದರ್ಶನದಲ್ಲಿ ಯಕ್ಷಗಾನ ಕಲಾವಿದರಾಗಿ, ಭಾಗವಂತಿಕೆಯನ್ನು ಕಲಿತರು. ಭಾಗವಂತಿಕೆ, ಹಾಡುಗಾರಿಕೆ, ಕುಣಿತ ಹಾಗೂ ಮಾತುಗಾರಿಕೆಯನ್ನು ಶ್ರೀಗುರುಗಳಿಂದ ಅಭ್ಯಾಸ ಮಾಡಿದವರು. ೧೦ ವರ್ಷಗಳ ಕಾಲ ೩ ಪಲ್ಲ ರಾಗಿಯನ್ನು ಕೊಟ್ಟು ಯಕ್ಷಗಾನವನ್ನು ಗುರುಪರಂಪರೆಯ ಮೂಲಕ ಕಲಿತವರು.

ತಿಮ್ಮಯ್ಯನವರಿಗೆ ಇದೀಗ ೭೫ ವರ್ಷಗಳ ಪ್ರಾಯ. ಐದು ಜನ ಮಕ್ಕಳನ್ನು ಹೊಂದಿದ್ದಾರೆ. ತರಕಾರಿ, ಹೂವು ವ್ಯಾಪಾರ, ಬೆಳೆಯುವ ಕಾಯಕದಲ್ಲಿ ಇಡೀ ಕುಟುಂಬ ನಿರತವಾಗಿದೆ. ವಯಸ್ಸಾದರೂ ಕನಿಷ್ಠ ವರ್ಷಕ್ಕೆ ಒಂದನ್ನಾದರೂ ನಾಟಕ ಆಡಿಸಬೇಕೆಂಬ ಅಚಲವಾದ ವಿಶ್ವಾಸ, ಅಭಿಮಾನಗಳಿಂದಾಗಿ ಯಕ್ಷಗಾನವನ್ನು ಕಲಿಸುತ್ತಾ ಬರುತ್ತಿರುವುದು ವಿಶೇಷ,

ಐರಾವತ, ಕೃಷ್ಣಾರ್ಜುನರ ಕಾಳಗ, ಬಾಲಕಾಂಡ ರಾಮಾಯಣ, ಮಯೂರಧ್ವಜ, ದೇವಿಮಹಾತ್ಮೆ, ಕರಿಭಂಟನ ಕಾಳಗ, ಲವಕುಶರ ಕಾಳಗ ಇವರು ಈ ತನಕ ಕಲಿಸಿರುವ ಯಕ್ಷಗಾನ ಪ್ರಸಂಗಗಳು. ಒಂದು ಪ್ರಸಂಗವನ್ನು ಕನಿಷ್ಠ ೧೦ಕ್ಕೂ ಹೆಚ್ಚುಬಾರಿ ಕಲಿಸಿ ರಂಗಪ್ರಯೋಗ ಮಾಡಿರುವ ತಿಮ್ಮಯ್ಯನವರಿಗೆ ತುಂಬಾ ಪ್ರಿಯವಾದ ಯಕ್ಷಗಾನ

ಐರಾವತ ಪ್ರಸಂಗ. ಮಹಾಭಾರತಕ್ಕೆ ಸಂಬಂಧಿಸಿದ ಈ ಕತೆಯಲ್ಲಿ ಗಾಂಧಾರಿ ಗಜಗೌರಿ ಆಚರಣೆಯನ್ನು ಮಾಡುತ್ತಾಳೆ. ಇದಕ್ಕೆ ಎಲ್ಲ ಸಂಬಂಧಿಕರು, ದಾಯಾದಿಗಳನ್ನು ಆಹ್ವಾನಿಸಿದ ಗಾಂಧಾರಿ ಸೋದರಿ ಕುಂತಿ ಹಾಗೂ ಆಕೆಯ ಮಕ್ಕಳನ್ನು ಆಹ್ವಾನಿಸಿದೆ ಅವಮಾನ ಮಾಡುತ್ತಾಳೆ. ಈ ಸಂಗತಿ ಕುಂತಿಯನ್ನು ಕೆರಳಿಸಿ, ಸ್ವಾಭಿಮಾನಕ್ಕೆ ಧಕ್ಕೆ ತಂದುದಕ್ಕಾಗಿ ವ್ಯಗ್ರಳಾಗುತ್ತಾಳೆ. ತನ್ನ ಮಕ್ಕಳಾದ ವೀರ ಪಾಂಡವರಲ್ಲಿ ಈ ಅವಮಾನ ಪ್ರಸಂಗವನ್ನು ತೋಡಿ ಕೊಂಡಾಗ ಅರ್ಜುನನು ದೇವೇಂದ್ರನ ಬಳಿಯಿದ್ದ ಐರಾವತವನ್ನು ತಂದು ಗಜಗೌರಿ ವ್ರತಕ್ಕೆ ಕುಂತಿಗೆ ನೆರವಾಗುವುದು ಈ ನಾಟಕದ ವಸ್ತು. ಇದಕ್ಕಾಗಿ ನಾಟಕದ ಅಟ್ಟ ಅಥವಾ ಸ್ಟೇಜಿನ ಮೇಲೊಂದೊ ಸ್ಟೇಜ್ ನಿರ್ಮಿಸಿ ಅಲ್ಲಿ ದೇವೇಂದ್ರನ ದರ್ಬಾರ್ ನಡೆಸುವುದು ವಿಶೇಷ. ಇದನ್ನು ಅಟ್ಟಿನ ಮೇಲೆ ಅಟ್ಟು ಎಂದೇ ಕರೆಯಲಾಗುವುದು. ಈ ಬಗೆಯ ವಿಶೇಷ ಆಟಕ್ಕೆ ಹೆಸರುವಾಸಿಯಾದವರು ಪಿ. ತಿಮ್ಮಯ್ಯನವರು.

ತಿಮ್ಮಯ್ಯನವರು ತುಮಕೂರು ತಾಲೂಕು ಮಧುಗಿರಿ, ಚೇಳೂರು, ಪಾವಗಡ, ಸಿರಾ ಈ ಭಾಗಗಳಲ್ಲಿ ಯಕ್ಷಗಾನ ಪ್ರದರ್ಶನವನ್ನು ನಡೆಸಿರುತ್ತಾರೆ. ಸಿರಾ ಸೀಮೆಯಲ್ಲಿ ಶ್ರೀರಾಮನವಮಿಯಂದು ಕಡ್ಡಾಯವಾಗಿ ಲವಕುಶರ ಕಾಳಗ ನಾಟಕವನ್ನು ಪ್ರದರ್ಶಿಸಿದ ಹಿರಿಮೆ ಇವರಿಗೆ ಸಲ್ಲುತ್ತದೆ. ಹಲವು ಯಕ್ಷಗಾನ ಕಲಾವಿದರನ್ನು ರೂಪಿಸಿದ ಶ್ರೇಯಸ್ಸಿಗೆ ಪಾತ್ರವಾಗಿರುವುದಲ್ಲದೆ ಈಡಿಗರಹಳ್ಳಿ ರಮಾನಂದ, ಕಣುಮಯ್ಯ ಮುಂತಾದ ಯಕ್ಷಗಾನ ಭಾಗವತರನ್ನು ರೂಪಿಸಿರುವ ಶ್ರೀ ಕಡವಿಗೆರೆ ತಿಮ್ಮಯ್ಯನವರ ಸಾರ್ಥಕ ಭಾಗವಂತಿಕೆಯನ್ನು ರಮಾನಂದ ಸಮರ್ಥವಾಗಿ ಮುಂದುವರಿಸುತ್ತಿರುವುದು ಹೆಮ್ಮೆಯ ಸಂಗತಿಯಾಗಿದೆ. ತಮ್ಮ ಕುಟುಂಬದಲ್ಲಿ ಭಾಗವತರಾಗಿ ಯಕ್ಷಗಾನ ಸೇವೆ ಮಾಡದಿದ್ದರೂ ಕಲಾವಿದರಾಗಿ ಯಕ್ಷಗಾನದಲ್ಲಿ ಪಾತ್ರ ಮಾಡುವ ಮೂಲಕ ಯಕ್ಷಗಾನ ಕಲಾಸೇವೆಯನ್ನು ಮುಂದುವರಿಸಿರುವುದನ್ನು ಹೆಮ್ಮೆಯಿಂದ ಹೇಳಿಕೊಳ್ಳುತ್ತಾರೆ. ಬುಡಕಟ್ಟು ವರ್ಗ ತಿಗಳ ಜನಾಂಗಕ್ಕೆ ಸೇರಿದ ತಿಮ್ಮಯ್ಯನವರಿಗೆ ಜಾತಿಯಾಚೆಯ ಕಲಾ ಸಂಘಟನೆಯೇ ಮುಖ್ಯ ಎನ್ನುತ್ತಾರೆ.

ಪಿ. ತಿಮ್ಮಯ್ಯ,
**ಯಕ್ಷಗಾನ ಭಾಗವತರು,**
**ಕಡವಿಗೆರೆ, ಸಿರಾ ತಾಲೂಕು.**

## ಭಾಗವತ ಮುಷ್ಟಿಗರಹಳ್ಳಿ ರಂಗಪ್ಪ

ದಾಸರ ಪದಗಳ ಜನಕ, ಪೌರಾಣಿಕ ನಾಟಕಗಳ ನಿರ್ದೇಶಕ ಎಂದೆಲ್ಲ ಕರೆಯಲ್ಪಡುವ ಹಿರಿಯ ಯಕ್ಷಗಾನ ಭಾಗವತ ರಂಗಪ್ಪ ಮೂಲತಃ ಆಂಧ್ರ ಕಡೆಯಿಂದ ಬಂದವರು. ಗಂಗೆ ಗೌರಿ, ಗುಣಸಾಗರಿ, ಬಾಲನಾಗಪ್ಪ ಕಥನ ಗೀತೆಗಳನ್ನು ಹಾಡಿಕೊಂಡು ಮೂಲ ವೃತ್ತಿಯಾದ ತಂಬೂರಿ ಪರಂಪರೆಯವರು. ಸಹವಾಸದಂತೆ ತಂಬೂರಿ ಬಿಟ್ಟು ತಾಳ ಹಿಡಿದು ಭಾಗವತರೆನಿಸಿಕೊಂಡರು. ಮೇಳದ ರಂಗಪ್ಪ ಎಂದೇ ಕರೆಯಲ್ಪಡುವ ಇವರಿಗೆ ಇದೀಗ ೮೦ ವರ್ಷಗಳ ಪ್ರಾಯ, ಕಣ್ಣು ಮಂದವಾಗಿವೆ, ಕಿವಿ ತನ್ನ ಸ್ಪರ್ಶಗುಣ ಕಳೆದುಕೊಳ್ಳುತ್ತಿದೆ. ಆದರೂ ಕಲೆ, ಕಲಾವಿದರ ಬಗೆಗೆ ಅನನ್ಯ ಗೌರವ ಭಾವನೆಯನ್ನು ಹೊಂದಿರುವ ಸಿರಾ ಸೀಮೆಯ ಹಿರಿಯ ಯಕ್ಷಗಾನ ಭಾಗವತರು. ಇವರ ಮೂಲದವರು ಆಂಧ್ರದ ಕರೇದಾಸರಹಳ್ಳಿಯವರೆಂದು ಹೇಳಲಾಗುತ್ತಿದೆ. ತಂದೆ ನರಸಿಂಹಯ್ಯ, ತಾಯಿ ರಂಗಮ್ಮ. ತಂದೆಯಿಂದ ಗಂಗೆ ಗೌರಿ, ಶಿವಲೀಲಾವತಿ ಪುರಾಣ ಕಲಿತರು. ಸಿರಾ ತಾಲೂಕು ಮುಷ್ಟಿಗರಹಳ್ಳಿಯಲ್ಲಿ ಬಂದು ನೆಲೆನಿಂತರು. ಮೊದಲು ರಾಮನವಮಿಯ ಪ್ರಯುಕ್ತ ಶ್ರೀರಾಮ ಲೀಲಾವಳಿ, ಸಂಪೂರ್ಣ ರಾಮಾಯಣ, ಲವಕುಶರ ಕಾಳಗ, ಇಂದ್ರಜಿತ್ ಕಾಳಗ ಈ ಮೊದಲಾದ ಪ್ರಸಂಗಗಳಲ್ಲಿ ಲವ, ಸೀತೆ ಪಾತ್ರಗಳಲ್ಲಿ ಅಭಿನಯಿಸಿದರು. ನಂತರ ಯಕ್ಷಗಾನದಲ್ಲಿ ಹಿಮ್ಮೇಳ ಕಲಾವಿದರಾಗಿ ಭಾಗವಹಿಸಿದರು. ನಂತರ ಪೂರ್ಣಪ್ರಮಾಣದ ಭಾಗವತರಾಗಿ ಸತ್ಯಹರಿಶ್ಚಂದ್ರ, ವಾಲಿ ಸುಗ್ರೀವರ ಕಾಳಗ, ಭಕ್ತ ಸುಧನ್ವ, ಲವಕುಶ, ದುಶ್ಯಾಸನನ ಕಾಳಕ, ಶತಕಂಠ ರಾಮಾಯಣ, ಇಂದ್ರಜಿತ್ ಕಾಳಗ ಈ ಮೊದಲಾದ ಯಕ್ಷಗಾನ ಭಾಗವತರಾಗಿ ಸಮರ್ಥವಾಗಿಯೇ ಬೆಳೆದರು. ಆಂಧ್ರಪ್ರದೇಶದ ಅನಂತಪುರ ಜಿಲ್ಲೆಯ ಮಡಕಶಿರಾ, ಅಮರಾಪುರ, ರೊಳ್ಳ, ಅಗಳಿ ಈ ಪ್ರದೇಶಗಳಲ್ಲಿ ಯಕ್ಷಗಾನ ಕಲಿಸಿದರು. ಮೂಡಲಪಾಯ ಯಕ್ಷಗಾನದ ಸ್ಪಷ್ಟ ತಿಳುವಳಿಕೆ ಹೊಂದಿಲ್ಲವಾದರೂ ಬಯಲುಕತೆ ಎಂದೇ ಕರೆಯುವ ರಂಗಪ್ಪನವರು ಯಕ್ಷಗಾನ

ನೃತ್ಯಭಂಗಿಗಳಾದ ಉಡನ್, ಜರ್ಮ, ಚೌಕ, ಪಸ್ಕೆ ಮೊದಲಾದ ಆಕರ್ಷಕ ನೃತ್ಯವನ್ನು ಕಲಾವಿದರಿಗೆ ಕಲಿಸಿಕೊಡುವಲ್ಲಿ ಎತ್ತಿದ ಕೈ. ಅಂತೆಯೇ ಯಕ್ಷಗಾನ ಹಾಡುಗಾರಿಕೆಯ ಮಟ್ಟುಗಳಾದ ನಾಟಿ, ಗೌಳ, ಮಾರವಿ, ಮೋಹನ, ರೇಗುಪ್ತಿ ಈ ಯಕ್ಷಗಾನ ಗೀತ ಪ್ರಕಾರಗಳನ್ನು ಶಾಸ್ತ್ರೀಯವಾಗಿ ಕಲಿತಿರುವ, ಕಲಿತಿದ್ದನ್ನು ಕಲಾವಿದರಿಗೆ ಹೇಳಿಕೊಡುವ ಅಂತಃಕರಣಪೂರ್ವಕ ಕಲಾಶಿಕ್ಷಕರಾಗಿದ್ದರು.

ಸಿರಾ ತಾಲೂಕಿನ ರಂಗನಹಳ್ಳಿ, ಹನುಮಹಳ್ಳಿ, ಕಂಬಾರಹಳ್ಳಿ, ವೀರಗಾರನಹಳ್ಳಿ ಈ ಕಡೆಗಳಲ್ಲಿ ಯಕ್ಷಗಾನ ಕಲಿಸಿದ್ದಾರೆ. ವೇಷಧಾರಿ, ವಸ್ತು ತಯಾರಿಕೆ, ವೇಷಭೂಷಣ ಹಾಗೂ ಪೌರಾಣಿಕ ನಾಟಕಗಳಲ್ಲಿ ಅಭಿನಯ ನೀಡಿದ್ದಾರೆ. ತೊಂಬತ್ತರ ಈ ಇಳಿವಯಸ್ಸಲ್ಲೂ ತಲೆತುಂಬಾ ಯಕ್ಷಗಾನದ ಗೀಳು ಹಿಡಿಸಿಕೊಂಡಿರುವ ಅಪರೂಪದ ಹಿರಿಯ ಕಲಾವಿದರು.

ಭಾಗವತ ರಂಗಪ್ಪ,
ಮುಷ್ಟಿಗರಹಳ್ಳಿ,
ಬಂದಕುಂಟೆ ಅಂಚೆ, ಸಿರಾ ತಾಲೂಕು.

## ೮. ವೆಂಕಟಾಚಲಪತಿ

ಯಕ್ಷಗಾನ ಭಾಗವಂತಿಕೆ, ವೇಷಭೂಷಣ ತಯಾರಿಕೆ, ಗ್ರಾಮದೇವತೆಗಳ ಜಾತ್ರೆಯ ಕಾಲದಲ್ಲಿ ಕುಣಿತಕ್ಕೆ ಬೇಕಾಗುವ ವಸ್ತುಗಳನ್ನು ತಯಾರಿಸುವ ವಿಶಿಷ್ಟ ಕಾಯಕದಿಂದ ಟಿ. ವೆಂಕಟಾಚಲಪತಿ ಹೆಸರುವಾಸಿಯಾಗಿದ್ದಾರೆ. ಕರ್ನಾಟಕಾಂಧ್ರ ಗಡಿನೆಲದ ಮಧುಗಿರಿ ತಾಲೂಕಿನ ಮಿಡಿಗೇಶಿ ಹೋಬಳಿಗೆ ಸೇರಿದ ಬೇಡತ್ತೂರಿನವರು.

ತಾತ ಹನುಮಂತಪ್ಪ, ತಂದೆ ತಿಮ್ಮಯ್ಯ, ಮಗ ವೆಂಕಟಾಚಲಪತಿ ಹೀಗೆ ಮೂರು ತಲೆಮಾರುಗಳ ಕಾಲ ನಿರಂತರವಾಗಿ ಮೂಡಲಪಾಯ ಯಕ್ಷಗಾನದ ಪರಿಕರ ಹಾಗೂ ರಂಗ ಸಾಮಗ್ರಿಗಳನ್ನು ಮರ ಹಾಗೂ ಜೀರಂಗಿ ಎಂಬ ವಸ್ತುಗಳಿಂದ ಆಕರ್ಷಕವಾಗಿ ತಯಾರಿಸುತ್ತಾ ಬಯಲುಸೀಮೆಗೆ ರಂಗಸಾಮಗ್ರಿ ಒದಗಿಸುತ್ತಾ ಬಂದಿರುವುದು ಇವರ ವಿಶೇಷತೆ. ಜೊತೆಗೆ ಯಕ್ಷಗಾನ ರಂಗಸಾಮಗ್ರಿ ಒದಗಿಸುತ್ತಾ ಬಂದಿರುವುದು ಇವರ ವಿಶೇಷತೆ. ಜೊತೆಗೆ ಯಕ್ಷಗಾನ ನಾಟಕಗಳಿಗೆ, ಬಯಲು ಕತೆಗೆ, ಹಗಲುವೇಷ ಪಾತ್ರಗಳಿಗೆ ಬಣ್ಣದ ವೇಷಗಳನ್ನು ತಯಾರಿಸುತ್ತಾ ಬರುತ್ತಿದ್ದಾರೆ. ಹುಲಿವೇಷ ಮೊದಲಾದ ಜನಪದ ಕುಣಿತಕ್ಕೂ ಬಣ್ಣದ ವೇಷ ಸಿದ್ಧಗೊಳಿಸುವುದು ಇವರ ಕುಲಕಸುಬಾಗಿದೆ. ಗ್ರಾಮದೇವತೆ ಹಬ್ಬ, ಬಾಬಯ್ಯನ ಹಬ್ಬ ಇತರೆ ಸಾಂಸ್ಕೃತಿಕ ಉತ್ಸವಗಳಲ್ಲಿ ಬಣ್ಣ ಹಾಕುವುದು ಇವರ ಕಾಯಕ.

ಟಿ. ವೆಂಕಟಾಚಲಪತಿ ಅವರು ಹುಟ್ಟಿದ್ದು ೧೯೬೨ರಲ್ಲಿ. ೯ನೇ ತರಗತಿಯವರೆಗೆ ವಿದ್ಯಾಭ್ಯಾಸ. ೧೯೭೮ರಿಂದ ಕುಲಕಸುಬಾದ ಬಣ್ಣಹಾಕುವುದು, ಯಕ್ಷಗಾನ ಪರಿಕರ ತಯಾರಿಕಾ ಕೆಲಸಕ್ಕೆ ನೇಮಕವಾದರು. ಮಡಕಶಿರಾ, ಅನಂತಪುರ, ಅಮರಾಪುರ, ಪಾವಗಡ, ಮಧುಗಿರಿ ಈ ಮೊದಲಾದ ಯಾವುದೇ ಸಾಂಸ್ಕತಿಕ ಕಾರ್ಯಕ್ರಮಗಳಲ್ಲಿ ಬಣ್ಣದ ವೇಷಕ್ಕೆ ಕಲಾವಿದರನ್ನು ತಯಾರಿಸುವ ಕಾಯಕ ಇವರದು. ಬಣ್ಣದ ವೇಷದ

ಜೊತೆಗೆ ಯಕ್ಷಗಾನ ಭಾಗವಂತಿಕೆಯೂ ಇವರ ಮತ್ತೊಂದು ಹವ್ಯಾಸವಾಗಿದೆ. ತಂದೆ ಸ್ವತಃ ಯಕ್ಷಗಾನ ಭಾಗವತರು. ಆರಂಭದಲ್ಲಿ ಬಾಲನಟನ ಪಾತ್ರಗಳಲ್ಲಿ ಅಭಿನಯ, ನಂತರ ತಂದೆಯೊಂದಿಗೆ ಹಿನ್ನೆಲೆ ಸಂಗೀತದ ಮೂಲಕ ಯಕ್ಷಗಾನ ಭಾಗವಂತಿಕೆಗೆ ಸಿದ್ಧರಾದರು. ದೇವಿಮಹಾತ್ಮೆ, ದುಶ್ಯಾಸನ ಕಥೆ, ಕಂಸಾಸುರನ ವಧೆ, ಕರಿಭಂಟನ ಕಾಳಗ, ಕಾರ್ಣಾರ್ಜುನರ ಕಾಳಗ, ದಶಕಂಠ ರಾಮಾಯಣ ಮೊದಲಾದ ಯಕ್ಷಗಾನಗಳಿಗೆ ಭಾಗವಂತಿಕೆ ನೀಡಿದ್ದಾರೆ. ತಂದೆ ಕೆ. ತಿಮ್ಮಯ್ಯ, ತಾಯಿ ಹನುಮಕ್ಕ ಇವರಿಗೆ ಜನಿಸಿದ ೭ ಜನ ಗಂಡುಮಕ್ಕಳಲ್ಲಿ ಎರಡನೆಯವರಾದ ವೆಂಕಟಾಚಲಪತಿ ಅವರಿಗೆ ರಮೇಶ ಎಂಬ ಮಗನಿದ್ದು ಅವರೂ ಬಣ್ಣದ ವೇಷ, ಯಕ್ಷಗಾನ ಭಾಗವಂತಿಕೆಯಲ್ಲಿ ಪರಿಣತಿಯೊಂದಿಗೆ ಯಕ್ಷಗಾನ ರಂಗ ಸಾಮಗ್ರಿ ಹಾಗೂ ತಂದೆಯ ಭಾಗವಂತಿಕೆಗೆ ಹಿನ್ನೆಲೆ ಸಂಗೀತಕ್ಕೆ ನೆರವಾಗುತ್ತಿದ್ದಾರೆ. ರಂಗ ಸೀನರಿಯನ್ನು ಸ್ವತಃ ತಯಾರಿಸಿ, ಯಕ್ಷಗಾನಕ್ಕೆ ಪೂರೈಸಿರುವುದು ಇವರ ವಿಶೇಷವಾಗಿದೆ.

ಬೆಂಗಳೂರಿನ ಚಿತ್ರಕಲಾ ಪರಿಷತ್, ರವೀಂದ್ರ ಕಲಾಕ್ಷೇತ್ರ ಈ ಮೊದಲಾದ ಸಾಂಸ್ಕೃತಿಕ ಕಲಾ ಕೇಂದ್ರಗಳಲ್ಲಿ ಇವರ ರಂಗ ಸಾಮಗ್ರಿಯ ಪ್ರದರ್ಶನವೂ ಆಗಿದೆ. ತುಮಕೂರು, ಆಂಧ್ರದ ಅನಂತಪುರ, ಅಮರಾಪುರ ತುಮಕೂರಿನ ಹೆಚ್‌ಎಂಟಿ ಸಭಾಂಗಣ ಇಲ್ಲೆಲ್ಲಾ ಇವರ ಯಕ್ಷಗಾನ ಪ್ರದರ್ಶನವೂ ನಡೆದಿದೆ. ಯಕ್ಷಗಾನ ಪರಿಕರ, ಭಾಗವಂತಿಕೆ ಮೂರು ತಲೆಮಾರುಗಳ ನಿರಂತರ ಸೇವೆಯ ನಡುವೆಯೂ ಆರ್ಥಿಕವಾಗಿ ದುಃಸ್ಥಿತಿಯಲ್ಲಿರುವುದು ಆತಂಕದ ಸಂಗತಿಯಾಗಿದೆ.

ಟಿ. ವೆಂಕಟಾಚಲಪತಿ,
ಬೇಡತ್ತೂರು,
ಮಿಡಿಗೇಶಿ ಹೋಬಳಿ, ಮಧುಗಿರಿ ತಾಲೂಕು.

# ಯಕ್ಷಗಾನದ ಲಕ್ಷ್ಮಣಯ್ಯ

ಯಕ್ಷಗಾನ ವೇಷಗಾರಿಕೆ, ವೇಷಭೂಷಣ, ಭಾಗವಂತಿಕೆ ಹಾಗೂ ಯಕ್ಷಗಾನ ಭಾಗವತ ಶಿಕ್ಷಕನಾಗಿ ಕಳೆದ ನಲವತ್ತು ವರ್ಷಗಳಿಂದ ಕಾರ್ಯ ನಿರ್ವಹಿಸುತ್ತಿರುವ ಅರಳುಗುಪ್ಪೆಯ ಎ. ಎಸ್. ಲಕ್ಷ್ಮಣಯ್ಯ ಶಿವರಾಮಯ್ಯ ಹಾಗೂ ಕೆಂಪಮ್ಮ ಇವರ ಮಗ ಬಡ ಬೆಸ್ತ ಕುಟುಂಬದಲ್ಲಿ ಜನಿಸಿದ ಇವರು. ಓದಿದ್ದು ೭ನೇ ತರಗತಿಯವರೆಗೆ ಮಾತ್ರ. ಹಣಕಾಸಿನ ಮುಗ್ಗಟ್ಟು, ಕೂಲಿ ಕಸುಬಿನ ತಂದೆಯ ಜೊತೆಗೆ ೧೨ ಆಣೆಯ ದಿನಗೂಲಿಗೆ ನೇಮಕವಾದರು.

ಅಮರಕೋಶದ ಪಂಡಿತ ತಾತ ರಾಮಯ್ಯ ಕೂಲಿಮಠ ನಡೆಸುತ್ತಿದ್ದರು. ತಿಂಗಳಿಗೆ ೧೦ ರೂ. ಗೆ ಅನುಕೂಲಸ್ಥ ಮನೆಯ ಮಕ್ಕಳಿಗೆ ಪಾಠ ಹೇಳುತ್ತಿದ್ದರು. ಜೊತೆಗೆ ಯಕ್ಷಗಾನ ಭಾಗವಂತಿಕೆಯನ್ನು ಮಾಡುತ್ತಿದ್ದರು. ತಾತನ ಈ ಬಗೆಯ ಕಲಾವಂತಿಕೆ ಮೊಮ್ಮಗ ಲಕ್ಷ್ಮಣಯ್ಯನವರಲ್ಲಿ ಮೇಳೈಸಿತು.

ತಮ್ಮ ೧೮ನೇ ವಯಸ್ಸಿನಲ್ಲಿ ಯಕ್ಷಗಾನ ಕ್ಷೇತ್ರ ಪ್ರವೇಶ. ಮೊದಲು ಸ್ತ್ರೀ ಪಾತ್ರಗಳಲ್ಲಿ ಅಭಿನಯ. ಲವ, ಗಯ, ದೇವಿ, ರತಿ ಈ ಪಾತ್ರಗಳಲ್ಲಿ ೧೦ ವರ್ಷ ಪಾತ್ರಾಭಿನಯ. ನಂತರ ಪೌರಾಣಿಕ ನಾಟಕಗಳತ್ತ ಸೆಳೆತ, ಸಂಪೂರ್ಣ ರಾಮಾಯಣ, ದಾನಶೂರ ಕರ್ಣ, ಪಾಂಡು ವಿಜಯ, ಸತ್ಯ ಹರಿಶ್ಚಂದ್ರ ನಾಟಕಗಳಲ್ಲಿ ಪ್ರಧಾನ ಪಾತ್ರಗಳಲ್ಲಿ ಅಭಿನಯ ನೀಡಿದರು. ಇದೇ ಸಂದರ್ಭದಲ್ಲಿ ದೇವದಾಸಿ, ಅಣ್ಣ ತಮ್ಮ, ಕಲಿತ ಕಳ್ಳ, ಬಸ್ ಕಂಡಕ್ಟರ್, ದಾರಿದೀಪ ಮೊದಲಾದ ಸಾಮಾಜಿಕ ನಾಟಕಗಳಲ್ಲಿ ಸಮರ್ಥನೀಯ ಅಭಿನಯ ನಿರ್ವಹಣೆ, ಐತಿಹಾಸಿಕ ನಾಟಕದಲ್ಲಿನ ಹೆಚ್. ಎಂ. ನಾಯಕ ಇವರ ಅಭಿನಯದ ಕೀರ್ತಿ ತಂದ ಪಾತ್ರವಾಗಿದೆ.

೧೯೬೬ರಿಂದ ಯಕ್ಷಗಾನ ಭಾಗವತರಾಗಿ ಕಾರ್ಯ ನಿರ್ವಹಣೆ. ತ್ರಿಪುರ ಸಂಹಾರ, ರತಿಕಲ್ಯಾಣ, ದೇವಿಮಹಾತ್ಮೆ, ಲವಕುಶ, ಕರ್ಣಪರ್ವ, ಗಯಚರಿತ್ರೆ, ಅಹಿರಾವಣ–ಮಹಿರಾವಣ, ಕರಿಭಂಟ, ಬಬ್ರುವಾಹನ, ಭಕ್ತ ಪ್ರಹ್ಲಾದ, ಶನಿಮಹಾತ್ಮೆ ಈ ಮೊದಲಾದ ಯಕ್ಷಗಾನ ಪ್ರಸಂಗಗಳಿಗೆ ಭಾಗವತರಾಗಿ ಸೇವೆ ಸಲ್ಲಿಸಿದ್ದಾರೆ. ೧೯೮೬ರಿಂದಲೂ ಬೆಂಗಳೂರು ಆಕಾಶವಾಣಿಯಲ್ಲಿ ಮೂಡಲಪಾಯ ಯಕ್ಷಗಾನ ಕಲಾವಿದರಾಗಿ, ಭಾಗವತರಾಗಿ ಕಲಾಪ್ರಸಾರ ಮಾಡಿದ್ದಾರೆ. ರಾಜ್ಯ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಗುರುಶಿಷ್ಯ ಪರಂಪರೆಯ ಯೋಜನೆಯಲ್ಲಿ ಶಿಕ್ಷಕರಾಗಿ ಯಕ್ಷಗಾನ ಭಾಗವಂತಿಕೆಯನ್ನು ಕಲಿಸಿದ್ದಾರೆ. ರಾಮನಗರದ ಜಾನಪದಲೋಕ, ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರವೂ ಸೇರಿದಂತೆ ರಾಜ್ಯದ ಪ್ರತಿಷ್ಠಿತ ಸಾಂಸ್ಕೃತಿಕ ಸೇವಾ ಸಂಸ್ಥೆಗಳ ಮೂಲಕ ಯಕ್ಷಗಾನ ಪ್ರದರ್ಶನ ನೀಡಿದ್ದಾರೆ. ಬೆಂಗಳೂರು ದೂರದರ್ಶನ ಕೇಂದ್ರದಲ್ಲಿ ಪ್ರಸಾರವಾದ ದೇವಿಮಹಾತ್ಮೆ ಹಾಗೂ ಚಿತ್ರಕೇತು ಯಕ್ಷಗಾನ ಪ್ರಸಂಗಗಳಲ್ಲಿ ಕಲಾವಿದರಾಗಿ ಅಭಿನಯ ನೀಡಿದ್ದಾರೆ.

ಎ. ಎಸ್. ಲಕ್ಷ್ಮಣಯ್ಯ
ಅರಳಗುಪ್ಪೆ, ತಿಪಟೂರು ತಾಲೂಕು.

## ಎಮ್ಮೆತಿಮ್ಮನಹಳ್ಳಿ ದೊಡ್ಡಪಾಲಯ್ಯ

ಯಕ್ಷಗಾನ ಕಲೆ, ಕಲಾವಿದರ ಸಂಘಟನೆಯ ಬಗೆಗೆ ಅಪಾರ ಒಲವಿರಿಸಿಕೊಂಡು ಕಲಾ ಸಂಘಟನೆಯಲ್ಲಿ ತೊಡಗಿರುವ ದೊಡ್ಡಪಾಲಯ್ಯ ಯಕ್ಷಗಾನ ಭಾಗವತರು ಕಳೆದ ೪೦ ವರ್ಷಗಳಿಂದಲೂ ಯಕ್ಷಗಾನ ಭಾಗವಂತಿಕೆಗಾಗಿ ತಮ್ಮನ್ನು ಅರ್ಥಪೂರ್ಣವಾಗಿ ಒಪ್ಪಿಸಿಕೊಂಡಿರುವ ಗಡಿನಾಡ ಕಲಾವಿದ.

ಮಧುಗಿರಿ ತಾಲೂಕು, ಎಮ್ಮೆತಿಮ್ಮನಹಳ್ಳಿಯ ಭಾಗವತ ಮಾರಪ್ಪನವರ ಮಗನಾದ ಈತ ೧೯೬೦ನೇ ಸಾಲಿನಿಂದಲೂ ಯಕ್ಷಗಾನ ಭಾಗವಂತಿಕೆಯಲ್ಲಿ ತೊಡಗಿದ್ದರೆ. ಆರಂಭದಲ್ಲಿ ತಂದೆಯೊಂದಿಗೆ ಬಾಲಪಾತ್ರ, ಸ್ತ್ರೀಪಾತ್ರ ಅಭಿನಯಿಸುತ್ತಾ ಬಂದರು. ಗಣೇಶ, ಶಾರದೆ, ರುಕ್ಮಿಣಿ ಈ ಮೊದಲಾದ ಪಾತ್ರಾಭಿನಯ ಇವರಿಗೆ ಪ್ರಿಯವಾಗತೊಡಗಿದಂತೆ ತಂದೆಯೊಂದಿಗೆ ಹಿನ್ನೆಲೆ ಭಾಗವಂತಿಕೆಗೆ ಧ್ವನಿಯಾಗತೊಡಗಿದರು.

೧೯೬೦ ರಿಂದ ಭಾಗವತರಾಗಿ ಸ್ವತಃ ನಾಟಕ ಕಲಿಸುತ್ತಿರುವ ಇವರು ಈವರೆಗೆ ೨೫ಕ್ಕೂ ಹೆಚ್ಚಾಗಿ ಹೊಸ ಹೊಸ ಯಕ್ಷಗಾನ ಪ್ರಸಂಗಗಳನ್ನು ರಂಗದ ಮೇಲೆ ತಂದಿದ್ದಾರೆ. ಮಡಕಶಿರಾ, ರೊಳ್ಳೆ, ಅಮರಾಪುರ, ತಿರುಮಣಿ ಮುಂತಾದ ತೆಲುಗು ನೆಲದಲ್ಲೂ ಯಕ್ಷಗಾನದ ಕಂಪನ್ನು ಹರಿಸಿದ ಹಿರಿಮೆ ಇವರದು. ಮಹಾಂದಾತ, ವಿಕ್ರಮಾರ್ಜುನ ಕಥೆ, ಸತ್ಯ ಹರಿಶ್ಚಂದ್ರ, ರತಿ ಕಲ್ಯಾಣ, ದೇವಿಮಹಾತ್ಮೆ, ಪಾತಾಳ ಹೋಮ, ಕರ್ಣಾರ್ಜುನ ಕಾಳಗ, ದುಶ್ಯಾಸನ ಕಥೆ, ಲವಕುಶ, ರಾಮಾಂಜನೇಯ ಯುದ್ಧ, ತ್ರಿಪುರ ಸಂಹಾರ, ಶಿವಜಲಂಧರನ ಕತೆ, ಲಕ್ಷ್ಮಣ ಮೂರ್ಛೆ, ಅಭಿಮನ್ಯು ಕಾಳಗ ಇವರು ಪ್ರಯೋಗ ಮಾಡಿರುವ ಪ್ರಮುಖ ಯಕ್ಷಗಾನ ಪ್ರಸಂಗಗಳು.

ಪಾವಗಡ, ಸಿರಾ, ಮಧುಗಿರಿ, ಗುಬ್ಬಿ ಇಲ್ಲೆಲ್ಲಾ ಸಂಚಾರಿಯಾಗಿ ಯಕ್ಷಗಾನ ಕಲಿಸುತ್ತಿದ್ದಾರೆ. ಮಧುಗಿರಿ, ಪಾವಗಡ ಕಲಾಸಂಘ ಹಾಗೂ ತಾಲೂಕು ಆಡಳಿತದ ಪರವಾಗಿ ಇವರನ್ನು ಸತ್ಕರಿಸಿವೆ. ಸುವರ್ಣ ಕರ್ನಾಟಕದ ಸಂಸ್ಕೃತಿ ಜಾಥಾದಲ್ಲಿ ಮಧುಗಿರಿ, ಪಾವಗಡ ಭಾಗಗಳಲ್ಲಿ ಕಲಾ ಸಂಘಟಕರಾಗಿ ಜಾಥಾ ನಡೆಸಿದ ಹಿರಿಮೆಯೂ ಇವರದು. ತಮ್ಮ ೬೫ರ ಇಳಿವಯಸ್ಸಿನಲ್ಲೂ ತಮ್ಮ ಗ್ರಾಮಗಳಲ್ಲಿನ ಶಾಲಾ ಮಕ್ಕಳಿಗೂ ಯಕ್ಷಗಾನ ಕಲಿಸುವ, ಈ ಮೂಲಕ ಶಾಲಾ ಮಟ್ಟದಲ್ಲಿ ಯಕ್ಷಗಾನ ಬೆಳೆಯಬೇಕೆಂಬ ಅಚಲ ವಿಶ್ವಾಸವುಳ್ಳವರಾಗಿದ್ದಾರೆ. ಮಿಡಿಗೇಶಿ ಹೋಬಳಿಯಲ್ಲಿ ಕನಿಷ್ಠ ೧೦೦ ಕ್ಕೂ ಹೆಚ್ಚು ಯಕ್ಷಗಾನ ಪ್ರಯೋಗಗಳಲ್ಲಿ ವಿದ್ಯಾವಂತರಿಗೆ ಶಿಕ್ಷಕರಿಗೆ ಕಲಿಸಿ ಸಮರ್ಥವಾಗಿ ಪ್ರಯೋಗ ಮಾಡುತ್ತಿರುವುದು ಇವರ ಹೆಚ್ಚುಗಾರಿಕೆಯಾಗಿದೆ. ಇವರ ಮಕ್ಕಳೂ ಯಕ್ಷಗಾನ ಕಲಾವಿದರಾಗಿದ್ದು ಭಾಗವಂತಿಕೆಯಲ್ಲಿ ವಿಶೇಷ ಆಸಕ್ತಿವುಳ್ಳವರಾಗಿದ್ದಾರೆ.

ದೊಡ್ಡಪಾಲಯ್ಯ,
ಎಮ್ಮೆತಿಮ್ಮನಹಳ್ಳಿ,
ಮಧುಗಿರಿ ತಾಲೂಕು.

# ದಾಸಾಲುಕುಂಟೆ ಶಿವರುದ್ರಯ್ಯ

ತುಮಕೂರು ಜಿಲ್ಲೆಯ ಕೊರಟಗೆರೆ ತಾಲೂಕಿನ ದಾಸಾಲುಕುಂಟೆ ಗ್ರಾಮದ ಶ್ರೀ ಶಿವರುದ್ರಯ್ಯ ಯಕ್ಷಗಾನ ಭಾಗವತರು. ಕಳೆದ ನಲವತ್ತು ವರ್ಷಗಳಿಂದಲೂ ಯಕ್ಷಗಾನ ಕಲಾವಿದರಾಗಿ, ಪಾತ್ರಧಾರಿಗಳಾಗಿ, ಭಾಗವತರಾಗಿ, ಸಂಘಟಕರಾಗಿ ಬಹುಮುಖಿ ಕೊಡುಗೆ ನೀಡಿದ್ದಾರೆ.

ತಮ್ಮ ತಂದೆ ನಂಜಪ್ಪನವರೂ ಯಕ್ಷಗಾನ ಕಲಾವಿದರಾಗಿದ್ದು ಅವರ ಪ್ರೋತ್ಸಾಹ, ಮಾರ್ಗ ದರ್ಶನದಿಂದಾಗಿ ಯಕ್ಷಗಾನಕ್ಕೆ ಪ್ರವೇಶ ಮಾಡಿದುದಾಗಿ ಹೇಳುವ ನಂಜಪ್ಪನವರಿಗೆ ಇದೀಗ ೭೦ ವರ್ಷ ವಯಸ್ಸು. ಕಣ್ಣು ಜೊಂಪಾಗಿದೆ, ಕಾಲು ತಿರುಗಾಟ ಕಳೆದುಕೊಂಡಿದೆ. ರೋಗವೂ ಆಕ್ರಮಣ ಮಾಡಿದೆ. ಆದರೆ ತನ್ನೊಳಗಣ ಯಕ್ಷಗಾನ ಭಾಗವಂತಿಕೆಯ ಅಪ್ಪಟ ಪ್ರತಿಭೆಗೆ ಈ ಯಾವುದೇ ಬಾಧಕವಾಗಿಲ್ಲ. ಇಂದಿಗೂ ವರ್ಷಕ್ಕೊಂದರಂತಾದರೂ ಮೂಡಲಪಾಯ ಯಕ್ಷಗಾನ ಆಡಿಸುವ, ಪರಂಪರೆ ತಪ್ಪಿಲ್ಲ. ಕನಿಷ್ಠ ತನ್ನ ಗ್ರಾಮದ ಯುವಕರನ್ನಾದರೂ ಸಂಘಟಿಸಿ ಒಂದು ಪ್ರಸಂಗ ಮಾಡಿಸಿಯೇ ತೀರಬೇಕೆಂಬ ಅತೀವ ತುಡಿತ ಇವರದಾಗಿದೆ. ಶಿವರಾತ್ರಿ, ಶ್ರೀರಾಮನವಮಿ, ಯುಗಾದಿ, ವರ್ಷದಡಕು ಇಂಥ ಸಂದರ್ಭಗಳನ್ನು ಈ ಕಲೆಯ ಪ್ರಸಾರಕ್ಕಾಗಿ ಸಾಂದರ್ಭಿಕವಾಗಿ ಬಳಸಿಕೊಳ್ಳುವುದು ಇವರ ಕಲಾಭಿರುಚಿಯ ತೀವ್ರತೆಗೆ ಕಲೆಯನ್ನು ಉಳಿಸುವ ಕನಿಷ್ಠ ಕಾಳಜಿಗೆ ಮೂರ್ತರೂಪವಾಗಿದೆ.

ತಮ್ಮ ೨೫ನೆಯ ವಯಸ್ಸಿನಿಂದ ಹಿಡಿದು ಇಲ್ಲಿಯತನಕ ೧೦೦ ಕ್ಕೂ ಹೆಚ್ಚು ಯಕ್ಷಗಾನ ಪ್ರಸಂಗಗಳನ್ನು ಕಲಿಸಿರುವ ಶಿವರುದ್ರಯ್ಯ ಸಿದ್ದರಬೆಟ್ಟ, ಕುಣಿಗಲ್ ತಾಲೂಕಿನ ಅಮೃತೂರು, ದಾವಣಗೆರೆ ಈ ಭಾಗಗಳಲ್ಲಿ ಕಳೆದ ೨೫ ವರ್ಷಗಳಿಂದ ಇಂದಿಗೂ ವರ್ಷಕ್ಕೊಂದಾವರ್ತಿ ಯಕ್ಷಗಾನ ಕಲಿಸುತ್ತಾ ಬರುತ್ತಿದ್ದಾರೆ. ಗೊರವನಹಳ್ಳಿ, ಶ್ರೀಕ್ಷೇತ್ರ

ಸಿದ್ಧರಬೆಟ್ಟ ಯಡೆಯೂರು, ಸಿದ್ಧಗಂಗೆ ಈ ಸ್ಥಳಗಳ ವಿಶೇಷ ಸಂದರ್ಭದಲ್ಲಿ ಇವರ ಕಲಾ ತಂಡದೊಂದಿಗೆ ಯಕ್ಷಗಾನ ಪ್ರದರ್ಶಿಸುವುದು ಒಂದು ರೂಢಿಯಾಗಿ ಬಂದಿದೆ.

ಶಿವಜಲಂಧರ, ದಕ್ಷಯಾಗ, ರಾಮಾಂಜನೇಯ ಯುದ್ಧ, ಇಂದ್ರಜಿತ್ ಕಾಳಗ ಲವಕುಶರ ಕಾಳಗ, ಐರಾವತ, ದುಶ್ಶಾಸನನ ಕತೆ, ವಿರಾಟಪರ್ವ, ವೀರ ಅಭಿಮನ್ಯು ಕಾಳಗ, ಕರ್ಣಾರ್ಜುನರ ಕಾಳಗ ಇವರು ಭಾಗವಂತಿಕೆ ಮಾಡಿರುವ ಪ್ರಮುಖ ಯಕ್ಷಗಾನ ಪ್ರಸಂಗಗಳು. ಉತ್ತಮ ಸಂಘಟಕರೂ ಆಗಿರುವ ಶಿವರುದ್ರಯ್ಯನವರು ತಮ್ಮ ಗ್ರಾಮದಲ್ಲಿ ಯಕ್ಷಗಾನ, ಪೌರಾಣಿಕ, ಜನಪದ ಕಲಾಪ್ರಕಾರಗಳ ಉಳಿವಿಗಾಗಿ ಕೊರಟಗೆರೆ ತಾಲೂಕು ದಾಸಾಲುಕುಂಟೆಯಲ್ಲಿ ವೀರಭದ್ರಸ್ವಾಮಿ ನಾಟಕ ಮಂಡಲಿ ಹಾಗೂ ಶ್ರೀ ಚೌಡೇಶ್ವರಿ ಯುವಕ ಸಂಘ ಎಂಬ ಸಾಂಸ್ಕೃತಿಕ ಸಂಘಗಳನ್ನು ಸ್ಥಾಪಕ ಸಂಚಾಲಕರಾಗಿ ಕಾರ್ಯ ನಿರ್ವಹಿಸಿದ್ದಾರೆ. ಜೊತೆಗೆ ಈ ಸಾಂಸ್ಕೃತಿಕ ಸಂಸ್ಥೆಗಳ ಮೂಲಕ ಹಲವು ಯುವಕರನ್ನು ಸಂಘಟಿಸಿ ಕೋಲಾಟ, ಗೀಗಿ ಪದ, ಜನಪದ ನೃತ್ಯ, ವಾದ್ಯ ವಿಶೇಷ, ನಂದಿಧ್ವಜ ಕುಣಿತ ಮೊದಲಾದ ಜನಪದ ಕಲೆಗಳನ್ನು ಕಲಿಸುವಿಕೆಗೆ ವಿಶೇಷ ಶ್ರಮ ಹಾಕಿರುವುದಲ್ಲದೆ ಈ ಸಂಸ್ಥೆಯ ಮೂಲಕ ಯುವ ಕಲಾವಿದರನ್ನು ತಯಾರುಮಾಡಿ, ದಾವಣಗೆರೆ, ಶಿವಮೊಗ್ಗ ಮೊದಲಾದ ಕಡೆಗಳಲ್ಲಿ ಆಯೋಜನೆಗೊಂಡ ರಾಜ್ಯ ಮಟ್ಟದ ಯುವಜನ ಮೇಳಗಳಲ್ಲಿ ಭಾಗವಹಿಸಿದ, ಈ ಮೂಲಕ ಜನಪದ ಕಲೆಯ ಪ್ರಸಾರಕ್ಕೆ ತಕ್ಕ ವಾತಾವರಣ ನಿರ್ಮಿಸಿದ ಹಿರಿಯ ಕಲಾವಿದರಾಗಿದ್ದಾರೆ.

ಶ್ರೀ ಶಿವರುದ್ರಯ್ಯನವರ ಕಲಾ ಸಾಧನೆ, ಸಂಘಟನೆಯನ್ನು ಪರಿಗಣಿಸಿ ಜಿಲ್ಲಾ ಹಂತದ ಹಲವು ಸಾಂಸ್ಕೃತಿಕ ಸಂಘ ಸಂಸ್ಥೆಗಳು ಗೌರವಿಸಿವೆ. ಸರ್ಕಾರದ ಹಲವು ಯೋಜನೆಗಳಲ್ಲಿ ಸಂಪನ್ಮೂಲ ಕಲಾವಿದರಾಗಿಯೂ ಕಾರ್ಯ ನಿರ್ವಹಿಸಿ ಗೌರವಕ್ಕೆ ಪಾತ್ರರಾಗಿದ್ದಾರೆ.

**ಶಿವರುದ್ರಯ್ಯ,**
**ದಾಸಾಲುಕುಂಟೆ ಮತ್ತು ಅಂಚೆ,**
**ಕೊರಟಗೆರೆ ತಾಲೂಕು.**

## ಬೆನಕನಹಳ್ಳಿ ಲಕ್ಷ್ಮೀನರಸಯ್ಯ

ಲಕ್ಷ್ಮೀನರಸಯ್ಯನವರು ಮಧುಗಿರಿ ತಾಲೂಕು, ಮಿಡಿಗೇಶಿ ಹೋಬಳಿ ಬೆನಕನಹಳ್ಳಿಯವರು. ಮೂಲತಃ ರೈತಾಪಿ ಕುಟುಂಬದಿಂದ ಬಂದ ಇವರ ತಂದೆಯೂ ಯಕ್ಷಗಾನ ಭಾಗವತರು, ಮದ್ದಲೆ ಕಲಾವಿದರು. ತನ್ನ ತಂದೆಯ ಹಾಗೆ ಭಾಗವತ, ಮದ್ದಲೆ ಕಲಾವಿದರಾಗ ಬೇಕೆಂದು ಬಾಲ್ಯದಲ್ಲಿಯೇ ಆಸಕ್ತಿ ಬೆಳೆಸಿಕೊಂಡ ಇವರು ಪಿಯುಸಿ ತನಕ ವ್ಯಾಸಂಗ, ನಂತರ ಶಿಕ್ಷಕರ ತರಬೇತಿ ಪಡೆದು ೧೯೫೦ ರಿಂದ ಶಿಕ್ಷಕರಾಗಿ ಮಧುಗಿರಿ, ಮಿಡಿಗೇಶಿ, ಪಾವಗಡ ಇಲ್ಲೆಲ್ಲಾ ಸೇವೆ ಸಲ್ಲಿಸಿದ್ದಾರೆ. ಸೇವಾನಿರತರಾಗಿಯೂ ಶಾಲಾ ಕಾರ್ಯಕ್ರಮಗಳಲ್ಲಿ ಯಕ್ಷಗಾನ ಪ್ರಸಂಗಗಳನ್ನು ಮಕ್ಕಳಿಗೆ ಸಮರ್ಪಕವಾಗಿ ಕಲಿಸುತ್ತಾ ಬಂದರು. ನೃತ್ಯ ಕ್ಯಾಸೆಟ್‌ಗೆ, ಕುಣಿತಕ್ಕೆ ಹೊರತಾಗಿ ದೇಶಿ ಕಲೆಗಳಾದ ಕೋಲಾಟ, ಜನಪದ ಗೀತೆಗಳಿಗೆ ನೃತ್ಯ ಸಂಯೋಜನೆ, ಸಮುದಾಯದತ್ತ ಶಾಲೆ ಕಾರ್ಯಕ್ರಮದಲ್ಲಿ ಯಕ್ಷಗಾನದ ಆಯ್ದ ತುಣುಕುಗಳ ಮೂಲಕ ಯಕ್ಷಗಾನ ಕಲೆಯನ್ನು ಉಳಿಸಿ, ಬೆಳೆಸಿರುವುದು ಇವರ ವಿಶೇಷ.

ಯಕ್ಷಗಾನ ಸಂಘಟಕರಾಗಿಯೂ ಕಾರ್ಯ ನಿರ್ವಹಿಸುತ್ತಿರುವ ಇವರು ಮಧುಗಿರಿ ತಾಲೂಕಿನ ಮೂಡಲಪಾಯ ಯಕ್ಷಗಾನ ಭಾಗವತರನ್ನು ಸಂಘಟಿಸುತ್ತಾ, ಕಲೆಯ ಉಳಿವಿಗಾಗಿ ಶ್ರಮಿಸುತ್ತಾ ಬಂದಿದ್ದಾರೆ. ಗುರು, ತಂದೆ ಎರಡೂ ಆದ ಹನುಮಂತರಾಯಪ್ಪ ತೆಲುಗು, ಕನ್ನಡ ದ್ವಿಭಾಷಾ ಯಕ್ಷಗಾನ ಭಾಗವತ. ಅವರ ಹಿರಿಯ ಮಗನಾದ ಲಕ್ಷ್ಮೀನರಸಿಂಹಯ್ಯ ಆರಂಭದಲ್ಲಿ ಬಾಲಕ ಪಾತ್ರಗಳ ಮೂಲಕ ರಂಗಪ್ರಯೋಗಕ್ಕಿಳಿದರು. ಸ್ವಲ್ಪ ಸಮಯದಲ್ಲಿಯೇ ಯಕ್ಷಗಾನದ ಪೂರಕ ವಾದ್ಯ ಮದ್ದಳೆಯನ್ನು ಕಲಿತರು. ಹಾಗಾಗಿ ತಂದೆ ಭಾಗವತರಾದರೆ ಮಗ ಮದ್ದಳೆ ಕಲಾವಿದ ಎಂಬ ಖ್ಯಾತಿ ಎಲ್ಲೆಡೆ ಹಬ್ಬಿತು.

೧೯೭೪ ರಿಂದ ಭಾಗವತರಾಗಿ ಯಕ್ಷಗಾನ ಪ್ರಸಂಗವನ್ನು ಮಡಕಶಿರಾ, ಮಧುಗಿರಿ. ಪಾವಗಡ, ಗುಡಿಬಂಡೆ, ಗೌರಿಬಿದನೂರು ಈ ಭಾಗಗಳಲ್ಲಿ ಕಲಿಸಿದ್ದಾರೆ. ವಿರಾಟಪರ್ವ, ಗಿರಿಜಾಕಲ್ಯಾಣ, ದೇವಿಮಹಾತ್ಮೆ, ಶಶಿರೇಖಾ ಪರಿಣಯ, ಶಂಬರಾಸುರನ ಕತೆ ಮುಂತಾದ ಯಕ್ಷಗಾನ ಪ್ರಸಂಗವನ್ನು ಕಳೆದ ೩೦ ವರ್ಷಗಳಿಂದ ಕಲಿಸುತ್ತಾ ಬಂದಿದ್ದಾರೆ. ಅಧ್ಯಾಪನ ಕಲೆ ಈ ಎರಡೂ ಕಲೆಯನ್ನು ತಮ್ಮ ಶಿಕ್ಷಕ ವೃತ್ತಿಯ ಉದ್ದಕ್ಕೂ ಮಾಡಿಕೊಂಡು ಬರುತ್ತಿರುವ ಲಕ್ಷ್ಮೀನರಸಯ್ಯ ತಮ್ಮ ನಿವೃತ್ತಿಯ ಪೂರ್ಣ ಸಮಯವನ್ನು ಯಕ್ಷಗಾನ ಭಾಗವಂತಿಕೆಗೆ ಮೀಸಲಿಟ್ಟಿದ್ದಾರೆ.

ಇವರ ಕಲಾಬದುಕನ್ನು ಮೆಚ್ಚಿ ಹಲವು ಸಂಘ ಸಂಸ್ಥೆಗಳು ಗೌರವಿಸಿವೆ. ಆರಂಭದಿಂದಲೂ ಯುವಜನಮೇಳಗಳಲ್ಲಿ ಕಲಾ ಪ್ರದರ್ಶನಕ್ಕೆ ಬಹುಮಾನ ಪಡೆದಿದ್ದಾರೆ. ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘ, ತುಮಕೂರು, ಮಧುಗಿರಿ ಇವರನ್ನು ವಿಶೇಷವಾಗಿ ಗೌರವಿಸಿವೆ. ಸುವರ್ಣ ಕರ್ನಾಟಕ ಗೌರವವೂ ಇವರಿಗೆ ಸಂದಾಯವಾಗಿದೆ. ಇವರ ಜೊತೆಗೆ ಸಮಾನ ಪ್ರತಿಭೆ, ಪಾಂಡಿತ್ಯವುಳ್ಳ ಭಾಗವತರಾದ ಎಮ್ಮೆತಿಮ್ಮನಹಳ್ಳಿ ದೊಡ್ಡಪಾಲಯ್ಯ, ಇವರ ತಂದೆ ಮಾರಪ್ಪ ಯಕ್ಷಗಾನ ಭಾಗವತರಾಗಿದ್ದು, ವರ್ಷದುದ್ದಕ್ಕೂ ಮಧುಗಿರಿ, ಪಾವಗಡ ಭಾಗಗಳಲ್ಲಿ ಯಕ್ಷಗಾನ ಪ್ರದರ್ಶನ ಏರ್ಪಡಿಸುತ್ತಾ ಬಂದಿರುವುದು ಮರೆಯಲಾರದ ಸಂಗತಿ. ಇವರ ಜೊತೆಗೆ ಭಾಗವತ ಉಗ್ರಪ್ಪನವರೂ ಭಾಗವತರಾಗಿ ಸಹಕರಿಸಿದ್ದಾರೆ. ದಿ || ಕರಿಯಪ್ಪನವರ ಮಕ್ಕಳಾದ ಉಗ್ರಪ್ಪ ಇಪ್ಪತ್ತು ಯಕ್ಷಗಾನ ಪ್ರಸಂಗಗಳನ್ನು ಬಾಯಿಪಾಠ ಮಾಡಿ ಪ್ರದರ್ಶಿಸುತ್ತಿರುವ ಹಿರಿಯ ಕಲಾವಿದರು. ಮದ್ದಳೆ ಕಲಾವಿದರಾಗಿ ಹನುಮಂತರಾಯಪ್ಪ ಇವರ ಸರಿಜೋಡಿಯಾಗಿದ್ದಾರೆ. ಇಂಥವರಿಂದಾಗಿಯೇ ಯಕ್ಷಗಾನ ಕಲೆ ಉಳಿದಿದೆ ಎಂಬುದು ಈ ಭಾಗದವರ ಅನಿಸಿಕೆಯೂ ಆಗಿದೆ.

ಲಕ್ಷ್ಮೀನರಸಯ್ಯ, ಭಾಗವತರು,
ಬೆನಕನಹಳ್ಳಿ, ಮಧುಗಿರಿ ತಾಲೂಕು.

# ಭಾಗವತ ಹಾಲ್ಕುರಿಕೆ ರಾಘವೇಂದ್ರರಾವ್

ತಮ್ಮ ೭೩ ವರ್ಷಗಳ ಪರಿಪೂರ್ಣ ಕಲೆ, ಅಭ್ಯಾಸ, ವೇಷಗಾರಿಕೆ, ಭಾಗವಂತಿಕೆ, ವೇಷಭೂಷಣ ತಯಾರಿಕೆ, ನೃತ್ಯ, ಸಂಗೀತ, ಮೃದಂಗ ಈ ಎಲ್ಲ ಯಕ್ಷಗಾನದ ಒಳಹೊರಗಿನ ಬಹುರೂಪದಲ್ಲಿ ಪ್ರಬುದ್ಧ ಕಲಾವಿದರಾಗಿ ರೂಪುಗೊಂಡಿರುವ ಹಾಲ್ಕುರಿಕೆ ಶ್ರೀನಿವಾಸರಾವ್, ರಾಘವೇಂದ್ರರಾವ್ ಅವರು ಮೂರು ತಲೆಮಾರಿನ ಯಕ್ಷಗಾನ ಬದುಕು. ತಾತ, ತಂದೆ, ಸೋದರ ಮಾವ, ದೊಡ್ಡಪ್ಪಂದಿರೆಲ್ಲರೂ ಯಕ್ಷಗಾನ ಭಾಗವತರು.

ದಿನಾಂಕ ೨೨-೩-೧೯೩೪ರಲ್ಲಿ ಜನಿಸಿ ಹೆಚ್. ಎಸ್. ರಾಘವೇಂದ್ರರಾವ್ ಅವರ ತಂದೆ ಭಾಗವತ ಹೆಚ್. ಶ್ರೀನಿವಾಸರಾವ್, ತಾಯಿ ಸಾವಿತ್ರಮ್ಮ. ಯಕ್ಷಗಾನ ಭಾಗವಂತಿಕೆಯ ಮನೆತನವಾದುದರಿಂದ ಯಕ್ಷಗಾನದ ಗುರು ಕೂಡ ತಂದೆ ಶ್ರೀನಿವಾಸರಾವ್ ಅವರೆ. ಮೃದಂಗ ಕಲೆಗೆ ಗುರುವಾದರು ದೊಡ್ಡಪ್ಪ ಬೇಟೆರಂಗಪ್ಪನವರು. ಸಂಗೀತಕ್ಕೆ ಗುರು ಸೋದರಮಾವ ಎಂ. ಎನ್. ಗೋಪಾಲರಾಯರು.

ಪ್ರಾಥಮಿಕ ಶಿಕ್ಷಣವನ್ನು ಹುಟ್ಟೂರು ಹಾಲ್ಕುರಿಕೆಯಲ್ಲಿ ಮಾಡಿದರು. ಪ್ರೌಢಶಿಕ್ಷಣವನ್ನು ತಿಪಟೂರಿನಲ್ಲಿ ಮುಗಿಸಿದರು. ಆ ಕಾಲಕ್ಕೆ ಇವರಿಗೆ ಒಳ್ಳೆಯ ಹುದ್ದೆ ಸರ್ಕಾರದ ಮಟ್ಟದಲ್ಲಿ ದೊರೆಯುವುದು ಸುಲಭದವಾದ ವಿಷಯವಾಗಿತ್ತು. ಆದರೆ ಸಂಗೀತ, ಕುಣಿತ ಕುಟುಂಬವಾಗಿ ಭಾಗವತ ಕುಟುಂಬ ಎಂಬ ಖ್ಯಾತಿ ಇದ್ದುದರಿಂದ ಇವರೂ ಮೂಡಲಪಾಯ ಯಕ್ಷಗಾನಕ್ಕೆ ತಮ್ಮನ್ನು ಅರ್ಥಪೂರ್ಣವಾಗಿ ಒಪ್ಪಿಸಿಕೊಂಡರು. ಕರಪಾಲಮೇಳ ಸಂಘಟಕರಾಗಿ ಮುಖ್ಯಪಾತ್ರದ ಕಲಾವಿದರಾಗಿ ಮಿಂಚಿದರು. ಮೃದಂಗ, ತಬಲಾವಾದಕರಾಗಿ, ಸಂಗೀತ ನಿರ್ದೇಶಕರಾಗಿಯೂ ಕೆಲಸ ಮಾಡಿದರು. ವಸ್ತ್ರಾಲಂಕಾರ ತಯಾರಿಕೆ, ವೇಷಭೂಷಣ ಕಲಾಕಾರರಾಗಿಯೂ ರಂಗಮಂಚದಲ್ಲಿ ದುಡಿದರು.

ಘೋರಪಾತ್ರಗಳಿಗೆ ಭಾವ ತುಂಬಿ ಅಭಿನಯಿಸುವ ಆಕರ್ಷಕ ಕಂಠ, ಅದಕ್ಕೊಪ್ಪುವ ಆಕರ್ಷಕ ದೇಹ, ಇವರದೇ ಆದ ವೃಕ್ಷಮೀಸೆ, ಹಾವಾಭಾವ ಯಾವುದೇ

ವೇಷವಿರಲಿ ಇವರನ್ನು ಎತ್ತರಕ್ಕೆ ಏರಿಸಿದ ವೇಷದಾರಿಕೆ, ಇವರಿಗೆ ಅಪಾರ ಕೀರ್ತಿ ತಂದುಕೊಟ್ಟಿದೆ. ಬ್ರಾಹ್ಮಣಗಿರಿಯ ಬೀಗುವ ಆಚೆನಿಂತು ಶೂದ್ರಾದಿಶೂದ್ರರಿಗೆ, ವರ್ಗ, ವರ್ಣಭೇದವರಿಯದೆ ಹಲವಾರು ದಲಿತ ಕೇರಿಗಳಲ್ಲಿ ಯಕ್ಷಗಾನ ಕಲಿಸಿದ, ಆಡಿಸಿದ ಹಿರಿಮೆ ಇವರದು.

ಯಕ್ಷಗಾನ ಲಯಬದ್ಧವಾಗದ ಹೆಚ್ಚುಗಾರಿಕೆ, ಎಲ್ಲೆಮೀರದ ಮಾತುಗಾರಿಕೆ, ಪಾತ್ರಕ್ಕೆ ಸಂದರ್ಭಕ್ಕೆ ತಕ್ಕ ಅಭಿನಯದ ಛಾಪು ಮೂಡಿಸಿ, ರಂಗಸ್ಥಳದಲ್ಲಿ ತಮ್ಮದೇ ಆದ ಅಭಿನಯದ ಮುದ್ರೆಯನ್ನು ಪ್ರೇಕ್ಷಕರ ಮನಸ್ಸಿನಲ್ಲಿ ಒತ್ತಿಬಿಡುವ ಅನನ್ಯ ಕಲಾವಿದ ಭಾಗವತರು.

೧೯೫೪ರಲ್ಲಿ ಲವಕುಶ ಎಂಬ ಯಕ್ಷಗಾನಕ್ಕೆ ಭಾಗವಂತಿಕೆಯ ಮೂಲಕ ರಂಗಪ್ರವೇಶಿಸಿದ ಇವರು ಈತನಕ ಕನಿಷ್ಠ ವರ್ಷಕ್ಕೆ ಒಂದನ್ನಾದರೂ ನಾಟಕ ಆಡಿಸಲೇಬೇಕು. ೧೯೭೭ ರಿಂದ ೧೯೯೮ ರವರೆಗೆ ಬೆಂಗಳೂರು ಆಕಾಶವಾಣಿ ಕೇಂದ್ರದಿಂದ ಸತತವಾಗಿ ಇವರ ಭಾಗವಂತಿಕೆಯ ಯಕ್ಷಗಾನ ಪ್ರಸಂಗಗಳು ಪ್ರಸಾರವಾಗಿವೆ. ಡಾ. ಜೀಶಂಪ ಅವರ ಪರಮಾಪ್ತ ಯಕ್ಷಗಾನ ಭಾಗವತರಾಗಿದ್ದ ಇವರು, ಇಲ್ಲಿನ ಮೂಡಲಪಾಯ ಯಕ್ಷಗಾನ ಕೇಂದ್ರದ ಸ್ಥಾಪಕರಲ್ಲಿ ಒಬ್ಬರು. ಈ ಕೇಂದ್ರದಲ್ಲಿ ಹದಿನೈದಕ್ಕೂ ಹೆಚ್ಚು ಯಕ್ಷಗಾನವನ್ನು ಪ್ರದರ್ಶಿಸಿದ್ದಾರೆ. ೧೯೭೯ರಲ್ಲಿ ಹೆಚ್. ಎಲ್. ನಾಗೇಗೌಡರ ನೇತೃತ್ವದಲ್ಲಿ ನಡೆದ ಯಕ್ಷಗಾನ ಪ್ರದರ್ಶನ ದಂಡಿನಶಿವರದಲ್ಲಿ ಸ್ಥಳೀಯ ಸಂಚಾಲಕರಾಗಿ, ಸಂಘಟಕ ಕಲಾವಿದರಾಗಿ ಕೆಲಸ ಮಾಡಿದ್ದಾರೆ. ೧೯೭೦ರಲ್ಲಿ ತರಳಬಾಳು ಹುಣ್ಣಿಮೆಯ ಕಾರ್ಯಕ್ರಮದಲ್ಲಿ ನಾಟಕ ಪ್ರದರ್ಶನ ಸಂಚಾಲಕರಾಗಿಯೂ ಕಾರ್ಯನಿರ್ವಹಣೆ. . ಇವರ ಯಕ್ಷಗಾನ ಮಾದರಿಯ ಹರಿಕಥೆಯನ್ನು ತುಮಕೂರು ಜಿಲ್ಲಾ ಸಾರ್ವಜನಿಕ ಶಿಕ್ಷಣ ಇಲಾಖೆ ಸರ್ವಶಿಕ್ಷಣ ಅಭಿಯಾನದಲ್ಲಿ ಸಂಪನ್ಮೂಲ ಕಲವಿದರನ್ನಾಗಿ ಬಳಸಿಕೊಂಡು ಕಲಾಪ್ರದರ್ಶನ ಏರ್ಪಡಿಸಿದೆ.

ರಾಜ್ಯ, ಜಿಲ್ಲಾ, ತಾಲೂಕು ಹೋಬಳಿ ಹಂತಗಳಲ್ಲಿ, ಇವರ ಕಲಾಹಿರಿಮೆಯಿಂದ ಗೌರವಿಸಲ್ಪಟ್ಟಿರುವ ಹಾಲ್ಕುರಿಕೆ ರಾಘವೇಂದ್ರರಾವ್, ತಮ್ಮ ೭೩ ವರ್ಷದಲ್ಲಿಯೂ ಯಕ್ಷಗಾನ ಕಲಾವಿದರಲ್ಲಿ, ಗ್ರಾಮದ ಯಜಮಾನರುಗಳಿಂದ, ಹಳ್ಳಿಯ ಜನಗಳಿಂದ ಅಪಾರ ಪ್ರೀತಿ ಗೌರವಗಳನ್ನು ಗಳಿಸಿರುವ ಸರಳ ಸಜ್ಜನಿಕೆಯ ನಿರಾಡಂಬರ ವ್ಯಕ್ತಿ. ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಚಿತ್ರದುರ್ಗ ಜಿಲ್ಲೆ ಸಾಣೆಹಳ್ಳಿಯಲ್ಲಿ ಏರ್ಪಡಿಸಿದ್ದ ಎರಡುದಿನಗಳ ಮೂಡಲಪಾಯ ಯಕ್ಷಗಾನ ಭಾಗವತರ ಸಮಾವೇಶದಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ಭಾಗವಹಿಸಿದ್ದರು.

**ಭಾಗವತ ರಾಘವೇಂದ್ರರಾವ್,**
**ಹಾಲ್ಕುರಿಕೆ ಅಂಚೆ, ತಿಪಟೂರು ತಾಲೂಕು.**

# ಕನ್ನಮೇಡಿ ನಂಜುಂಡಪ್ಪ

ಕರ್ನಾಟಕ, ಆಂಧ್ರಪ್ರದೇಶದ ಕೂಡುನೆಲ ಕನ್ನಮೇಡಿ. ತೆಲುಗು, ಕನ್ನಡ ಎರಡೂ ಭಾಷೆಗಳ ವ್ಯವಹಾರ. ಅತ್ತ ಅನಂತಪುರ, ಇತ್ತ ತುಮಕೂರು–ಚಿತ್ರದುರ್ಗ ಇಂಥ ನಡುಕು ಸೀಮೆಯ ಕನ್ನಮೇಡಿ ಪಾವಗಡ ತಾಲೂಕಿನ ಪುಟ್ಟ ಹಳ್ಳಿ. ದಿನಾಂಕ ೧–೬–೧೯೩೯ ರಂದು ಲಿಂಗಪ್ಪನವರಿಗೆ ಜನಿಸಿದರು. ಲಿಂಗಪ್ಪನವರದ್ದು ಯಕ್ಷಗಾನ ಪರಂಪರಾಗತ ಕುಟುಂಬ. ತಾತ ಕೆಂಚಪ್ಪನವರು ಯಕ್ಷಗಾನ ಭಾಗವತರೆಂಬ ಖ್ಯಾತಿ. ತಂದೆ ಲಿಂಗಪ್ಪನವರೂ ಯಕ್ಷಗಾನ ಭಾಗವತರು. ನಂಜುಂಡಪ್ಪನವರ ಐದನೇ ತರಗತಿಯ ತನಕ ಮಾತ್ರ ಓದಿದ್ದಾರೆ. ಆರ್ಥಿಕ ಕಡುಕಷ್ಟದ ಕುಟುಂಬ. ವ್ಯವಸಾಯಕ್ಕೆ ಬದಲಾಗಿ ಕಲೆಗಾಗಿ ಊರೂರು ಅಲೆಯುವ ತಂದೆ, ತಾತ. ಹಾಗಾಗಿ ಹೊಟ್ಟೆ ಬಟ್ಟೆಗೆ ಗೌಣವಾದ ದಿನಗಳಾದುದರಿಂದ ಬಾಲಕ ನಂಜುಂಡಪ್ಪ, ಕೂಲಿ ಕಸುಬಿನಿಂದಾಗಿ ಪ್ರಾಥಮಿಕ ಶಿಕ್ಷಣಕ್ಕೆ ಅಂತ್ಯ ಹಾಡಬೇಕಾಯಿತು. ಆದರೂ ತನ್ನೊಳಗಣ ಕಲಾಶ್ರೀ, ಈತನನ್ನು ಕೂಲಿ ಬದುಕಿನ ನಡುವೆಯೂ ಎಚ್ಚರಿಸಿತು. ತಂದೆಯೇ ಯಕ್ಷಗಾನ ಗುರುಗಳು. ಕನ್ನಮೇಡಿ, ಅಮರಾಪುರ, ಪರಶುರಾಮಪುರ, ಮಹದೇವಪುರ, ಮಧುಗಿರಿ, ಸಿರಾ, ಕೊರಟಗೆರೆಯಲ್ಲಿ ಯಕ್ಷಗಾನ ಕಲಿಸುತ್ತಿದ್ದಾಗ ಅವರೊಂದಿಗೆ ಹಿಮ್ಮೇಳ ಕಲಾವಿದರಾಗಿ ಭಾಗವಹಿಸುತ್ತಾ ಬಂದರು. ಲವಕುಶ, ಅಭಿಮನ್ಯು, ಚಿತ್ರಕೇತು ಮೊದಲಾದ ಬಾಲಪಾತ್ರಗಳ ಮೂಲಕ ರಂಗಪ್ರವೇಶ ಪಡೆದರು. ಅದರಲ್ಲಿಯೂ ಸೈ ಅನ್ನಿಸಿಕೊಂಡ ನಂಜುಂಡಪ್ಪ ತಾಳ ಹಿಡಿದು ಯಕ್ಷಗಾನ ಭಾಗವತರಾಗಿ ಸ್ವತಂತ್ರವಾಗಿ ಯಕ್ಷಗಾನ ಪ್ರದರ್ಶನ ನೀಡುತ್ತಾ ಬಂದರು. ತಮ್ಮ ೨೦ನೇ ವಯಸ್ಸಿನಿಂದ ಇಲ್ಲಿತನಕ ಅಂದರೆ ಸತತವಾಗಿ ೪೫ ವರ್ಷಗಳ ಕಾಲ ನಿರಂತರವಾಗಿ ಯಕ್ಷಗಾನ ಭಾಗವಂತಿಕೆಯನ್ನು ಮಾಡಿಕೊಂಡು ಬಂದಿರುವುದು ವಿಶೇಷವಾಗಿದೆ. ಹಾರ್ಮೋನಿಯಂ, ತಬಲಾ, ಮೃದಂಗ ವಾದಕರೂ ಆಗಿರುವ ಇವರು ಪೌರಾಣಿಕ ನಾಟಕಗಳಿಗೆ ರಂಗನಿರ್ದೇಶನವನ್ನೂ ಮಾಡುತ್ತಿದ್ದಾರೆ. ಕುರುಕ್ಷೇತ್ರ, ದಾನಶೂರ

ಕರ್ಣ ಮೊದಲಾದ ಪೌರಾಣಿಕ ನಾಟಕಗಳ ಸಮರ್ಥ ನಿರ್ದೇಶನ ಇವರಿಗೆ ಖ್ಯಾತಿ ತಂದುಕೊಟ್ಟಿದೆ. ಜನಪದ ಕೋಲಾಟ, ಭಾಗವಂತಿಕೆ ಪದಗಳ ಮೂಲಕ ಪಾವಗಡ ತಾಲೂಕಿನಾದ್ಯಂತ ಚಿರಪರಿಚಿತವಾಗಿರುವ ಹಿರಿಯ ಕಲಾವಿದರಾದ ನಂಜುಂಡಪ್ಪ, ದುಶ್ಯಾಸನ ಕಾಳಗ, ಕರಿಭಂಟ, ಲವಕುಶ, ವೀರ ಅಭಿಮನ್ಯು, ಚಿತ್ರಕೇತು ಮಹಾರಾಜ, ರಾಮಾಂಜನೇಯ ಯುದ್ಧ, ವಿರಾಟಪರ್ವ, ಇಂದ್ರಜಿತ್ ಕಾಳಗ, ಅಹಿರಾವಣ–ಮಹಿರಾವಣ ಮೊದಲಾದ ಯಕ್ಷಗಾನ ಪ್ರಸಂಗವನ್ನು ಪಾವಗಡ ತಾಲೂಕಿನ ಎಲ್ಲ ಗ್ರಾಮಗಳಲ್ಲಿ ಕಲಿಸಿದ್ದಾರೆ. ಜೊತೆಗೆ ಕೊರಟಗೆರೆ, ಸಿರಾ, ಮಧುಗಿರಿ ತಾಲೂಕುಗಳಲ್ಲಿಯೂ ಯಕ್ಷಗಾನ ಕಲಿಸಿದ್ದಾರೆ. ೭೦ರ ಅಂಚಿನಲ್ಲಿದ್ದರೂ ಬತ್ತದ ಉತ್ಸಾಹ, ಹಾಡುವ ವೈಖರಿ, ಸಂಭಾಷಣಾ ವಿಶಿಷ್ಟತೆ, ಆಕರ್ಷಕ ವ್ಯಕ್ತಿತ್ವ, ನಿಜವಾದ ಭಾಗವತ ಗೌರವಕ್ಕೆ ಪಾತ್ರರಾಗಿರುವುದು ಇವರ ಹೆಚ್ಚುಗಾರಿಕೆಯಾಗಿದೆ.

ಕೆ. ಎಲ್. ನಂಜುಂಡಪ್ಪ,
ಭಾಗವತರು,
ಕನ್ನಡಮೇಡಿ ಅಂಚೆ, ಪಾವಗಡ ತಾಲೂಕು.

## ಕರಿರಾಮನಹಳ್ಳಿ ಭಾಗವತ ಕಣುಮಣ್ಣ

ಶ್ರೀ ಭಾಗವತ ಕಣುಮಣ್ಣನವರು ಬರಗೂರು ಸಮೀಪದ ಕರೇರಾಮನ ಹಳ್ಳಿಯವರು. ಅಪ್ಪಟ ರೈತಾಪಿ ಕುಟುಂಬದ ಅಪ್ಪ, ಕೂಲಿ ಕಸುಬಿನ ಅಮ್ಮ. ಜೀತಕ್ಕಿರಬೇಕೆಂಬ ತಂದೆಯ ಒತ್ತಾಯ, ಶಾಲೆ ಕಲಿಯಬೇಕೆಂದು ತಾಯಿಯ ಬಯಕೆ. ಶಾಲೆ ಸಂಗೀತ ಆಲಯವಾದುದು ಕಣುಮಣ್ಣನವರ ವಿಶೇಷ. ೧೯೪೩ರಲ್ಲಿ ಜನಿಸಿದ ಕಣುಮಣ್ಣ, ಬರಗೂರಿನ ಕೂಲಿಮಠದಲ್ಲಿ ಅಕ್ಷರಭ್ಯಾಸ. ಕನ್ನಡ ಓದುಬರಹ ಮಾತ್ರ ಬಲ್ಲರು. ನಂತರ ಶಾಲೆ ಬಿಟ್ಟು ಅಪ್ಪನೊಂದಿಗೆ ಕೂಲಿ ಕಸುಬಿಗೆ ನೇಮಕ. ತನ್ನೂರಿನಲ್ಲಿ ರಾತ್ರಿಯಾದಂತೆ ನಡೆಯುತ್ತಿದ್ದ ಯಕ್ಷಗಾನ ಭಾಗವಂತಿಕೆಯ ಪದ, ನೃತ್ಯ ಬಾಲಕನನ್ನು ಅತೀವವಾಗಿ ಸೆಳೆಯಿತು. ರಾತ್ರಿಯೆಲ್ಲ ಯಕ್ಷಗಾನ ಕುಣಿತ ನೋಡುವುದು, ಹಗಲೆಲ್ಲ ಕೃಷಿ ಕೆಲಸ. ಆರಂಭದಲ್ಲಿ ಮಾಲೀಕರಿಂದ ಬೈಗುಳವೂ ಆಯಿತು. ನಿದ್ದೆಗೆಟ್ಟರೆ ಕೆಲಸ ನಡೆಯುವುದಿಲ್ಲ. ಕೆಲಸಕ್ಕೆ ಬರಬೇಡ ಅಂದೆಲ್ಲಾ ಬೆದರಿಕೆ. ಹೊಟ್ಟೆಪಾಡಿಗಾಗಿ ಕದ್ದು, ತಪ್ಪಿಸಿ ಯಕ್ಷಗಾನ ಕಲಿತರು.

ಹುಡುಗನ ಕಲೆಯ ಬಗೆಗಿನ ಆಸಕ್ತಿಯನ್ನು ಮೊದಲು ಗಮನಿಸಿದವರು ಇದೇ ಗ್ರಾಮದ ಕುಂಚಿಟಿಗ ಮತಸ್ಥರಾದ ಭಾಗವತ ನರಸಪ್ಪನವರು. ಹುಡುಗನಿಗೆ ಭಾಗವಂತಿಕೆ ಪದಗಳನ್ನು ಹೇಳಿಕೊಟ್ಟರಲ್ಲದೇ ಹಾಡುವುದಕ್ಕೆ ಪ್ರೋತ್ಸಾಹದಾಯಕವಾಗಿ ಹಿಮ್ಮೇಳ, ತಾಳ, ಮೃದಂಗ ಬಾರಿಸಿದರು. ಉಳಿದೆಲ್ಲ ಕಲಾವಿದರಿಗಿಂತ ತುಸು ಚೆನ್ನಾಗಿ ಹಾಡುತ್ತಿದ್ದ ಶಾರೀರಿಕ ಭಾವಗಳಿಂದ, ನರಸಪ್ಪನವರು ತಮ್ಮ ಮತ್ತು ಗಾಯನ ಕಲಿಯುತ್ತಿದ್ದ ಕಲಾವಿದರಿಗೆ ಬಾಲಕ ಕಣುಮಣ್ಣನವರ ಮಾದರಿ ತೋರಿಸುತ್ತಿದ್ದರು. ನಂತರ ಇದೇ ಗ್ರಾಮದ ವಾಲ್ಮೀಕಿ ಮತಸ್ಥರಾದ ದಾರಮಾದಣ್ಣನವರು ಇವರಿಗೆ ಯಕ್ಷಗಾನದ ವಿವಿಧ ಮಟ್ಟುಗಳನ್ನು, ಕುಣಿತದ ಒಂದೆರಡು ಮಾದರಿಗಳನ್ನು ಹೇಳಿಕೊಟ್ಟರು.

ಒಂದು ಹಂತಕ್ಕೆ ಬಂದ ಈ ಕಲಾವಿದರು ಮೊದಮೊದಲು ಯಕ್ಷಗಾನದಲ್ಲಿ ವೇಷಧಾರಿಗಳಾಗಿ ಕಾಣಿಸತೊಡಗಿದರು. ದುಶ್ಯಾಸನ ಕಥೆಯಲ್ಲಿ ದುಶ್ಯಾಸನನಾಗಿ, ಐರಾವತದಲ್ಲಿ ಭೀಮನಾಗಿ, ಪಂಚವಟಿ ರಾವಾಾಯಣದಲ್ಲಿ ರಾವಣನಾಗಿ ಅಭಿನಯಿಸಿದರು. ೧೯೬೭ ರಿಂದ ಸ್ವತಃ ಯಕ್ಷಗಾನ ಭಾಗವತರಾದರು. ಇವರು ಹೈದರಾಬಾದ್ ಪ್ರಾಂತ್ಯದ ಅನಂತಪುರ ಜಿಲ್ಲೆಯ ಮಡಕಶಿರಾ, ರೊಳ್ಳೆ, ಅಮರಾಪುರ ಇಲ್ಲಿ ಮೊದಲಿಗೆ ಯಕ್ಷಗಾನ ಕಲಿಸಿದರು. ಮಡಕರಶಿರಾ ತಾಲೂಕಿನ ರೊಳ್ಳೆ ಗ್ರಾಮದ ಭಾಗವತ ಚನ್ನಪ್ಪನವರು ತೆಲುಗು, ಕನ್ನಡ ಎರಡೂ ಭಾಷೆಗಳಲ್ಲಿ ಯಕ್ಷಗಾನ ಕಲಿಸುತ್ತಿರುದ್ದರಿಂದ ಆರಂಭದಲ್ಲಿ ಚನ್ನಪ್ಪನವರ ಸಹಾಯ ಪಡೆದರು.

ಲವಕುಶರ ಕಾಳಗ, ಶಶಿರೇಖೆ ಪರಿಣಯ, ವಿರಾಟಪರ್ವ, ಊರ್ವಶಿ ಶಾಪವಿಮೋಚನೆ, ಸೌಗಂಧಿಕಾ ಪುಷ್ಪಹರಣ ಈ ಯಕ್ಷಗಾನಗಳನ್ನು ಕರ್ನಾಟಕ ಆಂಧ್ರ ಗಡಿ ನೆಲದಲ್ಲಿ ಪ್ರಯೋಗಿಸಿ ಯಕ್ಷಗಾನದ ಕಂಪನ್ನು ಬೀರಿದರು. ಕರ್ನಾಟಕದ ಬರಗೂರು, ಪ. ನಾ. ಹಳ್ಳಿ, ಕರಿರಾಮನಹಳ್ಳಿ ಹಾಗೂ ಸಿರಾ ತಾಲೂಕಿನ ಬಹುತೇಕ ಹಳ್ಳಿಗಳಲ್ಲಿ ದುಶ್ಯಾಸನ ಕಥೆ, ಐರಾವತ, ರಾಮಾಂಜನೇಯ ಯುದ್ಧ, ರತಿಕಲ್ಯಾಣ, ಪಂಚವಟಿ ರಾಮಾಯಣ, ಶನಿಮಹಾತ್ಮೆ ಈ ಮೊದಲಾದ ಹತ್ತು ಯಕ್ಷಗಾನ ಪ್ರಸಂಗಗಳನ್ನು ಯಾವುದೇ ಹಸ್ತಪ್ರತಿಯ ನೆರವಿಲ್ಲದೆ ಕಲಿಸುವ ಸಾಮರ್ಥ್ಯ ಹೊಂದಿದ್ದಾರೆ.

ಕಣುಮಣ್ಣನವರಿಗೆ ಒಬ್ಬನೇ ಗಂಡುಮಗ. ಅವರು ಯಕ್ಷಗಾನ ಕಲಾವಿದ. ಹತ್ತಾರು ಯಕ್ಷಗಾನ ಪ್ರಸಂಗಗಳಿಗೆ ಘೋರಪಾತ್ರದ ಮೂಲಕ ಆಕರ್ಷಕ ಅಭಿನಯ ನೀಡಿದ್ದಾರೆ. ಹಿಮ್ಮೇಳ ಕಲಾವಿದ ರಾಗಿಯೂ ಭಾಗವಹಿಸುತ್ತಿದ್ದಾರೆ. ೭೦ ವಸಂತಗಳನ್ನು ಪೂರೈಸಿರುವ ಕಣ್ಣುಮಣ್ಣನವರಿಗೆ ಅನಾರೋಗ್ಯ, ಆರ್ಥಿಕ ದುಃಸ್ಥಿತಿಯ ನಡುವೆಯೂ ಸರ್ಕಾರದ ಯಾವುದೇ ಸಹಾಯಕ್ಕೆ ಪ್ರಯತ್ನಿಸದೆ, ಪ್ರತಿ ವರ್ಷವೂ ರಾಮಾನಂಜನೇಯ ಯುದ್ಧವನ್ನು ತಪ್ಪದೆ ಕಲಿಸುತ್ತಾ ಬರುತ್ತಿರುವುದು ಇವರ ವಿಶೇಷ.

ಭಾಗವತ ಕಣುಮಣ್ಣ,
ಕರಿರಾಮನಹಳ್ಳಿ, ಸಿರಾ ತಾಲೂಕು.

# ಭಾಗವತ ಚಂದಪ್ಪ

ತಂದೆ, ತಾತ ಹೀಗೆ ಮೂರು ತಲೆಮಾರುಗಳಿಂದಲೂ ಯಕ್ಷಗಾನ, ಸಾಮಗಾನ ಕಲೆಗಳಲ್ಲಿ ತಮ್ಮನ್ನು ಅರ್ಥಪೂರ್ಣವಾಗಿ ಒಪ್ಪಿಸಿಕೊಂಡು ಯಕ್ಷಗಾನ ಕಲೆಯನ್ನು ಸಮರ್ಥವಾಗಿ ಪ್ರಸಾರ ಮಾಡುತ್ತಿರುವ ಹಿರಿಯ ಕಲಾವಿದ ಭಾಗವತ ಚಂದಪ್ಪ ಹುಟ್ಟಿದ್ದು ೧೯೪೬ರಲ್ಲಿ. ಇರಕಸಂದ್ರ ಗ್ರಾಮದಲ್ಲಿ. ಗುಬ್ಬಿ ತಾಲೂಕು ಚೇಳೂರು ಹೋಬಳಿ ಇರಕಸಂದ್ರದ ಚಂದೇಲಿಂಗಪ್ಪ, ಚಂದಪ್ಪ ಹುಟ್ಟು ಕಲಾವಿದರು. ೬೦ ವರ್ಷಗಳ ಆಜುಬಾಜಿನಲ್ಲಿರುವ ಈ ಕಲಾವಿದ, ತಂದೆ ತಾಯಿ ಚಂದ್ರಲಿಂಗಪ್ಪನವರಿಂದ ಯಕ್ಷಗಾನ ಕಲೆ ವಂಶವಾಹಿನಿಯಾಗಿ ಬಂದಿದೆ. ಜೊತೆಗೆ ಯಕ್ಷಗಾನ ಹಾಗೂ ಹಾರ್ಮೋನಿಯಂ ಕಲೆಯನ್ನು ಶಾಸ್ತ್ರೀಯವಾಗಿ ಕಲಿಸಬೇಕೆಂಬ ತಂದೆ ಶಂಭಣ್ಣನವರ ಮಾತನ್ನು ಅಷ್ಟಾಗಿ ಕೇಳದ ಚಂದಪ್ಪ, ಜಾನಪದ ಪರಂಪರೆಯಂತೆ ತಮಗೆ ಬೇಕಾದಂತೆ, ಅನಿಸಿದಂತೆ ಕಲಿತವರು. ಕುಣಿತ, ಹಾಡು, ಮಾತುಗಾರಿಕೆಯಲ್ಲಿ ಹೊಸತನವಿದೆ. ಹಾಸ್ಯ ಪ್ರಜ್ಞೆಯನ್ನು ರಸಪ್ರಜ್ಞೆಯನ್ನಾಗಿ ರೂಡಿಸಿಕೊಂಡಿರುವ ಸಿದ್ಧಲಿಂಗಯ್ಯ ವಿಶೇಷವಾಗಿ ಹಾಸ್ಯ ಪ್ರಸಂಗಕ್ಕೆ ಏಳೂರುಗಳಲ್ಲಿ ಹೆಸರುವಾಸಿಯಾಗಿದ್ದಾರೆ.

ಚೇಳೂರು ಹೋಬಳಿಯ ಯಾವುದೇ ಗ್ರಾಮವಿರಲಿ, ಅಲ್ಲಿ ಯಕ್ಷಗಾನ, ಸಾಮನಾಗ ನಡೆದರೆ ಚಂದಪ್ಪ ತಪ್ಪದೆ ಹಾಜರಿರುತ್ತಾರೆ. ಹಾಸ್ಯ ಸಂದರ್ಭವನ್ನು ಸೃಷ್ಟಿಸಿ, ನಿದ್ರೆಯ ಮಂಪರಿಗೆ ಜಾರಿದ ಪ್ರೇಕ್ಷಕ ವರ್ಗವನ್ನು ನೇರ ಹಾಸ್ಯಗಳ ಮೂಲಕ ಪ್ರೇಕ್ಷಕರಲ್ಲಿ ರಸೋಲ್ಲಾಸ ಮೂಡಿಸುವುದು ಇವರ ಪ್ರಮುಖ ಕೆಲಸ. ಹಾಗಾಗಿ ನಾಟಕದ ಮಧ್ಯ ಚಂದಪ್ಪನವರ ಪ್ರವೇಶ ಇರಲೇಬೇಕು.

ಇವರು ಮಾಡುವ ಹಾಸ್ಯಪ್ರಸಂಗದ ಒಂದು ನೋಟವನ್ನು ಹೀಗೆ ಕಟ್ಟಿಕೊಡಬಹುದು.

ಬೀದಿಲಿ ಮಾರೋದ ಬೀಡಿ
ಅಲ್ಲೊಬ್ಬಳು ಕುಂತಾಳೆ ಬೋಡಿ
ಆ ಬೋಡಿಗೂ ನನಗೂ ಜೋಡಿ

ಹೀಗೆ ಸಂದರ್ಭಗಳನ್ನು ಸಮರ್ಥವಾಗಿ ಕಟ್ಟಿಕೊಡುತ್ತಾ ಜನಾಂತರಾಳದಲ್ಲಿ ಬಹಳ ಕಾಲದವರೆಗೆ ನಿರಂತರವಾಗಿ ಉಳಿಯಬಲ್ಲ ಅಪೂರ್ವ ಕಲಾವಿದ.

ಚಂದಪ್ಪನವರು ಎಸ್‌ಎಸ್‌ಎಲ್‌ಸಿಯ ತನಕ ವಿದ್ಯಾಭ್ಯಾಸ ಮಾಡಿದ್ದಾರೆ. ಯಕ್ಷಗಾನದಲ್ಲಿ ನೂರಕ್ಕೂ ಹೆಚ್ಚು ಬಾರಿ ರಾಮ, ಕೃಷ್ಣ, ಅಭಿಮನ್ಯು, ಅರ್ಜುನ, ಕರ್ಣ ಈ ತರಹದ ಪಾತ್ರಗಳ ಮೂಲಕ ಉತ್ತಮ ಕಲಾವಿದರಾಗಿ ರೂಪುಗೊಂಡವರು. ಗಜಗೌರಿವ್ರತದ ಅರ್ಜುನ ಪಾತ್ರದ ಅಭಿನಯ ಇವರ ಖ್ಯಾತಿಯನ್ನು ಹೆಚ್ಚಿಸಿದೆ. ದೇವೇಂದ್ರ ಲೋಕದಿಂದ ಆನೆಯನ್ನು ತಂದು (ಐರಾವತ) ತಾಯಿ ಕುಂತಿದೇವಿಗೆ ಗಜಗೌರಿ ವ್ರತಕ್ಕೆ ಪ್ರೇರಕವಾಗುವ ದೃಶ್ಯದ ಚಿತ್ರಣ, ಈ ಸಂದರ್ಭದಲ್ಲಿ ಸ್ಟೇಜಿನ ಮೇಲೆ ಸ್ಟೇಜ್ ಸೃಷ್ಟಿಸುವ ಚಿತ್ರಣ, ಮೇಲಿನ ಸ್ಟೇಜಿನಿಂದ ಕೆಳಗಿನ ಸ್ಟೇಜಿಗೆ ನೆಗೆಯುವ ರೀತಿ ನಿಜಕ್ಕೂ ಅದ್ಭುತ ಸಂದರ್ಭ.

ದುಶ್ಯಾಸನನ ಕಥೆ, ದಶಕಂಠ ರಾಮಾಯಣ, ಲಂಕಾದಹನ, ಸೀತಾ ಪರಿತ್ಯಾಗ, ದಕ್ಷಯಾಗ ಇವರು ಭಾಗವಂತಿಕೆ ಮಾಡಿರುವ ಪ್ರಸಂಗಗಳು. ಯಾವುದೇ ಪ್ರಚಾರ, ತೋರಿಕೆ, ಪ್ರಶಸ್ತಿಯ ಬಗೆಗೆ ಅರಿವೇ ಇಲ್ಲದಂತೆ ತನ್ನ ಪಾಡಿಗೆ ತಾನು ಕಲಾ ಬದುಕನ್ನು ಸವೆಸುವ, ಇರಕಸಂದ್ರ ಸಿದ್ದಲಿಂಗಯ್ಯ ಇದೀಗ ಊರುಬಿಟ್ಟು ತೋಟದ ಮನೆ, ಇರಕಸಂದ್ರದ ಮಜರೆ ತಿಮ್ಮಣ್ಣನಪಾಳ್ಯದ ತೋಟದ ಮನೆಯಲ್ಲಿ ವಾಸಿಸುತ್ತಿದ್ದಾರೆ.

**ಭಾಗವತ ಚಂದಪ್ಪ ತಂದೆ ಚಂದ್ರೇಲಿಂಗಪ್ಪ,**
**ಇರಕಸಂದ್ರ ತೋಟದಮನೆ,**
**ಚೇಳೂರು ಮಾರ್ಗ, ಗುಬ್ಬಿ ತಾಲೂಕು.**

## ಪಟೇಲ್ ಕೆಂಪೇಗೌಡ

ಸೋಮನಕುಣಿತ ಕಲೆಯನ್ನು ರಾಷ್ಟ್ರವ್ಯಾಪಿ ಮೆರೆಸಿದ, ಆ ಮೂಲಕ ಈ ಕಲೆಗೆ, ಕಲಾವಿದರಿಗೆ ಹಳ್ಳಿಯ ಅಂಗಳದಿಂದ ನಗರದ ಭವ್ಯ ಕಲಾಮಂದಿರಗಳ ಕಲಾ ಪ್ರದರ್ಶನ, ವಿಶ್ವವಿದ್ಯಾಲಯಗಳಲ್ಲಿ ಅಧ್ಯಯನ, ಚರ್ಚೆಗೆ ಒಳಗು ಮಾಡಿದ ಮೊದಲ ಕಲಾವಿದ ಖ್ಯಾತಿ ಪಟೇಲ್ ಕೆಂಪೇಗೌಡ ಅವರದು.

ತುರುವೇಕೆರೆ ತಾಲೂಕು ದೊಡ್ಡೇನಹಳ್ಳಿ ಇವರ ಜನ್ಮಸ್ಥಳ. ಬೇಡ ಜನಾಂಗಕ್ಕೆ ಸೇರಿದವರು. ತಂದೆ ಕೆಂಪಯ್ಯ, ತಾಯಿ ಕೆಂಪಮ್ಮ. ದಂಡಿನಶಿವರದ ಕೆಂಪಮ್ಮ ದೇವಿಯ ಪರಂಪರೆಯ ಭಕ್ತರು ಹಾಗೂ ಗುಡಿಗಾರರು. ಕೆಂಪಮ್ಮ ಜಾತ್ರೆಯ ಪ್ರಮುಖ ಜನಪದ ಕಲೆಯಾದ ಸೋಮನಕುಣಿತವನ್ನು ಪರಂಪರಾಗತವಾಗಿ ಕುಣಿಸುತ್ತಾ, ದೈವಸಂಬಂಧಿ ಕುಣಿತವೆಂದೇ ಪವಿತ್ರ ಭಾವನೆಯಿಂದ ನಡೆದುಕೊಳ್ಳುತ್ತಾ ಬಂದರು. ಜೀಶಂಪ, ಹೆಚ್. ಎಲ್. ನಾಗೇಗೌಡರ ಸಂಪರ್ಕ, ಸಹವಾಸ ಪ್ರಯತ್ನವಾಗಿ ಸೋಮನ ಕುಣಿತವನ್ನು ಒಂದು ಶ್ರೇಷ್ಠ ಪ್ರದರ್ಶನಾತ್ಮಕ ಕಲೆಯನ್ನಾಗಿ ರೂಪಿಸಲು ಪ್ರೇರಕವಾಯಿತು. ೧೯೮೬ರ ನವೆಂಬರ್ ತಿಂಗಳಲ್ಲಿ ಬಾಂಬೆಯಲ್ಲಿ ನಡೆದ ರಾಷ್ಟ್ರೀಯ ಕಲೋತ್ಸವದಲ್ಲಿ ಕೆಂಪೇಗೌಡರ ತಂಡ ಭಾಗವಹಿಸಿದ್ದರು. ದೆಹಲಿ, ಮದ್ರಾಸ್, ಕೇರಳ, ಹೈದರಾಬಾದ್ ಈ ಮೊದಲಾದ ಕಡೆಗಳಲ್ಲಿ ಕಲಾ ಪ್ರದರ್ಶನ ನೀಡಿದ್ದರು.

ಕೆಂಪೇಗೌಡ ಅತ್ಯುತ್ತುಮ ಯಕ್ಷಗಾನ ಕಲಾವಿದರೂ ಹೌದು. ತಮ್ಮ ಅಪೂರ್ವ ಸ್ತ್ರೀಪಾತ್ರಗಳ ಅಭಿನಯದಿಂದಾಗಿ ತುರುವೇಕೆರೆ ತಾಲೂಕಿನಲ್ಲಿ ಮನೆಮಾತಾದವರು. ತಮ್ಮ ಪೂರ್ವಿಕರ ಕಾಲದಿಂದಲೂ ಯಕ್ಷಗಾನ ಕಲಾವಿದರಾಗಿ ವೇಷ ಹಾಕಿಕೊಂಡುಬಂದವರು. ಆದಿಶಕ್ತಿ, ದ್ರೌಪದಿ, ಗಾಂಧಾರಿ, ರುಕ್ಮಿಣಿ, ಸೀತೆ ಈ ಪಾತ್ರಗಳಲ್ಲಿ ರೋಚಕ ಅಭಿನಯ ನೀಡಿದರು. ದಂಡಿನಶಿವರಕ್ಕೆ ...ಡಿನೊಂದಿಗೆ ಬಂದು ಇಲ್ಲಿನ

ಕಲೆ, ಸಾಹಿತ್ಯ ಕಲಿತು, ಪಾಂಡಿತ್ಯ ಪಡೆದ ಹಿರಿಯ ವಿದ್ವಾಂಸ ಹೀರಾ ಸಿಂಗ್ ಅವರೊಂದಿಗೆ ನಿಕಟ ಸಂಪರ್ಕ ಹೊಂದಿದ್ದ ಕೆಂಪೇಗೌಡರು ಉತ್ತಮ ಭಾಗವತರಾಗಲು ಪ್ರೇರಕವೂ ಆದದ್ದು ವಿಶೇಷ. ಹೀರಾಸಿಂಗ್ ಬಗೆಗೆ ಅಪಾರ ಗೌರವ, ಗುರುಸ್ಥಾನವವಾನ ಹೊಂದಿದ್ದವರು.

ಕೊನೆಹಳ್ಳಿಯ ಮೂಡಲಪಾಯ ಯಕ್ಷಗಾನ ಕೇಂದ್ರ ರೂಪುಗೊಳ್ಳಲು ಪ್ರೇರಕವಾದವರಲ್ಲಿ ಕೆಂಪೇಗೌಡರೂ ಒಬ್ಬರು. ಕರ್ನಾಟಕದಲ್ಲಿ ಮೊದಲು ಮೂಡಲಪಾಯ ಯಕ್ಷಗಾನ ಕೇಂದ್ರ ಆರಂಭವಾದದ್ದು, ಆ ಕೇಂದ್ರದ ಮೂಲಕ ಮೂಡಲಪಾಯ ಯಕ್ಷಗಾನ ಕಮ್ಮಟ, ವಿಚಾರ ಸಂಕಿರಣ ಮೊದಲಾದ ಕಾರ್ಯಕ್ರಮ ಯಕ್ಷಗಾನದ ಬಗೆಗೆ ನಡೆಯಲು ಇವರ ಭಾಗವಂತಿಕೆಯ ಪಾತ್ರ ಕಾರಣವಾಯಿತು. ಚರ್ಚೆ, ಮಾಹಿತಿ, ಸಂಪನ್ಮೂಲ, ವಿದ್ವತ್‌ಗಳಿಂದ ಅಪಾರ ಕಾಳಜಿಯನ್ನು ಮೂಡಲಪಾಯದ ಬಗೆಗೆ ಹೊಂದಿದ್ದ ಕೆಂಪೇಗೌಡ ಅವರ ಮಗ ಕೆಂಪರಾಜು ಕೂಡ ಸೋಮನಕುಣಿತ ಕಲಾವಿದರಾಗಿ ಕಾರ್ಯನಿರ್ವನಿಸುತ್ತಿರುವುದು ಕಲಾಲೋಕದ ಸಾಧನೆಯಾಗಿದೆ. ಕೆಂಪೇಗೌಡರ ಅಪೂರ್ವ ಕಲೆಯನ್ನು ಗಮನಿಸಿ ಕರ್ನಾಟಕ ಜನಾಪದ ಮತ್ತು ಯಕ್ಷಗಾನ ಅಕಾಡೆಮಿ ೧೯೮೬ರಲ್ಲಿ ಜಾನಪದ ಕಲಾಪ್ರಶಸ್ತಿ ನೀಡಿ. ಗೌರವಿಸಿದೆ.

ದಿ॥ ಪಟೇಲ್ ಕೆಂಪೇಗೌಡ,
ಸೋಮನ ಕುಣಿತ ಕಲಾವಿದರು,
ದೊಡ್ಡೇನಹಳ್ಳಿ ತುರುವೇಕೆರೆ ತಾಲೂಕು.

# ಸೋಮನಕುಣಿತದ ಲಕ್ಕಣ್ಣ

ತುಮಕೂರು, ಮಂಡ್ಯ, ಚಿತ್ರದುರ್ಗ ಈ ಜಿಲ್ಲೆಗಳಲ್ಲಿ ವ್ಯಾಪಕವಾಗಿ ಬಳಕೆಯಲ್ಲಿರುವ ಸೋಮನಕುಣಿತ ಕಲೆ, ಒಂದು ರೋಚಕ ಕಲಾ ಪ್ರಕಾರ. ಮೂಲತಃ ದೈವೀಶಕ್ತಿಯ ಆರಾಧನೆಯ ಹಿನ್ನೆಲೆಯಲ್ಲಿ ರೂಪುಗೊಂಡ ಕಲೆ. ಗ್ರಾಮದೇವತೆಯೊಂದಿಗೆ ಅವಿಭಾಜ್ಯವಾಗಿ ಬೆಸಗೊಂಡು ಗ್ರಾಮದೇವತೆಯ ಉತ್ಸವದ ತುಂಬಾ ರಂಜನೀಯ ಕುಣಿತವಾಗಿ, ಗ್ರಾಮದೇವತೆಯ ಅಂಗರಕ್ಷಕನೆಂದೇ ಕರೆಸಿಕೊಂಡು ಜಾತ್ರೆ, ಉತ್ಸವಗಳಲ್ಲಿ ಪ್ರಧಾನ ಆಕರ್ಷಣೆಯಾಗುವುದು ಸೋಮನ ಕುಣಿತ. ಗ್ರಾಮದೇವತೆಗಳಿಗೆ ಸಾಮಾನ್ಯವಾಗಿ ಎರಡು ಸೋಮಗಳಿದ್ದು ಕೆಂಪುಸೋಮ, ಹಳದಿ ಸೋಮನೆಂದು ಕರೆಯಲಾಗುತ್ತದೆ ಜನಪದರು ಇವುಗಳನ್ನು ಕೆಂಚರಾಯ ಮತ್ತು ಕೆಂಪರಾಯನೆಂದೇ ಕರೆಯುತ್ತಾರೆ.

ಸೋಮನಕುಣಿತದ ಕಲೆಗೆ ಅರ್ಥವಂತಿಕೆಯನ್ನು ತಂದವರು ಹಿರಿಯ ಕಲಾವಿದ ತುರುವೇಕೆರೆ ತಾಲೂಕು ಹರೇಗೊಂಡನಹಳ್ಳಿಯ ಶ್ರೀ ಲಕ್ಕಣ್ಣನವರು. ಮೀಸೆ ಲಕ್ಕಣ್ಣನೆಂದೇ ಖ್ಯಾತರಾಗಿರುವ ಈ ಕಲಾವಿದ ಸೋಮನ ಕುಣಿತವನ್ನು ರಂಗೇರಿಸುವ, ಅದ್ಭುತ ಲೋಕ ಸೃಷ್ಟಿಸುವ ಹಿರಿಯ ಕಲಾವಿದ. ೭೦ ವರ್ಷ ವಯಸ್ಸಿನ ಈ ಕಲಾವಿದ ಕಲೆಯನ್ನು ಕಲಿತದ್ದು ಕೆಂಪೇಗೌಡನೆಂಬ ದೊಡ್ಡೇನಹಳ್ಳಿಯ ನಾಯಕ ಜನಾಂಗದ ಕಲಾವಿದನಿಂದ.

ಗ್ರಾಮದೇವತೆ ಕೆಂಪಮ್ಮನ ಪೂಜಾರಿಯೂ ಆಗಿದ್ದ ದಿ|| ಕೆಂಪೇಗೌಡ ಸೋಮನ ಕುಣಿತದ ಮೇಷ್ಟು. ಜೀಶಂಪ, ಡಾ. ಹೆಚ್. ಎಲ್. ನಾಗೇಗೌಡ ಈ ಮುಂತಾದ ಹಿರಿಯ ಜಾನಪದ ವಿದ್ವಾಂಸರ ಮುಂದೆ ಸೋಮನ ಕುಣಿತ ಪ್ರದರ್ಶಿಸಿದ ವಿವಿಧ ವಾದ್ಯಗಳ ತಾಳ, ಲಯಕ್ಕೆ ತಕ್ಕಂತೆ ಹಾವಭಾವ ಪ್ರದರ್ಶಿಸುವ ಮೂಲಕ ಸೋಮನಕುಣಿತ ಕಲೆಗೆ ಹೊಸ ಆಯಾಮ ನೀಡಿದವರು. ಇವರ ಪ್ರೀತಿಯ ಶಿಷ್ಯನಾದ ಲಕ್ಕಣ್ಣ ಗುರುವನ್ನು ಮೀರಿಸಿದ ಹಿರಿಮೆಗೆ ಪಾತ್ರರಾದವರು. ತಮ್ಮ ಅಪೂರ್ವ ಕಲಾ ಪ್ರದರ್ಶನಗಳಿಂದಾಗಿ, ದೇಶವಿದೇಶ ಸುತ್ತಿದ ಹಿರಿಯ ಸಾಧಕರು.

ಲಕ್ಕಣ್ಣ ಹುಟ್ಟಿದ್ದು ೧೯೩೦ರಲ್ಲಿ. ತಂದೆ ಶ್ರೀ ಕಂದಿರೆಕಯ್ಯ, ತಾಯಿ ನಿಂಗಮ್ಮ. ಇವರಿಗೆ ಹುಟ್ಟಿದ ಇಬ್ಬರು ಮಕ್ಕಳಲ್ಲಿ ಲಕ್ಕಣ್ಣ ಗಂಡುಮಗ, ಇನ್ನೊಬ್ಬಳು ತಂಗಿ. ಈಕೆಯೂ ಸೋಬಾನ, ದೇವರ ಕರೆವ ಹಾಡುಗಳ ಶ್ರೀಮಂತ ಗಾಯಕಿ. ಕಳೆದ ೩೦ ವರ್ಷಗಳಿಂದ ಸೋಮನಕುಣಿತ ಕಲೆಯನ್ನು ಒಂದು ವ್ರತವನ್ನಾಗಿ ಸ್ವೀಕರಿಸಿರುವ ಲಕ್ಕಣ್ಣ, ಹವ್ಯಾಸಿ ಕಲಾವಿದ. ಇರುವ ೩ ಎಕರೆ ಒಣಭೂಮಿಯಲ್ಲಿ ವ್ಯವಸಾಯ ಮಾಡುತ್ತಾ ಸರ್ಕಾರದ ವಿವಿಧ ಅಕಾಡೆಮಿಗಳ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಆಹ್ವಾನಿತ ಕಲಾವಿದರಾಗಿ ಕಲಾಪ್ರದರ್ಶನ ನೀಡುತ್ತಾ ಬರುತ್ತಿದ್ದಾರೆ.

ಲಕ್ಕಣ್ಣನವರ ಕಲಾಸಾಧನೆ ಅಪಾರವಾದುದು. ಜೀಶಂಪ ಅವರ ಪ್ರೀತಿಯ ಕಲಾವಿದರಾಗಿರುವ ಇವರು, ಮೈಸೂರು ವಿಶ್ವವಿದ್ಯಾಲಯದ ಜಾನಪದ ಎಂ. ಎ. ವಿದ್ಯಾರ್ಥಿಗಳಿಗೆ ಸೋಮನ ಕುಣಿತ ಮಟ್ಟುಗಳನ್ನು ಹೇಳಿಕೊಟ್ಟಿರುವುದಲ್ಲದೆ, ಸೋಮನ ಕುಣಿತ ಕಲೆಯನ್ನು ಪರಿಚಯ ಮಾಡಿಸಿದ ಹಿರಿಮೆಗೆ ಪಾತ್ರರಾಗಿದ್ದಾರೆ. ಸೋಮನ ಕುಣಿತವೆಂದರೆ ಮೀಸೆ ಲಕ್ಕಣ್ಣ, ಲಕ್ಕಣ್ಣನೆಂದರೆ ಸೋಮನ ಕುಣಿತವೆಂದು ಕಲಾವಿದರು, ಕಲಾಸಕ್ತರು, ವಿದ್ವಾಂಸರು ಪರಿಭಾವಿಸುವಷ್ಟರ ಮಟ್ಟಿಗೆ ಇವರ ಕೀರ್ತಿ ಹಬ್ಬಿದೆ.

ಸೋಮನ ಕುಣಿತದ ಜೊತೆಗೆ ಸೋಮನನ್ನು ಆಡಿಸುವುದು ಒಂದು ಅದ್ಭುತ ಕಲೆ. ಸೋಮನನ್ನು ಕೆಣಕುವ, ಕೋಪಿಸುವಂತೆ ಮಾಡಿ, ಚಾಟಿ ಹೊಡೆದುಕೊಳ್ಳುವ, ನಾನಾ ತಂತ್ರಗಾರಿಕೆಯಿಂದ ಪ್ರೇಕ್ಷಕರಿಂದ ಅಪಾರ ಮೆಚ್ಚುಗೆಗೆ ಪಾತ್ರರಾಗಿರುವುದು ಇವರ ವಿಶೇಷವಾಗಿದೆ. ಜೀಶಂಪ, ಎಚ್. ಎಲ್. ನಾಗೇಗೌಡ ಅವರಿಂದಾಗಿ ವ್ಯಾಪಕ ಪ್ರಮಾಣದಲ್ಲಿ ಸೋಮನ ಕುಣಿತ ಕಲಾ ಪ್ರದರ್ಶನ ನೀಡಿರುವ ಈ ಹಿರಿಯ ಕಲಾವಿದ, ಕರ್ನಾಟಕ ಸರ್ಕಾರದ ಸಾಂಸ್ಕೃತಿಕ ವಿನಿಮಯ ಯೋಜನೆಯ ಅಡಿಯಲ್ಲಿ ಹಿಮಾಚಲ ಪ್ರದೇಶ, ದೆಹಲಿ, ಕೇರಳ ಈ ರಾಜ್ಯಗಳಲ್ಲಿ ಸೋಮನ ಕುಣಿತ ಕಲೆಯನ್ನು ಪ್ರದರ್ಶಿಸಿದ್ದಾರೆ. ದೆಹಲಿಯಲ್ಲಿ ಎರಡು ಬಾರಿ ಕಾರ್ಯಕ್ರಮ ನೀಡಿರುವುದರ ಜೊತೆಗೆ ೨೦೦೭ನೇ ಸಾಲಿನಲ್ಲಿ ಸುವರ್ಣ ಕರ್ನಾಟಕ ಜಾನಪದ ಕಲೋತ್ಸವ ದಿನಾಂಕ ೨೧, ೨೨ನೇ ಜುಲೈ, ೨೦೦೭ರಂದು ಎರಡು ದಿನಗಳ ಕಾಲ ದೆಹಲಿಯಲ್ಲಿ ನಡೆದ ಸಾಂಸ್ಕೃತಿಕ ಉತ್ಸವದಲ್ಲಿ ಸೋಮನ ಕುಣಿತ ಕಲೆಯನ್ನು ಪ್ರದರ್ಶಿಸಿದ್ದಾರೆ. ದೆಹಲಿಯ ಜೆ. ಎನ್. ಯು ಕರ್ನಾಟಕ ಸಂಘದ ಶಾಲಾ ಆವರಣ ಹಾಗೂ ವಿವಿಧ ಕಲಾ ಸಂಘಗಳ ವೇದಿಕೆಯಲ್ಲಿ ಎರಡು ದಿನಗಳ ಕಾಲ ಆಕರ್ಷಕ ಕಲಾ ಪ್ರದರ್ಶನ ನೀಡಿದ್ದಾರೆ. ಇದಲ್ಲದೆ ಮೈಸೂರಿನ ದಸರಾ ಉತ್ಸವ, ಹಂಪಿ ಉತ್ಸವ, ಪಟ್ಟದಕಲ್ಲು ಉತ್ಸವ, ಕರಾವಳಿ ಉತ್ಸವ, ಮಂಗಳೂರು ಈ ವಿಶೇಷ ಸಾಂಸ್ಕೃತಿಕ ಸಮಾರಂಭಗಳಲ್ಲಿ ಆಹ್ವಾನಿತ ಕಲಾವಿದರಾಗಿ ಸೋಮನ ಕುಣಿತ ಕಲೆಗೆ ಮಹತ್ವ ತಂದಿರುವ ಹೆಮ್ಮೆಯ ಕಲಾವಿದರು. ಇವರೊಂದಿಗೆ ದೊಡ್ಡೇನಹಳ್ಳಿಯ ಕೆಂಪರಾಜು ಎಂಬ ಬೇಡ ಜನಾಂಗದ ಇನ್ನೊಬ್ಬ ತರುಣ ಕಲಾವಿದನೊಂದಿಗೆ, ಸೋಮನ ಕುಣಿತವನ್ನು ನಾಡಿನಾದ್ಯಂತ ಪ್ರದರ್ಶಿಸಿರುವ ಲಕ್ಕಣ್ಣ ಗ್ರಾಮದೇವತೆ ಕೆಂಪಮ್ಮ ಮೊದಲಾದ ಶಕ್ತಿದೇವತೆಯನ್ನು ಕುರಿತು ಪದ ಹೇಳುವುದರಲ್ಲಿಯೂ ಪರಿಣಿತರು.

**ಸೋಮನ ಕಲೆ ಲಕ್ಕಣ್ಣ, ಹರೆಗೊಂಡನಹಳ್ಳಿ, ತುರುವೇಕೆರೆ ತಾಲೂಕು.**

## ಡಿ. ಎಸ್. ಗಂಗಾಧರಗೌಡ

ತುಮಕೂರು ಜಿಲ್ಲೆಯಲ್ಲಿ ಅತ್ಯಂತ ಜನಪ್ರಿಯ ಪ್ರಚಾರ ಕಲಾ ಮಾಧ್ಯಮ ಸೋಮನ ಕುಣಿತ. ಈ ಕಲೆ ಇತ್ತೀಚಿನ ದಿನಗಳಲ್ಲಿ ಇಲ್ಲವಾಗುತ್ತಿದೆ. ಇದ್ದರೂ ವ್ಯಾಪಾರೀಕರಣವಾಗುತ್ತಿದೆ. ಇಂಥ ಕಲೆಯ ಸಮರ್ಥ ಸಂಘಟನೆಗೆ ಒತ್ತು ನೀಡುವುದರ ಮೂಲಕ ಸುವರ್ಣ ಕರ್ನಾಟಕ ಕನ್ನಡ ರಾಜ್ಯೋತ್ಸವ ಪ್ರಶಸ್ತಿಯ ಪುರಸ್ಕಾರಕ್ಕೆ ಪಾತ್ರರಾದವರು ದಂಡಿನಶಿವರದ ಶ್ರೀ ಗಂಗಾಧರಗೌಡ ಅವರು.

೧೯೪೪ನೇ ಅಕ್ಟೋಬರ್ ೧೯ರಂದು ತುಮಕೂರು ಜಿಲ್ಲೆಯ ತುರುವೇಕೆರೆ ತಾಲೂಕಿನ ದಂಡಿನಶಿವರದಲ್ಲಿ ಜನನ. ತಂದೆ ಕೃಷಿಕಾಯಕದ ಡಿ. ಬಿ. ಸಣ್ಣನಂಜೇಗೌಡ, ತಾಯಿ ಮಾಯಮ್ಮನವರು. ಬಿ. ಎ. ಪದವೀಧರರೂ ಆಗಿರುವ ಡಿ. ಎಸ್. ಗಂಗಾಧರಗೌಡ ಅವರು ಕ್ರೀಡೆ, ಸಾಹಿತ್ಯ, ಜಾನಪದ, ಕೃಷಿ, ವಾಣಿಜ್ಯ ವ್ಯವಹಾರ, ರಾಜಕಾರಣ ಹೀಗೆ ಹಲವು ಕ್ಷೇತ್ರಗಳಲ್ಲಿ ತೊಡಗಿಸಿಕೊಂಡಿರುವುದು ಇವರ ವಿಶೇಷ. ಉತ್ತಮ ಸಂಘಟಕರೂ ಆಗಿರುವ ಗೌಡರು ತುರುವೇಕೆರೆ ತಾಲೂಕು ಪಂಚಾಯತಿ ಸದಸ್ಯರಾಗಿ ದಂಡಿನಶಿವರದ ಹಾಲು ಉತ್ಪಾದಕರ ಸಂಘದ ಅಧ್ಯಕ್ಷರಾಗಿ ಹಾಗೂ ರಾಜ್ಯ ಪರಿಸರ ಮಾಲಿನ್ಯ ಮಂಡಳಿ ಸದಸ್ಯರಾಗಿ ಸೇವೆ. ಸಧ್ಯ ತುಮಕೂರಿನ ಕುವೆಂಪು ವಿದ್ಯಾಸಂಸ್ಥೆಯ ಅಧ್ಯಕ್ಷರಗಿ ಸೇವೆ ಸಲ್ಲಿಸುತ್ತಿದ್ದಾರೆ. ಉತ್ತಮ ವಾಲಿಬಾಲ್ ಆಟಗಾರರೂ ಆಗಿರುವ ಇವರು ರಾಜ್ಯಮಟ್ಟದ ವಾಲಿಬಾಲ್ ಆಟಗಾರರಾಗಿ ನಾಲ್ಕು ರಾಜ್ಯವನ್ನು ಪ್ರತಿನಿಧಿಸಿದ್ದಾರೆ. ರಾಷ್ಟ್ರೀಯ ಹಿರಿಯ ವಾಲಿಬಾಲ್ ವಿಭಾಗವನ್ನು ೨ ಬಾರಿ ಪ್ರತಿನಿಧಿಸಿದ್ದರು. ಕರ್ನಾಟಕ ಗೃಹರಕ್ಷಕ ವಾಲಿಬಾಲ್ ತಂಡದ ಉಪನಾಯಕರಾಗಿ, ತಿಪಟೂರು ಜಾಲಿ ಕ್ರೀಡಾ ಸಂಸ್ಥೆಯ ಸದಸ್ಯರಾಗಿ ೨೫ ವರ್ಷ ಸೇವೆ ದಂಡಿನಶಿವರದ ಉದಯರವಿ ಕ್ರೀಡಾಸಂಸ್ಥೆಯ ಸ್ಥಾಪಕರು. ದಕ್ಷಿಣ ಭಾರತವನ್ನು ಪ್ರತಿನಿಧಿಸಿ ಪಂಜಾಬ್‌ನ ಫಟಿಯಾಲಕ್ಕೆ ಕೋಚಿಂಗ್ ಕ್ಯಾಂಪ್‌ಗೆ ಆಯ್ಕೆಯಾಗಿದ್ದರು. ೧೯೭೨-೭೩ನೇ ಸಾಲಿನಲ್ಲಿ

ತುರುವೇಕೆರೆ ಕ್ರೀಡಾ ಸಮಿತಿಯ ಶ್ರೇಷ್ಠ ಕ್ರೀಡಾಪಟು ಪ್ರಶಸ್ತಿ ನೀಡಿ ಸನ್ಮಾನಿಸಿದೆ. ಸಧ್ಯ ತುಮಕೂರು ಜಿಲ್ಲಾ ವಾಲಿಬಾಲ್ ಸಂಸ್ಥೆಯ ಅಧ್ಯಕ್ಷರಾಗಿ ಕಾರ್ಯ ನಿರ್ವಹಣೆ. ಸಾಹಿತ್ಯ ಕ್ಷೇತ್ರದಲ್ಲೂ ಆಸಕ್ತಿ ಬೆಳೆಸಿಕೊಂಡಿರುವ ಇವರು, ಎರಡು ಅವಧಿಗೆ ತುರುವೇಕೆರ ತಾಲೂಕು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರೂ ಆಗಿದ್ದರು. ವೃತ್ತಿಯಲ್ಲಿ ಕೃಷಿಕರೂ ಆಗಿರುವ ಇವರು ತೆಂಗಿಗೆ ಹರಡಿರುವ ನುಸಿಪೀಡೆ ರೋಗವನ್ನು ಹೊಗೆಯಿಂದ ನಿಯಂತ್ರಿಸ ಬಹುದೆಂದು ಕಂಡುಹಿಡಿದು ಯಶಸ್ವಿಯಾಗಿದ್ದಾರೆ. ಅಲ್ಲದೆ ಪಾರ್ಥೇನಿಯಂ ಕೊಳೆನಾಶದ ನಿರ್ಮೂಲನಕ್ಕೆ ಅಡಿಗೆ ಉಪ್ಪಿನ ದ್ರಾವಣ ಫಲಕಾರಿ ಎಂಬುದನ್ನು ತೋರಿಸಿದ್ದಾರೆ.

ಸೋಮನಕುಣಿತದ ಸಂಘಟಕ ಕಲಾವಿದರಾದ ಇವರು ದಂಡಿನಶಿವರದಲ್ಲಿ ಹೆಚ್.ಎಲ್. ನಾಗೇಗೌಡರ ಸಮಕ್ಷಮದಲ್ಲಿ ೨೫ ಸೋಮಗಳ ಪ್ರದರ್ಶನಕ್ಕೆ ವ್ಯವಸ್ಥೆ ಮಾಡಿ 'ಯಕ್ಷರಾತ್ರಿ' ಎಂಬ ಬಿರುದಿಗೆ ಪಾತ್ರರಾಗಿದ್ದಾರೆ. ಒಂದೇ ವೇದಿಕೆಯಲ್ಲಿ ೨೫ ಮಂದಿ ಮೂಡಲಪಾಯ ಯಕ್ಷಗಾನ ಭಾಗವತರನ್ನು ಸೇರಿಸಿ, ಜಾನಪದ ಅಕಾಡೆಮಿಗೆ ಪರಿಚಯಿಸಿದವರು.

ತಮ್ಮ ಯಕ್ಷಗಾನ ಸಂಘಟನೆಯಿಂದ ರಾಜ್ಯದ್ಯಂತ ನಡೆಯುವ ಸರ್ಕಾರದ ಎಲ್ಲ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಸೋಮನ ಕುಣಿತ ತಂಡವನ್ನು ಪ್ರದರ್ಶನಕ್ಕೆ ಕರೆದೊಯ್ಯುವ ಗೌಡರು, ಮದ್ರಾಸ್ ದೂರದರ್ಶನದ ಮೂಲಕ ಸೋಮನಕುಣಿತ ಕಲೆಯನ್ನು ಪ್ರಚಾರ ಮಾಡಿದ್ದಾರೆ. ಪಾಂಡಿಚೇರಿ, ತಿರುವನಂತಪುರ, ಒರಿಸ್ಸಾ, ಹಿಮಾಚಲಪ್ರದೇಶ, ಕುಲು ಉತ್ಸವ, ವಿಶ್ವ ಕನ್ನಡ ಸಮ್ಮೇಳನ, ಪುರಂದರ ಉತ್ಸವಗಳಲ್ಲಿ ತಂಡ ಭಾಗವಹಿಸಿ ಸೋಮನ ಕುಣಿತ ಕಲೆಯನ್ನು ಪ್ರಚಾರ ಮಾಡಿದೆ.

ದಂಡಿನಶಿವರ ಸುತ್ತಮುತ್ತಲ ಜನಪದ ಕಲೆಗಳಾದ ಕೋಲಾಟ, ನಗಾರಿ ಮೇಳ, ತಮಟೆ ವಾದ್ಯ, ಕಹಳೆ ವಾದ್ಯ ಕಲೆಗಳ ಪ್ರದರ್ಶನ ಪುನರುಜ್ಜೀವನಕ್ಕೆ ಅವಕಾಶ ಮಾಡಿಕೊಟ್ಟಿರುವ ಹಿರಿಮೆಯೂ ಇವರದು. ಕರ್ನಾಟಕ ಜಾನಪದ ಪರಿಷತ್ತು ವಿಶೇಷ ಪುರಸ್ಕಾರ ನೀಡಿ ಗೌರವಿಸಿದೆ. ತುಮಕೂರು ಜಿಲ್ಲಾ ಕನ್ನಡ ರಾಜ್ಯೋತ್ಸವ ಪ್ರಶಸ್ತಿ, ಎಸ್.ಬಿ.ಎಂ. ಬೆಂಗಳೂರು ವಿಭಾಗದ ರಾಜ್ಯೋತ್ಸವ ಪ್ರಶಸ್ತಿ ಇವರಿಗೆ ಸಂದಾಯವಾಗಿದೆ.

ಡಿ. ಎಸ್. ಗಂಗಾಧರಗೌಡ,
ದಂಡಿನಶಿವರ, ತುರುವೇಕೆರೆ ತಾಲೂಕು.

## ಸೋಮನಕುಣಿತದ ಚಿಕ್ಕಣ್ಣ

ತುರುವೇಕೆರೆ ತಾಲೂಕಾ ಕಸಬಾ ಹೋಬಳಿಗೆ ಸೇರಿದ ಹೆಗ್ಗೆರೆ ಗ್ರಾಮದ ಶ್ರೀ ಚಿಕ್ಕಣ್ಣ ಸೋಮನಕುಣಿತದ ಅತ್ಯುತ್ತಮ ಕಲಾವಿದರು. ೧೯೩೭ರಲ್ಲಿ ಜನಿಸಿದ ಶ್ರೀಯುತರಿಗೆ ಇದೀಗ ೭೦ ವರ್ಷಗಳು ಸಂದಿವೆ. ಹೆಗ್ಗೆರೆ ಗ್ರಾಮದ ಅಧಿದೇವತೆ ಕೆಂಪಮ್ಮ ದೇವಿಯ ಅರ್ಚಕ ಪರಂಪರೆಯೂ ಈ ಮನೆತನಕ್ಕೆ ಸೇರಿರುತ್ತದೆ.

೧೯೫೦ ರಿಂದ ಸೋಮನ ಕುಣಿತದ ಕಲೆಯನ್ನು ಕರಗತ ಮಾಡಿಕೊಂಡಿರುವ ಶ್ರೀಯುತರ ಕಲಾಗುರು ದಿ|| ಮರಿಯಣ್ಣನವರು. ಇವರಿಗೆ ಮೂಡಲಪಾಯ ಯಕ್ಷಗಾನ, ಭಾಗವಂತಿಕೆ, ವೇಷಧಾರಿ ಹಾಗೂ ಜನಪದ ಹಾಡುಗಾರಿಕೆಯಲ್ಲಿಯೂ ನಿಷ್ಣಾತರು. ನಾಲ್ಕು ಬಾರಿ ರಾಜ್ಯ ಗಣರಾಜ್ಯೋತ್ಸವ ಪೆರೇಡಿನಲ್ಲಿ ಮತ್ತು ಸಂಜೆಯ ಸಾಂಸ್ಕೃತಿಕ ಉತ್ಸವದಲ್ಲಿ ಭಾಗವಹಿಸಿದ್ದಾರೆ. ಮೈಸೂರಿನ ದಸರಾ ಉತ್ಸವದಲ್ಲಿ ಮೂರು ಬಾರಿ ಆಹ್ವಾನಿತ ಕಲಾತಂಡವಾಗಿ ಪ್ರದರ್ಶನ ನೀಡಿದ್ದಾರೆ. ಬೆಂಗಳೂರಿನ ದೂರದರ್ಶನದವರು ಏರ್ಪಡಿಸಿದ್ದ ಜನಪದ ವಾಹಿನಿ ಕಾರ್ಯಕ್ರಮದಲ್ಲಿ ಹತ್ತು ಜೋಡಿ ಸೋಮಗಳನ್ನು ಸಂಘಟಿಸಿ ಕಾರ್ಯಕ್ರಮ ಏರ್ಪಡಿಸಿದ ಹಿರಿಮೆ ಇವರದು. ಇದಲ್ಲದೆ ಹೆಚ್. ಎಲ್. ನಾಗೇಗೌಡರು ಬೆಂಗಳೂರಿನ ವಿದ್ಯಾನಗರದಲ್ಲಿ ಎಂಟು ದಿನಗಳು ಸೋಮನ ಕುಣಿತ ಕಲಾಪ್ರದರ್ಶನವನ್ನು ಬೆಂಗಳೂರು ದೂರದರ್ಶನ ವಾಹಿನಿಯಲ್ಲಿ ನೀಡಲಾಯಿತು. ಒಟ್ಟಾರೆ ಸೋಮನಕುಣಿತ ಕಲೆಗೆ ಮೊದಲಿಗೆ ವ್ಯಾಪಕ ಪ್ರಸಾರ ಹಾಗೂ ಕಲಾವಿದರನ್ನು ಗುರುತಿಸಿದ, ಸಂಘಟಿಸಿದ ಹಿರಿಮೆಗೆ ಪಾತ್ರರಾದವರು. ಡಾ. ಜೀಶಂಪ ಅವರ ವಿಶೇಷ ಆಸಕ್ತಿ, ಪ್ರೋತ್ಸಾಹ ಹಾಗೂ ವೈವಿಧ್ಯತೆಗಳ ಸಾಧ್ಯತೆಯ ಬಗೆಗೆ ಕಲ್ಪನೆ, ಆ ರೂಪಕ್ಕೆ ಒಗ್ಗಿಕೊಂಡು ಹತ್ತು ಜನ ಕಲಾವಿದರೊಂದಿಗೆ ಇಂದಿಗೂ ಕಲಾಪ್ರದರ್ಶನ ನೀಡುತ್ತಾ ಬಂದಿರುವುದು ಇವರ ವಿಶೇಷವಾಗಿದೆ.

ಯಕ್ಷಗಾನ ವೇಷದಾರಿಕೆ, ಪರಿಕರ ಸಾಮಗ್ರಿ ತಯಾರಿಕೆ ಹಾಗೂ ಭಾಗವಂತಿಕೆಯ ಕಲಾವಿದರಾಗಿಯೂ ಯಕ್ಷಗಾನ ಪ್ರಸಾರದಲ್ಲಿಯೂ ತೊಡಗಿಸಿಕೊಂಡಿದ್ದಾರೆ. ಹೆಚ್. ನಂಜಪ್ಪ ಎಂಬ ಯಕ್ಷಗಾನ ಭಾಗವತರಿಂದ ಯಕ್ಷಗಾನ ಕಲೆಯನ್ನು ಗುರು ಮೂಲಕ ಕಲಿತಿದ್ದಾರೆ. ಸತ್ಯಹರಿಶ್ಚಂದ್ರ, ಸತ್ಯವ್ರತ, ಲವಕುಶ, ಯುದ್ಧಕಾಂಡ ರಾಮಾಯಣ, ದಕ್ಷಯಾಗ, ವಿರಾಟಪರ್ವ ಈ ಯಕ್ಷಗಾನ ಪ್ರಸಂಗವನ್ನು ತುರುವೇಕೆರೆ, ಕುಣಿಗಲ್, ಗುಬ್ಬಿ ಹಾಗೂ ತಿಪಟೂರು ತಾಲೂಕುಗಳಲ್ಲಿ ಕಲಿಸಿದ್ದಾರೆ.

ಕೊನೆಹಳ್ಳಿಯ ಮೂಡಲಪಾಯ ಯಕ್ಷಗಾನ ಕೇಂದ್ರದ ಉಗಮಕ್ಕೆ ಪ್ರೇರಕ ಸಂಘಟಕರಲ್ಲಿ ಒಬ್ಬರಾಗಿರುವ ಇವರು ಜೀಶಂಪ, ಹೆಚ್. ಎಲ್. ನಾಗೇಗೌಡ ಈ ಮೊದಲಾದ ಜಾನಪದ ದಿಗ್ಗಜರೊಂದಿಗೆ ನಿಕಟ ಸಂಪರ್ಕವನ್ನಿಟ್ಟುಕೊಂಡು, ಜನಪದ ಕಲೆಯ ಹೊಸ ಸಾಧ್ಯತೆ, ಆವಿಷ್ಕಾರದ ಬಗೆಗೆ ಯಕ್ಷಗಾನ ಮತ್ತು ಸೋಮನ ಕುಣಿತದ ಮೂಲಕ ಸಂಪನ್ಮೂಲ ವ್ಯಕ್ತಿಯಾಗಿ ಕಾರ್ಯ ನಿರ್ವಹಿಸಿರುವುದು ಇವರ ವಿಶೇಷ.

೭೦ ವರ್ಷ ಕಲಾ ಬದುಕಿನಲ್ಲಿ ಹಲವು ಏರಿಳಿತವನ್ನು ಕಂಡಿರುವ ಇವರು ಜನಪದ ಕಲಾ ಪ್ರದರ್ಶನ ಇಂದು ಒಬ್ಬರೇ ಒಬ್ಬ ವ್ಯಕ್ತಿಯ ಪಾಲಾಗದೆ ಎಲ್ಲ ಕಲಾವಿದರಲ್ಲೂ ಹಂಚಿಕೆಯಾಗಿ ಹಿರಿಯ ಕಲಾವಿದರನ್ನು ಪ್ರೋತ್ಸಾಹದ ಮೂಲಕ ಕಲೆಯನ್ನು ತಾರತಮ್ಯ ತಪ್ಪಿಸಬೇಕೆಂಬ ಅತೀವ ಕೋರಿಕೆಯನ್ನು ಮುಂದಿಡುತ್ತಾರೆ.

**ಹೆಚ್. ಸಿ. ಚಿಕ್ಕಣ್ಣ, ಕಲಾವಿದರು,**
**ಹೆಗ್ಗೆರೆ ಅಂಚೆ, ತುರುವೇಕೆರೆ ತಾಲೂಕು.**

# ಮುಖವೀಣೆ ಶ್ರೀರಂಗಯ್ಯ

ಜನಪದ ವಾದ್ಯ 'ಮುಖವೀಣೆ ಕಲೆ'ಗೆ ಅರ್ಥವಂತಿಕೆ ತಂದ ಹಿರಿಯ ಕಲಾ ಕುಟುಂಬ ಶ್ರೀರಂಗಯ್ಯನವರದು. ತಂದೆ ದಾನಪ್ಪನವರೂ ಒಳ್ಳೆಯ ಮುಖವೀಣೆ ಕಲಾವಿದರು. ಯಕ್ಷಗಾನ ಭಾಗವತರಾಗಿಯೂ ಪ್ರಸಿದ್ಧಿ ಪಡೆದವರು.

ತಮ್ಮ ತಂದೆ ದಾನಪ್ಪನವರಿಂದ ಗುರು ರೂಪದಲ್ಲಿ ಮುಖವೀಣೆ ಕಲಿತ ಶ್ರೀರಂಗಯ್ಯನವರು ತಮ್ಮ ಅಪೂರ್ವ ನುಡಿಸುವಿಕೆಯಿಂದ ಮೈಸೂರು, ಮಂಡ್ಯ, ತುಮಕೂರು, ಚಿತ್ರದುರ್ಗ, ಹಾಸನ ಜಿಲ್ಲೆಗಳಲ್ಲಿಯೂ ಪ್ರಸಿದ್ಧರಾಗಿದ್ದರು. ಯಾವುದೇ ಯಕ್ಷಗಾನ ಮೇಳವಿದ್ದಲ್ಲಿ ಅಲ್ಲಿಗೆ ತಪ್ಪದೆ ಹಾಜರಾಗಿ ಯಕ್ಷಗಾನ ಪ್ರದರ್ಶಿಸುವುದು ಇವರ ಜಾಯಮಾನ.

ಮುಖವೀಣೆ ಗಂಟೆಗಟ್ಟಲೆ ಊದುವ ಜನಪದ ವಾದ್ಯವಾಗಿದ್ದು ರಾತ್ರಿಯಿಡೀ ಯಕ್ಷಗಾನದೊಂದಿಗೆ ಮುಖವೀಣೆ ನುಡಿಸಲೇಬೇಕು. ಅದಿಲ್ಲದೆ ಯಕ್ಷಗಾನವಿಲ್ಲ. ಹಾಡಿನೊಂದಿಗೆ ಶೃತಿಯಾಗಿ ಮುಖವೀಣೆ ಊದಲೇಬೇಕು. ರಂಗಯ್ಯನವರು ಯಕ್ಷಗಾನ ಭಾಗವತರಾಗಿಯೂ ಹೆಸರುವಾಸಿ. ಮೂಡಲಪಾಯ ಯಕ್ಷಗಾನವನ್ನು ಗ್ರಾಮೀಣ ಪ್ರದೇಶಗಳಲ್ಲಿ ಸಮರ್ಥವಾಗಿ ಕಲಿಸಿದ್ದಾರೆ. ಲವಕುಶರ ಕಾಳಗ, ಅಭಿಮನ್ಯುವಿನ ಕತೆ, ಕೀಚಕನ ವಧೆ, ಸುಭದ್ರಾ ಪರಿಣಯ, ದೇವಿಮಹಾತ್ಮೆ, ದಶಕಂಠ ರಾಮಾಯಣ ಮೊದಲಾದ ಯಕ್ಷಗಾನಗಳನ್ನು ಕಲಿಸಿದ್ದಾರೆ.

ಮುಖವೀಣೆ ಗುರುಗಳಾಗಿ ಹಲವು ಶಿಷ್ಯರಿಗೆ ಮುಖವೀಣೆ ಹೇಳಿಕೊಟ್ಟಿರುವ ಹಿರಿಮೆಯೂ ಇವರದು. ಇವರ ಮಾರ್ಗದರ್ಶನದಲ್ಲಿ ವರಾಗಟ್ಟದ ಗಂಗಣ್ಣ, ದಾಸಪ್ಪ ಇಂದು ಮುಖವೀಣೆ ಕಲೆಯ ಕಲಾವಿದರಾಗಿ ಅರ್ಥಪೂರ್ಣವಾಗಿ ತೊಡಗಿಸಿ ಕೊಂಡಿದ್ದಾರೆ.

ಜೇಶಂಪ ಅವರ ಹತ್ತಿರದ ಸಂಪರ್ಕ, ಒಡನಾಟದಿಂದಾಗಿ ಮೂಡಲಪಾಯ ಯಕ್ಷಗಾನ ಕಲೆಯ ಬಗೆಗೆ ಮುಖವೀಣೆ ಕಾರ್ಯಾಗಾರ ಹಾಗೂ ಪ್ರಾತ್ಯಕ್ಷಿಕೆ ಕಾರ್ಯಕ್ರಮಗಳಲ್ಲಿ ಭಾಗವಹಿಸಿದ್ದಾರೆ. ೧೯೭೦ರಿಂದಲೂ ಬೆಂಗಳೂರು ಆಕಾಶವಾಣಿ ಕೇಂದ್ರಗಳ ಮೂಲಕ ಮುಖವೀಣೆ ಪ್ರಾತ್ಯಕ್ಷಿಕೆ ಕಾರ್ಯಕ್ರಮಗಳನ್ನು ೧೯೯೦ರ ವರೆಗೆ ಸತತವಾಗಿ ನೀಡಿದ್ದಾರೆ. ಇವರ ಭಾಗವಂತಿಕೆಯ ಲವಕುಶರ ಕಾಳಗ, ಐರಾವತ ಆಕಾಶವಾಣಿಯ ಮೂಲಕವೂ ಪ್ರಸಾರವಾಗಿರುವುದು ವಿಶೇಷ.

ಮೈಸೂರಿನ ದಸರಾ ವಸ್ತುಪ್ರದರ್ಶನ ಕಾರ್ಯಕ್ರಮದಲ್ಲಿ ಸತತವಾಗಿ ಭಾಗವಹಿಸುತ್ತಾ ಮುಖವೀಣೆ ಕಲೆ ಪ್ರದರ್ಶಿಸುತ್ತಾ ಬಂದಿರುವ ಇವರು ಬಾಂಬೆ, ಮದ್ರಾಸ್, ದೆಹಲಿ, ತಂಜಾವೂರುಗಳಲ್ಲಿಯೂ ಮುಖವೀಣೆ ಕಲೆಯನ್ನು ಪ್ರದರ್ಶನ ಮಾಡಿದ ಹಿರಿಮೆಗೆ ಪಾತ್ರರು. ಒಂದು ಬಗೆಯ ಅಲೆಮಾರಿ ಕಲಾವಿದರಾದ ಶ್ರೀರಂಗಯ್ಯನವರು ಸದಾ ತಿರುಗಾಡುತ್ತಲೇ ಮುಖವೀಣೆಯ ಪ್ರಸಾರ ಕಲೆಗೆ ವ್ಯಾಪಕವಾದ ಪ್ರಚಾರ ನೀಡಿದ ಶ್ರೇಯಸ್ಸು ಇವರದು. ಕೊನೆಹಳ್ಳಿ ಮೂಡಲಪಾಯ ಯಕ್ಷಗಾನ ಕೇಂದ್ರದ ಸ್ಥಾಪಕ ಕಲಾವಿದರಲ್ಲಿ ಇವರ ಪಾತ್ರವೂ ಇದೆ. ಇಲ್ಲಿ ನಡೆದ ಮೂಡಲಪಾಯ ಯಕ್ಷಗಾನ ಭಾಗವತ ಹಾಗೂ ಮುಖವೀಣೆ ಕಮ್ಮಟದಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ಶ್ರೀರಂಗಯ್ಯನವರು ಭಾಗವಹಿಸಿ ೧೯೯೪ ರಲ್ಲಿ ದಿವಂಗತರಾದರು. ಇವರ ಕಲಾ ಧೀಮಂತಿಕೆ ೧೯೮೮ ರಲ್ಲಿ ಕರ್ನಾಟಕ ಜಾನಪದ ಅಕಾಡೆಮಿ ಪ್ರಶಸ್ತಿ ಪಡೆದ ಹಿರಿಮೆ ಇವರದು.

ದಿ॥ ಶ್ರೀರಂಗಯ್ಯ,
ದೊಡ್ಡಶೆಟ್ಟಿಕೆರೆ ಮತ್ತು ಅಂಚೆ,
ತುರುವೇಕೆರೆ ತಾಲೂಕು.

## ಭೈರಪ್ಪ ಲಕ್ಷ್ಮೀಪುರ

ತಮ್ಮ ಮುಖವೀಣೆ ವಾದ್ಯವಿಶೇಷದಿಂದ ಜನಮನ ಗೆದ್ದ ಹಿರಿಯ ಮುಖವೀಣೆ ಕಲಾವಿದ ಶ್ರೀ ಭೈರಪ್ಪನವರು. ಸ್ವತಃ ಯಕ್ಷಗಾನ ಭಾಗವತರೂ ಆಗಿರುವ ಇವರ ಮೂಡಲಪಾಯ ಯಕ್ಷಗಾನದ ಹಿರಿಯ ಸಂಘಟಕರೂ ಹೌದು.

ತುಮಕೂರು ಜಿಲ್ಲೆಯ ತಿಪಟೂರು ತಾಲೂಕಿನ ಲಕ್ಷ್ಮೀಪುರ ಗ್ರಾಮದವರು. ತಂದೆ ಭಜಂತ್ರಿ ನಿಂಗಪ್ಪ, ತಾಯಿ ಲಕ್ಷ್ಮಮ್ಮ, ಬಿದರೆಗುಡಿ, ಹೊನ್ನವಳ್ಳಿ, ತಿಪಟೂರು ತಾಲೂಕು ಕೊನೆಹಳ್ಳಿಗಳಲ್ಲಿ ನಡೆಯುತ್ತಿದ್ದ ಮೂಡಲಪಾಯ ಯಕ್ಷಗಾನಕ್ಕೆ ಮುಖವೀಣೆ ಕಲಾವಿದರಾಗಿ ಕಳೆದ ೭೦ ವರ್ಷಗಳಿಂದ ಅವಿರತವಾಗಿ ದುಡಿದವರು. ೬ ಜನ ಗಂಡುಮಕ್ಕಳು, ಒಬ್ಬಳು ಹೆಣ್ಣು ಮಗಳನ್ನು ಪಡೆದಿರುವ ಭೈರಪ್ಪನವರು ಮೂಡಲಪಾಯ ಯಕ್ಷಗಾನದ ಭಾಗವತರೂ ಆಗಿ ಪಾಂಡುವಿಜಯ, ದೇವಿಮಹಾತ್ಮೆ, ಶತಕಂಠ ರಾಮಾಯಣ, ದುಶ್ಯಾಸನನ ಕತೆ, ಐರಾವತ ಈ ಮೊದಲಾದ ನಾಟಕಗಳಿಗೆ ಸಮರ್ಥವಾದ ಭಾಗವಂತಿಕೆಯನ್ನು ಒದಗಿಸಿದ್ದಾರೆ.

ತಂದೆ ಲಿಂಗಪ್ಪನವರೂ ಮೂಡಲಪಾಯ ಯಕ್ಷಗಾನದ ಭಾಗವತರಾಗಿದ್ದವರು. ಚಿಟ್ಟಿಮೇಳ, ನಾಗಸ್ವರ ವಾದಕರಾಗಿಯೂ ಧಾರ್ಮಿಕ ಸಮಾರಂಭಗಳಲ್ಲಿ ಆಕರ್ಷಕವಾಗಿ ನುಡಿಸುವ ಮೂಲಕ ಮೈಸೂರು ದಸರಾ ಉತ್ಸವಗಳಲ್ಲೂ ವಾದ್ಯ ನುಡಿಸುವ ವಿಶೇಷ ಪರಿಣತಿ ಪಡೆದಿದ್ದವರು.

ಭೈರಪ್ಪನವರು ತಿಪಟೂರು ತಾಲೂಕು ಕೊನೆಹಳ್ಳಿಯ ಶ್ರೀ ಬಿದರೆಯಮ್ಮ ಯಕ್ಷಗಾನ ಮಂಡಳಿ ಮತ್ತು ಮೂಡಲಪಾಯ ಯಕ್ಷಗಾನ ಟ್ರಸ್ಟ್ ಜೊತೆ ನಿರಂತರ ಸಂಪರ್ಕ ಹೊಂದಿದ್ದರಲ್ಲದೆ ಈ ಕೇಂದ್ರದ ಸಂಪನ್ಮೂಲ ವ್ಯಕ್ತಿಯಾಗಿಯೂ ಕಾರ್ಯ ನಿರ್ವಹಿಸುತ್ತಿದ್ದರು.

೧೯೬೮ ರಿಂದ ಈ ಕೇಂದ್ರದ ತಂಡದೊಂದಿಗೆ ಬೆಂಗಳೂರು, ಮೈಸೂರು, ನವದೆಹಲಿ, ಉಡುಪಿ ಈ ಮೊದಲಾದ ಕಡೆ ತಜ್ಞರ ಮುಂದೆ ಮೂಡಲಪಾಯ ಯಕ್ಷಗಾನ ಮುಖವೀಣೆಯನ್ನು ನುಡಿಸಿ ಸೈ ಎನಿಸಿಕೊಂಡಿದ್ದರು. ಇವರು ಬಾರಿಸುತ್ತಿದ್ದ ಸಾವೇರಿ, ಸಾಟಿ, ಶಂಕರಾಭರಣ, ಮಧ್ಯಮಾವತಿ ಈ ಮೊದಲಾದ ಹಾಡಿನ ರಾಗಗಳನ್ನು ವಿಶೇಷ ಸಂದರ್ಭ, ಪಾತ್ರಗಳಿಗೆ ತಕ್ಕ ಹಾಗೆ ನುಡಿಸುತ್ತಿದ್ದರು.

ಮೈಸೂರು ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆಯ ಜಾನಪದ ವಿಭಾಗದಲ್ಲಿ ಮುಖವೀಣೆ ಪ್ರಾತ್ಯಕ್ಷಿಕೆಯ ಮೂಲಕ ಮೂಡಲಪಾಯ ಯಕ್ಷಗಾನವನ್ನು, ಅದರ ವೈವಿಧ್ಯಮಯವಾದ ರಾಗ, ಭಾವ, ದೃಶ್ಯ, ಸಂದರ್ಭವನ್ನು ಅತ್ಯಂತ ಸೊಗಸಾಗಿ ತೋರಿಸುವ ಮೂಲಕ ಮೂಡಲಪಾಯ ಯಕ್ಷಗಾನವನ್ನು ವಿದ್ವಾಂಸರಲ್ಲಿಯೂ ಬೆಳೆಯಲು ಪ್ರಮುಖ ಕಾರಣವಾದವರು. ಇವರ ಅಪೂರ್ವ ಪ್ರತಿಭೆಯನ್ನು ಗುರುತಿಸಿದ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ೧೯೮೨ರ ಜಾನಪದ ಕಲಾವಿದ ಪ್ರಶಸ್ತಿ ನೀಡಿ ಗೌರವಿಸಿದೆ. ಈಗ ದಿವಂಗತರು.

ಭೈರಪ್ಪ,<br>ಲಕ್ಷ್ಮೀಪುರ,<br>ತಿಪಟೂರು ತಾಲೂಕು, ತುಮಕೂರು ಜಿಲ್ಲೆ.

# ಕಡಿವಿಗೆರೆ ಮೂಡಲಗಿರಿಯಪ್ಪ

ಮೂಡಲಗಿರಿಯಪ್ಪ ತುಮಕೂರು ಜಿಲ್ಲೆ, ಸಿರಾ ತಾಲೂಕಿನ ಕಡವಿಗೆರೆಯವರು. ಆದಿದ್ರಾವಿಡ ಜನಾಂಗಕ್ಕೆ ಸೇರಿದ ಇವರದ್ದು ಮುಖವೀಣೆ ಕಲಾ ಕುಟುಂಬಕ್ಕೆ ಸೇರಿದ ಬದುಕು. ತಾತ, ತಂದೆಯವರ ಕಾಲದಿಂದಲೂ ಜನಪದ ವಾದ್ಯಗಳಾದ ಮುಖವೀಣೆ, ಚಿಟ್ಟಿಮೇಳ, ಅರೆವಾದ್ಯ, ಕಹಳೆ ಈ ವಾದ್ಯ ಪ್ರಕಾರಗಳನ್ನು ಕಲಿಸುತ್ತಾ, ನುಡಿಸುತ್ತಾ ಬಂದ ಗೌರವಾನ್ವಿತ ಕಲಾ ಪರಂಪರೆಗೆ ಸೇರಿದವರು.

ಮೂಡಲಗಿರಿಯಪ್ಪನವರಿಗೆ ಇದೀಗ ೬೫ರ ಪ್ರಾಯ. ಇವರು ಕಳೆದ ಒಂದು ದಶಕದಿಂದಲೂ ಆಕಾಶವಾಣಿ ಕಲಾವಿದರಾಗಿಯೂ ಕೆಲಸ ಮಾಡಿದ್ದಾರೆ. ಇವರು ನುಡಿಸಿರುವ ಹಲವು ಯಕ್ಷಗಾನ ಪ್ರಸಂಗಗಳು ಆಕಾಶವಾಣಿಯಲ್ಲಿ ಪ್ರಸಾರವಾಗಿವೆ, ಆಗುತ್ತಲೂ ಇವೆ. ಕಡವಿಗೆರೆ ಮೂಡಲ ಗಿರಿಯಪ್ಪನವರು ಇಂದು ತುಂಬಾ ಬಿಜಿಯಾದ ಮುಖವೀಣೆ ಕಲಾವಿದರು. ವರ್ಷವಿಡೀ ಕಲಾ ಪ್ರದರ್ಶನವಿದ್ದೇ ಇರುತ್ತದೆ. ಆಂಧ್ರಪ್ರದೇಶ, ಕರ್ನಾಟಕದ ಹಲವು ಜಿಲ್ಲೆಗಳಲ್ಲಿ ಕಲಾ ಪ್ರದರ್ಶನಕ್ಕೆ ಮೇಲಿಂದ ಮೇಲೆ ಕರೆ ಬರುತ್ತಿದೆ. ಅನಂತಪುರ, ಮಡಕಶಿರಾ, ಅಗಳಿ, ಅಮರಾಪುರ, ವಿಜಯವಾಡ, ರಾಯಲಸೀಮೆ ಪ್ರದೇಶಗಳಲ್ಲೂ ನಾಗಸ್ವರ ವಾದ್ಯಕ್ಕೆ ತುಂಬಾ ಗೌರವ. ಹಾಗಾಗಿ ಇವರ ನಾಗಸ್ವರ ವಾದ್ಯಕ್ಕೆ ಮೇಲಿಂದ ಮೇಲೆ ಕರೆ ಬರುವುದು ಆ ಭಾಗಗಳಲ್ಲಿ ಹೆಚ್ಚು ಎಂಬುದು ಮೂಡಲ ಗಿರಿಯಪ್ಪನವರ ಅಭಿಮತವಾಗಿದೆ.

ನಾಗಸ್ವರ, ಚಿಟ್ಟಿಮೇಳ, ಕಹಳೆ, ಅರೆ ಈ ವಾದ್ಯವಿಶೇಷಗಳಲ್ಲಿಯೂ ಸಮಾನ ಆಸಕ್ತಿ ಇರಿಸಿಕೊಂಡಿರುವ ಮೂಡಲ ಗಿರಿಯಪ್ಪ ಅವರಿಗೆ ಹೆಚ್ಚು ಜನಪ್ರಿಯತೆ ತಂದುಕೊಟ್ಟಿರುವುದು ಮುಖವೀಣೆ ಕಲೆ. ಸಿರಾ, ಮಧುಗಿರಿ, ಪಾವಗಡ, ತುರುವೇಕೆರೆ, ಚಿಕ್ಕನಾಯಕನಹಳ್ಳಿ ಈ ತಾಲೂಕುಗಳಲ್ಲಿನ ಯಕ್ಷಗಾನ ಭಾಗವಂತಿಕೆಗೆ ದಾಸಪ್ಪನವರ

ಮುಖವೀಣೆ ವಾದ್ಯ ಬೇಕೇಬೇಕು. ಅಷ್ಟರಮಟ್ಟಿಗೆ ಪ್ರಖ್ಯಾತರು. ಇಂದಿಗೂ ೧೫ ಶಿಷ್ಯರಿಗೆ ಮುಖವೇಣಿ ಕಲೆಯನ್ನು ಕಲಿಸುತ್ತಿರುವ ದಾಸಪ್ಪನವರಿಗೆ ತಮಗೆ ಗಂಡುಮಕ್ಕಳಿಲ್ಲದೇ ಹೋದರೂ ಅಣ್ಣನ ಮಗನನ್ನು ಮಗನೆಂದೇ ಸಾಕುತ್ತಿದ್ದಾರೆ. ಆತನಿಗೂ ಮುಖವೇಣಿ ಕಲೆಯನ್ನು ಕಲಿಸುತ್ತಿರುವುದಾದರೂ ಆತನಿಗೆ ಮುಖವೇಣಿ ಕಲೆಯ ಬಗೆಗೆ ಅಷ್ಟಾಗಿ ಆಸಕ್ತಿ ಇಲ್ಲ ಎಂಬ ಕೊರಗನ್ನು ತೋಡಿಕೊಳ್ಳುತ್ತಿದ್ದಾರೆ. ಪರಂಪರಾಗತ ಕಲಾವಂತ ಕುಟುಂಬ. ತಾತ ಮುತ್ತಾತರ ಕಾಲದಿಂದಲೂ ಈ ಕಲಾ ಸರಸ್ವತಿಯ ಸೇವೆಯನ್ನು ಮಾಡುತ್ತಾ ಬಂದಿದ್ದೇವೆ. ನನ್ನ ಕಾಲಕ್ಕೆ ಈ ಕಲೆ ನಿಲ್ಲಬಾರದು ಎಂದು ತೀರಾ ಕೊರಗಿನಿಂದ ನೊಂದು ನುಡಿಯುವ, ಮೂಡಲ ಗಿರಿಯಪ್ಪ ಕಲೆಗಾಗಿ ಎಂದೂ ಚೌಕಾಸಿ ಮಾಡಿದವರಲ್ಲ. ತನ್ನ ತಂದೆ ೧೦ ರೂ. ಸಂಭಾವನೆ ಪಡೆದು ಕಲಾ ಪ್ರದರ್ಶನ ನೀಡುತ್ತಿದ್ದರು. ೧೦ ರೂ. ನಿಂದ ೨೦೦ ರೂ. ವರೆಗೆ ಅವರ ಸಂಭಾವನೆ ಇತ್ತು. ಆದರೆ ನಾನಿಂದು ೫೦೦ ರೂ. ಸಂಭಾವನೆ ಪಡೆಯುತ್ತೇನೆ. ಮೊದಮೊದಲು ೧೦೦ ರೂ. ಸಂಭಾವನೆ ಪಡೆಯುತ್ತಿದ್ದೆ. ಈಗ ಅವರೇ ಕೊಡುವಾಗ ಪಡೆಯುತ್ತೇನೆ, ಆದರೆ ಇಷ್ಟೇ ಕೊಡಬೇಕೆಂದು ಹಟ ಹಿಡಿಯುವುದಾಗಲೀ, ಚೌಕಾಸಿ ಮಾಡುವುದಾಗಲೀ ಇಲ್ಲವೇ ಇಲ್ಲ.

ತನ್ನ ಹುಟ್ಟೂರು ಕಡವಿಗೆರೆಯಲ್ಲಿ ಪ್ರತಿ ವರ್ಷವೂ ಐರಾವತ ನಾಟಕವನ್ನು ಪ್ರದರ್ಶಿಸುತ್ತಾ ಬಂದಿದ್ದಾರೆ. ಇಲ್ಲಿ ಕಲಾ ಪ್ರದರ್ಶನಕ್ಕೆ ಸಾಂಕೇತಿಕವಾಗಿವಾಗಿ ೧೦ ರೂ. ಪಡೆದು ಕಲಾ ಸಂಭಾವನೆ ನೀಡುತ್ತಾರೆ. ಹೇಗಾದರೂ ಯಕ್ಷಗಾನ ಉಳಿಯಬೇಕು. ಇದು ಸರಸ್ವತಿಯ ರೂಪ ಎಂದು ಮುಗ್ಧ ಭಾವನೆಯೊಂದಿಗೆ ಯಕ್ಷಗಾನ ಕಲೆಯ ಉಳಿಯುವಿಕೆಗಾಗಿ ಪ್ರಯತ್ನಿಸುತ್ತಿರುವ ಕಲಾ ಸಂಘಟಕರಾಗಿಯೂ ಮೂಡಲ ಗಿರಿಯಪ್ಪನವರ ಸಾಧನೆ ಅಪರಿಮಿತವಾದುದು.

ಲವಕುಶರ ಕತೆ, ದಕ್ಷಯಾಗ, ಐರಾವತ, ಮಯೂರಧ್ವಜ, ಭಕ್ತ ಸುಧನ್ವ, ಸುಂದರಕಾಂಡ ರಾಮಾಯಣ, ರಾಜಾ ಸತ್ಯವ್ರತ ಈ ಮೊದಲಾದ ಯಕ್ಷಗಾನ ಪ್ರಸಂಗಗಳನ್ನು ಬಾಯಿಂದಲೇ ಹೇಳಬಲ್ಲ. ಭಾಗವಂತಿಕೆಯ ಕೌಶಲವನ್ನು ರೂಢಿಸಿಕೊಂಡಿಸಿರುವ, ಮೂಡಲಗಿರಿಯಪ್ಪ ಅವರಿಂದಾಗಿ ಸಿರಾ, ಮಧುಗಿರಿ, ಪಾವಗಡ ಈ ಭಾಗಗಳಲ್ಲಿ ಮೂಡಲಪಾಯ, ಯಕ್ಷಗಾನ ಕನಿಷ್ಠ ವರ್ಷಕ್ಕೊಂದಾ ವರ್ತಿಯಾದರೂ ಪ್ರದರ್ಶನಕ್ಕೆ ಒಳಗಾಗುತ್ತ, ತನ್ನ ಕಲಾಪ್ರೌಢಿಮೆಯನ್ನು ಉಳಿಸಿಕೊಂಡು ಬರುತ್ತಿರುವುದು ಹೆಮ್ಮೆಯ ಸಂಗತಿಯಾಗಿದೆ.

ಮೂಡಲಗಿರಿಯಪ್ಪ, ಮುಖವೇಣಿ ಕಲಾವಿದ,
ಕಡವಿಗೆರೆ, ಸಿರಾ ತಾಲೂಕು.

## ನಾದೂರು ದಾಸಪ್ಪ

ಮುಖವೀಣೆ, ಕಹಳೆ, ಚಿಟ್ಟಿಮೇಳ, ಜನಪದ ಸಂಗೀತ ಈ ನಾಲ್ಕು ಪ್ರಕಾರಗಳಲ್ಲಿಯೂ ಹೆಸರು ಮಾಡಿರುವ ೮೦ ವರ್ಷದ ದಾಸಪ್ಪ, ಸ್ವಾತಂತ್ರ್ಯ ಹೋರಾಟಗಾರರೂ ಹೌದು. ಸಿರಾ ತಾಲೂಕು ಗೌಡಗೆರೆ ಹೋಬಳಿಗೆ ಸೇರಿದ ನಾದೂರು ದಾಸಪ್ಪ ತಮ್ಮ ೨೦ನೇ ವಯಸ್ಸಿನಿಂದಲೇ ಮುಖವೀಣೆ ಕಲಿತವರು. ಸಿರಾ ತಾಲೂಕು ಶ್ಯಾಗದಡು ಗ್ರಾಮದ ಭಾಗವತ ಕಾಲುವೆ ರಂಗಪ್ಪನವರ ಭಾಗವಂತಿಕೆ ಸಿರಾ ಸೀಮೆಯಲ್ಲಿ ಕಲಾ ಶಾಲೆಯಾಗಿ ಕೆಲಸ ಮಾಡುತ್ತಿದ್ದು, ಅಲ್ಲಿಗೆ ಸಿರಾ, ಮಧುಗಿರಿ, ಹಿರಿಯೂರು ಕಡೆಗಳಿಂದ ಭಾಗವಂತಿಕೆ ಕಲಿಯಲು ವಿದ್ಯಾರ್ಥಿಗಳು ಬರುತ್ತಿದ್ದರು. ಅಲ್ಲಿ ಕಡವಿಗೆರೆಯ ದಾಸಪ್ಪ ಸಮರ್ಥವಾಗಿ ಮುಖವೀಣೆ ಕಲಾವಿದರಾಗಿದ್ದರು. ಅವರಿಂದ ಪ್ರೇರಣೆ ಪಡೆದ ದಾಸಪ್ಪ ಮುಖವೀಣೆ ಅಭ್ಯಾಸ ಮಾಡಿದರು. ಅವರೇ ನಿಜವಾದ ಗುರು ಎಂದು ಹೇಳುವ ದಾಸಪ್ಪ ಪರಂಪರಾಗತವಾಗಿ ಬಂದಿದ್ದ ಚಿಟ್ಟಿಮೇಳ ಕಲಿತು. ತಾತ, ತಂದೆ ದೊಡ್ಡಪ್ಪನವರ ಜೊತೆಗೂಡಿ ಚಿಟ್ಟಿಮೇಳ ಸಂಘವನ್ನು ಮಾಡಿಕೊಂಡು ಕಾರ್ಯಕ್ರಮ ನೀಡುತ್ತಿದ್ದರು. ಆರೇಳು ಜನರ ಒಂದು ಕಲಾತಂಡಕ್ಕೆ ೧೦೦ ರೂ. ಸಂಭಾವನೆ ಪಡೆದು ದೇವರ ಉತ್ಸವಗಳಲ್ಲಿ ಚಿಟ್ಟಿಮೇಳ, ಓಲಗ, ಆರೆವಾದ್ಯ ನುಡಿಸುತ್ತಿದ್ದರು. ಅಲ್ಲಿಂದ ಓಲಗದವರ ಮನೆ ಎಂದೇ ಕರೆಯಲು ಆರಂಭಿಸಿದರು.

ಸಿರಾ ತಾಲೂಕು ಪಟ್ಟನಾಯಕನಹಳ್ಳಿಯ ಶ್ರೀ ನಂಜಾವಧೂತ ಆಶ್ರಮದ ಶ್ರೀ ಓಂಕಾರೇಶ್ವರ ಸ್ವಾಮಿಯ ಜಾತ್ರೆ ಹತ್ತು ದಿನಗಳ ಕಾಲ ನಿರಂತರವಾಗಿ ನಡೆಯುತ್ತಿದ್ದು, ಆ ಜಾತ್ರೆಯ ವಾದ್ಯ ವಿಶೇಷವನ್ನು ದಾಸಪ್ಪನವರ ಕುಟುಂಬ ಎರಡು ತಲೆಮಾರುಗಳ ಕಾಲ ನಿರಂತರವಾಗಿ ನಡೆಸುತ್ತಾ ಬಂದಿದೆ.

ನಮ್ಮ ಪೂರ್ವಿಕರ ಪರಂಪರೆಯನ್ನು ನೊಳಂಬರ ಇತಿಹಾಸದೊಂದಿಗೆ ಸರಿಹೊಂದಿಸುವ ದಾಸಪ್ಪ ಪೂರ್ವಿಕರು ಹೇಮಾವತಿ ಸಂಸ್ಥಾನದ ಆಸ್ಥಾನದ ವಾದ್ಯ

ವಿದ್ವಾಂಸರಾಗಿದ್ದರು. ನಾದೂರು ಹಾಗೂ ಬರಗೂರುಗಳಲ್ಲಿ ಕುಮಾರೇಶ್ವರ ದೇವಸ್ಥಾನ, ಬರಗೂರಿನ ಶ್ರೀ ಬಸವೇಶ್ವರ ಹಾಗೂ ಪಟ್ಟನಾಯಕನಹಳ್ಳಿಯ ಶ್ರೀ ಓಂಕಾರೇಶ್ವರ ದೇವಸ್ಥಾನಗಳ ಪೂಜಾಕಾಲದಲ್ಲಿ ವಾದ್ಯ ನುಡಿಸುವ ಕಾಯಕದ ಹಿನ್ನೆಲೆಯಲ್ಲಿ ಬಂದವರೆಂದೂ ಅದಕ್ಕಾಗಿ ದೇವಸ್ಥಾನದ ವತಿಯಿಂದ ಜಮೀನೂ ಇದ್ದು, ಅದರಿಂದ ಸಂಭಾವನೆ ಪಡೆಯುತ್ತಿದ್ದುದಾಗಿ ದಾಸಪ್ಪ ಹೇಳುತ್ತಾರೆ. ಮುಖವೀಣೆ ದಾಸಪ್ಪ, ಕಹಳೆ ವಾದ್ಯಗಾರರೂ ಹೌದು. ಯಾವುದೇ ಸಭೆ, ಸಮಾರಂಭಗಳಲ್ಲಿ ಸಮರ್ಥವಾಗಿ ಕಹಳೆ ವಾದ್ಯ ನುಡಿಸುತ್ತಾರೆ.

ಹೇಳುಪದ, ಲಾವಣಿ ಪದಗಳನ್ನು ಸೊಗಸಾಗಿ ಹೇಳುವ ದಾಸಪ್ಪ, ಉತ್ತಮ ಕಲಾವಿದರೂ ಹೌದು. ಪೌರಾಣಿಕ ಬಯಲು ಕತೆಗಳಲ್ಲಿ ಕರ್ಣ, ಶಕುನಿ, ಅರ್ಜುನ ಈ ಪಾತ್ರಗಳಲ್ಲಿಯೂ ಅಭಿನಯಿಸಿದ್ದಾರೆ. ಪ್ರಧಾನವಾಗಿ ಯಕ್ಷಗಾನ, ಬಯಲಾಟಗಳಿಗೆ ಮುಖವೀಣೆ ಕಲಾವಿದರಾಗಿ ಹೆಸರು ಮಾಡಿರುವ, ತುಮಕೂರು ಹಾಗೂ ಕರ್ನಾಟಕಾಂಧ್ರ ಗಡಿಗ್ರಾಮಗಳಾದ ಹೇಮಾವತಿ, ಅಗಳಿ ಬ್ಯಾಡಗೆರೆ, ಅಮರಾಪುರ, ಮಡಕಶಿರಾ, ರೊಳ್ಳೆ, ಹಿಂದೂಪುರ ಇಲ್ಲಿ ಯಕ್ಷಗಾನ ಪ್ರದರ್ಶನಕ್ಕೆ ಮುಖವೀಣೆ ಕಲಾವಿದರಾಗಿ ಕೆಲಸ ಮಾಡಿದ್ದಾರೆ.

ದುಶ್ಯಾಸನ ಕಥೆ, ವಿರಾಟಪರ್ವ, ಕುಶಲವರ ಕಾಳಗ, ದಶಕಂಠ ರಾಮಾಯಣ ಇವರು ಕಲಿಸಿರುವ ಪ್ರಮುಖ ಯಕ್ಷಗಾನ ಪ್ರಸಂಗಗಳು. ಡಾ. ರಾಜ್‌ಕುಮಾರು ಅವರ ನಿಕಟ ಸಂಪರ್ಕ ಹೊಂದಿದ್ದ ಇವರು ಗಾಜನೂರಿನ ಡಾ. ರಾಜ್‌ಕುಮಾರ್ ಅವರ ಹಳೆಮನೆಯಲ್ಲಿ ಒಂದು ವಾರಗಳ ಕಾಲ ಮುಖವೀಣೆ ನುಡಿಸಿದ್ದ ಹಿರಿಮೆ ನನ್ನದು ಎನ್ನುತ್ತಾರೆ. ಇವರು ಸನಾದಿ ಅಪ್ಪಣ್ಣ ಚಿತ್ರದಲ್ಲಿ ಮುಖವೀಣೆ ಕಲಾವಿದರಾಗಿಯೂ ಕೆಲಸ ಮಾಡಿದ್ದಾರೆ. ಮಗ ಗೋಪಾಲ್ ಇಂದು ಮುಖವೀಣೆ ಕಲಾವಿದರಾಗಿದ್ದಾರೆ. ಹತ್ತು ಜನಕ್ಕೆ ಮುಖವೀಣೆ ಕಲಿಸಿದ್ದಾರೆ.

**ದಾಸಪ್ಪ, ಮುಖವೀಣೆ ಕಲಾವಿದರು,**
**ನಾದೂರು, ಸಿರಾ ತಾಲೂಕು.**

# ಮುಖವೀಣೆ ಕೃಷ್ಣಪ್ಪ

ಸಿರಾ ತಾಲೂಕು, ಬುಕ್ಕಾಪಟ್ಟಣ ಹೋಬಳಿಗೆ ಸೇರಿದ ಶಾಗದಡು ಒಂದ ಅಪ್ಪಟ ಬುಡಕಟ್ಟು ಗ್ರಾಮ. ಜನಪದ ಕೋಲಾಟ, ಮ್ಯಾಸಬೇಡರ ಕುಣಿತ, ಪಾಳೇಗಾರರ ವೇಷ ಮೊದಲಾದ ಜನಪದ ಕಲೆಗಳ ಸಮೃದ್ಧ ನೆಲೆ. ಸ್ವತಃ ಯಕ್ಷಗಾನದ ಪ್ಲಾಟ್ (ಯಕ್ಷಗಾನ ಪ್ರತಿಗಳನ್ನು) ತಯಾರಿಸಿ ಚಿತ್ರದುರ್ಗ, ಕೋಲಾರ, ಹಾಸನ, ತುಮಕೂರು ಈ ಜಿಲ್ಲೆಗಳ ಯಕ್ಷಗಾನ ಭಾಗವಂತಿಕೆಗೆ ಪ್ರೇರಕ ಶಕ್ತಿಯಾಗಿದ್ದ ಭಾಗವತ ಕಾಲುವೆ ರಂಗಪ್ಪ ಇದೇ ಗ್ರಾಮದವರು. ಇವರು ತಮ್ಮ ಪೂರ್ಣ ೯೦ ವರ್ಷಗಳ ಆಯುಸ್ಸನ್ನು ಯಕ್ಷಗಾನ ಪ್ರತಿ ತಯಾರಿಸುವ ಕೆಲಸದಲ್ಲಿಯೇ ಕಳೆದವರು. ಇವರ ಗರಡಿಯಲ್ಲಿ ಬೆಳೆದವರು ಛಲವಾದಿ ಕೃಷ್ಣಪ್ಪ.

ಶಾಗದಡು ಲಿಂಗಪ್ಪ, ಪುಟ್ಟಮ್ಮ ಇವರ ನಾಲ್ವರು ಮಕ್ಕಳಲ್ಲಿ ಕೃಷ್ಣಪ್ಪ ಎರಡನೆಯವರು. ಶಹನಾಯಿ, ಅರೇವಾದ್ಯ, ಚಿಟ್ಟಿಮೇಳ, ದೋಣು ಈ ಮೊದಲಾದ ಜನಪದ ಕಲೆಗಳನ್ನು ಧಾರ್ಮಿಕ ಆಚರಣೆ, ದೇವರ ಉತ್ಸವಗಳಲ್ಲಿ ತಪ್ಪದೇ ಪ್ರದರ್ಶಿಸುತ್ತಾ ಬಂದ ಕುಳವಾಡಿ ಕುಟುಂಬ ಇವರದು. ತಂದೆ ಲಿಂಗಪ್ಪನವರ ಕಲೆ ಹಿರಿಮೆಯನ್ನು ರೂಢಿಸಿಕೊಳ್ಳುವುದರ ಜೊತೆಗೆ ಯಕ್ಷಗಾನ ಪಂಡಿತ ಕಾಲುವೆ ರಂಗಪ್ಪನವರ ಒಡನಾಟ, ಶಿಷ್ಯತ್ವದಿಂದಾಗಿ ಮುಖವೀಣೆ ಕಲೆಯನ್ನು ಸತತವಾಗಿ ಹತ್ತು ವರ್ಷ ಅಭ್ಯಾಸ ಮಾಡಿದರು. ತಮ್ಮ ೧೧ನೇ ವರ್ಷದಿಂದ ಮುಖವೀಣೆ ಕಲಿಯುವುದಕ್ಕೆ ಆರಂಭಿಸಿದ ಕೃಷ್ಣಪ್ಪ ತಮ್ಮ ೨೦ನೇ ವಯಸ್ಸಿನಲ್ಲಿ ಮೂಡಲಪಾಯ ಯಕ್ಷಗಾನ ಕಲೆಗೆ ಮುಖವೀಣೆ ನುಡಿಸುವುದನ್ನು ಆರಂಭಿಸಿದರು. ಮೂಡಲಪಾಯ ಯಕ್ಷಗಾನಗಳಿಗೆ ಸಂದರ್ಭಗಳಿಗೆ ಅನುಸಾರವಾಗಿ ಕಂದ, ಶ್ಲೋಕ, ಭಾವಗಳಿಗೆ ವಿವಿಧ ತಾಳ, ಲಯ ಮತ್ತು ರಾಗಗಳಲ್ಲಿ ಸೊಗಸಾಗಿ ಮುಖವೀಣೆ ನುಡಿಸುವದು ಇವರ ವಿಶಿಷ್ಟ ಕಲೆಯಾಗಿದೆ.

ಮುಖವೀಣೆ ಕಲೆಯನ್ನು ಶಾಸ್ತ್ರಬದ್ಧವಾಗಿ ಕಲಿತಿರುವ ಇವರು ಸಾದಿ, ಶಿವರಂಜನಿ, ಗೌಳ, ಕೊರವಂಜಿ, ಸಾವೇರಿ, ಬಳಹರಿ ಈ ರಾಗಗಳನ್ನು ಆಕರ್ಷಕವಾಗಿ ನುಡಿಸಬಲ್ಲ ಅಪರೂಪದ ಕಲಾವಿದರು. ೧೯೭೦ನೇ ಇಸವಿಯಿಂದ ಸತತವಾಗಿ ಮೂಡಲಪಾಯ ಯಕ್ಷಗಾನದ ಮುಖವೀಣೆ ಭಾಗವತರಾಗಿ ಕಾರ್‍ಯನಿರ್ವಹಿಸುತ್ತಿರುವ ಕೃಷ್ಣಪ್ಪನವರು ಬಭ್ರುವಾಹನ ಕಾಳಗ, ಸುಧನ್ವನ ಕಾಳಗ, ರತಿ ಕಲ್ಯಾಣ, ಕನಕಾಂಗಿ ಪರಿಣಯ ಸುಭದ್ರಾ ಪರಿಣಯ, ಕರಿಭಂಟ, ವಿರಾಟಪರ್ವ, ಐರಾವತ, ದ್ರೌಪದಿ ವಸ್ತ್ರಾಪಹರಣ, ಲವಕುಶರ ಕಾಳಗ, ಶನಿಮಹಾತ್ಮೆ, ಗಜಗೌರಿ ವ್ರತ, ಕರ್ಣಾರ್ಜುನರ ಕಾಳಗ ಈ ಮೊದಲಾದ ಪ್ರಸಂಗಗಳಿಗೆ ಮುಖವೀಣೆ ಕಲಾಪ್ರದರ್ಶನ ನೀಡಿದ್ದಾರೆ, ನೀಡಿತ್ತಿದ್ದಾರೆ. ಈ ಕಲೆಯ ಪ್ರದರ್ಶನಕ್ಕಾಗಿ ಪ್ರತಿ ಯಕ್ಷಗಾನಕ್ಕೆ ಕೇವಲ ೧೦೦ ರೂ. ಸಂಭಾವನೆಯಿಂದ ಆರಂಭಿಸಿ ಇಂದು ೧೦೦೦ ವನ್ನೂ ಮೀರಿ ಗೌರವ ಸಂಭಾವನೆ ಪಡೆಯುವ ಹಂತ ತಲುಪಿರುವ ಕೃಷ್ಣಪ್ಪ ಯಕ್ಷಗಾನ ಕ್ಷೇತ್ರದಲ್ಲಿ ಹಲವು ಬಗೆಯ ಚಮತ್ಕಾರ, ವೈವಿಧ್ಯತೆ, ರಾಗ ಸಂಯೋಜನೆಯಂತಹ ಹಲವು ವೈವಿಧ್ಯತೆಯನ್ನು ಹೊಂದಿದೆ. ಎಂಬುದನ್ನು ತೋರುವ ವಿಶಿಷ್ಟ ಕಲಾವಿದರು ಕೃಷ್ಣಪ್ಪನವರು.

ಕೃಷ್ಣಪ್ಪ ಮುಖವೀಣೆ ಕಲೆಯ ಜೊತೆಗೆ ಇತರೆ ಜನಪದ ವಾದನಗಳಾದ ಶಹನಾಯಿ, ಅರೇವಾದ್ಯ, ಚಿಟ್ಟಿಮೇಳದ ದೋಣು ಹಾಗೂ ಕಹಳೆಮರ್ಥವಾಗಿ ನುಡಿಸಬಲ್ಲ ಕಲಾವಿದರು. ಈ ಬಗೆಗೆ ಒಂದು ಸಂಘಟನೆಯನ್ನು ಮಾಡಿಕೊಂಡು ಕಲಾವಿದರ ಸಂಘಟನೆಯಲ್ಲಿಯೂ ತೊಡಗಿರುವುದು ವಿಶೇಷ ಸಂಗತಿಯಾಗಿದೆ.

ಇವರ ಮಗ ಶ್ರೀ ಮಹೇಶ್ವರ ಕೂಡ ಅಪ್ಪನ ಈ ಮುಖವೀಣೆ ಕಲಿತು, ಸಾರ್ಥಕವಾಗಿ ಪ್ರದರ್ಶನ ನೀಡುತ್ತಿರುವುದು ಈ ಕಲೆಯ ಮುಂದುವರಿಕೆಗೆ ಇವರು ನೀಡಿರುವ ಕೊಡುಗೆಯಾಗಿದೆ. ಜಿಲ್ಲಾ, ತಾಲೂಕು ಹಂತದ ಹಲವು ಸಭೆ ಸಮಾರಂಭಗಳಲ್ಲಿ ಗೌರವಕ್ಕೆ ಒಳಗಾಗಿರುವ ಕೃಷ್ಣಪ್ಪ, ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಸಾಣೆಹಳ್ಳಿಯಲ್ಲಿ ಏರ್ಪಡಿಸಿದ್ದ ಮೂಡಲಪಾಯ ಯಕ್ಷಗಾನ ಭಾಗವತರ ಸಮಾವೇಶದಲ್ಲಿ ಹಾಸನದಲ್ಲಿ ಏರ್ಪಡಿಸಿದ್ದ ಜನಪದ ರಂಗೋತ್ಸವ ಹಾಗೂ ತಿಪಟೂರಿನಲ್ಲಿ ಏರ್ಪಡಿಸಿದ್ದ ಮುಖವೀಣೆ ಪ್ರಾತ್ಯಕ್ಷಿಕೆ ಕಾರ್ಯಕ್ರಮಗಳಲ್ಲಿ ಸಂಪನ್ಮೂಲ ಕಲಾವಿದರಾಗಿ ಭಾಗವಹಿಸಿದ್ದರು.

ಕೃಷ್ಣಪ್ಪ,<br>ಶ್ಯಾಗದಡು ಗ್ರಾಮ,<br>ಬುಕ್ಕಾಪಟ್ಟಣ ಹೋಬಳಿ, ಸಿರಾ ತಾಲೂಕು.

# ಗಣೆವಾದಕ ಈರದೊಡ್ಡಯ್ಯ

ಸಿರಾ ತಾಲೂಕು ಬಂಗಾರಿ ಹಟ್ಟಿಯ ಈರದೊಡ್ಡಯ್ಯ ತುಮಕೂರು ಜಿಲ್ಲೆಯ ಅಪರೂಪದ ಗಣೆವಾದಕ. ತಂದೆ ಬುಡ್ಡದೊಡ್ಡಯ್ಯ, ತಾಯಿ ದೊಡ್ಡಮ್ಮ ಇವರಿಗೆ ಒಬ್ಬ ಗಂಡುಮಗ, ನಾಲ್ವರು ಹೆಣ್ಣುಮಕ್ಕಳು. ೮೦ ವರ್ಷ ವಯಸ್ಸಿನ ಈರದೊಡ್ಡಯ್ಯ ಗಣೆ ಕಲೆಯನ್ನು ಕಲಿತದ್ದು ಬೇವಿನಹಳ್ಳಿ ದೇವರಹಟ್ಟಿ ನಾಗಣ್ಣನವರಿಂದ. ಕುರಿ ಮೇಯಿಸುತ್ತಾ ಊರೂರು ವಲಸೆ ಹೋಗುವಾಗ, ರಾತ್ರಿ ಕುರಿಮಂದೆ ತಡೆಯುವಾಗ, ಕಳ್ಳಕಾಕರ, ಕ್ರೂರ ಪ್ರಾಣಿಗಳಿಂದ ಕುರಿಯ ರಕ್ಷಣೆಯ ಹಿನ್ನೆಲೆಯಲ್ಲಿ ಕಾಡುಗೊಲ್ಲರು ಯಾವುದಾದರೂ ಸಾಂಸ್ಕೃತಿಕ ಚಟುವಟಿಕೆಯ ಮೂಲಕ ರಾತ್ರಿಯೆಲ್ಲಾ ಎದ್ದಿರಲೇ ಬೇಕಾಗುತ್ತದೆ. ಈ ಕಾರಣಕ್ಕಾಗಿಯೇ ಗಣೆವಾದನವನ್ನು ಈರದೊಡ್ಡಯ್ಯ ಅಭ್ಯಾಸ ಮಾಡಿದ್ದಾರೆ. ಈರದೊಡ್ಡಯ್ಯ ತಮ್ಮ ೧೦ನೇ ವಯಸ್ಸಿನಿಂದ ಕೋಲಾಟ, ಯಕ್ಷಗಾನ ಹಾಗೂ ಜನಪದ ಕಾವ್ಯ ಹಾಡುಗಾರಿಕೆಯಲ್ಲಿ ತಮ್ಮನ್ನು ಸಕ್ರಿಯವಾಗಿ ತೊಡಗಿಸಿಕೊಂಡಿದ್ದಾರೆ. ನೂರಾರು ಯುವಕರಿಗೆ ಕೋಲಾಟ ಕಲೆಯನ್ನು ಕಲಿಸಿದ್ದಾರೆ. ಕೊರವಂಜಿ ಕೋಲು, ಗಣಮುಖನ ಸ್ತುತಿ, ಜುಂಜಪ್ಪನ ಕೋಲು, ಚಿತ್ರೇ ದೇವರ ಪದ, ಬೇವಿನಹಳ್ಳಿ ಕರಿಯಮ್ಮ, ರಂಗಪ್ಪನ ಮೇಲೆ ಪದ ಕಟ್ಟಿ ಕೋಲುಹಾಡುಗಳಲ್ಲಿ ಹಾಡುವುದು ಈತನ ವಿಶೇಷವಾಗಿದೆ. ಮದುವೆ, ಜಾತ್ರೆ ದೇವರ ಉತ್ಸವಗಳಲ್ಲಿ ಊರಿಂದ ಊರಿಗೆ ಹೋಗಿ ಕೋಲುಮೇಳ ನಡೆಸುವುದು ಇವರಿಗೆ ರೂಢಿಯಾಗಿದೆ. ಇವರೊಂದಿಗೆ ಬಂಗಾರಿಹಟ್ಟಿ, ಗಾಣದಹುಣಸೆ, ಎರೆಕಟ್ಟೆ, ಕಿಲಾರದಹಳ್ಳಿ, ಬುಕ್ಕಾಪಟ್ಟಣ ಈ ಮೊದಲಾದ ಕಡೆಯ ಯುವಕರಿಗೂ ಕೋಲಾಟ ಪದಗಳನ್ನು ಕಲಿಸಿಕೊಟ್ಟಿದ್ದಾರೆ. ಇವರ ಶಿಷ್ಯರು ಹಲವಾರು ಕಡೆ ಕೋಲು ಪ್ರದರ್ಶನಕ್ಕೆ ಹೋಗಿ ಬರುವ ಮೂಲಕ ಕಲಾ ಪ್ರದರ್ಶನ ಪ್ರೇರಕರಾಗಿದ್ದಾರೆ. ಇವರು ಕರ್ನಾಟಕ ರಾಜ್ಯೋತ್ಸವ, ಗಣರಾಜ್ಯೋತ್ಸವ ಈ ಮೊದಲಾದ ಸಾಂಸ್ಕೃತಿಕ ಹಬ್ಬದ ಸಂದರ್ಭದಲ್ಲಿ ಶಾಲೆಗಳಿಗೆ ತೆರಳಿ ಗಣ್ಯರ ಮುಂದೆ ಕೋಲುಮೇಳ ನಡೆಸಿ, ಅವರಿಂದ ಸೈ ಅನ್ನಿಸಿಕೊಳ್ಳುವ

ವಿಶೇಷತೆಯನ್ನು ದೊಡ್ಡಯ್ಯನವರ ನೇತೃತ್ವದಲ್ಲಿ ನಡೆಯುತ್ತಿದೆ. ಗಣೆವಾದಕರಾದ ದೊಡ್ಡಯ್ಯನವರು ಭಾಗವಂತಿಕೆ, ವೇಷದಾರಿಕೆಯಲ್ಲಿ ಪರಿಣಿತರು. ಸೂತ ಪುತ್ರ, ವಿರಾಟಪರ್ವ, ರಾಮಾಂಜನೇಯ ಯುದ್ಧ ಈ ಮೊದಲಾದ ಯಕ್ಷಗಾನ ಪ್ರಸಂಗಗಳಿಗೆ ಹಿಮ್ಮೇಳ ಭಾಗವತರಾಗಿ, ಪಾತ್ರಧರಿಗಳಗಿಯೂ ಕಾರ್ಯನಿರ್ವಹಣೆ ಮಾಡಿದ್ದಾರೆ.

ಗಣೆವಾದಕರ ಕೊರತೆ ಎದುರಿಸುತ್ತಿರುವ ಇತ್ತೀಚಿನ ದಿನಗಳಲ್ಲಿ ಜನಪದ ಮಹಾಕಾವ್ಯಗಳ ಹಾಡುಗಾರಿಕೆಗೆ ಆಸರೆಯಾಗಿರುವ ಗಣೆವಾದಕ ಶ್ರೀ ಬಂಗಾರಿಪಟ್ಟಿ ದೊಡ್ಡಯ್ಯ ತಮ್ಮ ಮಗನಿಗೂ ಕೋಲುಪದ ಹಾಡುಗಾರಿಕೆ ಹೇಳಿಕೊಟ್ಟಿದ್ದಾರೆ. ಆದರೆ ಗಣೆವಾದನ ಕಲಿತಿಲ್ಲ. ಗಣೆವಾದನದ ಕಲಿಕೆಯೂ ಕಷ್ಟ. ನಾಭಿಯಿಂದ ಉಸಿರನ್ನು ಬಿಗಿಹಿಡಿದು ನಿಧಾನವಾಗಿ ಗಣೆಯ ರಂಧ್ರದ ಮೂಲಕ ಬಿಡುತ್ತಾ ಆ ಉಸಿರಿಗೆ ನಾದವಾಗಿ ಹಾಡು ಬಾರಿಸುವುದು ತುಸು ಕಷ್ಟದ ಕೆಲಸ. ಇಂಥ ಪರಿಶ್ರಮವಾದುರಿಂದಾಗಿಯೇ ಇಂದ ಗಣೆ ಕಲೆ ಮಾಯವಾಗುತ್ತಿದೆ. ಇಂಥ ಅಪೂರ್ವ ದೇಶೀಕಲೆಯನ್ನು ಸಮರ್ಥವಾಗಿ ಮುನ್ನಡೆಸುತ್ತಿರುವ ಚಿಕ್ಕದೊಡ್ಡಯ್ಯ ಇಂದು ಹಣ್ಣಾಗಿದ್ದಾರೆ. ಆದರೆ ಗಣೆ ಊದುವ ಉತ್ಸಾಹ ತಗ್ಗಿಲ್ಲ.

ಈರದೊಡ್ಡಯ್ಯ,<br>ಬಂಗಾರಿಹಟ್ಟಿ,<br>ಬುಕ್ಕಾಪಟ್ಟಣ ಮಾರ್ಗ, ಸಿರಾ ತಾಲೂಕು.

## ಚಿಟ್‌ಮೇಳದ ಮಹಾಲಿಂಗಪ್ಪ

ಗುಬ್ಬಿ ತಾಲೂಕು ಚೇಳೂರು ಹೋಬಳಿ ಮಾದೇನಹಳ್ಳಿಯ ಮಹಾಲಿಂಗಪ್ಪ ಚಿಟ್ ಮೇಳದ ಪ್ರಸಿದ್ಧ ಕಲಾವಿದ. ಆರು ಜನರ ತಂಡವೊಂದನ್ನು ರಚಿಸಿಕೊಂಡು ಅತ್ಯುತ್ತಮ ಕಲಾ ಪ್ರದರ್ಶನ ನೀಡುತ್ತಾ ಬಂದಿರುವ ಇವರು ಇತ್ತೀಚೆಗೆ ಕಾಲಿನ ಅಪಘಾತದಿಂದಾಗಿ ಅಂಗವಿಕಲರಾಗಿದ್ದಾರೆ. ಮಹಾಲಿಂಗಪ್ಪ, ಚಿಟ್ ಮೇಳದ ಕಲೆಗೆ ಹೊಸ ಕಾಯಕಲ್ಪ ತಂದವರು ಮೂಡಲಪಾಯ ಯಕ್ಷಗಾನ, ಸಾಮಗಾನ, ಹುಲಿವೇಷ ಈ ಮೊದಲಾದ ಜನಪದ ಕಲೆಗಳ ಬಗ್ಗೆ ಅಪಾರ ಒಲವು ಇರಿಸಿಕೊಂಡು ಆ ಕಲೆಯನ್ನು ಕಲಿಸುತ್ತಾ ಬಂದಿದ್ದಾರೆ.

ಮಾದೇನಹಳ್ಳಿ ಗ್ರಾಮದಲ್ಲಿದ್ದ ಮಾರಿದೇವತೆ ಏಳೂರು ಅಧಿದೇವತೆಯಾಗಿದ್ದು ಆಕೆಯ ಮೆರವಣಿಗೆ ಗುಬ್ಬಿ, ತುಮಕೂರು ಈ ತಾಲೂಕುಗಳಲ್ಲಿ ಈ ದೇವತೆಯ ಅಪಾರ ಭಕ್ತರಿದ್ದಾರೆ. ಹಾಗಾಗಿ ಈ ದೇವತೆಯ ಉತ್ಸವ ಈ ಎಲ್ಲಾ ಭಾಗಗಳಲ್ಲಿ ನಡೆಯುತ್ತದೆ. ಅಂಥ ಸಂದರ್ಭದಲ್ಲಿ ವಾದ್ಯ ಕಲಾವಿದರಾಗಿ, ದೇವಿಯ ಕುಟುಂಬ ಕಲಾವಿದರಾಗಿ, ಒಕ್ಕಲು ಮಕ್ಕಳಿಗಾಗಿ ಕಲಾ ಪ್ರದರ್ಶನ ನೀಡಿತ್ತಾ ಬರುತ್ತಿದ್ದರು. ಇವರ ತಂದೆ, ತಾತರ ಕಾಲದಿಂದಲೂ ಚಿಟ್‌ಮೇಳ ಕಲಾವಿದರಾಗಿ ಈ ಕಲಾಸೇವೆಯನ್ನು ನಿರಂತರವಾಗಿ ಮಾಡುತ್ತಾ ಬಂದಿರುವುದು ವಿಶೇಷ.

ಕೇವಲ ಧಾರ್ಮಿಕ ಕಲಾವಿದರಾಗಿ, ಲೌಕಿಕ ಸಮಾರಂಭಕ್ಕೆ ಮಾತ್ರ ಮೀಸಲಾಗದ ಈ ಕಲಾವಿದ ತಮ್ಮ ಹೆಸರುವಾಸಿತನದಿಂದಾಗಿ ಗಣಪತಿ ಉತ್ಸವ, ರಾಜ್ಯೋತ್ಸವ ಸಮಾರಂಭ ಈ ಬಗೆಯ ವಿಶೇಷ ಸಂದರ್ಭಗಳಲ್ಲಿ ಕರ್ನಾಟಕದಾದ್ಯಂತ ಇವರಿಗೆ ಆಹ್ವಾನವಿರುತ್ತದೆ. ಭೋರ್ಗರೆಯುವ ವಾದ್ಯವಿಶೇಷ, ಅರೆವಾದ್ಯ ಮಧುರುವಾದ ಹಾಗೂ ಶಾಸ್ತ್ರೀಯ ಸಂಗೀತ, ಇವರ ಹಾಡಿನ ವಿಶೇಷ. ಹಾಡು ನುಡಿಸುವ ಕಲೆ ಇವರ ವಿಶೇಷ

ತಂತ್ರಗಾರಿಕೆಯಾಗಿದ್ದು ಈ ಕಲಾತಂಡದ ಅಪರೂಪದ ಗುಣವಾಗಿದೆ. ಇವರ ಕಲಾ ಮಾಧುರ್ಯ ಕೇವಲ ಕರ್ನಾಟಕಕ್ಕೆ ಮಾತ್ರ ಸೀಮಿತವಾಗಿಲ್ಲ. ನಾಟಕ, ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಮೂಲಕ ದೆಹಲಿ, ನಾಗಪುರ, ಮಧ್ಯಪ್ರದೇಶ, ಅಂಡಮಾನ್ ನಿಕೋಬಾರ್ ದ್ವೀಪಗಳಲ್ಲೂ ಚಿಟ್ಟಿಮೇಳವನ್ನು ನುಡಿಸಿದ ಈ ಕಲಾಪ್ರೌಢಿಮೆಯನ್ನು ಮೆರೆದ ಹಿರಿಮೆ ಇವರಿಗೆ ಸಲ್ಲುತ್ತದೆ. ಮಾದೇನಹಳ್ಳಿಯ ಚಿಟ್ಟಿಮೇಳವೆಂದರೆ ತಲೆ ತೂಗಬಹುದಾದ ಪಾಂಡಿತ್ಯ. ಪ್ರತಿಭೆ. ಇಬ್ಬರು ಮಕ್ಕಳು. ಆದರೆ ಬತ್ತದ ಉತ್ಸಾಹ, ಕಲಾವಿದರು ಕಲೆಯ ಬಗ್ಗೆ ತೋರಿರುವ ಗೌರವ ಅಪಾರವಾದುದು. ಇದು ಮಹಾಲಿಂಗಯ್ಯನವರ ಹಿರಿಮೆ.

**ಮಹಾಲಿಂಗಯ್ಯ,**<br>
**ಚಿಟ್ಟಿಮೇಳದ ಕಲಾವಿದರು,**<br>
**ಮಾದೇನಹಳ್ಳಿ, ಚೇಳೂರು ಹೋ. ಗುಬ್ಬಿ ತಾಲೂಕು.**

## ತಮಟೆ ಲಕ್ಷ್ಮಯ್ಯ

ಸಿರಾ ತಾಲೂಕು ಕಳ್ಳಂಬೆಳ್ಳದ ಅಂಬೇಡ್ಕರ್ ಕಾಲನಿ ನಿವಾಸಿ ಶ್ರೀ ಲಕ್ಷ್ಮಯ್ಯ ತಮ್ಮ ವಿಶಿಷ್ಟ ಕೈಚಳಕ, ನಾದದ ಲಯ, ಇಂಪಾದ ಹಾಡುಗಳ ಜೋಡಣೆಯಿಂದ ಅಪರೂಪದ ವಾದ್ಯ ಕಲಾವಿದರಾಗಿದ್ದಾರೆ.

ತಂದೆ ಶ್ರೀ ಜೋಗಣ್ಣ ಚಿಟ್ಟುಮೇಳದ ಕಲಾವಿದರು, ಲಾವಣಿಕಾರರು, ತತ್ವಪದ ಹಾಡುಗಾರರೂ ಆಗಿದ್ದರು. ಅವರ ಮಗ ಲಕ್ಷ್ಮಯ್ಯ ಸಮೇತ, ಅರೆ ಹಾಗೂ ಬ್ಯಾಂಡ್ ವಾದ್ಯದ ಮೂಲಕ ಜನಮನ ಸೆಳೆದಿದ್ದಾರೆ. ಬೆಂಗಳೂರಿನ ವಿಧಾನಸೌಧದ ಮುಂಭಾಗ ರಾಜೀವ್‌ಗಾಂಧಿ ಬೆಂಗಳೂರಿಗೆ ಆಗಮಿಸಿದ್ದ ಸಂದರ್ಭದಲ್ಲಿ ವಿಮಾನ ನಿಲ್ದಾಣದಲ್ಲೂ ತಮಟೆ ವಾದ್ಯ ನುಡಿಸಿ ವಿಶೇಷ ಗಮನ ಸೆಳೆದವರು.

ತಮಟೆ ವಾದ್ಯ ವಿಶೇಷ ಹಾಡುಗಾರಿಕೆಯನ್ನು ಇವರು ಹಾಡುತ್ತಾರೆ. ತಮಟೆ ತಯಾರಿಕಾ ಕಲೆಗಾರಿಕೆಯೂ ಇವರಿಗೆ ಸಿದ್ಧಿಸಿದೆ. ಹದವಾದ ಚರ್ಮದಿಂದ ಸ್ಥಳೀಯವಾಗಿ ತಮಟೆ ಕಟ್ಟಿ, ಅದಕ್ಕೆ ಹದಕೊಟ್ಟು ತಮಟೆ ವಾದ್ಯ ನುಡಿಸುವುದೆಂದರೆ ಇವರಿಗೆ ಎಲ್ಲಿಲ್ಲದ ಉತ್ಸಾಹ. ಇಬ್ಬರು ಗಂಡುಮಕ್ಕಳನ್ನು ಅಪ್ಪನ ಜಾಡಿನಲ್ಲಿಯೇ ಸಾಗುತ್ತಿದ್ದು ತಮಟೆ ಕಲಾವಿದರಾಗಿದ್ದಾರೆ. ತಮಟೆ ವಾದ್ಯವಿಶೇಷವೆಂದರೆ ಒಂಬತ್ತು ಜನರ ಒಂದು ತಂಡವಿದ್ದು ಇವರಲ್ಲಿ ಲಕ್ಷ್ಮಯ್ಯ ಪ್ರಧಾನ ಪಾತ್ರ ವಹಿಸುತ್ತಾರೆ. ಬಿಳಿಅಂಗಿ, ಹೆಗಲ ಮೇಲಿನ ವಲ್ಲಿಯನ್ನು ಸೊಂಟಕ್ಕೆ ಬಿಗಿದುಕಟ್ಟಿ, ಪಂಚೆ ಮೇಲಕ್ಕೆ ಎತ್ತಿಕಟ್ಟಿ, ತಮಟೆಯ ಸದ್ದಿಗೆ ಲಯವಾದ ಹೆಜ್ಜೆ ಹಾಕುವುದು ಇವರ ವಿಶೇಷ. ತಮಟೆಯ ಧ್ವನಿ ಲಯ ತಲುಪಬಹುದು. ಆದರೆ ಲಕ್ಷ್ಮಯ್ಯನ ಹೆಜ್ಜೆ ಸಪ್ಪಳವಂತೂ ಲಯ ತಪ್ಪಲಾರದು, ಅಷ್ಟೊಂದು ಆಕರ್ಷಣೆ, ತೋರಿಕೆಯಾಚೆ ಶಾಸ್ತ್ರೀಯ ವಾದ್ಯಶೈಲಿಯ ತಮಟೆ ಕುಣಿತ ಇವರ ವಿಶಿಷ್ಟ ಕೊಡುಗೆಯಾಗಿದೆ.

ತಮಟೆ ವಾದಕರಾಗಿ, ಮುಖ್ಯ ಕಲಾವಿದರಾಗಿ, ನೃತ್ಯಗಾರರಾಗಿ, ತಮಟೆವಾದ್ಯ ತಯಾರಕರಾಗಿಯೂ ಕಾರ್ಯನಿರ್ವಹಿಸುವ ಲಕ್ಷ್ಮಯ್ಯ ಉತ್ತಮ ಭಾಗವತರೂ, ಯಕ್ಷಗಾನ ವೇಷಧಾರಿಗಳೂ ಹೌದು. ಮೂಡಲಪಾಯ ಯಕ್ಷಗಾನದಲ್ಲಿ ಹಲವು ಘೋರಪಾತ್ರಗಳ ಮೂಲಕ ಹೆಸರುವಾಸಿಯಾಗಿದ್ದಾರೆ. ದುಶ್ಯಾಸನ ಕಾಳಗ, ಕರ್ಣಾರ್ಜುನರ ಕಾಳಗ, ಭಕ್ತ ಸುಧನ್ವ ಈ ಬಗೆಯ ನಾಟಕಗಳಲ್ಲಿ ದುರ್ಯೋಧನ, ಭೀಮ, ದುಶ್ಯಾಸನ ಈ ಪಾತ್ರಗಳಲ್ಲಿ ಮನೋಜ್ಞ ಅಭಿನಯ ನೀಡಿರುವ ಲಕ್ಷ್ಮಯ್ಯ ಅವರಿಗೆ ೭೦ರ ಪ್ರಾಯದಲ್ಲಿ ಕಲೆಯ ಬಗೆಗಿನ ಗೀಳು ಕಡಿಮೆಯಾಗಿಲ್ಲ. ತಮಟೆಯ ಜೊತೆಗೆ ನಾಟಕದ ಪಾತ್ರಾಭಿನಯವೂ ಇವರಿಗೆ ಪ್ರಿಯವಾದ ಸಂಗತಿಯಾಗಿದೆ. ಇವರ ಜೊತೆಗೆ ಗೋಪಿಕುಂಟೆ ನರಸಿಂಹಯ್ಯ, ಕರಿದಾಸರಹಳ್ಳಿ ಮೂಡಲಪ್ಪ, ನರಸಿಂಹಯ್ಯ ಸಿರಾ ಭಾಗದ ಪ್ರಮುಖ ಕಲಾವಿದರು.

**ಲಕ್ಷ್ಮಯ್ಯ ಬಿನ್ ಜೋಗಯ್ಯ,**
**ಕಳ್ಳಂಬೆಳ್ಳ,**
**ಅಂಬೇಡ್ಕರ್ ಕಾಲೋನಿ, ಸಿರಾ ತಾಲೂಕು.**

# ಲಿಂಗದವೀರ ಕೆ. ಆರ್. ಹೊಸಳ್ಳಯ್ಯ

ಸಮರ್ಥ ವೀರಭದ್ರನ ಕುಣಿತದ ಹೊಸಳ್ಳಯ್ಯನವರಿಗೆ ವೀರಭದ್ರನ ಕಲೆಯು ಮೂರು ತಲೆಮಾರುಗಳ ಪರಂಪರೆಯಿದೆ. ಇವರ ತಾತ ಸಿದ್ಧರಾಮಯ್ಯನವರು, ತಂದೆ ರುದ್ರಯ್ಯನವರು ಈ ಅಭಿಜಾತ ಕಲೆಯನ್ನು ಜತನದಿಂದ ಕಾಪಾಡಿಕೊಂಡು ಬಂದವರು. ಜೊತೆಗೆ ತುಮಕೂರು ಜಿಲ್ಲೆಯಲ್ಲಿ ವೀರಭದ್ರನ ಕುಣಿತಕ್ಕೆ ವ್ಯಾಪಕ ಪ್ರಚಾರ, ಪ್ರದರ್ಶನಗಳಿಂದ ಈ ಕಲೆಯ ಪ್ರಸಿದ್ಧಿಗೂ ದುಡಿದ ಹಿರಿಮೆ ಈ ಮನೆತನಕ್ಕೆ ಸಲ್ಲುತ್ತದೆ.

ತುಮಕೂರು ಜಿಲ್ಲೆಯ ಕುಣಿಗಲ್ ತಾಲೂಕಿನ ಎಡೆಯೂರು ಒಂದು ಪ್ರಮುಖ ಧಾರ್ಮಿಕ ನೆಲೆ. ಇಲ್ಲಿ ಸಿದ್ಧಲಿಂಗೇಶ್ವರ ದೇವಾಲಯ ಅಖಂಡ ಕರ್ನಾಟಕ ಪಾವಿತ್ರ್ಯವನ್ನು ಪ್ರಸಿದ್ಧಿಯನ್ನು ಪಡೆದಿರುವುದು ವಿಶೇಷ. ಇದೇ ಕ್ಷೇತ್ರದಲ್ಲಿ ವಂಶಪಾರಂಪರ್ಯವಾಗಿ ನೆಲೆಸಿ, ಸಿದ್ಧಲಿಂಗೇಶ್ವರನ ಕ್ಷೇತ್ರದಲ್ಲಿ ವೀರಭದ್ರನ ಕುಣಿತದಿಂದ ಧಾರ್ಮಿಕ ಹಾಗೂ ಲೌಕಿಕ ಸಮಾರಂಭಗಳಲ್ಲಿಯೂ ಅಪೂರ್ವ ಕಲಾಪ್ರದರ್ಶನಗಳಿಂದ ಅಪಾರ ಜನಪ್ರಿಯತೆ ಗಳಿಸಿರುವುದು ಇವರ ವಿಶೇಷವಾಗಿದೆ. ವೀರಶೈವ ಜನಾಂಗದ ಯಾವುದೇ ಧಾರ್ಮಿಕ ಕಾರ್ಯಕ್ರಮಗಳಲ್ಲಿ ಇವರ ಪಾತ್ರ ಅನನ್ಯವಾದುದು. ಶೈವ ಸಂಬಂಧಿ ನಾಮಕರಣ, ದೇವರ ಉತ್ಸವ, ಹೊಸಗುಡಿ ಪ್ರವೇಶ, ಗೃಹಪ್ರವೇಶ ಈ ಬಗೆಯ ಕಾರ್ಯಕ್ರಮಗಳಲ್ಲೂ ಲಿಂಗದಬೀರರ ಪೂಜೆ ಅಥವಾ ಕಲಾಪ್ರದರ್ಶನ ಇರಲೇಬೇಕಾಗುತ್ತದೆ. ವೀರಭದ್ರನ ಸ್ವಯಂ ಅವತಾರ ಎಂದೇ ಕರೆಯಲ್ಪಡುವ ಈ ಕಲೆಯನ್ನು ವಂಶಪಾರಂಪರ್ಯ ಕಲಾ ಆರಾಧನೆಯನ್ನಾಗಿ ನಡೆಸಿಕೊಂಡು ಬರಲಾಗುತ್ತದೆ. ಜೊತೆಗೆ ಜಾತ್ರಾ ಉತ್ಸವ ಗಳಲ್ಲೂ ಈ ಕುಣಿತ ಒಂದು ಆಕರ್ಷಕ ಕಲೆಯಾಗಿಯೂ ಪ್ರದರ್ಶನಗೊಳ್ಳುತ್ತದೆ.

ರುದ್ರಯ್ಯನವರ ಮಗನಾಗಿ ಅವರ ಕಲಾ ಗರಡಿಯಲ್ಲಿ ಬೆಳೆದ ಹೊಸಳ್ಳಯ್ಯ ಕರ್ನಾಟಕದ ಎಲ್ಲಾ ಧಾರ್ಮಿಕ ಸ್ಥಳಗಳಲ್ಲಿ ವೀರಭದ್ರನ ಕಲಾಪ್ರದರ್ಶನ ನೀಡಿರುವುದು

ವಿಶೇಷ. ೨೦ ಜನ ಕಲಾವಿದರ ಗುಂಪಿನೊಂದಿಗೆ ಚಿಟ್ಟಿಮೇಳ ಅಥವಾ ಚಮ್ಮೇಳ ವಾದ್ಯದೊಂದಿಗೆ ಶಿವನ ವೇಷಧಾರಿಯಾಗಿ ಈ ಕಲೆಯನ್ನು ಆಕರ್ಷಕವಾಗಿ ಬೆಳೆಸಿದ್ದಾರೆ.

ದೆಹಲಿ, ಕೇರಳ, ಆಂಧ್ರ, ತಂಜಾವೂರು, ಮದ್ರಾಸ್, ಪಾಂಡಿಚೇರಿ, ಪಂಜಾಬ್, ಹರಿಯಾಣ, ರಾಜಾಸ್ಥಾನ, ಓರಿಸ್ಸಾ, ಅಸ್ಸಾಂ ರಾಜ್ಯಗಳಲ್ಲಿ ಸಾಂಸ್ಕೃತಿಕ ವಿನಿಮಯದ ಯೋಜನೆಯಲ್ಲಿ ಅಡಿಯಲ್ಲಿ ಕಲಾಪ್ರದರ್ಶನ ನೀಡಿದ್ದಾರೆ. ದೆಹಲಿಯ ಕನ್ನಡಭವನ, ಕರ್ನಾಟಕ ಸಂಘ ಇಲ್ಲೆಲ್ಲಾ ಸತತವಾಗಿ ೧೦ ಬಾರಿ ಕಲಾಪ್ರದರ್ಶನ ನೀಡಿದ ಹಿರಿಮೆಯೂ ಇವರದು.

ಅಮೇರಿಕದ ಅಕ್ಕನ ಬಳಗದ ಆಹ್ವಾನದ ಮೇರೆಗೆ ಕೆನಡಾ ಮತ್ತು ಇತರೆ ರಾಜ್ಯಗಳಲ್ಲಿ ವೀರಭದ್ರನ ಕುಣಿತ ಕಲೆಯನ್ನು ಒಂದು ತಿಂಗಳುಗಳ ಕಾಲ ನಿರಂತರವಾಗಿ ಪ್ರದರ್ಶಿಸಿದ ಹಿರಿಮೆಯೂ ಇವರದು. ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕರ್ನಾಟಕ ಜಾನಪದ ಅಕಾಡೆಮಿಯ ಮೂಲಕ ರಾಜ್ಯದ ಎಲ್ಲ ಜಿಲ್ಲೆಗಳ ಸಾಂಸ್ಕೃತಿಕ ಸಮಾರಂಭ, ಕನ್ನಡ ಸಾಹಿತ್ಯ ಸಮ್ಮೇಳನ ಹಾಗೂ ರಾಜ್ಯೋತ್ಸವ, ಜಿಲ್ಲಾ ಸಾಂಸ್ಕೃತಿಕ ಉತ್ಸವಗಳಲ್ಲಿ ಕಲಾಪ್ರದರ್ಶನ ನೀಡಿರುವ ಹಿರಿಮೆ ಇವರದು. ಜಿಲ್ಲಾ ಪ್ರಶಸ್ತಿಯ ಜೊತೆಗೆ ಜಾನಪದ ಲೋಕೋತ್ಸವ ಪ್ರಶಸ್ತಿಯನ್ನು ಜಾನಪದ ಪರಿಷತ್ತು ನೀಡಿ ಗೌರವಿಸಿದೆ.

ತಮ್ಮ ತಂದೆ, ತಾತ ಅವರುಗಳ ಗುರಸ್ಥಾನ ಶಿಷ್ಯರೂಪದಲ್ಲಿ ಕಲಿತ ವೀರಭದ್ರನ ಕುಣಿತ ಕಲೆಯನ್ನು ಪೋಷಿಸುತ್ತಾ ಬರುತ್ತಿರುವ ಹೊಸಳ್ಳಯ್ಯನವರು ಹೊಸದಾಗಿ ಈ ಕಲೆಯನ್ನು ೨೦ ಜನ ಯುವಕರಿಗೆ ಕಲಿಸಿರುವುದು ವಿಶೇಷ. ವಿರಳ ಹಾಗೂ ಮರೆಯಾಗುತ್ತಿರುವ ವೀರಭದ್ರನ ಕಲೆಗೆ ಹೊಸ ಕಾಯಕಲ್ಪ ನೀಡುತ್ತಿರುವ ಹೊಸಳ್ಳಯ್ಯ ತುಮಕೂರು ಜಿಲ್ಲೆಯ ಅಪೂರ್ವ ಕಲಾವಿದರು.

**ಕೆ. ಆರ್. ಹೊಸಳ್ಳಯ್ಯ**
**ಎಡೆಯೂರು-೫೭೨೧೪೨**
**ಕುಣಿಗಲ್ ತಾಲೂಕು.**

## ಚಿಕ್ಕನಹಳ್ಳಿ ಲಿಂಗದ ಬೀರರ ವೀರಣ್ಣ

ಲಿಂಗದ ಬೀರರ ಕಲೆಯನ್ನು ಸಮರ್ಥವಾಗಿ ಪ್ರಸಾರ ಮಾಡುತ್ತಾ, ಕಲೆಯ ಉಳಿವಿಗಾಗಿ ಶ್ರಮಿಸುತ್ತಿರುವ ಹಿರಿಯ ಕಲಾವಿದ ಚಿಕ್ಕನಹಳ್ಳಿ ವೀರಣ್ಣ, ಸಿರಾ ತಾಲೂಕು ಕಳ್ಳಂಬೆಳ್ಳ ಹೋಬಳಿಗೆ ಸೇರಿದ ಚಿಕ್ಕನಹಳ್ಳಿಯಲ್ಲಿ ಹುಟ್ಟಿದ್ದು ೧೨ನೇ ಆಗಸ್ಟ್ ೧೯೩೯ರಲ್ಲಿ. ತಂದೆ ಶ್ರೀ ವೀರಭದ್ರಯ್ಯ ದೇವಾಲಯದ ಅರ್ಚಕ ವೃತ್ತಿಯ ಜೊತೆಗೆ ವಂಶಪಾರಂಪರ್ಯ ವೀರಗಾಸೆ ಕಲೆಯನ್ನು ಧಾರ್ಮಿಕ ಆಚರಣೆಯಾಗಿ ಧಾರ್ಮಿಕ ಸಭೆ ಸಮಾರಂಭಗಳೂ ಸೇರಿದಂತೆ ವಿಶೇಷ ಸಂದರ್ಭಗಳಲ್ಲೂ ನಡೆಸುತ್ತಾ ಬಂದವರು. ಇವರಿಗೆ ಒಪ್ಪುವ ಮಡದಿ ಶ್ರೀಮತಿ ಗೌರಮ್ಮ.

ವೀರಭದ್ರನ ಕುಣಿತ, ಲಿಂಗದಬೀರರ ಕುಣಿತ ಎಂದೇ ಪರಿಭಾವಿಸುವ ವೀರಗಾಸೆ ಅತ್ಯಂತ ರೋಚಕ ಕಲೆ. ಸ್ವಯಂತ ವೀರಭದ್ರನೇ ಧರೆಗಿಳಿದು ಬಂದ ರೀತಿಯಲ್ಲಿ ಆರ್ಭಟಿಸುವುದು ಈ ಕಲೆಯ ವಿಶೇಷ. ವೀರಗಾಸೆಗಿಂತ ಕೊಂಚ ಭಿನ್ನವಾಗಿ, ಕೈಯಲ್ಲಿ ನೀಳವಾದ ಖಡ್ಗ, ತಲೆಯಲ್ಲಿ ನಾಗಾಭರಣ ಕಿರೀಟ, ಉದ್ದನೆಯ ಕೆಂಪಂಗಿಯ ಕಷಾಯ, ಹಸಿರು ಬಣ್ಣದ ಧೋತ್ರ ಅಥವಾ ಪೈಜಾಮ, ಸೊಂಟಕ್ಕೆ ರುಂಡಮುಂಡಗಳ ಕಂಚಿನ ಫಲಕ, ತೋಳಬಂದಿ, ನಾಗಾಭರಣ, ಮುಡಿಗೆ ಕೃತಕವಾಗಿ ತಯಾರಿಸಿರುವ ಉದ್ದನೆಯ ಬಿಳಿ ಕೂದಲಿನ ಟೋಪನ್, ಕಾಲಲ್ಲಿ ಗೆಜ್ಜೆ, ಕೊರಳಲ್ಲಿ ರುದ್ರಾಕ್ಷಿಸರ, ಹಣೆ ತುಂಬಾ ವಿಭೂತಿ, ಕೊರಳಲ್ಲಿ ರುದ್ರಾಕ್ಷಿಯ ಜೊತೆಗೆ ಹೂವಿನ ಹಾರ ಇವರು ವೀರಭದ್ರನ ವೇಷಭೂಷಣಗಳು. ವೀರಶೈವ ಧಾರ್ಮಿಕ ವಿಧಿ ವಿಧಾನಗಳಲ್ಲಿ ಕಡ್ಡಾಯವಾಗಿ ಬಳಸುವ, ಆಚರಿಸುವ ಈ ಕುಣಿತ, ದೇವರ ಮೆರವಣಿಗೆ, ನಂದಿಧ್ವಜಗಳೊಂದಿಗೆ ಇರಬೇಕೆಂಬುದು ಜನಪದರ ಬಲವಾದ ನಂಬಿಕೆ. ಚಿಟ್ಟಿಮೇಳದ ವಾದ್ಯಮೇಳಕ್ಕೆ ತಕ್ಕನಾಗಿ ಹೆಜ್ಜೆ ಹಾಕುತ್ತ, ಆವೇಶಭರಿತವಾಗಿ ಕುಣಿಯುವ ಈ ಕಲೆ ವೀರಗಾಸೆ ಕಲೆಗಿಂತ ತೀರಾ ಭಿನ್ನವಾದುದು. ಇಂಥ ಇಲ್ಲವಾಗುತ್ತಿರುವ ಲಿಂಗದಬೀರರ ಕಲಾ ಪರಂಪರೆಯನ್ನು ಸಮರ್ಥವಾಗಿ

ಉಳಿಸಿ ಬೆಳೆಸುತ್ತಿರುವುದು ಶ್ರೀ ವೀರಣ್ಣನವರ ವಿಶೇಷ. ತುಮಕೂರು ಜಿಲ್ಲೆಯ ಬೇಳ್ಳಾವೆ ವೀರಣ್ಣ, ಹೆಚ್. ಎಸ್. ನೀಲಕಂಠಪ್ಪ, ಗುಬ್ಬಿಯ ಚಂದ್ರಪ್ಪ, ಕುಣಿಗಲ್ ತಾಲೂಕು ಯಡೆಯೂರಿನ ಹೊಸಳ್ಳಯ್ಯ ಈ ಮೊದಲಾದ ಕೆಲವೇ ಕೆಲವು ಕಲಾವಿದರು ಮಾತ್ರ ಈ ಕಲೆ ಉಳಿದಿದೆ ಎಂಬ ಜೀಶಂಪ ಅವರ ಮಾತಿಗೆ ಅರ್ಥಪೂರ್ಣ ಆಚರಣೆಯಾಗಿ ವೀರಶೈವ ಪರಂಪರೆಯಲ್ಲಿ ಉಳಿದ ಬೆಳೆದು ಬರುತ್ತಿದೆ.

ಚಿಕ್ಕನಹಳ್ಳಿ ವೀರಣ್ಣನವರು ಲಿಂಗದಬೀರ ಕಲೆಯ ಸಂಘಟನೆಗ ಜಗಜ್ಯೋತಿ ವೀರಭದ್ರೇಶ್ವರ ನೃತ್ಯ ಲಿಂಗದಬೀರರ ಕಲಾಸಂಘ ಎಂಬ ಸಂಘವನ್ನು ಆರಂಭಿಸಿ ಈ ಮೂಲಕ ಈ ಕಲೆಯ ಉಳಿಯುವಿಕೆಗಾಗಿ ಶ್ರಮಿಸುತ್ತಿದ್ದಾರೆ. ಇವರ ಇಬ್ಬರು ಮಕ್ಕಳೂ ಈಗಾಗಲೇ ಈ ಕಲೆಯನ್ನು ಪ್ರಸಾರ ಮಾಡುತ್ತ, ತಂದೆಯೊಂದಿಗೆ ಕಲಾ ಪ್ರದರ್ಶನ ನೀಡುತ್ತಿರುವುದು. ಇಡೀ ಕುಟುಂಬ ಪರಂಪರಾಗತವಾಗಿ ಕಲಾ ಪ್ರಸಾರದಲ್ಲಿ ನಿರತವಾಗಿರುವುದು ಅಭಿನಂದನಾರ್ಹ ಸಂಗತಿಯಾಗಿದೆ.

ವೀರಣ್ಣನವರು ಪ್ರಬುದ್ಧ ಕಲಾವಿದರಾಗಿ, ಲೌಕಿಕ-ಅಲೌಕಿಕ ಈ ಎರಡೂ ಪರಂಪರೆಯಲ್ಲಿ ಪ್ರದರ್ಶನ ನೀಡುತ್ತಾರೆ. ರುದ್ರನ ಲಾಂಛನ ತೆಗೆದು ಕಲಾಪ್ರದರ್ಶನ ನೀಡುವುದು ಲೌಕಿಕ ಕಲಾ ಪ್ರದರ್ಶನ. ಹೀಗಾಗಿ ಧಾರವಾಡ, ಹಾನಗಲ್ಲು, ಕೊಪ್ಪಳ, ಚಿಕ್ಕಮಗಳೂರು, ಸಿಂಧನೂರು, ಬೆಂಗಳೂರು ಈ ಕಡೆಗಳಲ್ಲಿ ಪ್ರದರ್ಶಿಸಿದ್ದಾರೆ.

ಸರ್ಕಾರದ ವಿವಿಧ ಸಮಾರಂಭಗಳಲ್ಲಿ ಆಹ್ವಾನಿತ ಕಲಾವಿದರಾಗಿ ತಾರುಣ್ಯದ ದಿನಗಳಲ್ಲಿ ಯುವಜನ ಮೇಳಗಳಲ್ಲಿ ಭಾಗವಹಿಸಿದ್ದಾರೆ. ಇವರ ಸಾರ್ಥಕ ಕಲಾಸೇವೆಗೆ ಸಂದ ಗೌರವಗಳೂ ಅಪಾರ. ೧೯೮೯ರಲ್ಲಿ ತುಮಕೂರು ಜಿಲ್ಲಾ ಕನ್ನಡ ರಾಜ್ಯೋತ್ಸವ ಪ್ರಶಸ್ತಿ, ೧೯೫೫ರಲ್ಲಿ ಕನ್ನಡ ಸಾಹಿತ್ಯ ಸಮ್ಮೇಳನ ಕಲಾ ಪ್ರಶಸ್ತಿ, ೧೯೭೭ರಲ್ಲಿ ನಾಲ್ಕನೇ ರಾಷ್ಟ್ರೀಯ ಕ್ರೀಡಾಕೂಟದಲ್ಲಿ ಪ್ರದರ್ಶನ ಪ್ರಶಸ್ತಿ ಮುಖ್ಯವಾದವುಗಳು. ವೀರಭದ್ರನ ಪವಾಡಸದೃಶ, ತೆಂಗಿನಕಾಯಿ ಒಡೆಯುವುದು, ತೂರಿಬರುವ ನಿಂಬೆಹಣ್ಣು ಕತ್ತರಿಸುವುದು ಮೊದಲಾದ ಹಲವು ಪವಾಡಗಳನ್ನು ವೀರಣ್ಣನವರು ಪ್ರದರ್ಶಿಸುತ್ತಾರೆ. ವೀರಭದ್ರನ ಒಡಪುಗಳನ್ನು ಹೇಳುವುದು ಇವರ ಮತ್ತೊಂದು ವಿಶೇಷವಾಗಿದೆ.

ವೀರಭದ್ರನ ಕಲಾವಿದ,
ಚಿಕ್ಕನಹಳ್ಳಿ ಗ್ರಾಮ
ಸಿರಾ ತಾಲೂಕು.

# ಹೇರೂರು ರುದ್ರಮ್ಮ

ಹೇರೂರು ರುದ್ರಮ್ಮನವರು ಜನಪದ ಹಾಡುಗಾರ್ತಿ. ತಮ್ಮ ಜೊತೆಯವರನ್ನು ಹುರಿದುಂಬಿಸುತ್ತಾ, ಹಾಡತೊಡಗಿದರೆ ನಿರಂತರವಾಗಿ ಹಾಡುತ್ತಾರೆ. ಹಾಡುಗಳ ವೈವಿಧ್ಯಕ್ಕೆ ಬೆರಗಾಗಲೇಬೇಕು. ಆದಿಕರ್ನಾಟಕ ಜನಾಂಗಕ್ಕೆ ಸೇರಿದ ಇವರು ಬಾಲ್ಯದಲ್ಲಿಯೇ ತಮ್ಮ ಗಂಡನನ್ನು ಕಳೆದುಕೊಂಡವರು. ರೈತಾಪಿ ಬದುಕಿನೊಂದಿಗೆ ಮುಖಾಮುಖಿಯಾಗುತ್ತಲೇ ಕಲೆ, ಕಲಾವಿದರ ಸಂಘಟನೆಗೆ ತಮ್ಮನ್ನು ತೊಡಗಿಸಿಕೊಂಡ ತಮ್ಮ ಅರವತ್ತು ವರ್ಷಗಳ ಈ ವಯಸ್ಸಿನಲ್ಲೂ ಕಂಠಸಿರಿ ಬತ್ತಿಲ್ಲ, ಉತ್ಸಾಹ ಕುಗ್ಗಿಲ್ಲ. ಸಿರಾ, ಹಿರಿಯೂರು, ಚಳ್ಳಕೆರೆ ಈ ಭಾಗಗಳಲ್ಲಿ ಯಾವುದೇ ಸಾಂಸ್ಕೃತಿಕ ಕಾರ್ಯಕ್ರಮವಿದ್ದರೂ ತಪ್ಪದೇ ಹಾಜರಾಗಿ ಅವಕಾಶ ಪಡೆದು ಒಂದು ಹಾಡು ಹಾಡಿದಾಗಲೇ ಈಕೆಗೆ ಸಮಾಧಾನ. ಅಷ್ಟೊಂದು ಪ್ರೀತಿಯನ್ನು ಸಾಂಸ್ಕೃತಿಕ ಚಟುವಟಿಕೆಗಳ ಬಗೆಗೆ ತೋರುತ್ತಾರೆ. ಸಿರಾ ತಾಲೂಕಿನ ಗಡಿಗ್ರಾಮ ಹೇರೂರು ರುದ್ರಮ್ಮನವರು ಹುಟ್ಟಿದ ಸ್ಥಳ. ಅಲ್ಲಿಯೇ ಬೆಳೆದರು. ಕಾಡುಗೊಲ್ಲರು, ವ್ಯಾಸಬೇಡರು, ಕುರುಬರು, ಕುಂಚಿಟಿಗರು ಇವರುಗಳೊಂದಿಗೆ ಆತ್ಮೀಯವಾಗಿ ಬೆರೆಯುತ್ತಾ ಸೋಬಾನೆ ಪದ ಹಾಡುವುದನ್ನು ಕಲಿತರು. ಯಾರದೇ ಹೊಸಗೆ, ಮದುವೆ, ದೇವರ ಕಾರ್ಯಗಳಂಥ ಧಾರ್ಮಿಕ, ಸಾಂಸ್ಕೃತಿಕ ಕಾರ್ಯಕ್ರಮವಿದ್ದಲ್ಲಿ ತಪ್ಪದೆ ಹಾಜರಾಗಿ ರಾತ್ರಿಯೆಲ್ಲಾ ಹಾಡುತ್ತಾರೆ. ಹಾಡಿಗಾಗಿ ಸಂಭಾವನೆ ಬಯಸುವುದಿಲ್ಲ. ಕೊಟ್ಟರೆ ಶಿವನ ಜೋಳಿಗೆ ಶಿವಭಿಕ್ಷೆ ಎಂದೆಲ್ಲಾ ಸಂಭಾವ್ಯದಿಂದ ತೆಗೆದುಕೊಳ್ಳುತ್ತಾರೆ. ಹೇರೂರು ರುದ್ರಮ್ಮನವರು ಬಸವೇಶ್ವರರನ್ನು ಕುರಿತು ಪದ ಹಾಡುತ್ತಾರೆ. ಮಾತಂಗ ಗುರುಗಳ ಮೇಲೂ ಪದ ಹಾಡುವುದುಂಟು. ಹೇರೂರಲ್ಲಿ ಜನಪದ ಕಲಾವಿದರ ತಂಡವನ್ನು ಸಮರ್ಥವಾಗಿ ಕಟ್ಟಿ ನಡೆಸಿಕೊಂಡು ಬರುತ್ತಿದ್ದಾರೆ. ಶಾರದಮ್ಮ ಮೊದಲಾದ ಆಸಕ್ತ ಕಲಾವಿದರನ್ನು ತಮ್ಮ ಜೊತೆಗಾರ್ತಿಯರನ್ನಾಗಿಸಿ ಕೊಂಡು ವಾರದಲ್ಲೊಂದು ದಿನ ವಿಶೇಷವಾಗಿ ಪೂರ್ಣಿಮೆಯ, ಅಮವಾಸ್ಯೆಯ ದಿನಗಳಂದು ಭಜನೆ ಪದಗಳನ್ನು

ತಪ್ಪದೇ ಏರ್ಪಡಿಸುತ್ತಾರೆ. ಸುತ್ತಲಿನ ಭಜನೆ ಕಲಾವಿದರು ಆಗಮಿಸಿ, ರಾತ್ರಿಯೆಲ್ಲಾ ಕಾರ್ಯಕ್ರಮ ನೀಡುತ್ತಾರೆ. ಸಿರಾ ತಾಲೂಕು ಆಡಳಿತ ಸುವರ್ಣ ಕರ್ನಾಟಕ ರಾಜ್ಯೋತ್ಸವ ಗಡಿನಾಡ ಜಾನಪದ ಸಂಪರ್ಕಾಧ್ಯಯನ ಪ್ರತಿಷ್ಠಾನ, ಭೂಮಿ ಬಳಗ ಮೊದಲಾದ ಸಾಂಸ್ಕೃತಿಕ ಸಂಘಗಳು ಸಂಘಟಿಸಿದ ಪ್ರತಿಷ್ಠಿತ ಜನಪದ ಕಲಾಪ್ರದರ್ಶನ, ಹಾಡುಗಾರಿಕೆ ಸಮಾರಂಭಗಳಲ್ಲಿ ಭಾಗವಹಿಸಿ ಕಲಾ ಪ್ರದರ್ಶನ ನೀಡಿದ್ದಾರೆ. ಬಡತನ, ಒಂಟಿತನದ ನಡುವೆಯೂ ಕಲಾ ಶ್ರೀಮಂತಿಕೆಯನ್ನು ಪ್ರದರ್ಶಿಸುತ್ತಾ ಬಂದಿರುವ ಹೇರೂರು ರುದ್ರಮ್ಮ ಗ್ರಾಮೀಣ ಕುಸುರಿ ಕಾಯಕದ ಜಾನಪದ ಪ್ರತಿಭೆ. ಇವರಿಗೆ ಪ್ರೇರಣೆ, ಪೋಷಕರು ಹೆಂದೊರೆ ಗ್ರಾಮದ ರಂಗಜ್ಜಿ. ೯೦ ವರ್ಷದ ಅಪೂರ್ವ ಹಾಡುಗಾರ್ತಿ. ತನ್ನ ೧೦ನೇ ವಯಸ್ಸಿನಲ್ಲಿಯೇ ಹನುಮಂತಪ್ಪ ಎಂಬುವವರನ್ನು ಮದುವೆಯಾಗಿ ಗಂಡನಮನೆ, ತವರುಮನೆ ಎರಡೂ ಒಂದೇ ಆಗಿರುವ ರಂಗಜ್ಜಿ ಹಾಡುಗಳ ಕಣಜ. ಸೋಬಾನೆ, ಕಥನಗೀತೆ, ಬೀರಪ್ಪ ದೇವತೆಯ ಕಥನ ಮೊದಲಾದವುಗಳನ್ನು ಹಾಡುವುದಲ್ಲದೆ ಹೆಂದೊರೆಯ ಗುಣ್ಣಾಂಜಿನಯನ ಕಥನನವನ್ನೂ ಹಾಡುತ್ತಾರೆ. ಈ ಭಾಗದ ನೂರಾರು ಹೆಂಗಸರಿಗೆ ಹಾಡನ್ನು ಕಲಿಸಿಕೊಟ್ಟಿದ್ದಾರೆ.

**ರುದ್ರಮ್ಮ,**
**ಹೇರೂರು ಅಂಚೆ, ಸಿರಾ ತಾಲೂಕು.**

# ಬೇಡನಕಟ್ಟೆ ಬುಕ್ಕಯ್ಯ

ಬುಕ್ಕಯ್ಯ ಯಕ್ಷಗಾನ ಕಲಾವಿದ, ಹಿಮ್ಮೇಳ ಭಾಗವತ. ಹುಟ್ಟು ಅವಿದ್ಯಾವಂತ ನಾದರೂ ಕಲಾನಿಪುಣರು. ದಶಕಂಠ ರಾಮಾಯಣ, ಕರಿಭಂಟ ಈ ಮೊದಲಾದ ಯಕ್ಷಗಾನಗಳಲ್ಲಿ ಉಗ್ರ, ಘೋರ ಪಾತ್ರಗಳಲ್ಲಿ ಸತತವಾಗಿ ೨೦ ವರ್ಷಗಳಿಂದ ಏಕಮುಖಿ ಪಾತ್ರಾಭಿನಯದ ಮೂಲಕ ಯಕ್ಷಗಾನ ಕಲೆಗೆ ವ್ಯಾಪಕ ಪ್ರಚಾರ, ಕಲೆಗೆ ಒತ್ತಾಸೆ, ಆಶ್ರಯದಾತರೂ ಆಗಿದ್ದರು.

ಬುಕ್ಕಯ್ಯ ಮೂಲತಃ ಗುಬ್ಬಿ ತಾಲೂಕು ನಿಂಬೇಕಟ್ಟೆ ಗ್ರಾಮದವರು. ತಂದೆ ಕೆಂಪಯ್ಯ ಎರಡನೇ ಹೆಂಡತಿಯನ್ನು ವಿವಾಹವಾಗಿ ಬೇಡನಕಟ್ಟೆಗೆ ಬಂದುದರಿಂದ ತಂದೆಯೊಂದಿಗೆ ತನ್ನ ತಂಗಿ ಹನುಮಕ್ಕ, ಅಕ್ಕ ಪುಟ್ಟಮ್ಮರೊಂದಿಗೆ, ಬೇಡನಕಟ್ಟೆಗೆ ಬಂದವರು. ಕುರಿಪಾಲನೆ ಇವರ ಪ್ರಧಾನ ಕಾಯಕ, ಮೀನುಬೇಟೆಯಲ್ಲಿಯೂ ಪರಿಣಿತರು. ಬುಕ್ಕಯ್ಯನವರು, ಬನಮ್ಮ ಎಂಬುವವರನ್ನು ವಿವಾಹವಾದರು. ಇವರಿಗೆ ಮೂರು ಜನ ಗಂಡುಮಕ್ಕಳು, ನಾಲ್ವರು ಹೆಣ್ಣುಮಕ್ಕಳು. ಮಕ್ಕಳು, ಮೊಮ್ಮಕ್ಕಳು ಮರಿಮಕ್ಕಳು ಸೇರಿ ಇವರ ಕುಟುಂಬ ಸದಸ್ಯರು.

ತುಂಬು ಕುಟುಂಬದ ಬುಕ್ಕಜ್ಜ ಜನಪದ ಹಾಡುಗಾರರು. ಜನವರಿ ತಿಂಗಳ ಮೊದಲನೇ ವಾರದಿಂದ ಮೇ ತಿಂಗಳ ಕೊನೆಯ ತನಕ ಕುರಿಗಳನ್ನು ಹುಲ್ಲು, ನೀರಿನ ಆಶ್ರಯಕ್ಕಾಗಿ ಮೈಸೂರು, ನಾಗಮಂಗಲ, ಮಂಡ್ಯ ಸೀಮೆಗೆ ಹೊಡೆದುಕೊಂಡು ಹೋಗುವುದು ಸಂಪ್ರದಾಯ. ಊಟ ನೀಡಿದವರ ಮನೆಯಲ್ಲಿ ಉಂಡು, ಅವರ ಗದ್ದೆ ಹೊಲ, ತೋಟಗಳಲ್ಲಿ ಕುರಿಮಂದೆ ತಡೆಯುವುದು ಇವರ ಸಂಪ್ರದಾಯ. ಆಗ ಬಯಲಿನಲ್ಲಿರುವ ಕುರಿಗಳನ್ನು ಕಳ್ಳಕಾಕರು, ಮೃಗಗಳಿಂದ ರಕ್ಷಿಸುವುದು ಅತಿ ಮುಖ್ಯ. ಕೆಲವೊಮ್ಮೆ ರಾತ್ರಿಯಿಡೀ ಎದ್ದಿರಬೇಕಾಗುತ್ತದೆ. ಅಂಥ ಸಂದರ್ಭಕ್ಕೆ ಕಲಿತ ಹಾಡುಗಳ

ಮೊರೆ. ಬುಕ್ಕಯ್ಯನವರ ಜ್ಞಾನಕೋಶದ ಬುತ್ತಿ ಅಪಾರ. ಕರಿಭಂಟ ಯಕ್ಷಗಾನದ ಇಡೀ ಪದ, ಮಾತು, ಕಂದಗಳನ್ನು ಕಿಂಚಿತ್ ಮರೆಯದೆ ಸ್ಪಷ್ಟವಾಗಿ ಬಾಯಿಂದಲೇ ಹಾಡುವ ಅಪೂರ್ವ ಕಲಾವಿದ. ದಶಕಂಠ ರಾಮಾಯಣದಲ್ಲಿ ರಾವಣನಾಗಿ, ದುಶ್ಶಾಸನನ ಕತೆಯಲ್ಲಿ ದುರ್ಯೋಧನನಾಗಿ, ಕರಿಭಂಟ ನಾಟಕದಲ್ಲಿ ಕರಿಭಂಟನಾಗಿ ಕುಶ-ಲವ ಕತೆಯಲ್ಲಿ ಶ್ರೀರಾಮನಾಗಿ ವಿಶಿಷ್ಟ, ವಿಭಿನ್ನ ಅಭಿನಯ ನೀಡಿದವರು. ಕೋಲುಪದ, ಬೆಳದಿಂಗಳ ಪದ, ಅರ್ಜುನ ಜೋಗಿ ಪದಗಳನ್ನು ಕಥಾಭಿತ್ತಿ ಕೆಡದಂತೆ ನಿರಂತರವಾಗಿ ಹಾಡುತ್ತಿದ್ದುದು ಇವರ ವಿಶೇಷ. ಓದು-ಬರಹ ಒಂದಿನಿತೂ ಕಲಿಯದಿದ್ದರೂ ಜಾನಪದ ಸರಸ್ವತಿಯನ್ನು ಇವರ ನಾಲಿಗೆಯಲ್ಲಿ ನೆಲೆಸಿರುವಂತೆ, ತನ್ನ ಪಾಡಿಗೆ ತಾನು ಹಾಡಿಕೊಳ್ಳುತ್ತಾ, ಅವಕಾಶ ದೊರೆತರೆ ಯಕ್ಷಗಾನ ಭಾಗವಂತಿಕೆಯ ಹಿಮ್ಮೇಳ ಗಾಯಕನಾಗಿ ಕಾರ್ಯಕ್ರಮ ನಡೆಸುತ್ತಾ ೭೦ ವರ್ಷ ಕಳೆದ, ಸರ್ಕಾರದ ಯಾವುದೇ ಸವಲತ್ತು ಬಯಸದೆ, ಕಲೆ-ಕಲಾವಿದರಿಗೆ ಆಶ್ರಯವಾಗಿದ್ದ ಹಿರಿಯಜ್ಜ ೧೯೯೯ರಲ್ಲಿ ದಿವಂಗತರಾದದ್ದು ಇವರಿಗಷ್ಟೇ ಅಲ್ಲ, ಇವರಿಂದ ಅಪಾರ ಹಾಡುಗಳನ್ನು ಸಂಗ್ರಹಿಸುತ್ತಿದ್ದ ಜಾನಪದ ವಿದ್ವಾಂಸರಿಗೂ ನಷ್ಟವಾಯಿತು.

ಬುಕ್ಕಯ್ಯ
ನಿಂಬೆಕಟ್ಟೆ, ಗುಬ್ಬಿ ತಾಲೂಕು.

# ನಗಾರಿ ಕಲೆಯ ಸಿ. ಎಸ್. ಬಸವರಾಜು

ನಗಾರಿ ಕಲೆ ಕರ್ನಾಟಕದ ಅತ್ಯಂತ ಪ್ರಾಚೀನ ವಾದ್ಯ ವಿಶೇಷ. ಬಸವನ ಮೇಲೆ ರೇಷ್ಮೆ ಬಣ್ಣದ ತಡಿಹಾಕಿ, ಕೊಂಬಿಗೆ ಕೋಡಸು, ಚಿತ್ತ ಚಿತ್ತಾರದ ಟೇಪು, ಅಲ್ಲೊಂದೆರಡು ಬಲೂನ್ ಕಟ್ಟಿ ಎತ್ತಿನ ಬೆನ್ನಿನ ಮೇಲೆ ಎರಡೂ ಕಡೆ ನಗಾರಿ ಹಾಕಿ ಅದರ ಹಿಂದೆ ಕುಳಿತು ಎರಡೂ ಕಾಲುಗಳನ್ನು ಮೇಲಿನಿಂದ ಕೆಳಕ್ಕೆ ಇಳಿಬಿಟ್ಟು ತಾಳ ಮೇಳ ವಾದ್ಯ ವಿಶೇಷಗಳೊಂದಿಗೆ ಲಯಕ್ಕೆ ಸ್ವರಕ್ಕೆ ತಕ್ಕನಾಗಿ ನಗಾರಿಯನ್ನು ಬಾರಿಸುವುದು ಒಂದು ರೋಚಕ ಸಂದರ್ಭ. ಅಳಿಗಾನದ ಅಂಚಿನಲ್ಲಿ ಅಲ್ಲೋ ಇಲ್ಲೋ ಶಿವ ದೇವಾಲಯಗಳಲ್ಲಿ ಮಾತ್ರ ಕಾಣಬಲ್ಲ ನಗಾರಿ ಕಲೆ ಕರ್ನಾಟಕದ ಅತ್ಯಂತ ಪ್ರಾಚೀನ, ಸಮನ್ವಯ ಕಲೆ. ಜಾತಿಭೇದವಿಲ್ಲದೆ ಬಸವನ ಮೇಲೆ ಕುಳಿತು ವಾದ್ಯಬಾರಿಸುವುದು, ಆ ಮಟ್ಟಿಗೆ ಬಸವನನ್ನು ಒಗ್ಗಿಸಿಕೊಳ್ಳುವುದು ಎರಡೂ ವಿಶೇಷ. ಬಸವನ ಮುಂದೆ, ದೇವರ ಉತ್ಸವ, ದೇವರನ್ನು ಹೊತ್ತ ಜನ ಹಿಂದೆ ಇದು ಗ್ರಾಮೀಣರ ಸಾಂಸ್ಕೃತಿಕ ನೆಲೆ. ಇಂಥ ನಗಾರಿ ಕಲೆಯನ್ನು ಕಳೆದ ೬೦ ವರ್ಷಗಳಿಂದಲೂ ನಿರಂತರವಾಗಿ ರೂಢಿಸಿಕೊಂಡು ಬರುತ್ತಿರುವ ಬಸವರಾಜು ಚೇಳೂರಿನ ಪಟೇಲ್ ಸಿದ್ಧೇಗೌಡ, ಪಟೇಲ್ ಚಿಕ್ಕಮ್ಮ ಇವರ ಮಗ. ೧೯೪೫ರಲ್ಲಿ ಜನಿಸಿದ ಬಸವರಾಜು, ಎಸ್‌ಎಸ್‌ಎಲ್‌ಸಿಯ ಹಂತದವರೆಗೆ ವ್ಯಾಸಂಗ ಮಾಡಿದ್ದಾರೆ. ಚೇಳೂರಿನ ಧಾರ್ಮಿಕ ಕಾರ್ಯಗಳಲ್ಲಿ ತಮ್ಮನ್ನು ಅರ್ಥಪೂರ್ಣವಾಗಿ ಒಪ್ಪಿಸಿಕೊಂಡಿರುವ ಇವರು, ಇಲ್ಲಿನ ಪ್ರಸಿದ್ಧ ಮರಳು ಬಸವೇಶ್ವರ, ದೃಷ್ಟೇಶ್ವರ ಹಾಗೂ ಬೀಡಿ ಸಿದ್ದೇಶ್ವರ ಈ ದೇವರ ಜಾತ್ರೆ ರಥೋತ್ಸವ ಹಾಗೂ ಮೆರವಣಿಗೆಯ ಸಂದರ್ಭದಲ್ಲಿ ಬಸವನೊಂದಿಗೆ ನಗಾರಿ ಕಾಯಕವನ್ನು ಶ್ರದ್ಧೆಯಿಂದ ನಿರಂತರವಾಗಿ ಮಾಡುತ್ತಾ ಬರುತ್ತಿರುವ ಅಪರೂಪದ ಕಲಾವಿದ. ಇವರು ಇರುವೆಡೆಗೆ ಹೋಗುವ ಬಸವಣ್ಣ ಇವರ ಅಚ್ಚುಮೆಚ್ಚಿನ ಪ್ರಾಣಿ. ಅಷ್ಟೊಂದು ಪ್ರೀತಿಯಿಂದ ಬಸವನನ್ನು ಸಾಕುತ್ತಿದ್ದಾರೆ ಮತ್ತು ನಗಾರಿ ಕಲೆಯ ಕೊನೆಯ ಕೊಂಡಿಯಾಗಿದ್ದಾರೆ. ಸಿ.ಎಸ್. ಬಸವರಾಜು ಉತ್ತಮ

ಕಲಾವಿದರು, ಕಲಾ ಸಂಘಟಕರು, ಭಾಗವತರೂ ಹೌದು. ಪೌರಾಣಿಕ, ಬಯಲುಕತೆ, ಮೂಡಲಪಾಯ ಯಕ್ಷಗಾನದಲ್ಲಿ ಕಳೆದ ೪೦ ವರ್ಷಗಳಿಂದಲೂ ತಮ್ಮನ್ನು ಅರ್ಥಪೂರ್ಣವಾಗಿ ಒಪ್ಪಿಸಿಕೊಂಡಿದ್ದಾರೆ.

ಶ್ರೀ ದೃಷ್ಟೇಶ್ವರ ಕಲಾಸಂಘದ ಅಧ್ಯಕ್ಷರಾಗಿ, ಯಕ್ಷಗಾನ ಮಂಡಳಿಯ ಸಂಪನ್ಮೂಲ ಸಂಘಟಕರಾಗಿ ಜನಪದ ಕಲೆ, ನಂದಿಧ್ವಜ ಕುಣಿತದ ಕಲಾವಿದರಾಗಿ, ಸಂಘಟಕರಾಗಿ ಇವರ ಕಲಾ ಸಾಧನೆ ಅಪರಿಮಿತವಾದುದು. ನಂದಿಧ್ವಜ ಕಲೆಯೂ ಗುಬ್ಬಿ ತಾಲೂಕಿನ ಒಂದು ಪ್ರಸಿದ್ಧ ಕಲೆ. ವಿಶೇಷವಾಗಿ ದೃಷ್ಟೇಶ್ವರ, ಮರಳು ಬಸವೇಶ್ವರ ಈ ಮೊದಲಾದ ದೇವರ ಜಾತ್ರೆ, ಉತ್ಸವಗಳಲ್ಲಿ ನಂದಿಧ್ವಜ ಕುಣಿತ ವಾರಗಟ್ಟಲೆ ಇರುತ್ತದೆ. ಈ ನಂದಿಧ್ವಜ ಕುಣಿತದ ಅತ್ಯುತ್ತಮ ಕಲಾವಿದರಾಗಿಯೂ ಬಸವರಾಜು ಕೆಲಸ ಮಾಡಿದ್ದಾರೆ. ಪೌರಾಣಿಕ ನಾಟಕಗಳಾದ ದಶಾವತಾರ, ಸಂಪೂರ್ಣ ರಾಮಾಯಣ, ದಾನಶೂರಕರ್ಣ, ಪಾಂಡುವಿಜಯ, ಕುರುಕ್ಷೇತ್ರ, ರಾಜಸೂಯಯಾಗ, ಪಾಂಡವರ ವನವಾಸ ಈ ನಾಟಕಗಳಲ್ಲಿ ಪ್ರಧಾನ ಪಾತ್ರಗಳಲ್ಲಿ ಅಭಿನಯಿಸುತ್ತಿರುವ ಬಸವರಾಜು ಅರ್ಜುನ, ಶ್ರೀ ಕೃಷ್ಣ, ಕರ್ಣ, ಸುಧನ್ವ ಈ ಪಾತ್ರಗಳಿಗೆ ಜೀವ ತುಂಬಿದವರು.

ಯಕ್ಷಗಾನ ಪಾತ್ರಧಾರರಾಗಿ, ವೇಷಭೂಷಣ ತಯಾರಕರಾಗಿ, ಮೃದಂಗ ಕಲಾವಿದರಾಗಿ, ಹಿಮ್ಮೇಳದ ಭಾಗವತರಾಗಿ, ಪ್ರಧಾನ ಭಾಗವತರಾಗಿ ಬಹುಮುಖಿ, ಬಹುರೂಪಿ ಕಲಾವಿದರಾಗಿ ಅಪೂರ್ವ ಸೇವೆ ಸಲ್ಲಿಸಿರುವ ಚೇಳೂರು ಸೀಮೆಯ ಹಿರಿಯ ಜನಪದ ಕಲಾವಿದರು. ದುಶ್ಯಾಸನನ ಕತೆ, ಲವಕುಶ, ಐರಾವತ, ತ್ರಿಪುರ ಸಂಹಾರ ಈ ಯಕ್ಷಗಾನದಲ್ಲಿ ಪರಿಣಾಮಕಾರಿ, ಅಭಿನಯ ನೀಡಿರುವ ಕಲಾವಿದರು. ತಮ್ಮ ೭೦ ವರ್ಷಗಳ ಈ ಇಳಿವಯಸ್ಸಿನಲ್ಲೂ ನಗಾರಿ ಕಲೆಯೂ ಸೇರಿದಂತೆ ನಂದಿಧ್ವಜ ಕುಣಿತ, ಯಕ್ಷಗಾನ ಭಾಗವಂತಿಕೆಯಲ್ಲಿಯೂ ತೊಡಗಿಸಿಕೊಂಡಿರುವುದು ಇವರ ವಿಶೇಷ.

**ಸಿ. ಎಸ್. ಬಸವರಾಜು, ಕಲಾವಿದರು,**
**ಚೇಳೂರು, ಗುಬ್ಬಿ ತಾಲೂಕು.**

## ಸೋಮನ ಕುಣಿತದ ಲಿಂಗೇಗೌಡ

ಸೋಮಕುಣಿತ ಕಲೆಯ ಜೀವಂತ ದುಡಿಮೆಗಾರ, ಶ್ಯಾಗದಡು ಲಿಂಗೇಗೌಡ. ಬುಡಕಟ್ಟು ಪಂಗಡವಾದ ಬೇಡರ ಜನಾಂಗಕ್ಕೆ ಸೇರಿದ ಲಿಂಗೇಗೌಡ ಶ್ರೀ ಶಿವರಾಮೇಗೌಡ-ಕರಿಯಮ್ಮ ಇವರ ಮೂರೇ ಮಗ. ಈ ದಂಪತಿಗಳ ಮೊದಲ ಮಗ ಭಕ್ತ ರಾಮೇಗೌಡ. ಸಾಹಿತ್ಯದ ಸ್ನಾತಕೋತ್ತರ ವಿದ್ಯಾರ್ಥಿ. ಕೆ. ಎಸ್. ಅಧಿಕಾರಿಯೂ ಹೌದು. ತಾಯಿ ಕರಿಯಮ್ಮ ಅತ್ಯುತ್ತಮ ಜನಪದ ಹಾಡುಗಾರ್ತಿ, ಗಾದೆ, ಒಗಟುಗಳ ಭಂಡಾರ. ಗ್ರಾಮದೇವತೆ ಕರಿಯಮ್ಮ, ಕೊಲ್ಲಾಪುರದಮ್ಮ ಈ ದೇವತೆಗಳ ಬಗೆಗೆ ಕಥನಗೀತೆಗಳನ್ನು ಹಾಡುತ್ತಾರೆ. ಕುಲದೇವತೆ ಗೌರಸಂದ್ರದ ಮಾರಮ್ಮ. ಮಾರಮ್ಮ ಸಿರಾ, ಹಿರಿಯೂರು, ಚಳ್ಳಕೆರೆ ತಾಲೂಕುಗಳಲ್ಲಿ ಪ್ರಸಿದ್ಧ ದೇವತೆ. ಕಾಡುಗೊಲ್ಲರ ಸಾಂಸ್ಕೃತಿಕ ವೀರ ಜುಂಜಪ್ಪ ಹುಟ್ಟಿದ್ದು ಇದೇ ಗೌರಸಂದ್ರದ ಮಾರಮ್ಮನ ವರದಿಂದ. ಈ ಸಂಬಂಧಿ ಜನಪದ ಕಾವ್ಯ ಪ್ರಕಾರದಲ್ಲಿ ಜುಂಜಪ್ಪನ ಕಾವ್ಯ ಪ್ರಾದೇಶಿಕವಾಗಿ ಮಹತ್ವ ಪಡೆದಿದೆ. ಶ್ರೀಮತಿ ಕರಿಯಮ್ಮ ಜುಂಜಪ್ಪನ ಪದಗಳನ್ನು ವಿಶೇಷವಾಗಿ ಹಾಡುತ್ತಾರೆ.

ಲಿಂಗೇಗೌಡ ಇದೇ ಜಾಡಿನಲ್ಲಿ ಬಂದವರು. ಗ್ರಾಮದೇವತೆ ಕರಿಯ್ಮನ ಉತ್ಸವ ಪ್ರತಿ ಮಂಗಳವಾರ ಏರ್ಪಡುತ್ತದೆ. ಕರಿಯಮ್ಮನ ಒಕ್ಕಲುಗಳಲ್ಲಿ ಯಾರಾದರೂ ಕರಿಯಮ್ಮನ ಉತ್ಸವ ಏರ್ಪಡಿಸುತ್ತಾರೆ. ಅಂಥ ಸಂದರ್ಭದಲ್ಲಿ ದೇವತೆಗೆ ಮುನ್ನ ಸೋಮನ ಪ್ರವೇಶ, ಕುಣಿತ, ಆರ್ಭಟ, ಕೆಂಪುಸೋಮ, ಕರಿಯ ಸೋಮ, ಚಿಂಚರಾಯ, ಸೋಮಪ್ಪ ಹೀಗೆ ನಾಲ್ಕು ಸೋಮನ ಮುಖವಾಡಗಳಿವೆ. ಈ ಸೋಮನ ಕುಣಿತವನ್ನು ಗುರುಪರಂಪರೆಯಲ್ಲಿ ಕಲಿಸುತ್ತಾ ಇಂದಿಗೂ ಮುಂದುವರಿಸುತ್ತಿರುವ ಹಿರಿಯ ಕಲಾವಿದ ಲಿಂಗೇಗೌಡ. ಈಗ ಇವರಿಗೆ ೬೦ ವರ್ಷ. ಸಾಕ್ಷಿಹಳ್ಳಿ ಮಣ್ಣಮ್ಮ, ಸೋರೇಕುಂಟೆ ಕರಿಯಮ್ಮ, ಪುರಲೇಹಳ್ಳಿ ಭೂತಪ್ಪ, ಬೇವಿನಹಳ್ಳಿ ಕರಿಯಮ್ಮ ಈ ದೇವರುಗಳು ಜಾತ್ರೆ ಸಿರಾ

ತಾಲೂಕಿನಲ್ಲಿ ವರ್ಷಕ್ಕೊಮ್ಮೆ ನಡೆಯುತ್ತದೆ. ಆ ಸಂದರ್ಭದಲ್ಲಿ ಲಿಂಗೇಗೌಡ ಮತ್ತವರ ತಂಡದವರಿಂದ ಸೋಮನ ಕುಣಿತದ ಕಲಾಪ್ರದರ್ಶನ ಇದ್ದೇ ಇರುತ್ತದೆ.

ದೇವರು ಧರ್ಮಕ್ರಿಯೆಗಳಲ್ಲಿ ಅಪಾರ ನಂಬಿಕೆ, ಆಚರಣೆಯನ್ನು ಮುಂದುವರಿಸುತ್ತಿರುವ ಜನತೆ ತಮ್ಮ ಮೇಲಿನ ದೋಷಪರಿಹಾರ, ಮಕ್ಕಳ ಫಲಾಪೇಕ್ಷೆ, ಕಾಯಿಲೆಗಳ ನಿವಾರಣೆಯೂ ಸೇರಿದಂತೆ ಮಕ್ಕಳ ಆರೋಗ್ಯ ಸಬಂಧ ಸೋಮನಿಂದ ಮರೆ ಹಾಕಿಸುವ ಪದ್ಧತಿಯಿದೆ. ದೇವರ ಮೆರವಣಿಗೆಯ ಸಂಧರ್ಭದಲ್ಲಿ ಸಾಲುಗಟ್ಟಿ ಬೀದಿಯಲ್ಲಿ ಕುಳಿತ ಭಕ್ತರನ್ನು ಸೋಮನ ಕುಣಿತದವರು ವಿವಿಧ ಭಂಗಿಯಲ್ಲಿ ಕುಣಿಯುತ್ತಾ ಬಂದು ಚಾಟಿಯಿಂದ ಬಾರಿಸುವುದು, ಆ ಭಕ್ತರು ಸೋಮನ ಕಾಲಿಗೆ ಬಿದ್ದು ಓಡುವುದು ಸಾಮಾನ್ಯ ಪ್ರಕ್ರಿಯೆ. ಇದೆಲ್ಲಾ ಒಂದು ಅತ್ಯುತ್ತಮ ಮನರಂಜನೆಯಾಗಿ ಕಾಣುತ್ತದೆ. ಆ ವಿಶಿಷ್ಟ ಕಲೆಯನ್ನು ಲಿಂಗೇಗೌಡರು ಆಕರ್ಷಕವಾಗಿ ಪ್ರದರ್ಶಿಸುತ್ತಾರೆ.

ಲಿಂಗೇಗೌಡ,
ಶಾಗದಡು, ಸಿರಾ ತಾಲೂಕು.

## ಪಟೇಲ್ ನಂಜಾಮರಿಗೌಡ

ಶಕ್ತಿದೇವತೆಗಳ ಭಂಟ, ದೂತ, ಸೇವಕರೆಂದೇ ಕರೆಯಲ್ಪಡುವ ಸೋಮ, ಗ್ರಾಮೀಣ ಗ್ರಾಮದೇವತೆಗಳ ಪ್ರಮುಖ ಆಕರ್ಷಣೆ. ಮರದ ಹಲಗೆಯಲ್ಲಿ ರಾಕ್ಷಸಾಕೃತಿಯ ಮುಖವಾಡ ತಯಾರಿಸಿ, ಅದನ್ನು ಮುಖದಲ್ಲಿ ಧರಿಸಿಕೊಂಡು ಹೂ, ಸೀರೆಗಳಿಂದ ಅಲಂಕರಿಸಿ, ತಮಟೆ ಅಥವಾ ಉರುಮೆಯ ಸದ್ದಿಗೆ ತಕ್ಕನಾಗಿ ಹೆಜ್ಜೆ ಹಾಕುತ್ತಾ, ಕೈಯಲ್ಲಿ ಚಾಟಿ ಹಿಡಿದು ಲಯಬದ್ಧವಾಗಿ ಕುಣಿಯುವ ಸೋಮನಕುಣಿತ ಬಯಲುಸೀಮೆಯ ಆಕರ್ಷಕ ಕಲೆ. ಶೈವ ಹಾಗೂ ವೈಷ್ಣವ ಈ ಎರಡೂ ಪರಂಪರೆ ಯಲ್ಲಿಯೂ ಸಮನಾಗಿ ಬಳಸುವ ಈ ಕಲೆ ಧಾರ್ಮಿಕ ಸಾಮರಸ್ಯತೆಗೂ ಪ್ರೇರಕವಾಗಿದೆ.

ನಂಜಾಮರಿಗೌಡರು ತುರುವೇಕೆರೆ ತಾಲೂಕು ಹುಲಿಕಲ್‌ನವರು. ೭೭ ವರ್ಷಗಳ ವಯೋಮಿತಿಯ ಗೌಡರು ಇಂದಿಗೂ ಸೋಮನಕುಣಿತದ ಕಲೆಯನ್ನು ಮುಂದುವರಿಸಿದ್ದಾರೆ. ಗ್ರಾಮದೇವತೆ ಕೆಂಪಮ್ಮ ದೇವತೆಯ ಅರ್ಚಕರೂ ಆಗಿರುವ ಗೌಡರು ಊರ ಪಟೇಲಗಿರಿಯೂ ಇವರದು. ಕಳೆದ ಐದು ದಶಕಗಳಿಂದಲೂ ಸೋಮನನ್ನು ಅರ್ಚಿಸುವುದಲ್ಲದೆ ಅವುಗಳ ಕುಣಿತದ ಕಲಾವಿದರೂ ಆಗಿದ್ದಾರೆ. ವಯಸ್ಸಿನ ಕಾರಣದಿಂದಾಗಿ ಶಕ್ತಿಗುಂದಿದ್ದರೂ, ಉರುಮೆ, ದೋಣಿನ ಸಪ್ಪಳ ಕೇಳಿದೊಡನೆ ಕೆಂಪು ಧೋತಿಯ, ವಿಭೂತಿ ಧಾರಣೆಯ ಗೌಡರು ಹಾಜರ್. ಕೈಯಲ್ಲಿ ಬೆತ್ತ, ಕೊರಳಿಗೆ ಚಾವಟಿ ಸುತ್ತಿಕೊಂಡು, ಸೋಮನ ಬಗೆಗೆ ಭೋಪರಾಕ್ ಹೇಳುತ್ತಾ ಕುಣಿಯುವುದು ಗೌಡರ ವಿಶೇಷ.

ಹರಿಗೆ ಕುಣಿತ, ಗ್ರಾಮದೇವತೆ ಪದ, ಕೋಪಿಸಿಕೊಂಡ ಸೋಮಗಳನ್ನು ಸಮಾಧಾನಗೊಳಿಸಿ ರಂಗಕ್ಕೆ ಕರೆತರುವ ಕಲಾಕರ್ಷತೆ ಇವರಿಗೆ ವಿಶೇಷವಾಗಿ ಸಿದ್ಧಿಸಿದೆ. ಹೆಚ್. ಎಲ್. ನಾಗೇಗೌಡ, ಜೀಶಂಪ ಇವರ ಕಲೆಯನ್ನು ಗುರುತಿಸಿ ಪ್ರೋತ್ಸಾಹಿಸಿದ್ದಾರೆ. ೨೦೦೨ರಲ್ಲಿ ಇವರಿಗೆ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಪ್ರಶಸ್ತಿ ನೀಡಿ ಗೌರವಿಸಲಾಗಿದೆ.

**ಪಟೇಲ್ ನಂಜಾಮರಿಗೌಡ, ಹುಲಿಕಲ್, ತುರುವೇಕೆರೆ ತಾಲೂಕು.**

# ಭಾಗವತ ಟಿ. ವೆಂಕಟರಮಣಯ್ಯ

ತುಮಕೂರು ನಗರ ಶ್ರೀರಾಮಪುರ ಬಡಾವಣೆಯ ಶ್ರೀ ವೆಂಕಟರಮಣಯ್ಯ ಹೆಸರಾಂತ ಯಕ್ಷಗಾನ ಭಾಗವತರು. ನಗರದ ಒಳಗಿದ್ದು ಯಕ್ಷಗಾನದಂಥ ಶ್ರಮ ಸಾಧ್ಯವಾದ ಕಲೆಯನ್ನು ಪ್ರಸಾರ ಮಾಡಿದ, ಮಾಡುತ್ತಿರುವ ಹೆಮ್ಮೆಯ ಕಲಾವಿದ. ತುಮಕೂರು ಜಿಲ್ಲೆಯ ಯಕ್ಷಗಾನ ಭಾಗವಂತಿಕೆಗೆ ಹೆಸರುವಾಸಿಯಾದವರು ವೆಂಕಟರಮಣಯ್ಯ. ನೆರೆಯ ಅನಂತಪುರ ಜಿಲ್ಲೆಯ ಮಡಕಶಿರಾ, ಅಮರಾಪುರ ಈ ಭಾಗಗಳಲ್ಲಿಯೂ ಯಕ್ಷಗಾನ ಕಲಿಸಿರುವುದು ಇವರ ವಿಶೇಷವಾಗಿದೆ.

ತುಮಕೂರಿನ ಹೊರಪೇಟೆಯು ತರಕಾರಿ, ಹಣ್ಣು, ವೀಳೆಯದೆಲೆ ವ್ಯಾಪಾರಿಗಳನ್ನು ಸಂಘಟಿಸಿ ರಾಮನವಮಿ, ಶಿವರಾತ್ರಿ, ಯುಗಾದಿ ಮುಂತಾದ ವಿಶೇಷ ಸಂದರ್ಭಗಳಲ್ಲಿ ಸಾಂದರ್ಭಿಕವಾಗಿ ಯಕ್ಷಗಾನ ಕಲೆಯನ್ನು ಕಲಿಸುತ್ತಾ ಪ್ರಸಾರ ಮಾಡಿದವರು. ಸರ್ಕಾರ ಯಾವುದೇ ಸಂಘ ಸಂಸ್ಥೆಗಳಿಂದ ಯಾವುದೇ ಪ್ರೋತ್ಸಾಹವಿಲ್ಲದ ಕಾಲದಲ್ಲಿ ಯಕ್ಷಗಾನಕ್ಕೆ ನೆಲೆಯೂ ಇಲ್ಲದ ತುಮಕೂರಿನ ಜನನಿಬಿಡ ಪ್ರದೇಶದಲ್ಲಿ ಆಸಕ್ತ ವ್ಯಾಪಾರಿ ಸಣ್ಣ ವರ್ತಕರನ್ನು ಸಂಘಟಿಸಿ, ಯಕ್ಷಗಾನ ಕಲಿಸುತ್ತಾ ಅದನ್ನು ಒಂದು ಆಕರ್ಷಕ ಕಲೆಯನ್ನಾಗಿ ಮುಂದುವರಿಸಿದ ಹಿರಿಮೆ. ಟಿ. ವೆಂಕಟರಮಣಯ್ಯ ಅವರಿಗೆ ಸಲ್ಲುತ್ತದೆ. ಮೊದಲಿಗೆ ಕಂಪನಿ ನಾಟಕಗಳಲ್ಲೂ ಕಲಾವಿದರಾಗಿ ಸೇವೆ ಸಲ್ಲಿಸಿದ್ದಾರೆ. ಪಾತ್ರಧಾರಿಯಾಗಿ, ವೇಷಭೂಷಣ ಕಲಾವಿದರಾಗಿ, ರಂಗಪರಿಕರಗಳ ನಿರ್ಮಾಣಗಾರರಾಗಿ ಹಂತ ಹಂತವಾಗಿ ಮೇಲೆ ಬಂದವರು. ಕಂಚಿನ ಕಂಠ, ಎತ್ತರವಾದ ಆಕೃತಿ, ತಲೆಯ ಮೇಲಿನ ಪೇಟ, ಹೆಗಲ ಮೇಲೆ ವಸ್ತ್ರ,ಕರಿಯ ಕೋಟು ಧರಿಸಿ ಅಟ್ಟ ಏರಿದರೆ ಶಾರದೆಯೇ ಆವೇಶಗೊಂಡವರಂತೆ ಹಾಡುತ್ತಾರೆ, ಕುಣಿಯುತ್ತಾರೆ. ಲವಕುಶ, ದುಶ್ಯಾಸನ ಕತೆ, ಹಿಡಿಂಬಾ ಪರಿಣಯ, ವಿರಾಟಪರ್ವ, ಜಯವಿಜಯ, ಗಯಚರಿತ್ರೆ, ದೇವಿಮಹಾತ್ಮೆ, ದಕ್ಷಯಾಗ ಇವರು ಕಲಿಸಿರುವ ಪ್ರಮುಖ ಯಕ್ಷಗಾನ ಪ್ರಸಂಗಗಳು.

ತುಮಕೂರು, ಗುಬ್ಬಿ, ಹೆಬ್ಬೂರು, ನಾಗವಲ್ಲಿ, ಗೂಳೂರು ಇಲ್ಲೆಲ್ಲಾ ಪ್ರತಿವರ್ಷ ಯಕ್ಷಗಾನ ಕಲಿಸುತ್ತಿರುವ ಹೆಮ್ಮೆಯ ಕಲಾವಿದರು. ೮೫ ವರ್ಷಗಳ ಈ ಹಿರಿಯ ಕಲಾವಿದರಿಗೆ ೧೯೯೮ರಲ್ಲಿ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಬಹುಮಾನ ನೀಡಿ ಗೌರವಿಸಲಾಗಿದೆ. ತುಮಕೂರಿನ ವಿವಿಧ ಸಾಂಸ್ಕೃತಿಕ ಸಂಘ ಸಂಸ್ಥೆಗಳು, ಜಿಲ್ಲಾಡಳಿತ ಇವರನ್ನು ಗೌರವಿಸಿದೆ.

**ಟಿ. ವೆಂಕಟರಮಣಯ್ಯ,**
**ಯಕ್ಷಗಾನ ಕಲಾವಿದರು,**
**ಶ್ರೀರಾಮ ಕಾಲೋನಿ, ತುಮಕೂರು.**

# ಗೊರವರ ಬೆಟ್ಟಲಿಂಗಯ್ಯ

ಕರ್ನಾಟಕದ ವೃತ್ತಿಗಾಯಕ ಹಾಗೂ ಹವ್ಯಾಸಿ ಕಲೆ ಈ ಎರಡೂ ಪ್ರಕಾರಗಳಲ್ಲಿ ಗೊರವರ ಕಲೆ ಪ್ರಸಿದ್ಧವಾದುದು. ಕೈಯಲ್ಲಿ ಢಮರುಗ, ಮತ್ತೊಂದರಲ್ಲಿ ಕೊಳಲು, ಉದ್ದನೆಯ ಕರಿಯ ಕಂಬಳಿಯ ನಿಲುವಂಗಿ, ಮೇಲೆ ಕವಡೆಯ ಸಾಲುಗಳು, ಕೊರಳಿಗೆ ಕವಡೆ ಸರ, ತಲೆಯ ಮೇಲೆ ಕರಡಿಯ ಉದ್ದನೆಯ ಟೋಪಿ, ಬಗಲಲ್ಲಿ ಉದ್ದನೆಯ ಜೋಳಿಗೆ ಎದೆಯ ಮೇಲೆ ಉದ್ದವಾಗಿ ಇಳಿಬಿಟ್ಟು ಕಂಚಿನ ದೋಣಿ, ಬದಿಯಲ್ಲಿ ಭಂಡಾರದ ಚೀಲ ಇವು ಗೊರವರ ಪ್ರಮುಖ ವೇಷ ಭೂಷಣಗಳು. ಹಣೆಯಲ್ಲಿ ವಿಭೂತಿ, ಭಂಡಾರದ ಬೊಟ್ಟು, ಕಣ್ಣಿಗೆ ಕುಂಕುಮ ಬಣ್ಣದ ಭಸ್ಮವನ್ನು ಧರಿಸುತ್ತಾರೆ. ನೋಡಿದ ಕೂಡಲೇ ಹೆದರಲೇಬೇಕಾದ ವೇಷ ಗೊರವರದದ್ದು. ಅದಕ್ಕಾಗಿಯೇ ಮಕ್ಕಳನ್ನು ಹೆದರಿಸುವಾಗ ಗೊಗ್ಗಯ್ಯ ಬಂದ, ಗೊಗ್ಗಯ್ಯನಿಗೆ ಹಿಡಿದು ಕೊಡುತ್ತೇನೆ ಎಂದೆಲ್ಲಾ ಹೆದರಿಸುವುದು ವಾಡಿಕೆಯಾಗಿದೆ.

ಮೈಲಾರದೇವರ ಭಕ್ತರಾದ ಗೊರವರು ಸ್ವಯಂ ಶಿವರೂಪಿ. ಶಿವನೇ ಗೊರವಯ್ಯನಾಗಿ ಜಂಗಮ ರೂಪದಲ್ಲಿರುವುದು, ಶಿವನ ಮಹಿಮಾವಳಿಗಳನ್ನು ಬಿತ್ತರಿಸುವುದು ಗೊರವಯ್ಯಗಳ ಪ್ರಮುಖ ಕಾಯಕ. ತುಮಕೂರು ಜಿಲ್ಲೆಯಲ್ಲಿ ಗೊರವರ ಕಲೆ ಪ್ರಸಿದ್ಧವಲ್ಲದಿದ್ದರೂ ಮೈಲಾರ ದೇವರ ಒಕ್ಕಲುಗಳಲ್ಲಿ ವ್ಯಾಪಕವಾಗಿದೆ. ತುಮಕೂರು ಸಿರಾ ಗೇಟ್, ಚೇಳೂರು ಹೋಬಳಿ ಎಣ್ಣೆಕಟ್ಟೆ, ಇರಕಸಂದ್ರ, ಬಿದರೆ, ಮಲಮಾಚಕುಂಟೆ, ಗುಬ್ಬಿ ತಾಲೂಕಿನ ಮುದ್ದನಹಳ್ಳಿ, ಚಿಕ್ಕನಾಯಕನಹಳ್ಳಿ, ಸಿರಾ, ದ್ವಾರನಕುಂಟೆ, ಹುಣಸೇಹಳ್ಳಿ ಯಗ್ಗನಹಳ್ಳಿಗಳಲ್ಲಿ ಇಂದಿಗೂ ವ್ಯಾಪಕವಾಗಿದೆ.

ಗೊರವರ ಬೆಟ್ಟಲಿಂಗಯ್ಯ ಗುಬ್ಬಿ ತಾಲೂಕಿನ ಚೇಳೂರು ಹೋಬಳಿ ಇರಕಸಂದ್ರದವರು. ೯೦ ವರ್ಷಗಳ ಹಿರಿಯ ಕಲಾವಿದರು. ತಂದೆ ಬೆಟ್ಟಯ್ಯನವರೂ

ಗೊರವ ಪರಂಪರೆಯವರು, ಬೆಟ್ಟಲಿಂಗಯ್ಯನವರಿಗೆ ಮೂರುಜನ ಗಂಡುಮಕ್ಕಳು. ಮಕ್ಕಳಲ್ಲಿ ಮೊದಲನೆಯವನು ಗೊರವಪ್ಪನ ದೀಕ್ಷೆ ಪಡೆದು, ಕಲೆಯನ್ನು ರೂಢಿಸಿಕೊಂಡಿದ್ದಾರೆ.

ಬೆಟ್ಟಲಿಂಗಯ್ಯನವರು ಹಲವಾರು ಗೊರಪ್ಪಗಳಿವೆ, ದೀಕ್ಷೆ ಕೊಟ್ಟಿದ್ದಾರೆ. ಗೊರವರ ಪದ ಹೇಳಿಕೊಟ್ಟಿದ್ದಾರೆ, ಗೊರವರ ಕುಣಿತ ಕಲಿಸಿದ್ದಾರೆ. ಅವರಲ್ಲಿ ಇರಕಸಂದ್ರದ ಸಣ್ಣಲಿಂಗಪ್ಪ, ಶಿವಣ್ಣ, ದೊಡ್ಡಬಸಪ್ಪ, ತಿಮ್ಮಣ್ಣನ ಪಾಳ್ಯದ ಬಸವರಾಜು, ಮಲಮಾಚಕುಂಟೆಯ ಮೈಲಾರ ದೇವಸ್ಥಾನದ ಅರ್ಚಕ ಮತ್ತು ಗೊರಪ್ಪ ಶ್ರೀ ಎನ್. ಮೈಲಾರಯ್ಯ ಮುಖ್ಯವಾದವರು. ಕಳೆದ ೭೦ ವರ್ಷಗಳಿಂದಲೂ ಗೊರವರ ಕಲೆಯಲ್ಲಿಯೇ ಪ್ರಸಿದ್ಧರಾಗಿರುವ ಬೆಟ್ಟಲಿಂಗಯ್ಯನವರ ಗುರುಗಳು ತಿಮ್ಮಣ್ಣಪಾಳ್ಯದ ಬಡಗೊರವಯ್ಯ. ಅಪೂರ್ವ ಗೊರವ ಕಲಾವಿದರಾಗಿದ್ದ ಗೊರವಯ್ಯ ವೃತ್ತಿ ಗಾಯಕ ಕಲಾವಿದರಾಗಿದ್ದರು. ಸಾವು, ಹುಟ್ಟು, ವಾರ, ಮದುವೆ ಈ ಮೊದಲಾದ ಶುಭಕಾರ್ಯ, ಅಶುಭ ಸಂದರ್ಭಗಳಲ್ಲಿ ಗೊರವಯ್ಯನ ಪೂಜೆಯ ಮೂಲಕ ಮೈಲಾರದೇವರ ಒಕ್ಕಲಲ್ಲಿ ಗುರುಸ್ಥಾನ ಪಡೆದಿದ್ದರು. ಅವರ ಮಾರ್ಗದಲ್ಲಿ ಅಂಥದ್ದೇ ಸ್ಥಾನಮಾನ ಪಡೆದಿರುವ ಇರಕಸಂದ್ರದ ಬೆಟ್ಟಲಿಂಗಯ್ಯ ಗೊರವ ಕಲೆಯ ಭೀಷ್ಮನಂತಿರುವುದರ ಜೊತೆಗೆ ನೂರಾರು ಕಲಾವಿದರನ್ನು ತಯಾರಿಸಿರುವ ಹಿರಿಮೆಗೂ ಪಾತ್ರರಾಗಿದ್ದಾರೆ. ಸರ್ಕಾರ, ಸಂಘ ಸಂಸ್ಥೆಗಳಿಂದ ಯಾವುದೇ ಸಹಾಯ, ಪ್ರಶಸ್ತಿ ಪುರಸ್ಕಾರಗಳಿಂದ ಹೊರಗುಳಿದು ಸದಾ ಧಾರ್ಮಿಕ ಮತ್ತು ಸಾಂಸ್ಕೃತಿಕ ಕಲಾ ಪ್ರಸಾರದಲ್ಲಿ ತೊಡಗಿರುವ ಬೆಟ್ಟಲಿಂಗಯ್ಯ ನಿಜ ಅರ್ಥದಲ್ಲಿ ಕಲಾಗೌರವ ತಪಸ್ವಿ. ಜನಪದ ಕೀಲುಕುದುರೆ ತಯಾರಕರು ಹಾಗೂ ಕೀಲುಕುದುರೆ ಕಲಾವಿದರಾಗಿಯೂ ಹೆಸರು ಮಾಡಿರುವುದು ಇವರ ವಿಶೇಷವಾಗಿದೆ. ಮರದ ಬಂಡಿ ತಯಾರಿಕೆಯಲ್ಲಿ ಪರಿಣಿತರು.

ಬೆಟ್ಟಲಿಂಗಯ್ಯ, ಗೊರವರ
ಕಲೆ ಕಲಾವಿದರು,
ಇರಕಸಂದ್ರ, ಗುಬ್ಬಿ ತಾಲೂಕು.

# ಗೊರವರ ಚಿಕ್ಕಮಲ್ಲಯ್ಯ

ಚಿಕ್ಕಮಲ್ಲಯ್ಯನವರಿಗೆ ಇದೀಗ ೬೦ ವರ್ಷ ಪ್ರಾಯ. ಹುಟ್ಟಿದ್ದು ಗುಬ್ಬಿ ತಾಲೂಕು ಗುಬ್ಬಿ ಹೊಸಹಳ್ಳಿ ಸಮೀಪದ ಮುದ್ದನಹಳ್ಳಿಯಲ್ಲಿ ತಂದೆ ಇಲ್ಲಿನ ಶ್ರೀ ಮೈಲಾರಲಿಂಗೇಶ್ವರ ದೇವಸ್ಥಾನದ ಅರ್ಚಕರು. ಗೊರವಯ್ಯ ದೇವಸ್ಥಾನದ ಪೂಜೆಯ ಜೊತೆಗೆ ಗೊರವರ ಕುಣಿತ, ದೋಣಿ ಸೇವೆ, ಸರಪಣಿ ಪವಾಡ, ಬಗಿನಿ ಪವಾಡಗಳಲ್ಲೂ ಪ್ರಸಿದ್ಧರಾಗಿದ್ದರು. ಬಂಡಾರವಾಟದ ಕುಣಿತ ಇವರ ವಿಶೇಷವಾಗಿತ್ತು. ಇವರೂ ನೂರು ವರ್ಷ ಬದುಕಿದ್ದರು. ಇವರ ಮಗನೇ ಚಿಕ್ಕಮಲ್ಲಯ್ಯ.

ಚಿಕ್ಕಮಲ್ಲಯ್ಯ ಗುಬ್ಬಿ ಸೀಮೆಯ ಏಕೈಕ ಗೊರವರ ಕುಣಿತದ ಕಲಾವಿದ. ತನ್ನ ಹತ್ತನೇ ವಯಸ್ಸಿನಲ್ಲೇ ಗೊರವ ದೀಕ್ಷೆ ಪಡೆದರು. ದೀಕ್ಷಾ ಗುರು, ಗೊರವ ಪದ ಕಲಿಸಿದವರು ತಂದೆ ಗೊರವಯ್ಯನವರೆ. ಇವರೊಂದಿಗೆ ಹತ್ತು ಜನರಿಗೆ ಒಂದೇ ಬಾರಿ ಗೊರವ ದೀಕ್ಷೆ ನೀಡಿದರಾದರೂ ಅವರ್‍ಯಾರೂ ವೃತ್ತಿ ಕಸುಬನ್ನು ಮುಂದುವರಿಸಲಿಲ್ಲ. ವಾರದ ದಿನ ಪೂಜೆ ಮಡಿಯೊಂದಿಗೆ ಜೋಳಿಗೆ ಪೂಜೆ, ಹೆಚ್ಚೆಂದರೆ ಯುಗಾದಿ, ಮಹಾನವಮಿಯಂದು ಗೊರವರ ವೇಷದೊಂದಿಗೆ ನಾಲ್ಕು ಮನೆ ಭಿಕ್ಷೆ ಮಾಡುವುದು ಅಷ್ಟೆ. ಆದರೆ ಚಿಕ್ಕಗೊರವಯ್ಯ ಜಿಲ್ಲೆಯ ಸಮರ್ಥ ಗೊರವರ ಕುಣಿತ ಕಲಾವಿದ. ಕುಣಿತ, ಹಾಡು, ಪವಾಡ, ಖಡ್ಗ ಹೇಳುವುದು ಮುಂತಾದ ಗೊರವರ ಕುಣಿತದ ಎಲ್ಲಾ ವರಸೆಗಳೂ ಕರಗತ. ತೊಂಬತ್ತು ಸುಗ್ಗಿ, ಮಳೆಗಾಲ ಕಂಡಿರುವ ಚಿಕ್ಕಮಲ್ಲಯ್ಯ ಎಂದು ಕುಣಿತವನ್ನು ಬಿಟ್ಟಿಲ್ಲ. ಗೊರವರ ಮೈಲಾರಲಿಂಗನ ಪದ ಹಾಡುವುದನ್ನು ನಿಲ್ಲಿಸಿಲ್ಲ.

ಚಿಕ್ಕಮಲ್ಲಯ್ಯನವರಿಗೆ ಒಬ್ಬನೇ ಮಗ ಚಿಕ್ಕಲಿಂಗಯ್ಯ, ಈತ ಮುದ್ದನಹಳ್ಳಿಯ ಮೈಲಾರ ದೇವರ ಪಟ್ಟದ ಭಕ್ತ. ತಂದೆ ಗೊರವರ ಕಲೆಯ ಪ್ರಸಾರಕ್ಕಾಗಿ ತುರುವೇಕೆ ತಾಲೂಕು ಸಂಪಿಗೆ ಗ್ರಾಮದಲ್ಲಿ ನೆಲೆಸಿದರೆ, ಮಗ ಇಲ್ಲಿ ತಂದೆಯ ಕಲೆಯನ್ನು

ಸಮರ್ಥವಾಗಿ ಮುಂದುವರಿಸಿದ್ದಾರೆ. ಭಜನೆ ಕಲಾವಿದರೂ ಹೌದು. ಸೊಗಸಾಗಿ ತತ್ವಪದ ಹಾಡುತ್ತಾರೆ.

ಶಿವಣ್ಣ, ಬಸವರಾಜು, ಮಲ್ಲಯ್ಯ, ಬಸವಲಿಂಗಯ್ಯ, ಗೊರಪ್ಪನವರ ಶಿವಣ್ಣ ಚಿಕ್ಕಮಲ್ಲಯ್ಯನವರ ನೆಚ್ಚಿನ ಶಿಷ್ಯರು. ಗೊರವರ ಕುಣಿತದ ಸಮರ್ಥ ಕಲಾವಿದರು. ಅಸಹಾಯಕತೆ ಬಡತನ, ವೃದ್ಧಾಪ್ಯ ಈ ಎಲ್ಲವುಗಳೊಂದಿಗೆ ಸರ್ಕಾರದ ಯಾವುದೇ ಸವಲತ್ತು ಒಲ್ಲದ ಧೀಮಂತ ಕಲಾವಿದ ಚಿಕ್ಕಮಲ್ಲಯ್ಯ.

**ಗೊರವರ ಚಿಕ್ಕಮಲ್ಲಯ್ಯ,**
**ಮುದ್ದನಹಳ್ಳಿ, ಗುಬ್ಬಿ ಕಸಬಾ ಹೋಬಳಿ.**

# ಕೋಲಾಟದ ದೊಡ್ಡಮಲ್ಲಯ್ಯ

ದೊಡ್ಡಮಲ್ಲಯ್ಯ ಬುಡಕಟ್ಟು ವರ್ಗದ ಪ್ರಮುಖ ಕಲಾವಿದ. ಅತೀವ ಬಡತನ, ೧೧ ಮಕ್ಕಳ ತುಂಬು ಕುಟುಂಬ. ಅನಾರೋಗ್ಯ ತಂದೆ, ಈ ಸ್ಥಿತಿಯಲ್ಲಿ ದೊಡ್ಡಮಲ್ಲಯ್ಯ ಕೆಲವು ಕಾಲ ಜೀತವನ್ನು ಅನುಭವಿಸಿದರು. ಚೇಳೂರು ಸಮೀಪದ ತಿಗಳರ ಕೋಡಿಪಾಳ್ಯದ ಯಜಮಾನ್ ಕುರಿದೊಡ್ಡಯ್ಯ ತಂದೆ, ತಾಯಿ ಲಕ್ಷ್ಮಕ್ಕ ಇವರಿಗೆ ಆರನೇ ಮಗನಾಗಿ ಜನಿಸಿದರು. ತಮ್ಮ ಹತ್ತು ವರ್ಷ ಬಾಲಕತನದಿಂದಲೇ ಕೋಲಾಟ ಕಲಾವಿದರಾಗಿ ಭಾಗವಹಿಸುತ್ತಾ ಬಂದರು. ಕೋಲಾಟ ಕೇವಲ ಯಾಂತ್ರಿಕವಲ್ಲ. ಅದೂ ಒಂದು ವಿಜ್ಞಾನ. ಅದರಲ್ಲಿಯೂ ಪ್ರಯೋಗವಾಗಬಹುದು ಎಂಬುದನ್ನು ಮನಗಂಡ ದೊಡ್ಡಮಲ್ಲಯ್ಯ ಕೋಲಾಟ ಕಲೆಯಲ್ಲಿಯೂ ಹಲವು ವೈವಿಧ್ಯತೆ ಮಾಡಿಕೊಂಡರು. ಜತೆಕೋಲು ಕೊರವಂಜಿ ಕೋಲು, ಜೋಡುಗೋಲು, ಹೊರಗೋಲು, ಒಳಗೋಲು, ಸೊಲ್ಲು, ಮೊದಲ ಹೆಜ್ಜೆ, ಮೂರನೇ ಸುತ್ತು ಹೀಗೆ ಆಕರ್ಷಕ ಹಾಗೂ ವೈವಿಧ್ಯತೆಯನ್ನು ಕೋಲಾಟ ಕಲೆಯಲ್ಲಿ ಮಾಡತೊಡಗಿರುವುದು ಇವರ ವಿಶೇಷವಾಗಿದೆ.

ದೊಡ್ಡಮಲ್ಲಯ್ಯ ಗುಬ್ಬಿ, ತುಮಕೂರು ತಾಲೂಕುಗಳಲ್ಲಿ ಹೆಸರುವಾಸಿ ಕಲಾವಿದ. ತಿಗಳ ಜನಾಂಗದ ಸಾಂಪ್ರದಾಯಿಕ ಆಚರಣೆಯಲ್ಲಿ ತಪ್ಪದೇ ಆಹ್ವಾನಿತ ಕಲಾವಿದರಾಗಿ ಭಾಗವಹಿಸಿದ್ದಾರೆ. ಇವರೊಂದಿಗೆ ಪಿ. ಕೋಡಯ್ಯ, ದೊಡ್ಡಯ್ಯ, ಮುನಿಮಲ್ಲಯ್ಯ, ಹೆಚ್. ಶಿವಣ್ಣ, ಶಿವಣ್ಣ ಚಿಕ್ಕನಂಜಯ್ಯ, ಚಿಕ್ಕಮಲ್ಲಯ್ಯ, ಹೊನ್ನಯ್ಯ ಶಿವಣ್ಣ, ಪುಟ್ಟಮಲ್ಲಯ್ಯ, ಪಾಪಣ್ಣ ಈ ಕಲಾವಿದರ ತಂಡದೊಂದಿಗೆ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಭಾಗವಹಿಸಿದ್ದಾರೆ. ಬೆಂಗಳೂರು ಆಕಾಶವಾಣಿಯಿಂದಲೂ ಇವರ ಕೋಲಾಟ ಕಲೆ ಪ್ರಸಾರವಾಗಿದೆ. ಗಣಪತಿ ಉತ್ಸವ, ರಾಜ್ಯೋತ್ಸವ ಮೊದಲಾದ ಸಾಂಸ್ಕೃತಿಕ ಸಮಾರಂಭಗಳಲ್ಲಿ ಆಹ್ವಾನಿತ ಕಲಾವಿದ ತಂಡದೊಂದಿಗೆ ಪ್ರದರ್ಶನ ನೀಡುತ್ತಿರುವ ದೊಡ್ಡಮಲ್ಲಯ್ಯ ಕೋಲಾಟದ ದೊಡ್ಡಮಲ್ಲಯ್ಯ ಎಂದೇ ಖ್ಯಾತರು. ದೊಡ್ಡಮಲ್ಲಯ್ಯ

ನವರಿಗೆ ನಾಲ್ಕು ಜನ ಮಕ್ಕಳು. ಇಬ್ಬರು ಹೆಣ್ಣು ಮತ್ತು ಇಬ್ಬರು ಗಂಡು. ಗಂಡುಮಕ್ಕಳು ಕೋಲಾಟದ ಪದ ಹಾಡುತ್ತಾರೆ. ಕೋಲಿಗೆ ಹೆಜ್ಜೆ ಹಾಕುತ್ತಾರೆ. ಉತ್ತಮ ಯಕ್ಷಗಾನ ಕಲಾವಿದರು, ಜನಪದ ಸಂಗೀತ ಕೋವಿದರೂ ಆಗಿರುವ, ದೊಡ್ಡಮಲ್ಲಯ್ಯ ಉತ್ತರಾದೇವಿ, ಕರಿಭಂಟ, ನಿಡಗಲ್ಲುದುರ್ಗ, ಮದುಗದ ಕೆಂಚಮ್ಮ ಮೊದಲಾದ ಕಥನ ಗೀತೆಗಳನ್ನು ಹಾಡುತ್ತಾರೆ.

ದಿನಾಂಕ ೨೨-೨೩ ನೇ ಜುಲೈ ೨೦೦೭ ರಲ್ಲಿ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ದೆಹಲಿ ಕರ್ನಾಟಕ ಭವನದಲ್ಲಿ ಏರ್ಪಡಿಸಿದ್ದ ಸುವರ್ಣ ಕರ್ನಾಟಕ ಜನಪದ ಕಲಾ ಮಹೋತ್ಸವದಲ್ಲಿ ಪಿ. ಕೋಡಯ್ಯ, ಮುನಿಮಲ್ಲಯ್ಯ, ಶಿವಣ್ಣ, ಚಿಕ್ಕಮಲ್ಲಯ್ಯ, ಶಿವಣ್ಣ, ದೊಡ್ಡಯ್ಯ ತಂಡದೊಂದಿಗೆ ಭಾಗವಹಿಸಿದ್ದರು. ಅರವತ್ತೈದು ಸುಗ್ಗಿ ಕಣಗಳನ್ನು ಕಂಡಿರುವ ದೊಡ್ಡಮಲ್ಲಯ್ಯ, ಅವಿದ್ಯಾವಂತರಾದರೂ ತೋಟಗಾರಿಕೆ, ಸಸ್ಯಜ್ಞಾನವೂ ಅದ್ಭುತವಾದುದು. ಅಡಿಕೆ ಹದ ನೋಡುವುದು, ಬಾಳೆಹಣ್ಣು ಮಾಡುವ ಕಲೆಯೂ ಇವರ ದೇಶೀ ಸಸ್ಯಜ್ಞಾನಕ್ಕೆ ತಲೆ ತೂಗಲೇಬೇಕಿದೆ.

**ದೊಡ್ಡಮಲ್ಲಯ್ಯ**
**ತಿಗಳರ ಕೋಡಿಪಾಳ್ಯ**
**ಚೇಳೂರು ಅಂಚೆ, ಗುಬ್ಬಿ ತಾಲೂಕು.**

# ವೀರಮಕ್ಕಳ ಕುಣಿತದ ಲಕ್ಕಣ್ಣ

ವೀರಮಕ್ಕಳ ಕುಣಿತ ತುಮಕೂರು ಜಿಲ್ಲೆಯ ಅಪರೂಪದ ಕಲೆ. ಕುರುಬರಲ್ಲಿ ಒಂದು ಪಂಗಡವಿದ್ದು, ಅವರನ್ನು 'ಕುಣಾಕುರುಬರು' ಎಂದು ಕರೆಯಲಾಗುತ್ತದೆ. ಮಂಡ್ಯ, ಹಾಸನ, ಮೈಸೂರು ಭಾಗಗಳ್ಲಿ ವ್ಯಾಪಕವಾಗಿರುವ ಈ ಕಲೆ, ತುಮಕೂರು ಜಿಲ್ಲೆಯ ಕಸಬಾ ತಾಲೂಕಿನ ಊರುಕೆರೆ ಹೋಬಳಿಗೆ ಸೇರಿದ ಅಣ್ಣೇನಹಳ್ಳಿಯಲ್ಲಿ ಒಂದು ಪರಂಪರಾ ಕಲೆಯಾಗಿದೆ. ಸಾಮಾನ್ಯವಾಗಿ ಕೆಂಪುಬಣ್ಣದ ವಸ್ತ್ರ, ತಲೆಗೆ ರುಮಾಲು, ಜುಬ್ಬ, ನಡುವಿಗೆ ಬಿಗಿದ ವಸ್ತ್ರ, ಕಾಲಿಗೆ ಗೆಜ್ಜೆ, ಕೈಯಲ್ಲಿ ಚರ್ಮದಿಂದ ತಯಾರಿಸಿದ ಚಿಕ್ಕ ಹಲಗೆ ಬಡಿಯುತ್ತಾ ಕುಣಿಯುತ್ತಾರೆ. ಈ ಹಲಗೆಯನ್ನು ಚಕ್ರಾದಿ ಬಳೆ ಎಂದು ಕರೆಯಲಾಗುವುದು. ಮಣ್ಣಿನ ಮಡಕೆಯ ಬಾಯಿಗೆ ಆಡಿನ ಚರ್ಮವನ್ನು ಬಿಗಿದು ಕಟ್ಟಿ ಕೈಯಿಂದಲೇ ನುಡಿಸುವುದು ಚಕ್ರಾದಿ.

ಈ ಬಗೆಯ ಕಲೆಯ ಅಪರೂಪದ ಕಲಾವಿದ ಅಣ್ಣೇನಹಳ್ಳಿಯ ಲಕ್ಕಣ್ಣ ಮತ್ತು ಸೋದರ ಬಸವಯ್ಯ. ಅಣ್ಣೇನಹಳ್ಳಿಯ ಕುರುಬರ ದೊಡ್ಡಯ್ಯನವರ ಮಕ್ಕಳು ಕುಂಚಂಗಿ ಅಮ್ಮ, ಮಲ್ಲೇನಪಳ್ಳಿ ಚಿಕ್ಕಮ್ಮ, ದೊಡ್ಡಮ್ಮ ಜಾತ್ರಾ ಮಹೋತ್ಸವದಲ್ಲಿ ದೇವರ ಮಹಿಮಾವಳಿಯನ್ನು ಪ್ರಚಾರ ಮಾಡುತ್ತಾ, ದೇವರ ಮುಂದೆ ಹೋಗುತ್ತಾರೆ. ಇವರ ಹಿಂದೆ ಕಳಸ, ನಂತರ ದೇವರು ಹೊತ್ತವರು ಹೋಗುತ್ತಾರೆ. ಹೆಣ್ಣು ದೇವತೆಯ ಜಾತ್ರೆಯ ಸಂದರ್ಭದಲ್ಲಿ 'ಆದಿಶಕ್ತಿಯೆ ಪರಾಕ್' ಎಂದೇ ಕರೆಯು ಹಾಡಿನಲ್ಲಿ ಪಾರ್ವತಿಯ ಕಥಾನಕವನ್ನು ಹೇಳುತ್ತಾರೆ. ವಾದ್ಯ ಬಡಿಯುತ್ತಾ ಕುಣಿಯುತ್ತಾ ಮಧ್ಯ ಮಧ್ಯೆ ನಿಂತು ಕಂದ ಹೇಳುತ್ತಾರೆ. ದೇವರು ಚರಿತ್ರೆಯನ್ನು, ಪೌರಾಣಿಕ ಹಿನ್ನೆಲೆಯನ್ನು ವಿವರಿಸುವುದು ಇವರ ವಿಶೇಷವಾಗಿದೆ. ವೀರಮಕ್ಕಳು ತಲೆಯ ಮೇಲೆ ತೆಂಗಿನಕಾಯನ್ನು ಒಡೆದು ಕೊಳ್ಳುವ ಪವಾಡವನ್ನು ಮಾಡುತ್ತಾರೆ. ಭಂಡಾರ ಆಡುತ್ತಾರೆ. ಕೊಡ ಹಾಯುವುದು ಮೊದಲು ವೀರಮಕ್ಕಳೆ. ನಂತರ ಕಳಸ, ದೇವರ ಮೆರವಣಿಗೆ ಸಾಗುತ್ತದೆ.

ಲಕ್ಕಣ್ಣನವರಿಗೆ ೭೦ ರ ಪ್ರಾಯ. ತಾನು ೫ನೇ ವಯಸ್ಸಿನಲ್ಲಿಯೇ ತಾತನವರಿಂದ ಈ ಕಲೆಯನ್ನು ಕಲಿತಿದ್ದಾರೆ. ತಾತನವರಿಗೆ ತುಮಕೂರು ಜಿಲ್ಲೆಯ ಕುರುಬರ ಧಾರ್ಮಿಕ ಉತ್ಸವಗಳಲ್ಲಿ ಗುರುಮಠದ ಕಾರ್ಯದಲ್ಲಿ ತಪ್ಪದೆ ಆಹ್ವಾನವಿರುತ್ತಿತ್ತು. ತಾತನ ಹಿಂದೆ ಲಕ್ಕಣ್ಣ ಹೋಗುತ್ತಿದ್ದರು. ಅವರಿಂದ ಕುಣಿತ, ಹಾಡುವುದನ್ನು ಕಲಿತರು. ತಂದೆ ದೊಡ್ಡಯ್ಯ, ಇವರಿಗೆ ಬಸವಯ್ಯ ಎಂಬ ಇನ್ನೊಬ್ಬರು ಮಗ. ಅವರೂ ವೀರಮಕ್ಕಳ ಕುಣಿತ ಕಲಾವಿದರು.

ಮೈಲಾರ ದೇವರ ಉತ್ಸವಗಳಲ್ಲಿ ವೀರಮಕ್ಕಳ ಕುಣಿತ ಅತ್ಯಗತ್ಯ ಎಂದು ಭಾವಿಸಲಾಗುತ್ತದೆ. ಗೊರವರ ಕುಣಿತದಂತೆಯೇ ವೀರಮಕ್ಕಳ ಕುಣಿತವೂ ಪ್ರಮುಖ ಕಲೆಯಾಗಿದೆ.

ಇದೀಗ ಅಣ್ಣೇನಹಳ್ಳಿಯ ಲಕ್ಕಣ್ಣನವರ ಮಕ್ಕಳೂ ಇದೇ ಕಲೆಯನ್ನು ಮುಂದುವರಿಸಿದ್ದಾರೆ. ಬಳ್ಳಾರಿ ಜಿಲ್ಲೆಯ ಹೂವಿನಹಡಗಲಿ ಮೈಲಾರ ಜಾತ್ರೆಯಲ್ಲಿ ಇವರು ಕಲಾ ಪ್ರದರ್ಶನ ಏರ್ಪಡಿಸಿದ್ದಾರೆ. ಬಂಗಾರದ ಪಂಜರ ಚಲನಚಿತ್ರದಲ್ಲೂ ಈ ಕಲಾವಿದರು ಕಾಣಿಸಿಕೊಂಡಿದ್ದಾರೆ. ಕಂಬಳಿ ನೇಯ್ಗೆಯ ವೃತ್ತಿಯ ಜೊತೆಗೆ ವೀರಮಕ್ಕಳ ಕುಣಿತವನ್ನು ಕಲಾತ್ಮಕವಾಗಿ ರೂಢಿಸಿ, ಬೆಳೆಸಿಕೊಂಡು ಬರುತ್ತಿರುವ ಕರ್ನಾಟಕದ ವಿಶಿಷ್ಟ ಅಪರೂಪದ ಕಲಾವಿದರು.

**ಲಕ್ಕಣ್ಣ, ದೊಡ್ಡಯ್ಯ**
**ಅಣ್ಣೇನಹಳ್ಳಿ,**
**ಊರುಕೆರೆ ಅಂಚೆ, ತುಮಕೂರು ತಾಲೂಕು.**

## ಲಿಂಗದ ಬೀರರ ಚಂದ್ರಣ್ಣ

ತುಮಕೂರುಜಿಲ್ಲೆ, ಕೊರಟಗೆರೆ ತಾಲೂಕು ಲಿಂಗದವೀರನ ಹಳ್ಳಿ ಕಲಾವಿದರ ಐತಿಹ್ಯವನ್ನು ಸಮರ್ಥವಾಗಿ ಹೇಳುತ್ತದೆ. ಲಿಂಗದಬೀರರೇ ಸ್ಥಾಪಿಸಿದ, ವಾಸಿಸುತ್ತಿದ್ದ ಗ್ರಾಮವಾದುದರಿಂದಾಗಿಯೇ ಈ ಊರಿಗೆ ಲಿಂಗದಬೀರರಹಳ್ಳಿ ಎಂಬ ಹೆಸರು ಬಂದಿದೆ ಎಂದು ಶ್ರೀ ಚಂದ್ರಪ್ಪನವರು ಸಮರ್ಥನೆಯೊಂದಿಗೆ ವಿವರಿಸುತ್ತಾರೆ. ಇಂದಿಗೂ ಲಿಂಗದಬೀರರ ಕಲೆಯನ್ನು ಸಮರ್ಥವಾಗಿ ಪ್ರದರ್ಶಿಸುತ್ತಾ, ಜಿಲ್ಲೆಯಾದ್ಯಂತ ಈ ಕಲೆಯ ಹಿರಿಮೆಯನ್ನು ಲೌಕಿಕ, ಅಲೌಕಿಕ ಈ ಎರಡೂ ಪ್ರಕಾರಗಳಲ್ಲಿಯೂ ಪ್ರಸಾರ ಮಾಡುತ್ತಿರುವ, ಅದ್ಭುತ ಕಲಾವಿದ ಶ್ರೀ ಚಂದ್ರಣ್ಣ.

ತಾತ, ತಂದೆ ಹೀಗೆ ವಂಶಪಾರಂಪರ್ಯವಾಗಿ ಬಂದ ಈ ಕಲೆಯನ್ನು ತಂದೆ ಸಿದ್ಧಲಿಂಗಪ್ಪ ಅವರಿಂದ ದೀಕ್ಷೆ ರೂಪದಲ್ಲಿ ಸ್ವೀಕರಿಸಿರುವ ಇವರು, ತಮ್ಮ ಮೂವರು ಮಕ್ಕಳೊಂದಿಗೆ, ಗ್ರಾಮದ ನಂದೀಶಪ್ಪ, ದೊಡ್ಡಬಸಪ್ಪ ಮುಂತಾದ ಹಿರಿಯ ಕಲಾತಂಡದೊಂದಿಗೆ ಲಿಂಗದಬೀರರ ಕಲಾಸಂಘವೊಂದನ್ನು ರಚಿಸಿಕೊಂಡಿದ್ದಾರೆ. ವೀರಭದ್ರನ ಕುಣಿತ ಎಂತಲೂ ಕರೆಯಲ್ಪಡುವ ಇವರು, ಇದನ್ನು ವೀರಗಾಸೆ ಎಂದೂ ಕರೆದುಕೊಳ್ಳುತ್ತಾರೆ. ವೀರಗಾಸೆಗಿಂತ ತೀರಾ ಭಿನ್ನವಾದ ಈ ಕಲೆ ಸ್ವಯಂ ಶಿವನ ವೀರಭದ್ರನ ಅವತಾರದ ರೂಪ. ಸೊಂಟಕ್ಕೆ ಕಟ್ಟುವ ರುಂಡಮಾಲೆ, ನಾಗಾಭರಣ, ತಲೆಯಲ್ಲಿ ಉದ್ದನೆಯ ಬಿಳಿಯ ಟೋಪನ್, ಸೊಂಟಕ್ಕೂ ಬಿಳಿಯ ಕೂದಲಿನ ಟೋಪನ್ ಆಕೃತಿಯ ಬಿಳಿಕೂದಲು, ಕೈಯಲ್ಲಿ ಕತ್ತಿ, ಕಿರೀಟ ಹೀಗೆ ಒಂದೊಂದು ಶಿವನ ಆಕೃತಿ.

ಚಂದ್ರಣ್ಣ ರಾಜ್ಯಾದ್ಯಂತ ಲಿಂಗದಬೀರರ ಕುಣಿತ ಕಲೆಯನ್ನು ಆಕರ್ಷವಾಗಿ ಪ್ರದರ್ಶಿಸಿದ್ದಾರೆ. ಕರ್ನಾಟಕ ಜಾನಪದ ಅಕಾಡೆಮಿ, ಯುವಜನ ಮೇಳ, ಸರ್ಕಾರದ ವಿವಿಧ ಸಭೆ ಸಮಾರಂಭಗಳಲ್ಲೂ ಈ ಕಲೆಯನ್ನು ಸಮರ್ಥವಾಗಿ ಪ್ರದರ್ಶಿಸುತ್ತಾರೆ.

ದೇವರ ಪ್ರತಿಷ್ಠಾಪನೆ, ಅಗ್ನಿಕುಂಡೋತ್ಸವ ಮೊದಲಾದ ಸಾಂದರ್ಭಿಕ ಆಚರಣೆಗಳಲ್ಲಿ ಇವರ ಹಾಜರಿ ಅಗತ್ಯ ಎಂಬ ವಾತಾವರಣವನ್ನು ನಿರ್ಮಿಸಿರುವರ ಚಂದ್ರಪ್ಪನವರು, ವೀರಭದ್ರನ ವಿವಿಧ ಲೀಲೆಗೆ ಸಂಬಂಧಿಸಿದಂತೆ ಸೊಗಸಾದ ಕಾವ್ಯವನ್ನು ಹಾಡುವುದು ಇವರ ವಿಶೇಷ. ಖಡ್ಗದ ಪದ ಅಥವಾ ವೀರಭದ್ರನ ಒಡಪುಗಳು ಎಂದು ಕರೆದುಕೊಳ್ಳುವುದು ಇವರ ವಿಶೇಷವಾಗಿದೆ.

ಲಿಂಗದಬೀರರ ಚಂದ್ರಣ್ಣ,
ಲಿಂಗದಬೀರನಹಳ್ಳಿ,
ಕೊರಟಗೆರೆ ತಾಲೂಕು.

# ಪಾಂಡುರಂಗಪ್ಪ

ಯಕ್ಷಗಾನ, ಪಾಳೆಯಗಾರರ ಕುಣಿತ, ಜನಪದ ಹಾಡುಗಾರಿಕೆ ಈ ಮೂರು ಕಲೆಗಳಲ್ಲಿ ನಿಷ್ಣಾತರಾಗಿರುವ ಪಾಂಡುರಂಗಪ್ಪ ಸಿರಾ ತಾಲೂಕು ಕಳ್ಳಂಬೆಳ್ಳದವರು.

ತಮ್ಮ ೨೦ನೇ ವಯಸ್ಸಿನಿಂದಲೂ ಜನಪದ ಗೀಳು ಹಿಡಿದು ಹಾಡತೊಡಗಿದರು. ಮೊದಲು ಕೋಲುಪದ ಹಾಡುವುದನ್ನು ಕಲಿತರು. ನಂತರ ಪಾಳೆಯಗಾರನ ವೇಷದಲ್ಲಿ ಉತ್ತಮ ಸಾಧನೆ ತೋರಿಸಿದರು. ಅದ್ಭುತವಾದ ಪಾಳೆಗಾರರ ಕುಣಿತ ಇವರ ವಿಶೇಷವಾಗಿದೆ.

ಪಾಂಡುರಂಗಪ್ಪನವರಿಗೆ ವಿಶೇಷ ಗೌರವ ತಂದುಕೊಟ್ಟ ಕಲೆ ಎಂದರೆ ಯಕ್ಷಗಾನ. ಬಯಲಾಟ, ಯಕ್ಷಗಾನ, ಮೇಳ, ಬಯಲುಕತೆ ಎಂದೆಲ್ಲಾ ಕರೆಯಲ್ಪಡುವ ಯಕ್ಷಗಾನವನ್ನು ಆಳವಾಗಿ ಪ್ರೀತಿಸತೊಡಗಿದರು. ಮೊದಲು ಸ್ತ್ರೀ ಪಾತ್ರಗಳಲ್ಲಿ ಶಾರದೆ, ರುಕ್ಮಿಣಿ ಮುಂತಾದ ಪಾತ್ರಗಳಲ್ಲಿ ಅಭಿನಯ ನೀಡತೊಡಗಿದರು. ನಂತರ ಘೋರಪಾತ್ರ ಇವರನ್ನು ಆಕರ್ಷಿಸಿತು. ದೇವಿಮಹಾತ್ಮೆ ನಾಟಕದಲ್ಲಿ ರಕ್ತಬೀಜಾಸುರನ ಪಾತ್ರವೊಂದರಲ್ಲೇ ೪೦ ಪ್ರದರ್ಶನ ನೀಡಿರುವ ಹಿರಿಮೆ ಇವರದು. ದೇವಿಮಹಾತ್ಮೆ, ಅಹಿರಾವಣ–ಮಹಿರಾವಣ, ದಶಕಂಠ ರಾಮಾಯಣ, ಕೀಚಕನ ವಧೆ, ದುಶ್ಯಾಸನ ಕಾಳಗ, ವಿರಾಟಪರ್ವ, ಲವಕುಶರ ಕಾಳಗ, ಶನಿಪ್ರಭಾವ ಈ ಮೊದಲಾದ ಯಕ್ಷಗಾನಗಳಲ್ಲಿ ಪ್ರಮುಖ ಪಾತ್ರಗಳಲ್ಲಿ ಅಭಿನಯ ನೀಡಿದ್ದಾರೆ. ಇವರಿಗೆ ಮಾರ್ಗದರ್ಶಕರು ದೊಡ್ಡಗೂಳದ ಯಕ್ಷಗಾನ ಕಲಾವಿದ ಚೌಡಪ್ಪ. ಆದಿಕರ್ನಾಟಕ ವರ್ಗಕ್ಕೆ ಸೇರಿದ ಈ ಕಲಾವಿದ ಸಿರಾ, ಕಳ್ಳಂಬೆಳ್ಳ, ರತ್ನಸಂದ್ರ, ಎಲೆಯೂರು ಭಾಗಕ್ಕೆ ಪ್ರಸಿದ್ಧರು. ಲವ–ಕುಶ ಯಕ್ಷಗಾನದಲ್ಲಿ ೪೦ ವರ್ಷಗಳಿಂದ ಶ್ರೀರಾಮನ ಪಾತ್ರದಲ್ಲಿ ಹೆಸರುವಾಸಿ. ಇದೇ ಗ್ರಾಮದ ಓಬಣ್ಣನೂ ಯಕ್ಷಗಾನ ಕಲೆಯ ಹೆಸರುವಾಸಿ ಕಲಾವಿದರು.

ಇವರಿಬ್ಬರಿಗೂ ಇಂದು ೯೫ರ ಪ್ರಾಯ. ಯಕ್ಷಗಾನದ ಗೀಳು ಬಿಟ್ಟಿಲ್ಲ. ವರ್ಷಂಪ್ರತಿ ರಾಮನವಮಿಯಂದು ಯಕ್ಷಗಾನ ಮಾಡಿಸುವುದು ಇವರ ಹವ್ಯಾಸ.

ತುಮಕೂರು ಜಿಲ್ಲೆಯಾದ್ಯಂತ ಇವರ ರಕ್ತಬೀಜಾಸುರನ ಪಾತ್ರದ ಹಿರಿಮೆ ಹರಡಿದೆ. ದೇವಿಯ ಎದುರಿಗೆ ರಕ್ತಬೀಜಾಸುರ ಬಂದನೆಂದರೆ ಮೈ ರೋಮಾಂಚಕ ಅಭಿನಯ, ದೇವಿಯೇ ಮೈಮೇಲೆ ಬಂದ ಆವೇಶ, ರೋಚಕ ಕುಣಿತ, ಹಾಡು, ಮಟ್ಟು, ಕಂದ, ಉಡನ್ ಎಸೆಯುವುದು ಇವುಗಳಿಂದ ಅತ್ಯಂತ ಪರಿಣಾಮಕಾರಿಯಾದ ಪಾತ್ರ ನೀಡಿದ್ದಾರೆ. ಇವರ ಮಕ್ಕಳೂ ಯಕ್ಷಗಾನ ಕಲಾವಿದರಾಗಿದ್ದಾರೆ. ಆದರೆ ಪಾಂಡುರಂಗಪ್ಪ ಹವ್ಯಾಸಿ ಕಲಾವಿದರಾಗಿದ್ದು, ಯಾವುದೇ ಗ್ರಾಮದಲ್ಲಿ ದೇವಿಮಹಾತ್ಮೆ ನಾಟಕದಲ್ಲಿ ರಕ್ತಬೀಜಾಸುರನ ಪಾತ್ರಾಭಿನಯಕ್ಕೆ ಆಹ್ವಾನ ಬಂದ ಕೂಡಲೇ ತಯಾರಾಗಿ ಬಣ್ಣ ಹಚ್ಚುವುದು ಇವರ ವಿಶೇಷವಾಗಿದೆ. ಅಷ್ಟೊಂದು ಪರಿಣಾಮಕಾರಿ ಅಭಿನಯವನ್ನು ಇವರು ನೀಡಿದ್ದಾರೆ.

ಪಾಂಡುರಂಗಪ್ಪ,
ಯಕ್ಷಗಾನ ಕಲಾವಿದರು,
ಕಳ್ಳಂಬೆಳ್ಳ, ಸಿರಾ ತಾಲೂಕು.

## ಮಾಹಿತಿ ನೀಡಿದವರು :

* ಶ್ರೀ ಜಿ. ಇಂದ್ರಕುಮಾರ್, ಕಾರ್ಯದರ್ಶಿ, ಜಿಲ್ಲಾ ಪತ್ರಕರ್ತರ ಸಂಘ, ತುಮಕೂರು
* ಹಂದನಕೆರೆ ಪುಟ್ಟಯ್ಯ, ಹಂದನಕೆರೆ, ಚಿಕ್ಕನಾಯಕನಹಳ್ಳಿ ತಾಲೂಕು
* ಶ್ರೀ ಕೆ. ಬೊಮ್ಮಲಿಂಗಯ್ಯ ನಿ॥ ಸೂಪರಿಂಟೆಂಡಿಂಗ್ ಇಂಜಿನಿಯರ್, ದೊಡ್ಡಗೂರ, ಸಿರಾ ತಾಲೂಕು.
* ಪಿ. ಕೋಡಯ್ಯ, ಕೋಡಿಪಾಳ್ಯ, ಗುಬ್ಬಿ ತಾಲೂಕು
* ಹೆಚ್. ಕೆ. ಮಲ್ಲೇಶ್, ಹೊಸಹಳ್ಳಿಪಾಳ್ಯ, ತುರುವೇಕೆರೆ ತಾಲೂಕು
* ನಲ್ಲೂರು ಹೇಮಂತಕುಮಾರ್, ಚೇಳೂರು ಹೋಬಳಿ, ಗುಬ್ಬಿ ತಾಲೂಕು
* ಹೆಚ್. ಡಿ. ನರಸೇಗೌಡ, ಶಿಕ್ಷಕರು, ಹನುಮಂತಪುರ, ಮಧುಗಿರಿ ತಾ: ಮಿಡಿಗೇಶಿ ಹೋಬಳಿ
* ಸಿ. ಆರ್. ರಾಜಶೇಖರ್, ಚಿ. ನಾ. ಹಳ್ಳಿ
* ಎನ್. ಎಸ್. ಚನ್ನಪ್ಪ, ದೊಡ್ಡನೆಟಕುಂಟೆ, ಗುಬ್ಬಿ ತಾಲೂಕು
* ಬಿ. ಗಂಗಣ್ಣ, ನಿ, ಸೂಪರಿಂಟೆಂಡೆಂಟ್, ಕಡವಿಗೆರೆ, ಸಿರಾ ತಾಲೂಕು
* ಮಂಜುನಾಥ್, ಶಿಕ್ಷಕರು, ಕಲಾವಿದರು, ಮತ್ತೀಹಳ್ಳಿ, ತಿಪಟೂರು ತಾಲೂಕು
* ಬಿ. ಜಿ. ಲಿಂಗಪ್ಪ, ಛೇರ್ಮನ್, ಸಾತೇನಹಳ್ಳಿ, ತೋಟದಮನೆ, ಗುಬ್ಬಿ ತಾಲೂಕು
* ಶಂಭುಲಿಂಗಪ್ಪ, ಛೇರ್ಮನ್, ಸಾತೇನಹಳ್ಳಿ, ತೋಟದಮನೆ, ಗುಬ್ಬಿ ತಾಲೂಕು
* ಕೆಂಚಪ್ಪ, ಸರ್ಕಾರಿ ಪ್ರಥಮದರ್ಜೆ ಕಾಲೇಜು, ಸಿರಾ (ಹರಿವೇಸಂದ್ರ, ಗುಬ್ಬಿ)
* ಪ್ರೊ. ಮಹಾಲಿಂಗಯ್ಯ, ಪ್ರಾಧ್ಯಾಪಕರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಸಿರಾ
* ಬುಕ್ಕಯ್ಯ ತಂದೆ ಕೆಂಪಯ್ಯ, ಬೇಡನಕಟ್ಟೆ, ಚೇಳೂರು ಅಂಚೆ
* ಶ್ರೀಮತಿ ಹನುಮಕ್ಕ, ಯಣ್ಣೆಕಟ್ಟೆ, ಗುಬ್ಬಿ ತಾಲೂಕು
* ಶ್ರೀ ಎನ್. ಮೈಲಾರಪ್ಪ, ಕಲಾವಿದರು, ಮಲಮಾಚಕುಂಟೆ, ಗುಬ್ಬಿ ತಾಲೂಕು
* ನಟರಾಜು, ಚಿಕ್ಕಗೊರವಯ್ಯ, ಎಣ್ಣೆಕಟ್ಟೆ, ಗುಬ್ಬಿ ತಾಲೂಕು
* ಶ್ರೀ ಶ್ಯಾ. ನ. ಪ್ರಸನ್ನಮೂರ್ತಿ, ಪತ್ರಕರ್ತರು, ಪಾವಗಡ
* ಶ್ರೀ ಹ. ರಾಮಚಂದ್ರಪ್ಪ, ಅಧ್ಯಕ್ಷರು, ಗಡಿನಾಡ ಕಸಾಪ, ಆಂಧ್ರಪ್ರದೇಶ ಘಟಕ
* ಶ್ರೀ ಜಿ. ಎಸ್. ಅನಂತರಾಮು, ಪ್ರಧಾನ ಕಾರ್ಯದರ್ಶಿ, ಜಿಲ್ಲಾ ಗಮಕ ಕಲಾ ಪರಿಷತ್ತು, ತುಮಕೂರು
* ಶ್ರೀ, ರಾಮಲಿಂಗಪ್ಪ ದೇವಾಸ್ ಆರ್ಟ್ಸ್, ಚಿ.ನಾ. ಹಳ್ಳಿ,



ಅಕಾಡೆಮಿ ತನ್ನ ಇಪ್ಪತ್ತೈದು ವರ್ಷಗಳನ್ನು ಯಶಸ್ವಿಯಾಗಿ ದಾಟಿಬಂದು, ಬೆಳ್ಳಿಹಬ್ಬವನ್ನು ಆಚರಿಸುವ ಸಂಭ್ರಮದಲ್ಲಿದೆ. ಇಲ್ಲಿಯವರೆಗೆ ಜಾನಪದ ಕ್ಷೇತ್ರದ ಸಿದ್ಧಿ-ಸಾಧನೆಗಳನ್ನು, ಅಧ್ಯಯನದ ಮೂಲಕ ದುಡಿದು ತಾತ್ವಿಕ ಚೌಕಟ್ಟನ್ನು ರೂಪಿಸಿಕೊಟ್ಟ ವಿದ್ವಾಂಸರನ್ನು ಪರಿಚಯಿಸುವ "ಜಾನಪದ ತಲೆಮಾರು" ಹೊತ್ತಿಗೆಯ ನಾಲ್ಕು ಸಂಪುಟಗಳು ಬಂದಿರುವುದು ಸ್ತುತ್ಯ ಕಾರ್ಯವೇ ಸರಿ.

ಅದೇ ಪ್ರಕಾರ ಕರ್ನಾಟಕದ ಎಲ್ಲಾ ಜಿಲ್ಲೆಗಳಲ್ಲಿರುವ ಜಾನಪದದ ವಿವಿಧ ಕಲಾವಿದರ ಪರಿಚಯವನ್ನು ದಾಖಲಿಸಬೇಕೆಂಬುದು ನನ್ನ ಹಂಬಲ. ಜಾನಪದ ಕಲಾಪ್ರಕಾರಗಳ ವೈವಿಧ್ಯಗಳನ್ನು ಸಹೃದಯರ ಕಣ್ಣು, ಕಿವಿ, ಮನಸ್ಸುಗಳಿಗೆ ಪ್ರತ್ಯಕ್ಷ ಬಣ್ಣಿಸುವ ಕಲಾವಿದರೂ ಅಷ್ಟೇ ಮುಖ್ಯರಾಗುತ್ತಾರೆ. ವಿದ್ವಾಂಸರ ಅಧ್ಯಯನ, ಅವಲೋಕನ, ಆಲೋಚನೆಗಳಿಗೆ ಮೂಲ ಸೆಲೆಯಾಗುವ ಇಂಥ ಕಲಾವಿದರು ಅನೇಕ ಸಲ ಪ್ರಶಸ್ತಿ, ಪುರಸ್ಕಾರ, ಗೌರವ, ಅವಕಾಶಗಳಿಂದ ವಂಚಿತರಾಗುತ್ತಾರೆ. ಇಂಥ ಕಲಾವಿದರ ಪರಿಚಯ, ವಿವರಗಳ ಸಂಗ್ರಹವಾದರೂ ಅಕಾಡೆಮಿಯಲ್ಲಿ ಲಭ್ಯವಾಗುವಂತಿದ್ದರೆ, ಅಷ್ಟರ ಮಟ್ಟಿಗೆ ಅನುಕೂಲವಾಗುತ್ತದೆ ಎಂಬುದು ನನ್ನ ಉದ್ದೇಶ.


**ಕೆರೆಮನೆ ಶಂಭು ಹೆಗಡೆ**
ಅಧ್ಯಕ್ಷರು
ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ
ಬೆಂಗಳೂರು


